ಸೋಮವಾರ, ಮಾರ್ಚ್ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 85 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಶ್ವಾಸ ಸ್ವರೂಪಂ
ರಾಜಸ್ಥಾನದ ನಾಥದ್ವಾರದಲ್ಲಿ ನಡೆದ ಧ್ವನಿ ಮತ್ತು ಬೆಳಕು ಕಾರ್ಯಕ್ರಮದಲ್ಲಿ 'ವಿಶ್ವಾಸ ಸ್ವರೂಪಂ' ಪ್ರತಿಮೆ ಕಂಡಿದ್ದು ಹೀಗೆ ...



ಅದೃಷ್ಟ ಪರೀಕ್ಷೆಗಿಳಿದ ಅಣ್ಣಾಮಲೈ, ಸೆಂಥಿಲ್ 9
'ಚುನಾವಣೆ ಧರ್ಮಕೇಂದ್ರಿತ ಆಗಬಾರದು' 8
ಏ. 1ರಿಂದ ಕೊಬ್ಬರಿ ಖರೀದಿ? 10
ವೀರಪ್ಪನ್ ಮಗಳು ಕಣಕ್ಕೆ 9

'ಅಕ್ರಮ' ಬಂಧನ ಖಂಡಿಸಿ ಪ್ರತಿಭಟನೆ: 31ಕ್ಕೆ ದೆಹಲಿಯಲ್ಲಿ ಭಾರಿ ಸಮಾವೇಶಕ್ಕೆ ಸಿದ್ಧತೆ

ಕೇಜ್ರಿವಾಲ್ ಪರ 'ಇಂಡಿಯಾ' ರ‍್ಯಾಲಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಆರೋಪದ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ 'ಅಕ್ರಮ' ಬಂಧನ ಖಂಡಿಸಿ ವಿಪಕ್ಷಗಳ ಒಕ್ಕೂಟ 'ಇಂಡಿಯಾ' ಇದೇ 31ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ರ‍್ಯಾಲಿ ಹಮ್ಮಿಕೊಂಡಿದೆ.

ಇದರೊಂದಿಗೆ, ಲೋಕಸಭಾ ಚುನಾವಣೆಗೆ ಜಂಟಿ ಪ್ರಚಾರ ಕಾರ್ಯಕ್ಕೂ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ಚಾಲನೆ ನೀಡಲಿವೆ.

ಇದಕ್ಕೂ ಮೊದಲು, ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳಿಗೆ ಸಮಾನ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿ ಚುನಾವಣಾ ಆಯೋಗದ ಮುಂದೆ 'ಇಂಡಿಯಾ' ಅಂಗಪಕ್ಷಗಳ ನಾಯಕರು ಪ್ರತಿಭಟಿಸಿದ್ದರು.

ಉದ್ದೇಶಿತ ಪ್ರತಿಭಟನೆ ಕುರಿತು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಎಎಪಿ ದೆಹಲಿ ಘಟಕದ ಮುಖ್ಯಸ್ಥ ಹಾಗೂ ಸಚಿವ ಗೋಪಾಲ್ ರಾಯ್, 'ಮೈತ್ರಿಕೂಟದ ಎಲ್ಲ ಹಿರಿಯ ನಾಯಕರು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವರು' ಎಂದರು.

'ಕೇಂದ್ರ ಸರ್ಕಾರದ ಮುಂದೆ ಮಂಡಿಯೂರಲು ಮುಂದಾಗದ ವಿಪಕ್ಷಗಳ ನಾಯಕರನ್ನು ಸುಳ್ಳು ಪ್ರಕರಣಗಳಲ್ಲಿ ಬಂಧಿಸಲಾಗುತ್ತಿದೆ. ಕೆಲ ದಿನಗಳ ಹಿಂದೆ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ಈಗ ಕೇಜ್ರಿವಾಲ್ ಅವರನ್ನು ಬಂಧಿಸಲಾಗಿದೆ' ಎಂದರು.

11ನೇ ಪುಟ ನೋಡಿ



ಎಎಪಿ ನಾಯಕರಾದ ಆತಿಶಿ, ಗೋಪಾಲ್ ರಾಯ್ ಹಾಗೂ ಕಾಂಗ್ರೆಸ್ ನಾಯಕ ಅರವಿಂದ ಸಿಂಗ್ ಲವ್ಲಿ ಸುದ್ದಿಗೋಷ್ಠಿ ನಡೆಸಿದರು

ಇದು ಎಎಪಿ ಅಥವಾ ಕಾಂಗ್ರೆಸ್ ಇಲ್ಲವೇ 'ಇಂಡಿಯಾ' ಮೈತ್ರಿಕೂಟದ ಪ್ರಶ್ನೆಯಲ್ಲ. ಇದು ಪ್ರಜಾಪ್ರಭುತ್ವದ ಅಳಿವು–ಉಳಿವಿನ ಪ್ರಶ್ನೆ
ಅರವಿಂದ ಸಿಂಗ್ ಲವ್ಲಿ
ಕಾಂಗ್ರೆಸ್ ದೆಹಲಿ ಘಟಕದ ಅಧ್ಯಕ್ಷ

ಕಸ್ಟಡಿಗೆ ಹೋದ ಬಳಿಕ ನಿಮಗೆ (ಕೇಜ್ರಿವಾಲ್) ದೆಹಲಿಯ ಜನರ ಸಮಸ್ಯೆಗಳು ಗೊತ್ತಾಯಿತೇ? ಆದರೆ ಈಗ ಇದು ತಡವಾಗಿದೆ
ಮನೋಜ್ ತಿವಾರಿ
ದೆಹಲಿಯ ಬಿಜೆಪಿ ಸಂಸದ

ಚುನಾವಣಾ ಬಾಂಡ್‌ಗಳ ಮಾಹಿತಿ ಬಹಿರಂಗವಾದ ಬಳಿಕ ಕೇಜ್ರಿವಾಲ್ ಬಂಧನವಾಗಿದೆ. ಇದು ಪ್ರಜಾತಂತ್ರದ ಮೇಲಿನ ದಾಳಿ
ರಾಜೀವ್ ಕನ್ವರ್, ಸಿಪಿಎಂನ ದೆಹಲಿ ಕಾರ್ಯಕಾರಿ ಮಂಡಳಿ ಸದಸ್ಯ

ಜೈಲಿನಿಂದ ನಿರ್ದೇಶನ ನೀಡಿದ ಕೇಜ್ರಿವಾಲ್

ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಜಾರಿ ನಿರ್ದೇಶನಾಲಯ (ಇ.ಡಿ) ವಶದಲ್ಲಿದ್ದರೂ, ಬೇಸಿಗೆ ದಿನಗಳಲ್ಲಿ ದೆಹಲಿಯಲ್ಲಿ ಕಂಡುಬರುವ ಸಂಭಾವ್ಯ ಕುಡಿಯುವ ನೀರಿನ ಸಮಸ್ಯೆ ಕುರಿತು ಕ್ರಮ ತೆಗೆದುಕೊಳ್ಳುವಂತೆ ಸಂಪುಟ ಸಹೋದ್ಯೋಗಿ ಆತಿಶಿ ಮರ್ಲೆನಾ ಅವರಿಗೆ ಸೂಚಿಸಿದ್ದಾರೆ.

'ನಾನು ಜೈಲಿನಲ್ಲಿ ಇರಬಹುದು. ಇದರಿಂದ ದೆಹಲಿಯ ಜನರಿಗೆ ಅನನುಕೂಲ ಆಗಬಾರದು. ಸಾರ್ವಜನಿಕರ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಬೇಕು. ಅಗತ್ಯವಿದ್ದರೆ, ಇದಕ್ಕೆ ಲೆಫ್ಟಿನೆಂಟ್ ಗವರ್ನರ್ ಸಹಕಾರವನ್ನೂ ಪಡೆದುಕೊಳ್ಳಿ. ಅವರು ಖಂಡಿತವಾಗಿಯೂ ಸಹಕರಿಸುತ್ತಾರೆ ಎಂದು ಕೇಜ್ರಿವಾಲ್ ಅವರು ಲಿಖಿತವಾಗಿ ನಿರ್ದೇಶನ ನೀಡಿದ್ದಾರೆ' ಎಂದು ಆತಿಶಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. 'ಮುಖ್ಯಮಂತ್ರಿ ಅವರ ನಿರ್ದೇಶನಗಳನ್ನು ಶನಿವಾರ ತಡರಾತ್ರಿ ಸ್ವೀಕರಿಸಿದ್ದೇನೆ' ಎಂದರು.

ಜನರು ಸಂಭ್ರಮಿಸಿದ್ದಾರೆ: ಬಿಜೆಪಿ

'ಕೇಜ್ರಿವಾಲ್ ಅವರ ಬಂಧನಕ್ಕೆ ದೆಹಲಿ ಜನರು ದುಃಖ ವ್ಯಕ್ತಪಡಿಸಿಲ್ಲ. ಬದಲಿಗೆ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದ್ದಾರೆ. ತನ್ನ ಬೆಂಬಲಕ್ಕೆ ಜನ ಇಲ್ಲ ಎಂಬುದನ್ನು ತಿಳಿದ ಬಳಿಕ ಕೇಜ್ರಿವಾಲ್, ಇದೀಗ ದೆಹಲಿ ಜನರ ನೀರಿನ ಸಮಸ್ಯೆ ಕುರಿತು ಅಳಲು ತೋಡಿಕೊಂಡಿದ್ದಾರೆ' ಎಂದು ದೆಹಲಿಯ ಬಿಜೆಪಿ ಸಂಸದ ಮನೋಜ್ ತಿವಾರಿ ವ್ಯಂಗ್ಯವಾಡಿದ್ದಾರೆ.

ವಾಸ್ತವವಾಗಿ ದೆಹಲಿಯ ಬೀದಿಗಳಲ್ಲಿ ಚರಂಡಿ ನೀರು ಉಕ್ಕಿ ಹರಿದು ಮನೆಗಳನ್ನು ಸೇರುತ್ತಿದೆ. ಜನರಿಗೆ ಕುಡಿಯಲು ಕೊಳಕು ನೀರು ಪೂರೈಸಲಾಗುತ್ತಿದ್ದು, ಜನರ ಆರೋಗ್ಯ ಹದಗೆಡುತ್ತಿದೆ. ದೆಹಲಿ ಸರ್ಕಾರವು ಇಲ್ಲಿನ ಜನರ ಸಮಸ್ಯೆಗಳನ್ನು ಕಡೆಗಣಿಸಿತ್ತು. ಹೀಗಾಗಿಯೇ ಜನರು ಮುಖ್ಯಮಂತ್ರಿ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ ಎಂದು ಅವರು ಆರೋಪಿಸಿದರು.



ಬಣ್ಣದೋಕುಳಿ ಹೋಳಿ ಹಬ್ಬದ ಅಂಗವಾಗಿ ಕೊಪ್ಪಳದ ಬಿ.ಟಿ. ಪಾಟೀಲ್ ನಗರದಲ್ಲಿ ಸ್ನೇಹಿತೆಯರು ಬಣ್ಣ ಎರಚಿಕೊಂಡು ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಪ್ರಕರಣ

ಗುರಪ್ಪನಪಾಳ್ಯದಲ್ಲಿ ಶಂಕಿತರ ಸಭೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ಪ್ರಮುಖ ಶಂಕಿತ ಎನ್ನಲಾದ ಮುಸಾವೀರ್ ಹುಸೇನ್ ಶಾಜೀಬ್, ಭಯೋತ್ಪಾದನಾ ಕೃತ್ಯಗಳಿಗೆ ಸಂಚು ರೂಪಿಸುವ ಬಗ್ಗೆ ಬೆಂಗಳೂರಿನ ಗುರಪ್ಪನಪಾಳ್ಯದಲ್ಲಿ ನಡೆಯುತ್ತಿದ್ದ ಸರಣಿ ಸಭೆಗಳಲ್ಲಿ ಪಾಲ್ಗೊಂಡಿದ್ದನೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ.



ಮುಸಾವೀರ್ ಹುಸೇನ್ ಶಾಜೀಬ್

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಮುಸಾವೀರ್, ಐಎಸ್ (ಇಸ್ಲಾಮಿಕ್ ಸ್ಟೇಟ್) ಹಾಗೂ ಸಿಮಿ (ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ) ಸೇರಿದಂತೆ ಹಲವು ನಿಷೇಧಿತ ಭಯೋತ್ಪಾದನಾ ಸಂಘಟನೆಗಳ ಸದಸ್ಯರ ಜೊತೆ ಒಡನಾಟ ಹೊಂದಿದ್ದ. ಸಂಘಟನೆ ಮುಖಂಡರ ನೇತೃತ್ವದಲ್ಲಿ ನಡೆಯುತ್ತಿದ್ದ ಸಭೆಗಳಲ್ಲಿ ಪಾಲ್ಗೊಂಡು, ಭಯೋತ್ಪಾದನಾ ಕೃತ್ಯದ ಸಂಚಿನ ಬಗ್ಗೆ ಚರ್ಚಿಸುತ್ತಿದ್ದನೆಂಬ ಮಾಹಿತಿ ತನಿಖಾ ತಂಡಗಳಿಗೆ ಲಭ್ಯವಾಗಿದೆ.

'ಐಎಸ್ ಜೊತೆ ನಂಟು ಹೊಂದಿದ್ದ ಕೆಲ ವ್ಯಕ್ತಿಗಳು ಭಯೋತ್ಪಾದನಾ ಕೃತ್ಯ ಎಸಗಲು ಮುಸಾವೀರ್‌ನನ್ನು ಪ್ರಚೋದಿಸಿದ್ದರು. ವಿಧ್ವಂಸಕ ಕೃತ್ಯ ಹಾಗೂ ಸಂಚಿನಲ್ಲಿ ಭಾಗಿಯಾಗಿದ್ದ ಮುಸಾವೀರ್, ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದಾನೆ. ಉಗ್ರ ಸಂಘಟನೆ ಮುಖಂಡರು ನೀಡುವ ನಿರ್ದೇಶನದಂತೆ, ಪದೇ ಪದೇ ಭಯೋತ್ಪಾದನಾ ಕೃತ್ಯ ಎಸಗುತ್ತಿದ್ದಾನೆ. ಈತನ ಜೊತೆಯಲ್ಲಿ, ಶಂಕಿತ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಸಹ ತಲೆಮರೆಸಿಕೊಂಡಿದ್ದಾನೆ. ಇಬ್ಬರೂ ಒಂದೇ ಕಡೆ ಇರುವ ಮಾಹಿತಿ ಇದೆ' ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

'ಜಿಹಾದಿ' ಮುಖಂಡನ ಮನೆಯಲ್ಲಿ ಸಭೆ: 'ಐಎಸ್ ಉಗ್ರರ ಜೊತೆ ನೇರ ನಂಟು ಹೊಂದಿದ್ದ ಎನ್ನಲಾದ ಶಂಕಿತ ಮೆಹಬೂಬ್ ಪಾಷಾ, ಜಿಹಾದಿ ಬೆಂಗಳೂರು ತಂಡದ ಮುಖ್ಯಸ್ಥನಾಗಿದ್ದ.

4ನೇ ಪುಟ ನೋಡಿ

'ಬಿಜೆಪಿ ಕಚೇರಿ ಎದುರಿನ ಸ್ಫೋಟದಲ್ಲಿ ಭಾಗಿ?'

'ಜಿಹಾದಿ ಬೆಂಗಳೂರು ತಂಡದ ಮುಖ್ಯಸ್ಥ ಮೆಹಬೂಬ್ ಪಾಷಾ ಹಾಗೂ ಈತನ ಸಹಚರರು, ಮಲ್ಲೇಶ್ವರದ ಬಿಜೆಪಿ ಕಚೇರಿ ಎದುರು 2013ರಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳ ಜೊತೆ ನಂಟು ಹೊಂದಿದ್ದರು. ಈ ಸ್ಫೋಟದ ನಂತರ, ತಮಿಳುನಾಡಿನ ಹಲವೆಡೆ ಬಾಂಬ್ ಸ್ಫೋಟಿಸಲು ಸಂಚು ರೂಪಿಸುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿ 'ಅಲ್ ಹಿಂದ್' ಟ್ರಸ್ಟ್ ಕಚೇರಿ ತೆರೆಯಲು ತಯಾರಿ ನಡೆಸಿದ್ದ ಮೆಹಬೂಬ್ ಪಾಷಾ, ಅದೇ ಟ್ರಸ್ಟ್ ಹೆಸರಿನಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲೂ ಜಮೀನು ಖರೀದಿಸಲು ಮಾತುಕತೆ ನಡೆಸಿದ್ದನೆಂಬುದು ತನಿಖೆಯಿಂದ ತಿಳಿದುಬಂದಿತ್ತು' ಎಂದು ಹೇಳಿವೆ.

ಮುಖ್ಯಾಂಶಗಳು
- ಜಿಹಾದಿ ಮುಖಂಡನ ಮನೆಯಲ್ಲಿ ಸಭೆ
- ಕರ್ನಾಟಕ–ತಮಿಳುನಾಡಿನಲ್ಲಿ ಕೃತ್ಯಕ್ಕೆ ಸಂಚು
- ಸ್ಫೋಟಕ ಸಂಗ್ರಹದ ಬಗ್ಗೆ ಚರ್ಚೆ

'ಮೇಕೆದಾಟು: ಪ್ರಣಾಳಿಕೆಯಲ್ಲಿ ಇರಲಿ'

ಬೆಂಗಳೂರು: 'ಮೇಕೆದಾಟು ಯೋಜನೆಯನ್ನು ಬೆಂಬಲಿಸುವ ನಿರ್ಧಾರವನ್ನು ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಮೂರೂ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಪ್ರಕಟಿಸಬೇಕು' ಎಂದು ಎಚ್.ಡಿ. ದೇವೇಗೌಡ ಆಗ್ರಹಿಸಿದರು. 4

ಕರ್ನಾಟಕದಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣ ಹೆಚ್ಚು

ನವದೆಹಲಿ (ಪಿಟಿಐ): ಕರ್ನಾಟಕ, ತೆಲಂಗಾಣ, ತಮಿಳುನಾಡು,ದೆಹಲಿಯಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣವು ಈಶಾನ್ಯ, ಪೂರ್ವ ಭಾಗದ ರಾಜ್ಯಗಳಲ್ಲಿನ ಪ್ರಮಾಣಕ್ಕಿಂತ ಹೆಚ್ಚಾಗಿದೆ ಎಂದು ಐಸಿಎಂಆರ್ ಹೇಳಿದೆ. 11

ಐಎಸ್ ನಂಟು: ವಿದ್ಯಾರ್ಥಿ ಬಂಧನ

ಗುವಾಹಟಿ (ಪಿಟಿಐ): ಭಯೋತ್ಪಾದಕ ಸಂಘಟನೆಯಾದ ಇಸ್ಲಾಮಿಕ್ ಸ್ಟೇಟ್‌ಗೆ (ಐಎಸ್) ನಿಷ್ಠೆ ಹೊಂದಿದ್ದ ಗುವಾಹಟಿ ಐಐಟಿಯ ವಿದ್ಯಾರ್ಥಿಯೊಬ್ಬನನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಭಾನುವಾರ ಬಂಧಿಸಲಾಗಿದೆ. 11

ಅಡ್ಡ ಮತದಾನ: ನಾಲ್ವರು ಶಾಸಕರಿಗೆ 'ವೈ' ಶ್ರೇಣಿ ಭದ್ರತೆ

ಲಖನೌ (ಪಿಟಿಐ): ಕಳೆದ ತಿಂಗಳು ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಅಡ್ಡ ಮತದಾನ ಮಾಡಿದ್ದ ಸಮಾಜವಾದಿ ಪಕ್ಷದ ನಾಲ್ವರು ಶಾಸಕರಿಗೆ 'ವೈ' ಶ್ರೇಣಿಯ ಭದ್ರತೆ ನೀಡಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಗೋಸಾಯಿಗಂಜ್ ವಿಧಾನಸಭಾ ಕ್ಷೇತ್ರದ ಶಾಸಕ ಅಭಯ್ ಸಿಂಗ್, ಮನೋಜ್ ಕುಮಾರ್ ಪಾಂಡೆ (ಊಂಚಹಾರ್), ರಾಕೇಶ್ ಪ್ರತಾಪ್ ಸಿಂಗ್ (ಗೌರಿಗಂಜ್) ಹಾಗೂ ವಿನೋದ್ ಚತುರ್ವೇದಿ (ಕಲ್ಪಿ) ಅವರಿಗೆ ಹೆಚ್ಚಿನ ಭದ್ರತೆ ನೀಡಲಾಗಿದೆ ಎಂದಿದ್ದಾರೆ.

ಅಭಯ್ ಸಿಂಗ್ ಅವರಿಗೆ ಶುಕ್ರವಾರದಿಂದಲೇ ಭದ್ರತೆ ನೀಡಿದ್ದರೆ, ಉಳಿದ ಶಾಸಕರಿಗೆ ಶನಿವಾರದಿಂದ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

'ಇಂಡಿಯಾ' 272ರ ಗಡಿ ದಾಟಲಿದೆ' 09

ಅನಂತ ಕುಮಾರ್‌ಗಿಲ್ಲ ಬಿಜೆಪಿ ಟಿಕೆಟ್

4 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ ಕಮಲ ಪಾಳಯ • ಚಿತ್ರದುರ್ಗ ಬಾಕಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 400 ಸ್ಥಾನಗಳನ್ನು ಗೆದ್ದರೆ ಸಂವಿಧಾನ ಬದಲು ಮಾಡಲು ಅನುಕೂಲವಾಗಲಿದೆ ಎಂಬ ಹೇಳಿಕೆ ನೀಡಿ ಕಮಲ ಪಾಳಯಕ್ಕೆ ತೀವ್ರ ಮುಜುಗರ ಉಂಟು ಮಾಡಿದ್ದ ಉತ್ತರ ಕನ್ನಡದ ಸಂಸದ ಅನಂತ ಕುಮಾರ್ ಹೆಗಡೆ ಅವರಿಗೆ ಪಕ್ಷವು ಟಿಕೆಟ್ ನಿರಾಕರಿಸಿದೆ. ಕರ್ನಾಟಕದ ನಾಲ್ಕು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪಕ್ಷ ಭಾನುವಾರ ಪ್ರಕಟಿಸಿದೆ.

ಉಗ್ರ ಹಿಂದುತ್ವದ ಪ್ರತಿಪಾದಕರಾದ ಪ್ರತಾಪಸಿಂಹ ಹಾಗೂ ನಳಿನ್ ಕುಮಾರ್ ಕಟೀಲು ಅವರಿಗೂ ಟಿಕೆಟ್ ನಿರಾಕರಿಸಲಾಗಿತ್ತು. ಇದೀಗ ಈ ಸಾಲಿಗೆ ಹೆಗಡೆ ಸೇರ್ಪಡೆಯಾಗಿದ್ದಾರೆ.

ಪಕ್ಷವು ಈವರೆಗೆ ರಾಜ್ಯದ 24 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಘೋಷಿಸಲಾಗಿದೆ. ಅದರಲ್ಲಿ ಶೇ 50ರಷ್ಟು (12) ಹಾಲಿ ಸಂಸದರಿಗೆ ಕೊಕ್ ನೀಡಲಾಗಿದೆ. ಚಿತ್ರದುರ್ಗ ಕ್ಷೇತ್ರಕ್ಕೆ ಹುರಿಯಾಳು ಹೆಸರನ್ನು ಇನ್ನಷ್ಟೇ ಪ್ರಕಟಿಸಬೇಕಿದೆ. ಈ ಕ್ಷೇತ್ರವನ್ನು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಪ್ರತಿನಿಧಿಸುತ್ತಿದ್ದಾರೆ. ಆಡಳಿತ ವಿರೋಧಿ ಅಲೆಯ ಕಾರಣದಿಂದ ನಾರಾಯಣಸ್ವಾಮಿ ಬದಲು ಮಾಜಿ ಸಚಿವ ಗೋವಿಂದ ಕಾರಜೋಳ ಅವರನ್ನು ಹುರಿಯಾಳುವನ್ನಾಗಿ ಮಾಡಲು ಪಕ್ಷ ಯೋಜಿಸಿದೆ. ಮೂರು ಕ್ಷೇತ್ರಗಳನ್ನು ಮಿತ್ರ ಪಕ್ಷ ಜೆಡಿಎಸ್‌ಗೆ ಬಿಟ್ಟುಕೊಡಲು ತೀರ್ಮಾನಿಸಿದೆ.

ಉತ್ತರ ಕನ್ನಡ ಕ್ಷೇತ್ರದಲ್ಲಿ ವಿಧಾನಸಭೆಯ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಮಣೆ ಹಾಕಲಾಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅವರು ಸೋತಿದ್ದರು. ಚಿಕ್ಕಬಳ್ಳಾಪುರದಲ್ಲಿ ಮಾಜಿ ಸಚಿವ ಡಾ.ಕೆ. ಸುಧಾಕರ್ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಇಲ್ಲಿ ಅಲೋಕ್ ವಿಶ್ವನಾಥ್ ಅವರು ಪ್ರಬಲ ಆಕಾಂಕ್ಷಿಯಾಗಿದ್ದರು. ಪುತ್ರನಿಗೆ ಟಿಕೆಟ್ ಕೈತಪ್ಪಿದರೆ ನಾನೇ ಕಣಕ್ಕೆ ಇಳಿಯುತ್ತೇನೆ ಎಂದು ಯಲಹಂಕದ ಶಾಸಕ ಎಸ್.ಆರ್. ವಿಶ್ವನಾಥ್ ಈಗಾಗಲೇ ಘೋಷಿಸಿದ್ದಾರೆ.

'ಗೋ ಬ್ಯಾಕ್ ಶೆಟ್ಟರ್' ಅಭಿಯಾನದ ನಡುವೆಯೂ ಬೆಳಗಾವಿಯಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ಕಣಕ್ಕಿಳಿಸಲಾಗಿದೆ. ಶೆಟ್ಟರ್ ಅವರಿಗೆ ಟಿಕೆಟ್ ನೀಡುವುದಕ್ಕೆ ಜಿಲ್ಲೆಯ ಮುಖಂಡರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನಿರಾಕರಿಸಿದ ಕಾರಣಕ್ಕೆ ಶೆಟ್ಟರ್ ಬಿಜೆಪಿ ತ್ಯಜಿಸಿದ್ದರು. ಕಾಂಗ್ರೆಸ್‌ನಿಂದ ಕಣಕ್ಕಿಳಿದು 35 ಸಾವಿರ ಮತಗಳ ಅಂತರದಿಂದ ಸೋತಿದ್ದರು.

ರಾಯಚೂರಿನಲ್ಲಿ ಮಾಜಿ ಸಂಸದ ಬಿ.ವಿ.ನಾಯಕ ಹಾಗೂ ಹಾಲಿ ಸಂಸದ ರಾಜಾ ಅಮರೇಶ್ವರ ನಾಯಕ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಪಕ್ಷ ತಮ್ಮನ್ನೇ ಅಭ್ಯರ್ಥಿಯನ್ನಾಗಿ ಮಾಡುತ್ತದೆ ಎಂಬ ವಿಶ್ವಾಸದಲ್ಲಿ ಬಿ.ವಿ.ನಾಯಕ ಪ್ರಚಾರವನ್ನೂ ಆರಂಭಿಸಿದ್ದರು. ಆದರೆ, ಅಮರೇಶ್ವರ ನಾಯಕ ಕೈಮೇಲಾಗಿದೆ. ಅವರು ಮಾಜಿ ಸಚಿವ ಬಿ.ಶ್ರೀರಾಮುಲು ಅವರ ಹತ್ತಿರದ ಸಂಬಂಧಿ.



ಜಗದೀಶ ಶೆಟ್ಟರ್



ವಿಶ್ವೇಶ್ವರ ಹೆಗಡೆ ಕಾಗೇರಿ



ಡಾ.ಕೆ. ಸುಧಾಕರ್



ರಾಜಾ ಅಮರೇಶ್ವರ ನಾಯಕ

ಬಿಜೆಪಿ ಅಭ್ಯರ್ಥಿಗಳು

ಬೆಳಗಾವಿ	ಜಗದೀಶ ಶೆಟ್ಟರ್
ಉತ್ತರ ಕನ್ನಡ	ವಿಶ್ವೇಶ್ವರ ಹೆಗಡೆ ಕಾಗೇರಿ
ಚಿಕ್ಕಬಳ್ಳಾಪುರ	ಡಾ.ಕೆ. ಸುಧಾಕರ್
ರಾಯಚೂರು	ರಾಜಾ ಅಮರೇಶ್ವರ ನಾಯಕ
ಘೋಷಣೆಗೆ ಬಾಕಿ	ಚಿತ್ರದುರ್ಗ (ಮೀಸಲು)
ಜೆಡಿಎಸ್‌ಗೆ	ಮಂಡ್ಯ, ಹಾಸನ, ಕೋಲಾರ
ಯಾರಿಗೆ ಟಿಕೆಟ್ ಮಿಸ್	
ಉತ್ತರ ಕನ್ನಡ	ಅನಂತ ಕುಮಾರ್ ಹೆಗಡೆ
ಬೆಳಗಾವಿ	ಮಂಗಳಾ ಅಂಗಡಿ
ಚಿಕ್ಕಬಳ್ಳಾಪುರ	ಬಿ.ಎನ್.ಬಚ್ಚೇಗೌಡ (ರಾಜಕೀಯ ನಿವೃತ್ತಿ)

ಚಿನಕುರಳಿ

ಪ್ರಕಾಶ್ ಶೆಟ್ಟಿ



'ಜನಾರ್ದನ ರೆಡ್ಡಿ ಇಂದು ಬಿಜೆಪಿಗೆ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ (ಕೆಆರ್‌ಪಿಪಿ) ಸ್ಥಾಪಕ, ಶಾಸಕ ಜನಾರ್ದನ ರೆಡ್ಡಿ ಅವರು ಸೋಮವಾರ ಬಿಜೆಪಿ ಸೇರಲಿದ್ದಾರೆ.

ಮುಂದಿನ ರಾಜಕೀಯ ನಡೆ ಕುರಿತು ಚರ್ಚಿಸಲು ಜನಾರ್ದನ ರೆಡ್ಡಿ ಭಾನುವಾರ ಬೆಂಗಳೂರಿನ ತಮ್ಮ ನಿವಾಸ 'ಪಾರಿಜಾತ'ದಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರ ಸಭೆ ಕರೆದಿದ್ದರು. 'ಬಿಜೆಪಿ ಸೇರುವ ಕುರಿತು ಈ ಸಭೆಯಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಯಿತು' ಎಂದು ಕೆಆರ್‌ಪಿಪಿ ಪಕ್ಷದ ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷ ದಮ್ಮೂರು ರಾಜಶೇಖರ್ ತಿಳಿಸಿದರು.

'ಸೋಮವಾರ ಬೆಳಗ್ಗೆ 10 ಗಂಟೆಗೆ ಜನಾರ್ದನ ರೆಡ್ಡಿ ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಪಕ್ಷಕ್ಕೆ ಸೇರಲಿದ್ದಾರೆ' ಎಂದು ಅವರು ಹೇಳಿದರು.

ಮಾಜಿ ಶಾಸಕ, ಸೋದರ ಸೋಮಶೇಖರ ರೆಡ್ಡಿ, 'ಜನಾರ್ದನ ರೆಡ್ಡಿ ಸೇರ್ಪಡೆಯಾಗುವುದರಿಂದ ಪಕ್ಷಕ್ಕೆ ಒಳ್ಳೆಯದಾಗಲಿದೆ. 1999ರಲ್ಲಿ ಸುಷ್ಮಾ ಸ್ವರಾಜ್ ಬಳ್ಳಾರಿಯಲ್ಲಿ ಸ್ಪರ್ಧೆ ಮಾಡಿದ ನಂತರ ಜಿಲ್ಲೆಯಲ್ಲಿ ಪಕ್ಷವನ್ನು ಗಟ್ಟಿಯಾಗಿ ಬೆಳೆಸುವಲ್ಲಿ ರೆಡ್ಡಿ ಪಾತ್ರ ಪ್ರಧಾನವಾದದ್ದು' ಎಂದು ಹೇಳಿದರು.

ಕಂಗನಾ ಕಣಕ್ಕೆ, ವರುಣ್‌ಗೆ ಬಿಜೆಪಿ ಟಿಕೆಟ್ ಇಲ್ಲ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಗಾಗಿ ಬಿಜೆಪಿಯು ಭಾನುವಾರ ತನ್ನ ಅಭ್ಯರ್ಥಿಗಳ ಐದನೇ ಪಟ್ಟಿ ಪ್ರಕಟಿಸಿದ್ದು, 111 ಕ್ಷೇತ್ರಗಳಿಗೆ ಹುರಿಯಾಳುಗಳನ್ನು ಘೋಷಿಸಿದೆ.

ಕೇಂದ್ರ ಸಚಿವರಾದ ಅಶ್ವಿನಿ ಕುಮಾರ್ ಚೌಬೆ ಮತ್ತು ವಿ.ಕೆ.ಸಿಂಗ್ ಹಾಗೂ ಸಂಸದ ವರುಣ್ ಗಾಂಧಿ ಅವರಿಗೆ ಟಿಕೆಟ್ ಕೈತಪ್ಪಿದೆ. ಬಾಲಿವುಡ್ ನಟಿ ಕಂಗನಾ ರನೌತ್ ಮತ್ತು ನಟ ಅರುಣ್ ಗೋವಿಲ್ ಅವರನ್ನು ಕಣಕ್ಕಿಳಿಸಿದೆ.

ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸಂಬಲ್‌ಪುರ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದರೆ, ಪಕ್ಷದ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ ಅವರು ಪುರಿ ಕ್ಷೇತ್ರದಿಂದ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗಿಳಿಯಲಿದ್ದಾರೆ. ಸಂಬಿತ್ ಅವರು 2019ರಲ್ಲಿ ಅಲ್ಪ ಮತಗಳ ಅಂತರದಿಂದ ಸೋತಿದ್ದರು.

ಕಂಗನಾ ಅವರು ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಪ್ರಸಿದ್ಧ 'ರಾಮಾಯಣ' ಟಿ.ವಿ. ಧಾರಾವಾಹಿಯಲ್ಲಿ ಶ್ರೀರಾಮನ ಪಾತ್ರ ಮಾಡಿದ್ದ ಅರುಣ್ ಗೋವಿಲ್ ಅವರನ್ನು ಮೀರತ್ ಕ್ಷೇತ್ರದಿಂದ ಕಣಕ್ಕಿಳಿಸಿದೆ.


ಮೇನಕಾ ಗಾಂಧಿ ಸುಲ್ತಾನ್‌ಪುರ ಕ್ಷೇತ್ರದಿಂದ ಮತ್ತೆ ಕಣಕ್ಕಿಳಿಯಲಿದ್ದಾರೆ. ವರುಣ್ ಗಾಂಧಿ ಪ್ರತಿನಿಧಿಸುತ್ತಿದ್ದ ಫಿಲಿಬಿತ್ ಕ್ಷೇತ್ರಕ್ಕೆ ಉತ್ತರ ಪ್ರದೇಶದ ಸಚಿವ ಜಿತಿನ್ ಪ್ರಸಾದ್ ಅವರ ಹೆಸರನ್ನು ಘೋಷಿಸಿದೆ.

ನಿರುದ್ಯೋಗ ಮತ್ತು ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ವರುಣ್ ಅವರು ಈಚೆಗೆ ಕೇಂದ್ರ ಸರ್ಕಾರವನ್ನು ಟೀಕಿಸಿ ಮಾತನಾಡಿದ್ದರು.

ಸೀತಾ ಸೊರೇನ್ ಅವರು ಜಾರ್ಖಂಡ್‌ನ ಧುಮ್ಕಾ ಕ್ಷೇತ್ರದಿಂದ ಸ್ಪರ್ಧಿಸುವರು. ಕೇಂದ್ರ ಸಚಿವ ವಿ.ಕೆ. ಸಿಂಗ್ ಪ್ರತಿನಿಧಿಸುತ್ತಿದ್ದ ಉತ್ತರ ಪ್ರದೇಶದ ಗಾಜಿಯಾಬಾದ್ ಕ್ಷೇತ್ರದಿಂದ ಅತುಲ್ ಗರ್ಗ್ ಅವರಿಗೆ ಅವಕಾಶ ನೀಡಿದೆ. ಉದ್ಯಮಿ ನವೀನ್ ಜಿಂದಾಲ್ ಅವರನ್ನು ಹರಿಯಾಣದ ಕುರುಕ್ಷೇತ್ರದಿಂದ ಬಿಜೆಪಿ ಕಣಕ್ಕಿಳಿಸಿದೆ. ಅವರು 2004ರಿಂದ 2014ರ ಅವಧಿಯಲ್ಲಿ ಇದೇ ಕ್ಷೇತ್ರದ ಸಂಸದರಾಗಿದ್ದರು.



ಕಂಗನಾ ರನೌತ್



ವರುಣ್ ಗಾಂಧಿ

₹32 ಸಾವಿರಕ್ಕೆ ವಾರ್ಷಿಕ ಆದಾಯ ಹೆಚ್ಚಳ

ಸಂಧ್ಯಾ ಸುರಕ್ಷಾ: 17,589 ಪ್ರಕರಣ ರದ್ದು

• ಪೂರ್ಣಿಮಾ ಗೊಂದೆನಾಯ್ಕರ

ಹುಬ್ಬಳ್ಳಿ: ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಸಿಸುವ 60 ವರ್ಷ ಮೇಲ್ಪಟ್ಟವರ 'ಸಂಧ್ಯಾ ಸುರಕ್ಷಾ' ಪಿಂಚಣಿ ಯೋಜನೆಯಡಿ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ₹32 ಸಾವಿರಕ್ಕೆ ನಿಗದಿ ಪಡಿಸಲಾಗಿದೆ. ಇದಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿರುವ 17,589 ಪ್ರಕರಣಗಳ ಪಿಂಚಣಿ ರದ್ದುಗೊಳಿಸಲಾಗಿದೆ.

60 ವರ್ಷ ಅಥವಾ ಮೇಲ್ಪಟ್ಟ ವಯಸ್ಸಿನ ಹಿರಿಯರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು 'ಸಂಧ್ಯಾ ಸುರಕ್ಷಾ' ಯೋಜನೆ 2007ರ ಜುಲೈ 2ರಿಂದ ಆರಂಭಿಸಲಾಯಿತು. ಇದರಡಿ ಫಲಾನುಭವಿಗಳಿಗೆ ತಿಂಗಳಿಗೆ ₹600 ಪಿಂಚಣಿ ಸಿಗುತ್ತದೆ.

2011ರ ಜೂನ್ 21ರಲ್ಲಿ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದಲ್ಲಿ ₹12 ಸಾವಿರ ಮತ್ತು ನಗರ ಪ್ರದೇಶದಲ್ಲಿ ₹17 ಸಾವಿರಕ್ಕೆ ನಿಗದಿ ಪಡಿಸಲಾಗಿತ್ತು. 2021ರ ಫೆ. 10ರಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಮಂಜೂರಾತಿ ಪಡೆಯಲು ಕುಟುಂಬದ ವಾರ್ಷಿಕ ಆದಾಯವನ್ನು ₹32 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಸಣ್ಣ ರೈತರು, ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು, ನೇಕಾರರು ಮತ್ತು ಮೀನುಗಾರರು ಈ ಯೋಜನೆಯಡಿ ಫಲಾನುಭವಿಗಳು ಆಗಿದ್ದಾರೆ. ಫಲಾನುಭವಿಗಳ ಪತ್ನಿ ಅಥವಾ ಪತಿಯ ಸಂಯೋಜಿತ ಠೇವಣಿಗಳ ಒಟ್ಟು ಮೌಲ್ಯವೂ ₹10 ಸಾವಿರಕ್ಕಿಂತ ಹೆಚ್ಚಿರಬಾರದು.

ಹಾವೇರಿಯಲ್ಲಿ 2,010, ಬೆಳಗಾವಿಯಲ್ಲಿ 1,880, ಯಾದಗಿರಿಯಲ್ಲಿ 1,454 ಫಲಾನುಭವಿಗಳ ಪಿಂಚಣಿ ರದ್ದುಗೊಂಡಿದೆ. ಹಾವೇರಿಯಲ್ಲಿ ಅತಿ ಹೆಚ್ಚು ಮತ್ತು ಚಾಮರಾಜನಗರದಲ್ಲಿ ಅತಿ ಕಡಿಮೆ 16 ಪಿಂಚಣಿ ಪ್ರಕರಣಗಳು ರದ್ದುಗೊಂಡಿವೆ.

'ವಾರ್ಷಿಕ ಆದಾಯ ಹೆಚ್ಚಳದಿಂದ ಹಿರಿಯ ನಾಗರಿಕರಿಗೆ ಸಮಸ್ಯೆಯಾಗಿದೆ. ₹32 ವಾರ್ಷಿಕ ಆದಾಯ ಹೊಂದಿದ ಹಿರಿಯ ನಾಗರಿಕರ ಅರ್ಜಿ ನಮೂನೆ ಸಂಗ್ರಹಿಸಲಾಗಿದ್ದು, ವಾರ್ಷಿಕ ಆದಾಯ ಕಡಿಮೆ ಮಾಡಲು ಸರ್ಕಾರಕ್ಕೆ ಕೋರಲಾಗುವುದು' ಎಂದು ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಿ.ಎ.ಪಾಟೀಲ ತಿಳಿಸಿದರು.

ಜಿಲ್ಲಾವಾರು ರದ್ದುಗೊಂಡ ಪಿಂಚಣಿ ಪ್ರಕರಣಗಳು

ಬಾಗಲಕೋಟೆ	910	ಕಲಬುರಗಿ	1224
ಬಳ್ಳಾರಿ	137	ಕೊಡಗು	67
ಬೆಂಗಳೂರು ಗ್ರಾಮೀಣ	76	ಕೋಲಾರ	314
ಬೆಳಗಾವಿ	1880	ಕೊಪ್ಪಳ	444
ಬೆಂಗಳೂರು	90	ಮಂಡ್ಯ	1453
ಬೀದರ	1008	ಮೈಸೂರು	442
ಚಾಮರಾಜನಗರ	16	ರಾಯಚೂರು	313
ಚಿಕ್ಕಬಳ್ಳಾಪುರ	743	ರಾಮನಗರ	27
ಚಿಕ್ಕಮಗಳೂರು	231	ಶಿವಮೊಗ್ಗ	378
ಚಿತ್ರದುರ್ಗ	492	ತುಮಕೂರು	358
ದಕ್ಷಿಣ ಕನ್ನಡ	533	ಉಡುಪಿ	101
ದಾವಣಗೆರೆ	926	ಉತ್ತರ ಕನ್ನಡ	69
ಧಾರವಾಡ	258	ವಿಜಯನಗರ	52
ಗದಗ	498	ವಿಜಯಪುರ	957
ಹಾಸನ	128	ಯಾದಗಿರಿ	1454
ಹಾವೇರಿ	2010	ಒಟ್ಟು	17,589

ವಾರ್ಷಿಕ ಆದಾಯ ಹೆಚ್ಚಳದಿಂದ ಕೆಲ ಹಿರಿಯ ನಾಗರಿಕರಿಗೆ ಸಮಸ್ಯೆ ಉಂಟಾಗಿದ್ದು, ಸರ್ಕಾರ ಆದಾಯ ಮಿತಿ ಕಡಿಮೆ ಮಾಡಲು ಮುಂದಾಗಬೇಕು
ಬಿ.ಎ. ಪಾಟೀಲ, ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಅಧ್ಯಕ್ಷ

20 ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಲೋಕಸಭಾ ಚುನಾವಣೆಯಲ್ಲಿ ನಾವು 20 ಸ್ಥಾನಗಳನ್ನು ಗೆಲ್ಲುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, '28 ಕ್ಷೇತ್ರಗಳಲ್ಲೂ ಗೆಲ್ಲುತ್ತೇವೆ ಎಂದು ಬಿಜೆಪಿಯವರು ಹೇಳುತ್ತಾರೆ. ಅದು ಸಾಧ್ಯವೇ ಎಂದರು.

'ಕಾಂಗ್ರೆಸ್ ಟಿಕೆಟ್ ಹಂಚಿಕೆಯಲ್ಲಿ ಕಗ್ಗಂಟಾಗಲೀ, ಎಳೆದಾಟವಾಗಲೀ ಆಗಿಲ್ಲ. ಸೋಮವಾರ ಅಥವಾ ಮಂಗಳವಾರ ಉಳಿದ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ. ಬಿಜೆಪಿ-ಜೆಡಿಎಸ್ ಮೈತ್ರಿಯಿಂದ ನಮಗೆ ಹೆಚ್ಚಿನ ಅನುಕೂಲ ಆಗಲಿದೆ. ಈ ಹಿಂದೆ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿದ್ದಾಗ ನಮಗೆ ಅನನುಕೂಲ ಆಗಿತ್ತು' ಎಂದು ಹೇಳಿದರು.

ಆನ್‌ಲೈನ್‌ನಲ್ಲಿ ಹಾಲು ಖರೀದಿ: ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಮೂಲಕ ಖರೀದಿಸಿದ್ದ ಹಾಲು ಕೆಟ್ಟಿದ್ದರಿಂದ, ಅದನ್ನು ಸಂಬಂಧಪಟ್ಟ ಕಂಪನಿಗೆ ಮರಳಿಸಲು ಯತ್ನಿಸಿ ವೃದ್ಧೆಯೊಬ್ಬರು ₹ 77 ಸಾವಿರ ಕಳೆದುಕೊಂಡಿದ್ದಾರೆ.

'ಇ-ಕಾಮರ್ಸ್ ಜಾಲತಾಣದ ಹೆಸರಿನಲ್ಲಿ ಸೈಬರ್ ವಂಚಕರು, ವೃದ್ಧೆಯ ಬ್ಯಾಂಕ್ ಖಾತೆಯಿಂದ ಹಣ ವರ್ಗಾಯಿಸಿಕೊಂಡಿದ್ದಾರೆ. 65 ವರ್ಷದ ವೃದ್ಧೆ ನೀಡಿರುವ ದೂರು ಆಧರಿಸಿ ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೈಸೂರು ರಸ್ತೆಯ ಕಸ್ತೂರಬಾ ನಗರದ ವೃದ್ಧೆ, ಮನೆಗೆ ಅಗತ್ಯವಿರುವ ದಿನಸಿಗಳನ್ನು ಇ-ಕಾಮರ್ಸ್ ಜಾಲತಾಣದ ಮೂಲಕ ತರಿಸುತ್ತಿದ್ದರು. ಮಾರ್ಚ್ 18ರಂದು ದಿನಸಿ ಜೊತೆಯಲ್ಲಿ ಹಾಲಿನ ಪೊಟ್ಟಣ ತರಿಸಿದ್ದರು. ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್) ಮೂಲಕ ಹಣ ಪಾವತಿ ಮಾಡಿದ್ದರು. ಪೊಟ್ಟಣ ತೆರೆದು ನೋಡಿದಾಗ, ಹಾಲು ಕೆಟ್ಟಿತ್ತು. ದುರ್ವಾಸನೆ ಬರುತ್ತಿತ್ತು.'

'ಕೆಟ್ಟ ಹಾಲನ್ನು ಮರಳಿಸಿ ಹಣವನ್ನು ವಾಪಸು ಪಡೆಯಲು ವೃದ್ಧೆ ಮುಂದಾಗಿದ್ದರು. ಇ-ಕಾಮರ್ಸ್ ಜಾಲತಾಣದ ಗ್ರಾಹಕರ ಸೇವಾ ಕೇಂದ್ರದ ಸಂಪರ್ಕ ಸಂಖ್ಯೆಯನ್ನು ಗೂಗಲ್‌ನಲ್ಲಿ ಹುಡುಕಿ ಪಡೆದುಕೊಂಡಿದ್ದರು. ಅದೇ ಸಂಖ್ಯೆಗೆ ಕರೆ ಮಾಡಿದ್ದ ಅವರು, 'ಹಾಲು ಕೆಟ್ಟಿದೆ. ಅದನ್ನು ವಾಪಸು ತೆಗೆದುಕೊಂಡು, ಹಣವನ್ನು ನೀಡಿ' ಎಂದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಜಾಲತಾಣದ ಪ್ರತಿನಿಧಿಗಳ ಸೋಗಿನಲ್ಲಿ ಮಾತನಾಡಿದ ವಂಚಕರು, ವೃದ್ಧೆಯ ವೈಯಕ್ತಿಕ ಮಾಹಿತಿ ಪಡೆದುಕೊಂಡಿದ್ದರು. ಲಿಂಕ್ ಕಳುಹಿಸಿ ಯುಪಿಐ ನಂಬರ್ ಹಾಗೂ ಪಿನ್ ಸಮೇತ ಮಾಹಿತಿ ಭರ್ತಿ ಮಾಡುವಂತೆ ಹೇಳಿದ್ದರು. ಅದನ್ನು ನಂಬಿದ್ದ ವೃದ್ಧೆ, ಮಾಹಿತಿ ತುಂಬಿದ್ದರು. ಇದಾದ ನಂತರ, ವೃದ್ಧೆಯ ಖಾತೆಯಿಂದ ಹಂತ ಹಂತವಾಗಿ ₹ 77 ಸಾವಿರ ಕಡಿತವಾಗಿದೆ' ಎಂದು ಹೇಳಿವೆ.

'ಗೂಗಲ್‌ನಲ್ಲಿ ಜಾಲತಾಣದ ಮಾಹಿತಿ ತಿದ್ದುಪಡಿ ಮಾಡಿರುವ ವಂಚಕರು, ತಮ್ಮ ಸಂಖ್ಯೆ ನಮೂದಿಸಿದ್ದಾರೆ. ಅದೇ ಸಂಖ್ಯೆಗೆ ವೃದ್ಧೆ ಕರೆ ಮಾಡಿದಾಗ, ವಂಚನೆ ಆಗಿದೆ' ಎಂದು ತಿಳಿಸಿವೆ.

ವಿಭಜಕಕ್ಕೆ ಬೈಕ್ ಗುದ್ದಿ ಸವಾರ ಸಾವು

ಬೆಂಗಳೂರು: ಬಳ್ಳಾರಿ ರಸ್ತೆಯ ದೊಡ್ಡಬಳ್ಳಾಪುರ ಜಂಕ್ಷನ್ ಬಳಿ ರಸ್ತೆ ವಿಭಜಕಕ್ಕೆ ಬೈಕ್ ಗುದ್ದಿ ಅಪಘಾತ ಸಂಭವಿಸಿದ್ದು, ಸವಾರ ಸೂರ್ಯ (23) ಎಂಬುವವರು ಮೃತಪಟ್ಟಿದ್ದಾರೆ.

'ಬೈಜಾಪುರದ ಸೂರ್ಯ, ದೇವನಹಳ್ಳಿ ಉಪ ನೋಂದಣಾಧಿಕಾರಿ ಕಚೇರಿ ಬಳಿ ಜೆರಾಕ್ಸ್ ಮಳಿಗೆ ಇಟ್ಟುಕೊಂಡಿದ್ದರು. ಶನಿವಾರ ತಡರಾತ್ರಿ ಊಟ ಮಾಡಲು ಹೋಗಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ' ಎಂದು ದೇವನಹಳ್ಳಿ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

'ಸೂರ್ಯ ಅವರ ಪೋಷಕರು ಬೇರೆ ಊರಿಗೆ ಹೋಗಿದ್ದರು. ಮನೆಯಲ್ಲಿ ಒಬ್ಬರೇ ಇದ್ದ ಸೂರ್ಯ, ಊಟಕ್ಕೆಂದು ಬಳ್ಳಾರಿ ರಸ್ತೆ ಬಳಿಯ ಹೋಟೆಲ್‌ವೊಂದಕ್ಕೆ ಹೋಗಿದ್ದರು. ಊಟ ಮುಗಿಸಿ ಮನೆಗೆ ವಾಪಸು ಹೊರಟಿದ್ದ ಸಂದರ್ಭದಲ್ಲಿ ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದಿದೆ. ತಲೆಗೆ ತೀವ್ರ ಪೆಟ್ಟು ಬಿದ್ದು ಸೂರ್ಯ ಮೃತಪಟ್ಟಿದ್ದಾರೆ. ಅಪಘಾತದ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಅವರು ಹೇಳಿದರು.

ಆಸ್ತಿ ತೆರಿಗೆ ಹೆಚ್ಚಳ–ಸುಳ್ಳು ಸುದ್ದಿ: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಏಪ್ರಿಲ್ 1ರಿಂದ ಆಸ್ತಿತೆರಿಗೆ ಹೆಚ್ಚಳವಾಗಲಿದೆ ಎಂಬ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಇದು ಸುಳ್ಳು ಸುದ್ದಿ. ಆಸ್ತಿ ತೆರಿಗೆ ಹೆಚ್ಚಳ ಮಾಡುತ್ತಿಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಸ್ಪಷ್ಟನೆ ನೀಡಿದ್ದಾರೆ.

ಕರ್ನಾಟಕದಲ್ಲಿ ಭಾರಿ ತೆರಿಗೆ ಹೆಚ್ಚಳವಾಗಲಿದೆ ಎಂದು ಇಂಡೆಕ್ಸ್. ಡೈಲಿ ಎಂಬ ಇನ್‌ಸ್ಟಾಗ್ರಾಂ ಪೇಜ್‌ನಲ್ಲಿ ಅನುರಾಗ್ ಸಿಂಗ್ ಎಂಬುವವರು ವಿಡಿಯೊ ಹರಿಯಬಿಟ್ಟಿದ್ದಾರೆ. ಬಾಡಿಗೆ ಮನೆಗಳ ಮೇಲಿನ ಆಸ್ತಿ ತೆರಿಗೆ ಎರಡು ಪಟ್ಟು, ವಾಣಿಜ್ಯ ಸಂಸ್ಥೆಗಳ ಮೇಲಿನ ತೆರಿಗೆ 3 ರಿಂದ 5 ಪಟ್ಟು ಹೆಚ್ಚಳವಾಗಲಿದೆ ಎಂಬುದು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಮಾತನಾಡಿದ್ದಾರೆ.

'ಇವೆಲ್ಲ ಸತ್ಯಕ್ಕೆ ದೂರವಾದ ಮಾಹಿತಿ. 2016ರಲ್ಲಿ ಆಸ್ತಿ ತೆರಿಗೆ ಪರಿಷ್ಕರಿಸಲಾಗಿದ್ದು, ಆ ದರದಂತೆಯೇ ಪ್ರಸ್ತುತ ಆಸ್ತಿ ತೆರಿಗೆಗಳು ಚಾಲ್ತಿಯಲ್ಲಿರುತ್ತವೆ. ಅದೇ ಮುಂದುವರಿಯಲಿದೆ' ಎಂದು ಆಯುಕ್ತರು ಸ್ಪಷ್ಟಪಡಿಸಿದ್ದಾರೆ

'ಸುಳ್ಳು ಸುದ್ದಿ ಹರಡಿದವರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳಲು ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ಪತ್ರ ಬರೆಯಲಾಗಿದೆ' ಎಂದು ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ನೈಸರ್ಗಿಕ ಕೃಷಿ ಕುರಿತು ತರಬೇತಿ: ಉದ್ಘಾಟನೆ: ಎಸ್.ವಿ. ಸುರೇಶ, ಅತಿಥಿಗಳು: ಮಹದೇವ ಸ್ವಾಮಿ, ಶಿವಕುಮಾರ್, ಅಧ್ಯಕ್ಷತೆ: ವಿ.ಎಲ್. ಮಧುಪ್ರಸಾದ್, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ. ಬಾಬು ರಾಜೇಂದ್ರಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಸಭಾಂಗಣ, ಜಿಕೆವಿಕೆ ಆವರಣ, ಬೆಳಿಗ್ಗೆ 10

ಸಂತ ಜಗದ್ಗುರು ತುಕಾರಾಮ ಮಹಾರಾಜರ ಸಪ್ತಾಹ ದಂಡಿ ಮಹೋತ್ಸವ: ದೇವರಿಗೆ ಅಭಿಷೇಕ, ಕಳಶ ಮತ್ತು ಗಾಥಾ ಸ್ಥಾಪನೆ, ಅಖಂಡ ವೀಣಾ ಜಾಗರಣೆ ಸಪ್ತಾಹ, ಪ್ರವಚನ, ಭಜನೆ-ಕೀರ್ತನೆ, ಆಯೋಜನೆ ಮತ್ತು ಸ್ಥಳ: ನಂಜುಂಡೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ರಂಗಸ್ವಾಮಿ ಗುಡಿ ಬೀದಿ, ಗುಡುಮ್ಮೈಯ್ಯನಪೇಟೆ, ಬೆಳಿಗ್ಗೆ 10ರಿಂದ



ಜಾತ್ರಾ ಮಹೋತ್ಸವ

ನೆಲಮಂಗಲ ತಾಲ್ಲೂಕಿನ ತಡಶೀಘಟ್ಟದ ಕಂಬದ ಲಕ್ಷ್ಮೀನರಸಿಂಹಸ್ವಾಮಿ ಜಾತ್ರಾ ಮಹೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಗರುಡಪಕ್ಷಿ ರಥಪ್ರದಕ್ಷಿಣೆ ಮಾಡಿದ ನಂತರ ತೇರನ್ನು ಎಳೆಯಲಾಯಿತು

ರೈಲು ನಿಲ್ದಾಣಗಳಲ್ಲಿ ತಪಾಸಣೆಗೆ 20 ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ರೈಲು ನಿಲ್ದಾಣಗಳಲ್ಲಿ ತಪಾಸಣೆ ಬಿಗಿಗೊಳಿಸಲಾಗಿದ್ದು, ಲಗೇಜು ಹಾಗೂ ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ಪೊಲೀಸರು ನಿಗಾ ವಹಿಸಿದ್ದಾರೆ. ವಿಶೇಷ ಭದ್ರತೆಗಾಗಿ ಪೊಲೀಸರ 20 ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ.

ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಆಮಿಷವೊಡ್ಡಲು ಸಾಮಗ್ರಿಗಳನ್ನು ಸಾಗಿಸುವ ಕೆಲಸಗಳು ಅಲ್ಲಲ್ಲಿ ನಡೆಯುತ್ತಿದೆ. ರಾಜ್ಯದ ಎಲ್ಲ ರಸ್ತೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದ್ದು, ಅಕ್ರಮ ಸಾಗಣೆಯನ್ನು ಬಹುಬೇಗನೇ ಪತ್ತೆ ಹಚ್ಚಲಾಗುತ್ತಿದೆ.

ಕೆಲವರು, ರೈಲುಗಳ ಮೂಲಕ ಸಾಮಗ್ರಿಗಳನ್ನು ಸಾಗಿಸುತ್ತಿರುವುದು ವರದಿಯಾಗಿದೆ. ಹುಬ್ಬಳ್ಳಿಯ ರೈಲು ನಿಲ್ದಾಣದಲ್ಲಿ 60ಕ್ಕೂ ಹೆಚ್ಚು ಕುಕ್ಕರ್‌ಗಳು ಪತ್ತೆಯಾಗಿವೆ. ಇದೇ ಕಾರಣಕ್ಕೆ ರಾಜ್ಯದ ಎಲ್ಲ ನಿಲ್ದಾಣಗಳಲ್ಲಿ ತಪಾಸಣೆ ಬಿಗಿಗೊಳಿಸುವಂತೆ ಚುನಾವಣಾ ಆಯೋಗ ರೈಲ್ವೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕೇಂದ್ರ ನಿಲ್ದಾಣ, ಯಶವಂತಪುರ, ಕಂಟೋನ್ಮೆಂಟ್ ಹಾಗೂ ಇತರೆ ನಿಲ್ದಾಣಗಳಲ್ಲಿ ರೈಲ್ವೆ ರಕ್ಷಣಾ ಪಡೆ ಹಾಗೂ ಪೊಲೀಸರು ಭಾನುವಾರ ತಪಾಸಣೆ ನಡೆಸಿದರು.



ಕವಿ ನಿರ್ಝಾಮ್ ಗೋಳಿಪಡ್ಪು ಅವರಿಗೆ 'ಈ ಹೊತ್ತಿಗೆ ಕಾವ್ಯ ಪ್ರಶಸ್ತಿ' ಮತ್ತು ಕಥೆಗಾರ ಸದಾಶಿವ ಸೊರಟೂರ ಅವರಿಗೆ 'ಈ ಹೊತ್ತಿಗೆ ಕಥಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ವಿದ್ಯಾರಶ್ಮಿ ಪೆಲತ್ತಡ್ಕ, ರೇಣುಕಾ, ಜಯಲಕ್ಷ್ಮಿ ಪಾಟೀಲ್, ಸಿಂಧು ರಾವ್, ಮಧು ವೈ.ಎನ್., ದೇವು ಪತ್ತಾರ, ಇಂದಿರಾ ಶರಣ್ ಭಾಗವಹಿಸಿದ್ದರು

'ಈ ಹೊತ್ತಿಗೆ' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಹೊತ್ತಿಗೆ' ಸಂಸ್ಥೆಯ ಹೊನಲು ಕಾರ್ಯಕ್ರಮದಲ್ಲಿ ಸದಾಶಿವ ಸೊರಟೂರ ಅವರ 'ಧ್ಯಾನಕ್ಕೆ ಕೂತ ನದಿ' ಕಥಾ ಸಂಕಲನಕ್ಕೆ 'ಈ ಹೊತ್ತಿಗೆ ಕಥಾ ಪ್ರಶಸ್ತಿ' ಮತ್ತು ನಿರ್ಝಾಮ್ ಗೋಳಿಪಡ್ಪು ಅವರ 'ಅನಾಮಧೇಯ ಗೀರುಗಳು' ಕವನ ಸಂಕಲನಕ್ಕೆ 'ಈ ಹೊತ್ತಿಗೆ ಕಾವ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕಥೆಗಾರ ಸದಾಶಿವ ಸೊರಟೂರು ಮಾತನಾಡಿ, 'ಕಥಾ ಮಾಧ್ಯಮದ ಮೂಲಕ ನನ್ನನ್ನು ನಾನು ಬಿಡುಗಡೆ ಮಾಡುವ ದಾರಿಯನ್ನು ಕಂಡುಕೊಳ್ಳುತ್ತಿದ್ದೇನೆ' ಎಂದು ಅನುಭವ ಹಂಚಿಕೊಂಡರು.

ಕವಿ ನಿರ್ಝಾಮ್ ಗೋಳಿಪಡ್ಪು ಮಾತನಾಡಿ, 'ಮನದ ಮಾತುಗಳನ್ನು ಸಾಹಿತ್ಯದ ಭಾಷೆಯಲ್ಲಿ ವಿವರಿಸುವುದು ಕಷ್ಟ. ನನ್ನೊಳಗಿನ ನೋವುಗಳು ಕವಿತೆಯಾಗಿ ಮೂಡಿದವು' ಎಂದರು.

'ಪ್ರಜಾವಾಣಿ' ಮುಖ್ಯ ಉಪಸಂಪಾದಕಿ ರಶ್ಮಿ ಎಸ್. ಪ್ರಶಸ್ತಿ ಪ್ರದಾನ ಮಾಡಿದರು. 'ಸಾಮಾಜಿಕ ತ್ವರಿತ ಪಲ್ಲಟಗಳು ಮತ್ತು ಕನ್ನಡ ಸಾಹಿತ್ಯ' ಬಗ್ಗೆ ಪತ್ರಕರ್ತೆ ವಿದ್ಯಾರಶ್ಮಿ ಉಪನ್ಯಾಸ ನೀಡಿದರು. ಆನಂದ ಕುಂಚನೂರ, ಮಧು ವೈ ಎನ್., ದೇವು ಪತ್ತಾರ್, ಇಂದಿರಾ ಶರಣ್, ಸಿಂಧು ರಾವ್, ರೇಣುಕಾ ಕೋಡಗುಂಟಿ ಸಂವಾದ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ವಿಮರ್ಶಕಿ ಎಂ. ಎಸ್. ಆಶಾದೇವಿ ಅವರನ್ನು ಕಥೆಗಾರ ದೇವು ಪತ್ತಾರ್ ಸನ್ಮಾನಿಸಿದರು. 'ಈ ಹೊತ್ತಿಗೆ'ಯ ಜಯಲಕ್ಷ್ಮಿ ಪಾಟೀಲ್, ಜಯಶ್ರೀ ದೇಶಪಾಂಡೆ, ಸುಮಾ ಅನಿಲ್, ಕುಸುಮಾ ಹೆಗಡೆ, ವೀರೇಶ್, ಲೇಖಕಿ ಶಶಿಕಲಾ ವಸ್ತ್ರದ್, ಸರ್ವಮಂಗಳಾ ಮೋಹನ್, ಸಂಗೀತಾ ಚಚಡಿ ಉಪಸ್ಥಿತರಿದ್ದರು.

‘ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ’: ಎರಡು ವರ್ಷದಲ್ಲಿ 1.75 ಲಕ್ಷ ಮಂದಿಗೆ ಚಿಕಿತ್ಸೆ

‘ಆಯುಷ್ಮಾನ್’ ಚಿಕಿತ್ಸೆ: ನಗರದತ್ತ ಹೆಜ್ಜೆ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ‘ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ’ ಯೋಜನೆಯ ಅಡಿ ಕಳೆದ ಎರಡು ವರ್ಷಗಳಲ್ಲಿ 1.75 ಲಕ್ಷ ಮಂದಿಗೆ ಚಿಕಿತ್ಸೆ ಒದಗಿಸಲಾಗಿದೆ. ಹೊರ ರಾಜ್ಯದವರೂ ಯೋಜನೆಯಡಿ ಇಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

2018ರಲ್ಲಿ ಆರಂಭವಾದ ಈ ಯೋಜನೆಯ ಅಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು ‘ಆಯುಷ್ಮಾನ್ ಭಾರತ್’ ಯೋಜನೆ ಅಡಿ ಬರಲಿವೆ. ಉಳಿದ ಕುಟುಂಬಗಳನ್ನು ‘ಆರೋಗ್ಯ ಕರ್ನಾಟಕ’ ಯೋಜನೆಯ ಅಡಿ ಸೇರ್ಪಡೆ ಮಾಡಲಾಗಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ. ಪ್ರಮುಖ ಸರ್ಕಾರಿ ವೈದ್ಯಕೀಯ ಸಂಸ್ಥೆಗಳು ಇಲ್ಲಿ ಇರುವುದರಿಂದ ಈ ಯೋಜನೆಯ ಅಡಿ ಈ ಚಿಕಿತ್ಸೆ ಪಡೆಯಲು ನಗರಕ್ಕೆ ಬರುವವರ ಸಂಖ್ಯೆ ಏರಿಕೆಯಾಗುತ್ತಿದೆ.



ಯೋಜನೆಯಡಿ ನಗರದಲ್ಲಿ ವರ್ಷವಾರು ಚಿಕಿತ್ಸೆ ಪಡೆದವರು

ವರ್ಷ	ಚಿಕಿತ್ಸೆ ಪಡೆದವರು
2021-22	86,875
2022-23	88,595

ರಾಜ್ಯದಲ್ಲಿನ 16 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಯೋಜನೆಗೆ ಒಳಪಟ್ಟಿವೆ. ಇಲ್ಲಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಎಸ್‌ಜೆಐಸಿಆರ್), ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ಹಾಗೂ ನಿಮ್ಹಾನ್ಸ್ ಸಂಸ್ಥೆಯು ಯೋಜನೆಯಡಿ ಅಧಿಕ ಮಂದಿಗೆ ಚಿಕಿತ್ಸೆ ಒದಗಿಸಲಾದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಪಟ್ಟಿಯಲ್ಲಿ ಮೊದಲ ಐದು ಸ್ಥಾನಗಳಲ್ಲಿವೆ.

ಅಂಕಿ ಅಂಶ

1,650 ಯೋಜನೆ ಒಳಗೊಂಡಿರುವ ಚಿಕಿತ್ಸಾ ಪ್ಯಾಕೇಜ್‌ಗಳು

301 ಯೋಜನೆಯಡಿ ನೋಂದಾಯಿಸಲ್ಪಟ್ಟ ನಗರದ ಆಸ್ಪತ್ರೆಗಳು

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಹೆಚ್ಚಿನವರು ಕ್ಯಾನ್ಸರ್ ಹಾಗೂ ಹೃದಯ ಸಂಬಂಧಿ ಸಮಸ್ಯೆಗಳಿಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕಿದ್ವಾಯಿ ಸಂಸ್ಥೆಯಲ್ಲಿ ಪ್ರತಿ ವರ್ಷ 10 ಸಾವಿರಕ್ಕೂ ಅಧಿಕ ಕ್ಯಾನ್ಸರ್ ಪೀಡಿತ ಒಳರೋಗಿಗಳಿಗೆ ಯೋಜನೆಯಡಿ ಚಿಕಿತ್ಸೆ ನೀಡಲಾಗುತ್ತಿದೆ.

ಖಾಸಗಿ ಆಸ್ಪತ್ರೆಗಳ ನಿರಾಸಕ್ತಿ: ಚಿಕಿತ್ಸಾ ಪ್ಯಾಕೇಜ್ ದರ ಕಡಿಮೆ ಎಂಬ ಕಾರಣಕ್ಕೆ ಶಿಫಾರಸು ಆಧಾರದಲ್ಲಿ ಬರುವ ರೋಗಿಗಳಿಗೆ ಯೋಜನೆಯ ಅಡಿ ಚಿಕಿತ್ಸೆ ಒದಗಿಸಲು ಖಾಸಗಿ ಆಸ್ಪತ್ರೆಗಳು ನಿರಾಸಕ್ತಿ ತೋರುತ್ತಿವೆ. ಮಂಡಿ ಚಿಪ್ಪು ಬದಲಾವಣೆಗೆ ₹1.50 ಲಕ್ಷ, ಹೃದಯದ ಕವಾಟ ಬದಲಿ ಶಸ್ತ್ರ ಚಿಕಿತ್ಸೆಗೆ ₹1.55 ಲಕ್ಷ ಸೇರಿ ಯೋಜನೆಯ ಅಡಿ ವಿವಿಧ ಚಿಕಿತ್ಸೆಗಳಿಗೆ ನಿರ್ದಿಷ್ಟ ಮೊತ್ತ ನಿಗದಿಪಡಿಸಲಾಗಿದೆ. ಇಷ್ಟೇ ಮೊತ್ತದಲ್ಲಿ ಶಸ್ತ್ರಚಿಕಿತ್ಸೆ ನಡೆಸಬೇಕೆಂದು ನಿಯಮ ರೂಪಿಸಿರುವುದು ಖಾಸಗಿ ಆಸ್ಪತ್ರೆಗಳ ಆಕ್ಷೇಪಕ್ಕೆ ಕಾರಣವಾಗಿದೆ. ಯೋಜನೆಯ ಅಡಿ ನಗರದಲ್ಲಿ ಚಿಕಿತ್ಸೆ ಒದಗಿಸಲಾದ ಪ್ರಕರಣಗಳಲ್ಲಿ ಶೇಕಡ 80ಕ್ಕೂ ಅಧಿಕ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ನೀಡಲಾಗಿದೆ.

‘ಯೋಜನೆಯ ಅಡಿ ಸರ್ಕಾರಿ ಆಸ್ಪತ್ರೆಗಳಿಗೂ ಚಿಕಿತ್ಸೆಗೆ ಅನುಸಾರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಣ ಬಿಡುಗಡೆ ಮಾಡುತ್ತಿದೆ. ಈ ಹಣವನ್ನು ಆಸ್ಪತ್ರೆಗಳ ಅಭಿವೃದ್ಧಿ ಹಾಗೂ ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ಪ್ರೋತ್ಸಾಹ ಧನ ಒದಗಿಸಲು ಬಳಸಿಕೊಳ್ಳಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳ ನೋಂದಣಿ ಹೆಚ್ಚಿಸಲು ಕ್ರಮವಹಿಸಲಾಗಿದೆ. ಎಲ್ಲ ಅರ್ಹ ಫಲಾನುಭವಿಗಳು ಚಿಕಿತ್ಸೆ ಪಡೆಯುವಂತಾಗಲು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕಿಯೋಸ್ಕ್‌ಗಳನ್ನು ಸ್ಥಾಪಿಸಲಾಗುತ್ತಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಹೊರ ರಾಜ್ಯದ 4,976 ಮಂದಿಗೆ ಚಿಕಿತ್ಸೆ

‘ಆಯುಷ್ಮಾನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆ’ಯಡಿ ಹೊರ ರಾಜ್ಯದವರಿಗೂ ಚಿಕಿತ್ಸೆ ಪಡೆಯಲು ಅವಕಾಶ ನೀಡಲಾಗಿದೆ. ಯೋಜನೆಯ ಕಾರ್ಡ್ ಹೊಂದಿದ್ದಲ್ಲಿ ಸುಲಭವಾಗಿ ಚಿಕಿತ್ಸೆ ಪಡೆಯಬಹುದಾಗಿದೆ. 2021–22ರಲ್ಲಿ ಯೋಜನೆಯಡಿ 4,936 ಮಂದಿಗೆ ಹಾಗೂ 2022–23ರಲ್ಲಿ 40 ಮಂದಿಗೆ ಕೋವಿಡ್ ಚಿಕಿತ್ಸೆ ಒದಗಿಸಲಾಗಿದೆ.

ಎ.6–7ರಂದು ನಗರದಲ್ಲಿ ‘ಎಡ್ಯುವರ್ಸ್’ ಶೈಕ್ಷಣಿಕ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಬಳಗ ಪ್ರಸ್ತುತಪಡಿಸುವ ಕರ್ನಾಟಕದ ಪ್ರತಿಷ್ಠಿತ ಶೈಕ್ಷಣಿಕ ಮೇಳ ‘ಎಡ್ಯುವರ್ಸ್’ ಏಪ್ರಿಲ್ 6 ಮತ್ತು 7ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಏಪ್ರಿಲ್ 13 ಮತ್ತು 14ರಂದು ಹುಬ್ಬಳ್ಳಿಯಲ್ಲಿಯೂ ಆಯೋಜಿಸಲಾಗಿದೆ.

ಹದಿಮೂರು ವರ್ಷಗಳಿಂದ ಈ ಶೈಕ್ಷಣಿಕ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ಪಿಯುಸಿ ನಂತರ ಮುಂದೇನು ಎಂಬ ಪ್ರಶ್ನೆಗೆ ಒಂದೇ ಸೂರಿನಡಿ ಹಲವಾರು ಪರಿಹಾರಗಳನ್ನು ಪಡೆಯಬಹುದಾಗಿದೆ. ಎರಡು ದಿನಗಳ ಈ ಮೇಳದಲ್ಲಿ ಪರಿಣತರು, ತಜ್ಞರು ಪಾಲ್ಗೊಳ್ಳುತ್ತಿದ್ದಾರೆ. ಪರಿಣತರೊಂದಿಗೆ ಸಂವಾದ, ಉಪನ್ಯಾಸ ಮತ್ತು ಚರ್ಚೆಗಳನ್ನು ಆಯೋಜಿಸಲಾಗುತ್ತದೆ. ಪಾಲಕರ ಅನುಮಾನಗಳಿಗೆ, ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ತಜ್ಞರು ಉತ್ತರಿಸಲಿದ್ದಾರೆ.

50ಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಈ ಮೇಳದಲ್ಲಿ ಪಾಲ್ಗೊಳ್ಳಲಿವೆ. ಮಳಿಗೆ ಹಾಕುವುದಷ್ಟೇ ಅಲ್ಲ, ವಿದ್ಯಾರ್ಥಿಗಳಿಗೆ ಅವರ ಅಭಿರುಚಿಗೆ ತಕ್ಕುದಾದ ಆಯ್ಕೆ ಮಾಡಿಕೊಳ್ಳಲು ಸಮಾಲೋಚನೆ, ಸಲಹೆ ನೀಡಲು ತಜ್ಞರು ಇರಲಿದ್ದಾರೆ.

ಪಿಯುಸಿ ಅಥವಾ ತತ್ಸಮಾನ ವಿದ್ಯಾಭ್ಯಾಸ ಮುಗಿಸಿದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸುಗಳಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ದೊರೆಯಲಿದೆ. ರಾಜ್ಯದಲ್ಲಿರುವ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ತಮ್ಮಲ್ಲಿರುವ ವಿಶೇಷ ಕೋರ್ಸ್‌ಗಳ, ಪದವಿಗಳ ಮಾಹಿತಿ ನೀಡಲಿದ್ದಾರೆ.

ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಪಾಲಕರಿಗೂ ಸಹ ಮಾರ್ಗದರ್ಶಿಯಾಗಿರಲಿದೆ. ಯಾವ ಕೋರ್ಸು ಮಾಡಿದರೆ ಉದ್ಯೋಗಾವಕಾಶಗಳು ಹೇಗಿವೆ? ಉದ್ಯೋಗಾರ್ಹತೆ ಹೇಗೆ ಪಡೆಯಬಹುದು? ಯಾವ ಶೈಕ್ಷಣಿಕ ಸಂಸ್ಥೆಗಳು ಏನೆಲ್ಲ ಅನುಕೂಲಗಳನ್ನು ನೀಡುತ್ತಿವೆ ಎಂಬುದಲ್ಲದೆ ಶಿಕ್ಷಣ ಸಾಲದ ಕುರಿತೂ ಮಾಹಿತಿ ಪಡೆಯಬಹುದಾಗಿದೆ.

Eduverse A Premier Education Expo

ಮುಖ್ಯಾಂಶಗಳು

- ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ‘ಎಡ್ಯುವರ್ಸ್ 2024’ ಶೈಕ್ಷಣಿಕ ಮೇಳ
- ಏಪ್ರಿಲ್ 30ಗಳಿನಲ್ಲಿ ಎರಡು ದಿನಗಳ ಮೇಳ
- 50ಕ್ಕೂ ಹೆಚ್ಚಿನ ಶೈಕ್ಷಣಿಕ ಸಂಸ್ಥೆಗಳ ಪಾಲ್ಗೊಳ್ಳುವಿಕೆ

ಪರೀಕ್ಷೆಯ ಒತ್ತಡದಲ್ಲಿರುವ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ವಿಶೇಷ ಉಪನ್ಯಾಸಗಳು, ಅವರ ಅನುಮಾನಗಳನ್ನು ಪರಿಹರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಸಿಇಟಿ ಮತ್ತು ಕಾಮೆಡ್ ಕೆಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನೂ ಸಮಗ್ರವಾಗಿ ನೀಡಲಾಗುತ್ತದೆ.

Ad6 Advertising ಬೆಂಬಲಿಸುತ್ತಿರುವ ಈ ಮೇಳಕ್ಕೆ ನ್ಯೂಸ್ ಫಸ್ಟ್ ಕನ್ನಡ ಟೆಲಿವಿಷನ್ ಪಾಲುದಾರರಾಗಿದ್ದಾರೆ.

ಮಾಕ್ ಟೆಸ್ಟ್: ಸಿಇಟಿ ಮತ್ತು ಕಾಮೆಡ್ ಕೆಗೆ ಪರೀಕ್ಷಾರ್ಥಿಗಳಿಗೆ ಎರಡೂ ದಿನ ಮಾಕ್ ಟೆಸ್ಟ್ (ಅಣಕು ಪರೀಕ್ಷೆ) ಅನ್ನು ಹಮ್ಮಿಕೊಳ್ಳಲಾಗುವುದು. ಆಸಕ್ತ ವಿದ್ಯಾರ್ಥಿಗಳು www.deccanherald.com/eduverse ಜಾಲತಾಣಕ್ಕೆ ಲಾಗಿನ್ ಆಗಿ, ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ, ನಿಮ್ಮ ಸ್ಥಳವನ್ನು ಕಾಯ್ದಿರಿಸಿಕೊಳ್ಳಿ. ಈ ಮಾಕ್ ಟೆಸ್ಟ್‌ನಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಒಂದು ಲಕ್ಷ ಮೌಲ್ಯದ ಬಹುಮಾನಗಳನ್ನು ಗೆಲ್ಲುವ ಅವಕಾಶಗಳಿವೆ.

ಬೆಂಗಳೂರಿನಲ್ಲಿ ಗೇಟ್ 2/3 ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಶನಿವಾರ ಮತ್ತು ಭಾನುವಾರ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಮೇಳಕ್ಕೆ ಮುಕ್ತ ಅವಕಾಶವಿದೆ.



ಬಣ್ಣದೋಕುಳಿ... ಹೋಳಿ ಹಬ್ಬದ ಮುನ್ನಾ ದಿನವಾದ ಭಾನುವಾರ ಇಂದಿರಾನಗರದಲ್ಲಿ ಬಣ್ಣಗಳಲ್ಲಿ ಮಿಂದೆದ್ದ ಯುವ ಸಮೂಹ –ಪ್ರಜಾವಾಣಿ ಚಿತ್ರ/ ರಂಜು ಪಿ.

ಸಂಭ್ರಮದ ಹೋಳಿ ಹಬ್ಬ ಆಚರಣೆ

ಬೆಂಗಳೂರು: ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾ ಸಂಸ್ಥೆ ವತಿಯಿಂದ ರಾಜಾಜಿನಗರದ ರಾಮಮಂದಿರದ ಮೈದಾನದಲ್ಲಿ ಭಾನುವಾರ ಹೋಳಿ ಹಬ್ಬವನ್ನು ಆಚರಿಸಲಾಯಿತು.

ಬೆಂಗಳೂರಿನಲ್ಲಿ ವಾಸವಾಗಿರುವ ಉತ್ತರ ಕರ್ನಾಟಕ ಭಾಗದ ಜನ ಪ್ರತಿವರ್ಷದಂತೆ ಈ ವರ್ಷವೂ ಕಾಮದಹನ ಮಾಡಿ, ಬಣ್ಣದೋಕುಳಿ ಆಡಿ, ಸಂಭ್ರಮದಿಂದ ಹೋಳಿ ಹಬ್ಬ ಆಚರಿಸಿದರು. ಮಹಾಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಮೇಟಿ, ಪ್ರಧಾನ ಕಾರ್ಯದರ್ಶಿ ಶಂಕರ ಪಾಗೋಜಿ, ಕಾರ್ಯದರ್ಶಿ ಬಸಯ್ಯ ನಂದಿಕೋಲ್, ಶಿವಕುಮಾರ್ ಸರಶೆಟ್ಟಿ, ಭೀಮಪ್ಪ ನಾಲತ್ವಾಡ್ ಭಾಗವಹಿಸಿದ್ದರು.

ಕುಂಕುಮ ಹಚ್ಚಿಕೊಳ್ಳಲು ನಿರಾಕರಿಸಿದ ಆರ್.ಅಶೋಕ

ಪ್ರಜಾವಾಣಿ ವಾರ್ತೆ

ಕಲಬುರಗಿ: ಚಿಂಚೋಳಿ ತಾಲ್ಲೂಕಿನ ಸುಲೇಪೇಟ್ ಗ್ರಾಮದ ಬಿಜೆಪಿ ಕಚೇರಿ ಉದ್ಘಾಟನೆ ವೇಳೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಕುಂಕುಮ ಹಚ್ಚಿಕೊಳ್ಳಲು ನಿರಾಕರಿಸಿದರು.

ಕಾರ್ಯಕರ್ತರು ಜೈಕಾರದೊಂದಿಗೆ ಆರ್. ಅಶೋಕ ಅವರನ್ನು ಸ್ವಾಗತಿಸಿದರು. ಶಾಲು ಹಾಕಿ ಬರಮಾಡಿಕೊಂಡು, ಕಾರ್ಯಕರ್ತರೊಬ್ಬರು ಅಶೋಕ ಅವರಿಗೆ ಹಾರ ಹಾಕಲು ಮುಂದಾದರು. ಆ ಹಾರ ತಮ್ಮ ಕೈಯಲ್ಲಿ ತೆಗೆದುಕೊಂಡು ಹಿರಿಯ ಮುಖಂಡ ಡಾ. ವಿಶ್ವನಾಥ್ ಪವಾರ್ ಅವರಿಗೆ ಹಾಕಿದರು. ಈ ವೇಳೆ ವಿಶ್ವನಾಥ ಅವರು ಅಶೋಕ ಅವರಿಗೆ ಕುಂಕುಮದ ತಿಲಕ ಹಚ್ಚಲು ಮುಂದಾದರು. ತಲೆಯನ್ನು ಹಿಂದಕ್ಕೆ ತೆಗೆದುಕೊಂಡ ಅಶೋಕ, ಬೇಡವೆಂದು ಕೈಯಿಂದ ತಡೆದು ತಿಲಕ ಹಚ್ಚಿಕೊಳ್ಳಲು ನಿರಾಕರಿಸಿದ್ದು ಕಂಡುಬಂತು.

ಈ ವೇಳೆ ಶಾಸಕ ಡಾ.ಅವಿನಾಶ ಜಾಧವ, ಮುಖಂಡರು ಉಪಸ್ಥಿತರಿದ್ದರು.

ಮಹಿಳಾ ದಿನಾಚರಣೆ: ಸಾಧಕಿಯರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ನಮ್ಮ ಸಮುದಾಯದ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಬಾರದು. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಜನಾಂಗವನ್ನು ಸಂಘಟಿಸಿ ಬಲಪಡಿಸುವ ಮೂಲಕ ನಮ್ಮ ಹಕ್ಕುಗಳನ್ನು ಪಡೆಯಲು ಸಂಘ ರಚಿಸಿಕೊಂಡಿದ್ದೇವೆ’ ಎಂದು ಓಡ್ (ಭೋವಿ) ಕಮ್ಯೂನಿಟಿ ಕೌನ್ಸಿಲ್ ಆಫ್ ಇಂಡಿಯಾ ರಾಷ್ಟ್ರೀಯ ಕಾರ್ಯಾಧ್ಯಕ್ಷ ಎಂ. ಮನಿಮಾರಪ್ಪ ತಿಳಿಸಿದರು.

ಓಡ್(ಭೋವಿ) ಕಮ್ಯೂನಿಟಿ ಕೌನ್ಸಿಲ್ ಆಫ್ ಇಂಡಿಯಾ ಆಯೋಜಿಸಿದ್ದ ಮಹಿಳಾ ದಿನಾಚರಣೆಯಲ್ಲಿ ಸಾಧಕರನ್ನು ಸನ್ಮಾನಿಸಿ ಅವರು ಮಾತನಾಡಿದರು.

‘ನಮ್ಮ ಸಂಘಟನೆಯ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಅಧ್ಯಕ್ಷ ರವಿ ಮಾಕಳಿ ನೇತೃತ್ವದಲ್ಲಿ ಮುಂದಿನ ದಿನಗಳಲ್ಲಿ ನಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ. ಶಿಕ್ಷಣ, ಸಂಘಟನೆ, ಹೋರಾಟ ನಮ್ಮಧ್ಯೇಯವಾಗಿದ್ದು ಎಲ್ಲಾ ರಂಗಗಳಲ್ಲಿ ಮಹಿಳೆಯರು ತೊಡಗಿಸಿಕೊಳ್ಳಬೇಕು’ ಎಂದು ತಿಳಿಸಿದರು.




ಭೋವಿ ಸಮುದಾಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಅಭಿನಂದಿಸಲಾಯಿತು

‘ಭೋವಿ ಜನಾಂಗದ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡಬೇಕು’ ಎಂದು ಮುಖಂಡರಾದ ಭಾಗ್ಯ ತಿಳಿಸಿದರು. ಇದೇ ವೇಳೆ ಭೋವಿ ಸಮುದಾಯದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಅಭಿನಂದಿಸಲಾಯಿತು.

ರಾಜ್ಯಾಧ್ಯಕ್ಷ ಆನಂದಪ್ಪ, ರಾಷ್ಟ್ರೀಯ ಕಾರ್ಯಾಧ್ಯಕ್ಷ ಜಯರಾಮ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜೈ ಶಂಕರ್, ಬೌರಿಂಗ್ ಆಸ್ಪತ್ರೆಯ ಮುಖ್ಯ ನಿರ್ದೇಶಕಿ ಡಾ.ನಿರ್ಮಲ, ರಾಷ್ಟ್ರೀಯ ಉಪಾಧ್ಯಕ್ಷ ಯಲ್ಲಪ್ಪ, ಅಂತರರಾಷ್ಟ್ರೀಯ ಖಜಾಂಚಿ ವೆಂಕಟೇಶ್, ಗಂಗಾಧರ್, ಅಂತರರಾಷ್ಟ್ರೀಯ ಮಹಿಳಾ ನಿರ್ದೇಶಕಿ ಗೀತಾ ಹಾಜರಿದ್ದರು.

ನಿಧನ ವಾರ್ತೆ

ಎಂ.ಎನ್.ಎನ್. ಮೂರ್ತಿ ನಾಯಕ್



ತುಮಕೂರು: ಅಶೋಕ ನಗರದ ನಿವಾಸಿ, ಬಂಜಾರ ಸಮುದಾಯದ ಮುಖಂಡ ಎಂ.ಎನ್.ಎನ್. ಮೂರ್ತಿ ನಾಯಕ್ (75) ಅವರು ಬೆಂಗಳೂರಿನ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೂರ್ತಿ ನಾಯಕ್ ಮಾಗಡಿಯವರು. ಹಲವು ವರ್ಷಗಳ ಹಿಂದೆ ತುಮಕೂರಿಗೆ ಬಂದು ನೆಲೆಸಿದ್ದರು. ಉದ್ಯಮ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು.

ಮೃತರಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಅಶೋಕ ನಗರದ ಮೃತರ ಮನೆಯ ಬಳಿ ಸೋಮವಾರ ಮಧ್ಯಾಹ್ನ 12 ಗಂಟೆ ವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ನಂತರ ಗಾರ್ಡನ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ರಾಯರಪಾಳ್ಯ ಬಸವರಾಜು



ನೆಲಮಂಗಲ: ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ರಾಯರಪಾಳ್ಯ ಬಸವರಾಜು (75) ಅವರು ಭಾನುವಾರ ನಿಧನರಾದರು.

ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಮೃತರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

ಕಾಂಗ್ರೆಸ್ ಮುಖಂಡರಾಗಿದ್ದ ಇವರು, ಅಗಲಕುಪ್ಪೆ ಗ್ರಾ.ಪಂ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ರಾಯರಪಾಳ್ಯದ ಸ್ವಂತ ಜಮೀನಿನಲ್ಲಿ ಸೋಮವಾರ ಮಧ್ಯಾಹ್ನ 3ಕ್ಕೆ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮನಗರ: ದ್ವಿಚಕ್ರ ವಾಹನಗಳ ಸರಣಿ ಅಪಘಾತ

ರಾಮನಗರ: ನಗರದ ಹೊರವಲಯದ ಜಾನಪದ ಲೋಕದ ಬಳಿ ಬೆಂಗಳೂರು–ಮೈಸೂರು ರಸ್ತೆಯ ಮರು ಡಾಂಬರೀಕರಣ ನಡೆಯುತ್ತಿದ್ದು, ಅರ್ಧಂಬರ್ಧ ಕಾಮಗಾರಿಯಿಂದಾಗಿ ಭಾನುವಾರ ರಾತ್ರಿ ಸರಣಿ ಅಪಘಾತಗಳು ನಡೆದಿವೆ. ಘಟನೆಯಲ್ಲಿ ನಾಲ್ಕೈದು ದ್ವಿಚಕ್ರ ವಾಹನ ಸವಾರರು ಗಾಯಗೊಂಡಿದ್ದಾರೆ.

ಇತ್ತೀಚೆಗೆ ಹೆದ್ದಾರಿ ಡಾಂಬರೀಕರಣಕ್ಕೆ ಚಾಲನೆ ನೀಡಲಾಗಿತ್ತು. ಭಾನುವಾರ ಜಾನಪದ ಲೋಕದ ಬಳಿ ಕೆಲಸ ನಡೆಯುತ್ತಿತ್ತು. ಕತ್ತಲಾಗಿದ್ದರಿಂದ ಕಾರ್ಮಿಕರು ಅರ್ಧದಲ್ಲೇ ಕೆಲಸ ನಿಲ್ಲಿಸಿದ್ದರು. ಒಂದು ಬದಿಗೆ ಮಾತ್ರ ಡಾಂಬರು ಹಾಕಲಾಗಿತ್ತು. ವಾರಾಂತ್ಯವಾಗಿದ್ದರಿಂದ ರಸ್ತೆಯಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿತ್ತು. ಅದರಲ್ಲೂ ದ್ವಿಚಕ್ರ ವಾಹನಗಳು ಹೆಚ್ಚಾಗಿದ್ದವು. ಇದರಿಂದಾಗಿ ರಸ್ತೆಯಲ್ಲಿ ಕೆಲ ಹೊತ್ತು ಸಂಚಾರ ಅಸ್ತವ್ಯಸ್ತವಾಯಿತು. ‘ರಾತ್ರಿ 8 ಗಂಟೆ ಸುಮಾರಿಗೆ ವೇಗವಾಗಿ ಬಂದ ದ್ವಿಚಕ್ರ ವಾಹನ ಸವಾರರು ಅರ್ಧಂಬರ್ಧ ಡಾಂಬರೀಕರಣದಿಂದಾಗಿ ನಿಯಂತ್ರಣ ಕಳೆದುಕೊಂಡು ಬಿದ್ದರು’ ಎಂದು ಪ್ರತ್ಯಕ್ಷದರ್ಶಿ ಕಬಡ್ಡಿ ವಿಜಿ ತಿಳಿಸಿದರು.



ಕಾವ್ಯ ಉತ್ಸವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ(ಬಿಐಸಿ)ದಲ್ಲಿ ಭಾನುವಾರ ಆರ್ಟ್ ಮಂತ್ರಂ ಆಯೋಜಿಸಿದ್ದ ‘ಹಾಫ್ ಆಫ್ ವಾಟ್ ಐ ಸೀ’ ಗ್ಲಾಸ್ ಹೌಸ್ ಫೆಸ್ಟಿವಲ್ ಆಫ್ ಪೊಯಟ್ರಿ–2024ರಲ್ಲಿ (ಎಡದಿಂದ) ನಮ್ರತಾ ವರದರಾಜನ್, ಅಂಜು ಕಿಶೋರ್, ಕಲಾ ರಮೇಶ್, ತೇಜಿ ಸೇಥಿ, ವಾಣಿ ಸತ್ಯನಾರಾಯಣ, ವಿನಯ್ ಲಿಯೋ ಆರ್., ಕವಿತಾ ರತ್ನ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಮೇಲ್ ಮಾಡಿ: peoplesproblem@prajavani.co.in ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

‘ಕೆಟ್ಟು ನಿಂತಿರುವ ಕಾರು ಸ್ಥಳಾಂತರಿಸಿ’

ರಾಜಾಜಿನಗರ ಇಎಸ್‌ಐ ಆಸ್ಪತ್ರೆ ರಸ್ತೆಯ ಪಾದಚಾರಿ ಮಾರ್ಗದ ಬಳಿ ಬಹಳ ದಿನಗಳಿಂದ ಕಾರೊಂದು ಕೆಟ್ಟು ನಿಂತಿದೆ. ಇದರಿಂದ, ಈ ಭಾಗದಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ. ಕಾರಿನ ಸುತ್ತಮುತ್ತಲಿನ ಪ್ರದೇಶವು ತ್ಯಾಜ್ಯ ಸಂಗ್ರಹ ಕೇಂದ್ರವಾಗಿ ಮಾರ್ಪಟ್ಟಿದೆ. ಇದು ನಗರದ ಸೌಂದರ್ಯಕ್ಕೆ ಕಪ್ಪು ಚುಕ್ಕೆ ಆಗಿದೆ. ಆದ್ದರಿಂದ, ಸಂಚಾರ ಪೊಲೀಸರು ಈ ಕಾರನ್ನು ಕೂಡಲೇ ಸ್ಥಳಾಂತರಿಸಬೇಕು.

ಶಿವಪ್ರಸಾದ್ ಎಸ್., ರಾಜಾಜಿನಗರ



ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯ ಮುಂಭಾಗದಲ್ಲಿ ಕೆಟ್ಟು ನಿಂತಿರುವ ಕಾರು

ರಸ್ತೆಯಲ್ಲಿ ಹರಿಯುವ ಚರಂಡಿ ನೀರು

ವಿದ್ಯಾರಣ್ಯಪುರದ ಸಿಂಗಾಪುರದಲ್ಲಿರುವ ಸಿಂಹಾದ್ರಿ ಬಡಾವಣೆ ಮುಖ್ಯರಸ್ತೆಯ ಮಧ್ಯಭಾಗದಲ್ಲಿ ಚರಂಡಿ ನೀರು ಹರಿಯುತ್ತಿದ್ದು, ವಾಹನ ಸಂಚಾರಕ್ಕೆ ತೊಂದರೆ ಆಗಿದೆ. ರಸ್ತೆಯಲ್ಲಿ ನೀರು ಹರಿಯುವ ಕಾರಣ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಡಾವಣೆಯಲ್ಲಿ ತ್ಯಾಜ್ಯ ನೀರು ಹರಿದು ಹೋಗಲು ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಪ್ರತಿನಿತ್ಯ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ.

ಪಾಂಡುರಂಗ ನಾಯಕ್, ಸಿಂಹಾದ್ರಿ ಬಡಾವಣೆ




ರಸ್ತೆಯಲ್ಲಿ ಹರಿಯುವ ಚರಂಡಿ ನೀರು

‘ಪಾದಚಾರಿ ಮಾರ್ಗದಲ್ಲಿನ ಕಸ ತೆರವುಗೊಳಿಸಿ’

ಕೆಂಪೇಗೌಡ ರಸ್ತೆಯ ಶಿಕ್ಷಕರ ಭವನದ ಪಾದಚಾರಿ ಮಾರ್ಗದ ಮೇಲೆ ಮಣ್ಣು ಮಿಶ್ರಿತ ಜಲ್ಲಿಕಲ್ಲು, ಕಟ್ಟಡ ತ್ಯಾಜ್ಯವನ್ನು ಹಾಕಲಾಗಿದೆ. ಇದರಿಂದ, ಪಾದಚಾರಿ ಮಾರ್ಗದಲ್ಲಿ ಸಂಚರಿಸುವವರಿಗೆ ಅಡಚಣೆ ಉಂಟಾಗಿದೆ. ಸರ್ಕಾರಿ ಕಚೇರಿಗಳಿಗೆ ಬರುವ ಜನ ಇದೇ ದಾರಿಯ ಮೂಲಕವೇ ಹೋಗುತ್ತಾರೆ. ರಸ್ತೆಯಲ್ಲಿ ರಾಶಿಗಟ್ಟಲೆ ಕಸ ಹಾಕಿರುವುದರಿಂದ ಜನರು ಮುಖ್ಯರಸ್ತೆಯ ಮೂಲಕ ಹಾದು ಹೋಗಬೇಕಾಗಿದೆ. ಸ್ಥಳೀಯರು ಸಹ ಇಲ್ಲಿಯೇ ತ್ಯಾಜ್ಯವನ್ನು ತಂದು ಎಸೆದು ಹೋಗುತ್ತಿದ್ದಾರೆ. ಬಿಬಿಎಂಪಿ ಕೂಡಲೇ ಇಲ್ಲಿನ ಕಸ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಶಿವು, ಬನ್ನಪ್ಪ ಪಾರ್ಕ್



ಶಿಕ್ಷಕರ ಭವನದ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸದ ರಾಶಿ

‘ರಸ್ತೆ ದುರಸ್ತಿಪಡಿಸಿ’



ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ದುಃಸ್ಥಿತಿ

ರಾಜಭವನ ರಸ್ತೆಯಿಂದ ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್ ಸಂಖ್ಯೆ 7,8,9,10ಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಇದರಿಂದ, ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಕ್ರಿಕೆಟ್ ನೋಡಲು ಬರುವ ದೇಶ–ವಿದೇಶಗಳ ಕ್ರಿಕೆಟ್ ಪ್ರೇಮಿಗಳಿಗೆ ಅನನಕೂಲವಾಗುತ್ತಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳು, ಸಿಬ್ಬಂದಿ ಸಹ ಇದೇ ಹಾದಿಯಲ್ಲಿ ಸಾಗುತ್ತಾರೆ. ಈ ರಸ್ತೆಯಲ್ಲಿ ಅಲ್ಲಲ್ಲಿ ಗುಂಡಿಗಳು ಬಿದ್ದಿದ್ದು, ಡಾಂಬರ್ ಕಂಡು ವರ್ಷಗಳೇ ಕಳೆದಿವೆ. ಈಗಾಗಲೇ ಇಂಡಿಯನ್ ಪ್ರಿಮಿಯರ್ ಲೀಗ್ ಪ್ರಾರಂಭವಾಗಿದೆ. ಇಲ್ಲಿ ಪಂದ್ಯಗಳು ನಡೆಯುವ ಮುನ್ನ ಈ ರಸ್ತೆಗೆ ಡಾಂಬರೀಕರಣ ಮಾಡಬೇಕು.

ಎಚ್. ದೊಡ್ಡ ಮಾರಯ್ಯ, ಕ್ರಿಕೆಟ್ ಪ್ರೇಮಿ

'ನೂರೊಸಗೆಗಳು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಎಂ.ಎಸ್. ಆಶಾದೇವಿ

‘ರಾಷ್ಟ್ರೀಯ ನಾಯಕ’ರೇ ಬಹುತ್ವಕ್ಕೆ ಅಪಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರಿಟನ್‌ನಲ್ಲಿ ನಿಂತು ಬಸವಣ್ಣ ನನಗೆ ಸ್ಫೂರ್ತಿ ಎಂದು ಹೇಳುವ ರಾಷ್ಟ್ರೀಯ ನಾಯಕರು ಭಾರತದಲ್ಲಿ ಬಸವಣ್ಣನ ತತ್ವಕ್ಕೆ ವಿರುದ್ಧವಾಗಿ ಇದ್ದಾರೆ. ಬಹುತ್ವಕ್ಕೆ ಈ ರಾಷ್ಟ್ರೀಯ ನಾಯಕರೇ ದೊಡ್ಡ ಅಪಾಯ’ ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಲಂಡನ್‌ನ ಬಸವ ಅಂತರ ರಾಷ್ಟ್ರೀಯ ವೇದಿಕೆ ಭಾನುವಾರ ಹಮ್ಮಿಕೊಂಡಿದ್ದ ‘ಬಹುತ್ವ ಭಾರತ, ಕರ್ನಾಟಕ ಸಾಂಸ್ಕೃತಿಕ ನಾಯಕ ಬಸವಣ್ಣ ವಚನ ಸಂಭ್ರಮ’ ಕಾರ್ಯಕ್ರಮದಲ್ಲಿ ಪುಷ್ಪ ಬಣಕಾರ್ ಅವರ ‘ನೂರೊಸಗೆಗಳು’ ಕವನ ಸಂಕಲನ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ನಮ್ಮ ದೇಶದ ತಳಹದಿ, ಮೂಲತತ್ವವೇ ಬಹುತ್ವ. ಭಾರತಕ್ಕೆ ಮತ್ತೊಂದು ಹೆಸರೇ ಬಹುತ್ವ. ಈ ಮೂಲತತ್ವವನ್ನೇ ನಾಶಮಾಡಲು ರಾಷ್ಟ್ರೀಯ ನಾಯಕರು ಹೊರಟಿದ್ದಾರೆ' ಎಂದು ಟೀಕಿಸಿದರು.

'ಜನಸಮುದಾಯದ ಬೇರೆ ಬೇರೆ ಸಂಸ್ಕೃತಿಗಳನ್ನು ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲು ಕೀಳು ಎಂದು ವಿಂಗಡಿಸಲಾಗಿದೆ. ಯಾವುದೂ ಶ್ರೇಷ್ಠವಲ್ಲ, ಯಾವುದೂ ಕನಿಷ್ಠವಲ್ಲ ಎಂಬ ಸಮಾನ ವೇದಿಕೆಯಲ್ಲಿ ಎಲ್ಲ ಸಂಸ್ಕೃತಿಗಳನ್ನು ತರಬೇಕು. ಉಪಸಂಸ್ಕೃತಿ ಎಂದು ವಿಂಗಡಿಸುವುದು ಕೂಡ ಸರಿಯಲ್ಲ' ಎಂದು ವಿಶ್ಲೇಷಿಸಿದರು.



ನಗರದಲ್ಲಿ ಭಾನುವಾರ ‘ನೂರೊಸಗೆಗಳು’ ಕವನ ಸಂಕಲನವನ್ನು ಬಿಡುಗಡೆ ಮಾಡಿದ ವಿಮರ್ಶಕಿ ಎಂ.ಎಸ್. ಆಶಾದೇವಿ ಅವರು ಪುಸ್ತಕವನ್ನು ಕೃತಿಕಾರ್ತಿ ಪುಷ್ಪ ಬಣಕಾರ್ ಅವರಿಗೆ ಹಸ್ತಾಂತರಿಸಿದರು. ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ.ನಾಗರಾಜ್ ಮೂರ್ತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷರು ಪ್ರಮೀಳಾ ಗರಡಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಕಾರ್ಯಕ್ರಮ ಉದ್ಘಾಟಿಸಿದ ಅಖಿಲ ಭಾರತ ಸಾಹಿತ್ಯ ಪರಿಷತ್ತು ಅಧ್ಯಕ್ಷ ಸಿ. ಸೋಮಶೇಖರ್ ಮಾತನಾಡಿ, ‘ಜಗತ್ತಿನಲ್ಲಿ ಅನೇಕ ಕ್ರಾಂತಿಗಳು ನಡೆದಿವೆ. ಅವೆಲ್ಲ ಒಂದು ವಿಚಾರ, ಒಂದು ಆಯಾಮವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಿಡಿದೆದ್ದು ಮೊಳಗಿಸಿದ್ದ ಕ್ರಾಂತಿ ಕಹಳೆಯಾಗಿತ್ತು. ಆದರೆ, ಶರಣರ ಕ್ರಾಂತಿ ಎಲ್ಲ ಆಯಾಮಗಳನ್ನು ಒಳಗೊಂಡಿರುವಂತದ್ದಾಗಿದೆ. ಎಲ್ಲ ಸ್ತರದ ಜನರ ನೋವುಗಳನ್ನು ಒಳಗೊಂಡ ಕ್ರಾಂತಿ. ಬಸವಣ್ಣ ಕೇವಲ ಕರ್ನಾಟಕದ ಸಾಂಸ್ಕೃತಿಕ ನಾಯಕನಲ್ಲ, ವಿಶ್ವದ ಸಾಂಸ್ಕೃತಿಕ ನಾಯಕ ಎಂದು ಬಣ್ಣಿಸಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಮಾತನಾಡಿ, ‘ಮಹಾರಾಷ್ಟ್ರದಲ್ಲಿ ಶಿವಾಜಿಯನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದಾಗ ಅಲ್ಲಿ ಎಲ್ಲ ಕಡೆಗಳಲ್ಲಿ ಸಂಭ್ರಮಾಚರಣೆ, ವಿಜಯೋತ್ಸವಗಳು ನಡೆದವು. ಕರ್ನಾಟಕದಲ್ಲಿ ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದಾಗ ಯಾವ ಸಂಭ್ರಮವೂ ಕಂಡು ಬರಲಿಲ್ಲ. ಮಠಗಳೂ ಸುಮ್ಮನೆ ಕುಳಿತಿದ್ದವು’ ಎಂದು ಬೇಸರ ವ್ಯಕ್ತಪಡಿಸಿದರು.

ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಕೃತಿಕಾರ್ತಿ ಪುಷ್ಪ ಬಣಕಾರ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಪ್ರಮೀಳಾ ಗರಡಿ, ಶರಣ ಸಾಹಿತ್ಯ ಪರಿಷತ್ತು ಪ್ರಧಾನ ಕಾರ್ಯದರ್ಶಿ ಗೀತಾ ಜಯಂತ್, ಮಧುರಾ ಅಶೋಕ್ ಕುಮಾರ್, ಪ್ರಮೀಳಾ ಪಾಲನೇತ್ರ ಉಪಸ್ಥಿತರಿದ್ದರು.

ಹೋಳಿ: ಕಾಮದಹನದ ದಿನ

• ಎಸ್‌. ಸೂರ್ಯಪ್ರಕಾಶ ಪಂಡಿತ್

ಬಣ್ಣಗಳಿಲ್ಲದ ಜಗತ್ತನ್ನು ಒಮ್ಮೆ ಊಹಿಸಿಕೊಳ್ಳಿ. ಬದುಕು ಎಷ್ಟೊಂದು ನೀರಸ ಎಂಬುದು ಕೂಡಲೇ ಅನುಭವಕ್ಕೆ ಬರುತ್ತದೆ. ಪ್ರಕೃತಿಯಲ್ಲಿರುವ ಬಣ್ಣಗಳು ನಮ್ಮ ಬದುಕಿನ ಸುಂದರ ತಾಣಗಳು. ಈ ತತ್ತ್ವದ ಅನುಸಂಧಾನವೋ ಎಂಬಂತೆ ಹೋಳಿಯ ಆಚರಣೆ ನಮ್ಮ ಸಂಸ್ಕೃತಿಯಲ್ಲಿ ಮೂಡಿಕೊಂಡಿದೆ.

ಬಣ್ಣಗಳನ್ನು ಎರಚುವುದು, ಓಕಳಿ ಆಡುವುದು – ಇವು ಇಂದಿನ ಹೋಳಿಹಬ್ಬದ ಆಚರಣೆಯ ಪ್ರಧಾನ ಅಂಶವಾಗಿ ಕಾಣುತ್ತಿದೆ. ವಸಂತಕಾಲದ ಆಗಮನವನ್ನು ಸಂಭ್ರಮಿಸುವ ಬಗೆ ಇದು. ಪ್ರಕೃತಿಯ ವೈವಿಧ್ಯಕ್ಕೂ ಹೊಸತನಕ್ಕೂ ಚೇತನಕ್ಕೂ ಸಂಕೇತವೇ ವಸಂತಕಾಲ. ಅದರ ಸಂಭ್ರಮಾಚರಣೆಯೇ ಬಣ್ಣಗಳ ಆಟ. ಆದರೆ ಇದಿಷ್ಟೇ ಹೋಳಿ ಹಬ್ಬವಲ್ಲ; ಕಾಮದಹನವೇ ಹೋಳಿಯ ಪ್ರಧಾನ ಅಂಶ.



ಕಾಮದಹನದ ಕಥೆ ನಮಗೆಲ್ಲ ಗೊತ್ತಿದೆ. ಶಿವನು ತಪಸ್ಸಿಗೆ ಕುಳಿತ್ತಿದ್ದಾನೆ. ಅವನ ತಪಸ್ಸನ್ನು ಕೆಡಿಸಲು ದೇವತೆಗಳು ಮನ್ಮಥನನ್ನು ಶಿವನಲ್ಲಿಗೆ ಕಳುಹಿಸಿದ್ದಾರೆ. ದೇವತೆಗಳ ಕೋರಿಕೆಯಿಂದ ಉಬ್ಬಿಹೋದ ಮನ್ಮಥನು ಶಿವನ ಕಡೆಗೆ ತನ್ನ ಪುಷ್ಪಬಾಣವನ್ನು ಪ್ರಯೋಗಿಸಿದ. ಶಿವನ ತಪಸ್ಸಿಗೆ ಭಂಗ ಒದಗಿತು. ಕೋಪದಿಂದ ಅವನು ಮೂರನೆಯ ಕಣ್ಣನ್ನೇ ತೆರೆದುಬಿಟ್ಟ! ತಪಸ್ಸಿಗೆ ಅಡ್ಡಿ ಉಂಟುಮಾಡಿದ ಮನ್ಮಥ ಆ ಮೂರನೆಯ ಕಣ್ಣಿಗೆ ಬಿದ್ದ; ಕ್ಷಣಾರ್ಧದಲ್ಲಿ ಉರಿದುಹೋಗಿ ಬೂದಿಯಾಗಿ ಉಳಿದ.

ಈ ಕಥೆಗೆ ಹಲವು ಆಯಾಮಗಳ ಅರ್ಥಗಳೇ ಇವೆಯೆನ್ನಿ! 'ಕಾಮ' ಎಂಬ ತತ್ತ್ವದ ಬೇರೆ ಬೇರೆ ನೆಲೆಗಳನ್ನು ಇಲ್ಲಿ ಕಾಣಬಹುದು.

ಕಾಮ ಇಲ್ಲದೆ ಜಗತ್ತು ಮುಂದುವರೆಯುವಂತೆಯೇ ಇಲ್ಲ. ನಮ್ಮ ಬಯಕೆಗಳೆಲ್ಲವೂ ಕಾಮವೇ. ಸಾಮಾನ್ಯಾರ್ಥದಲ್ಲಿರುವ ಗಂಡು–ಹೆಣ್ಣುಗಳ ಆಕರ್ಷಣೆಯಷ್ಟೆ ಕಾಮವಲ್ಲ. ಈ ವಿಶಾಲಾರ್ಥದಲ್ಲಿಯೇ ಅದನ್ನು ನಮ್ಮ ಸಂಸ್ಕೃತಿಯಲ್ಲಿ ಪುರುಷಾರ್ಥವಾಗಿ ಕಾಣಿಸಿರುವುದು. ಆದರೆ ಈ ಕಾಮವು ಸ್ವಾಭಾವಿಕವಾಗಿರಬೇಕು; ಪ್ರಕೃತಿಯ ನಿಯಮಗಳಿಗೂ ಸಂಸ್ಕೃತಿಯ ನಿಯಮಗಳಿಗೂ ವಿರುದ್ಧವಾಗಿರಬಾರದು. ಎಂದರೆ ಅಕಾಲದ ಕಾಮಕ್ಕೆ ಅವಕಾಶ ಸಲ್ಲದು. ಇಂಥ ಕಾಮ ನಮಗೆ ವೈರಿಯೇ ಹೌದು. ಒಳಿತನ್ನು ಉಂಟುಮಾಡುವ ಕಾಮವೂ ಇದೆ, ಒಳಿತನ್ನು ಕೆಡಿಸುವ ಕಾಮವೂ ಇದೆ.

ಸತಿಯನ್ನು ಕಳೆದುಕೊಂಡ ಪತಿ, ಎಂದರೆ ಶಿವನು ಲೋಕವಿಮುಖನಾಗಿ ತಪಸ್ಸಿಗೆ ಕುಳಿತ್ತಿದ್ದಾನೆ. ಇತ್ತ ಕಡೆ ಪಾರ್ವತಿಯೂ ಶಿವನನ್ನು ಮದುವೆಯಾಗಲು ತಪಸ್ಸನ್ನು ಮಾಡುತ್ತಿದ್ದಾಳೆ. ಎದುರಾಗಿರುವ ಕಂಟಕದಿಂದ ಜಗತ್ತು ಪಾರಾಗಬೇಕಾದರೆ ಶಿವ–ಶಕ್ತಿ ಒಂದಾಗಬೇಕು, ಎಂದರೆ ಪಾರ್ವತೀ–ಪರಮೇಶ್ವರರು ಮದುವೆಯಾಗಬೇಕು. ಆದರೆ ತಪಸ್ಸಿನಲ್ಲಿ ಕುಳಿತ ಶಿವನನ್ನು ಎಚ್ಚರಿಸಬಲ್ಲವರು ಯಾರು? ಪಾರ್ವತಿಯ ಕಡೆಗೆ ಅವನ ಮನಸ್ಸನ್ನು ತಿರುಗಿಸಬಲ್ಲವರು ಯಾರು? ಅದಕ್ಕೆ ಉತ್ತರವೇ 'ಕಾಮ'. ಕಾಮನ ಜೊತೆಗೆ 'ವಸಂತ'ನೂ ಸೇರಿಕೊಳ್ಳಬೇಕು. ಆದರೆ ದೇವತೆಗಳು ಅಕಾಲದಲ್ಲಿ ವಸಂತವನ್ನು ಸೃಷ್ಟಿಸಿದರು. ಕಾಮನು ಶಿವನ ಆಶ್ರಮದಲ್ಲಿ ತೋರಿಕೊಂಡ ಕಾಲವೂ ಅಕಾಲವೇ ಆಗಿತ್ತು. ಹೀಗಾಗಿಯೇ ಅವನು ಶಿವನಿಂದ ಸುಟ್ಟುಹೋದ. ಆದರೆ ಶಿವನು ಕರುಣಾಮಯಿ. ಅವನು ಮತ್ತೆ ಕಾಮನನ್ನು ಬದುಕಿಸಿದ; ಲೋಕಕ್ಷೇಮಕ್ಕೆ ಕಾರಣನಾದ.

ಕಾಮಕ್ಕೆ ಎರಡು ರೂಪಗಳು. ಸಕಾಲದ ಕಾಮದಲ್ಲಿ ಲೋಕದ ಕ್ಷೇಮ ಅಡಗಿದೆ; ಆದರೆ ಅಕಾಲದ ಕಾಮದಿಂದ ಅಪಾಯವೇ ಎದುರಾಗುತ್ತದೆ. ಹೀಗಾಗಿ ನಾವು ಹೋಳಿಹುಣ್ಣಿಮೆಯಂದು ಮನನ ಮಾಡಬೇಕಾದುದು, 'ನಮ್ಮ ಬಯಕೆಗಳು ಇಂದು ಎತ್ತ ಸಾಗಿವೆ'. ಕಾಮನನ್ನು ಸುಡುವಾಗ ಕೆಟ್ಟ ಪದಗಳಿಂದ ಜನರು ಅವನನ್ನು ಬೈಯುವುದುಂಟು. ಇದು ಅಕಾಲದ ಕಾಮದ ನಿಂದನೆಯೇ ಹೌದು. ಈ ಆಚರಣೆಯ ಹಿಂದಿರುವ ಧ್ವನಿಯನ್ನು ಅರಿತುಕೊಂಡರೂ ಸಾಕು, 'ಕಾಮದಹನ'ವು ನಮ್ಮ ಜೀವನದಲ್ಲಿ ಎಷ್ಟು ಅನಿವಾರ್ಯ ಎಂದು ನಮಗೆ ಅರಿವಾಗುತ್ತದೆ. ❖

ಸುದ್ದಿ 2 ನಿಮಿಷ

'ಹೆಣ್ಣುಮಕ್ಕಳ ಕಲಿಕೆಗೆ ನಿರ್ಭೀತ ವಾತಾವರಣವನ್ನು ಕಲ್ಪಿಸಿ'

ಮಂಗಳೂರು: 'ಶಾಲಾ ಕಾಲೇಜುಗಳಿಗೆ ಹೆಣ್ಣುಮಕ್ಕಳು ನಿರ್ಭೀತಿಯಿಂದ ಹೋಗುವ ಮತ್ತು ಕಲಿಯಲು ಸಾಧ್ಯವಾಗುವಂಥ ವಾತಾವರಣ ನಿರ್ಮಿಸಲು ಸರ್ಕಾರ ಮುಂದಾಗಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ದಕ್ಷಿಣ ಕನ್ನಡ ಜಿಲ್ಲಾ ಘಟಕ ಆಗ್ರಹಿಸಿದೆ.

ನಗರದಲ್ಲಿ ಭಾನುವಾರ ಮುಕ್ತಾಯಗೊಂಡ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನದಲ್ಲಿ ಬಹಿರಂಗ ಅಧಿವೇಶನದಲ್ಲಿ ನಿರ್ಣಯ ಮಂಡಿಸಿದ ಪರಿಷತ್ತು ಜಿಲ್ಲಾ ಘಟಕದ ಕೋಶಾಧ್ಯಕ್ಷ ಬಿ.ಐತಪ್ಪ ನಾಯ್ಕ್, 'ಈಚೆಗೆ ಪುತ್ತೂರಿನ ಕಾಲೇಜೊಂದರಲ್ಲಿ ನಡೆದ ಆ್ಯಸಿಡ್ ದಾಳಿ ಪ್ರಕರಣದ ಹಿನ್ನೆಲೆಯಲ್ಲಿ ಸಾಹಿತ್ಯ ಪರಿಷತ್ತು ಈ ಆಗ್ರಹವನ್ನು ಮುಂದಿಟ್ಟಿದೆ' ಎಂದರು.

ಪಿಯುಸಿ ಕಲಾ ವಿಭಾಗದಲ್ಲಿ ಕನ್ನಡ ಐಚ್ಛಿಕ ವಿಷಯ ಅಧ್ಯಯನಕ್ಕೆ ಅವಕಾಶ ಕಲ್ಪಿಸಬೇಕು, ಪದವಿಯಲ್ಲಿ ಕನ್ನಡ ಐಚ್ಛಿಕ ವಿಷಯ ಅಧ್ಯಯನ ಮಾಡುವವರಿಗೆ ವಿದ್ಯಾರ್ಥಿ ವೇತನ ನೀಡಬೇಕು, ಶತಮಾನದ ಇತಿಹಾಸ ಇರುವ ಕನ್ನಡ ಶಾಲೆಗಳಿಗೆ ವಿಶೇಷ ಅನುದಾನ ನೀಡಿ ಗುಣಮಟ್ಟ ಹೆಚ್ಚಿಸಲು ಮುಂದಾಗಬೇಕು ಎಂಬ ನಿರ್ಣಯಗಳನ್ನು ಕೂಡ ಮಂಡಿಸಲಾಯಿತು.

ಕರ್ನಾಟಕದ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡವೇ ಪ್ರಥಮ ಭಾಷೆ ಆಗಬೇಕು. ಇಂಗ್ಲಿಷ್ ಅಥವಾ ಭಾರತದ ಬೇರೆ ಯಾವುದೇ ಭಾಷೆಯನ್ನು ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಕಲಿಸಿದರೆ ಸಾಕು. ಆಂಗ್ಲಭಾಷಾ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಕಡ್ಡಾಯವಾಗಿ ಪ್ರಥಮ ಭಾಷೆ ಆಗಬೇಕು, ಗ್ರಂಥಾಲಯ ಇಲಾಖೆಗೆ ಕಾಯಕಲ್ಪ ನೀಡಬೇಕು, ಖಾಸಗಿ ಗ್ರಂಥಾಲಯಗಳ ಪುನಶ್ಚೇತನ ಆಗಬೇಕು, ಶುದ್ಧ ಕನ್ನಡ ಭಾಷೆ ಬಳಕೆಗೆ ಆದ್ಯತೆ ನೀಡಬೇಕು, ಪುಸ್ತಕ ಮಾರಾಟಕ್ಕೆ ಸರ್ಕಾರ ಪ್ರತ್ಯೇಕ ಶಾಖೆ ಆರಂಭಿಸಬೇಕು. ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಮೂಡಲು ಕ್ರಮ ಕೈಗೊಳ್ಳಬೇಕು– ಇವು ಸಮ್ಮೇಳನದ ಇತರ ನಿರ್ಣಯಗಳು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪಿ.ಶ್ರೀನಾಥ್ ಅಧ್ಯಕ್ಷತೆ ವಹಿಸಿದ್ದರು.

ಆನೆಚೌಕೂರು: ಕಾಡುಕೋಣ ಹತ್ಯೆ, ಪ್ರಕರಣ ದಾಖಲು



ಹುಣಸೂರು (ಮೈಸೂರು ಜಿಲ್ಲೆ): ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವಲಯದಲ್ಲಿ ಬೇಟೆಗಾರರು ಕಾಡುಕೋಣವನ್ನು ಗುಂಡು ಹೊಡೆದು ಕೊಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿದ್ದಾಪುರ– ಪಿರಿಯಾಪಟ್ಟಣ ಮುಖ್ಯರಸ್ತೆಯಿಂದ ದೇವಮುಚ್ಚಿ ಮೀಸಲು ಅರಣ್ಯ ಪ್ರದೇಶದಲ್ಲಿರುವ ಪಾರದಕಟ್ಟೆ ಕಳ್ಳಬೇಟೆ ತಡೆ ಶಿಬಿರಕ್ಕೆ ಅರಣ್ಯ ಸಿಬ್ಬಂದಿಯು ಗಸ್ತಿಗೆ ಹೋಗುವಾಗ ಗುಂಡಿನ ಶಬ್ದ ಕೇಳಿಬಂದಿದೆ. ಸ್ಥಳಕ್ಕೆ ತೆರಳಿದಾಗ ಕಾಡುಕೋಣ ಹತ್ಯೆ ನಡೆದಿರುವುದು ಗೊತ್ತಾಯಿತು ಎಂದು ಮಾಹಿತಿ ನೀಡಿದ್ದಾರೆ.ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಎಸಿಎಫ್ ಡಿ.ಎಸ್.ದಯಾನಂದ್, ಮುಖ್ಯ ಪಶು ವೈದ್ಯಾಧಿಕಾರಿ ಡಾ.ರಮೇಶ್, ಆರ್‌ಎಫ್‌ಒ ದೇವರಾಜು ಸ್ಥಳಕ್ಕೆ ಭೇಟಿ ನೀಡಿದ್ದರು. ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ.



ಮಹಾರಥೋತ್ಸವ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಭಾನುವಾರ ನಡೆದ ಚೆಲುವನಾರಾಯಣಸ್ವಾಮಿ ಮಹಾರಥೋತ್ಸವದಲ್ಲಿ ಭಕ್ತರು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

'ಮೇಕೆದಾಟು ಎಲ್ಲ ಪಕ್ಷಗಳ ಪ್ರಣಾಳಿಕೆಯಲ್ಲಿ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಜಲಾಶಯ ನಿರ್ಮಾಣ ಯೋಜನೆಯನ್ನು ಬೆಂಬಲಿಸುವ ನಿರ್ಧಾರವನ್ನು ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಮೂರೂ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಪ್ರಕಟಿಸಬೇಕು' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ಮೇಕೆದಾಟು ಯೋಜನೆಯನ್ನು ವಿರೋಧಿಸುವ ಅಂಶವನ್ನು ತಮಿಳುನಾಡಿನ ಮುಖ್ಯಮಂತ್ರಿ ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಸೇರಿಸಿರುವುದನ್ನು ಜೆಡಿಎಸ್ ಖಂಡಿಸುತ್ತದೆ. ರಾಜ್ಯದಲ್ಲಿರುವ ಎಲ್ಲ ಪಕ್ಷಗಳೂ ಅದನ್ನು ಖಂಡಿಸಬೇಕು' ಎಂದರು.

'ಮೇಕೆದಾಟು ಜಲಾಶಯ ನಿರ್ಮಾಣದ ವಿಚಾರದಲ್ಲಿ ತಮಿಳುನಾಡು ಸರ್ಕಾರದ ಬೆದರಿಕೆಗಳಿಗೆ ಭಯಪಡಬೇಕಾದ ಅಗತ್ಯವಿಲ್ಲ. ಅಣೆಕಟ್ಟೆ ನಿರ್ಮಾಣಕ್ಕಾಗಿ ನಾನೊಬ್ಬನೇ ಅಲ್ಲ, ರಾಜ್ಯ ಸರ್ಕಾರ, ಮುಖ್ಯಮಂತ್ರಿ, ಬಿಜೆಪಿ ನಾಯಕ ಬಿ.ಎಸ್‌. ಯಡಿಯೂರಪ್ಪ ಸೇರಿದಂತೆ ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ಮಾಡೋಣ. ಡಿಎಂಕೆಯ ಮಿತ್ರ ಪಕ್ಷವಾಗಿರುವ ಕಾಂಗ್ರೆಸ್ ಕೂಡ ತನ್ನ ಪ್ರಣಾಳಿಕೆಯಲ್ಲಿ ರಾಜ್ಯದ ಜನರಿಗೆ ಭರವಸೆ ನೀಡಲಿ' ಎಂದು ಒತ್ತಾಯಿಸಿದರು.

'ಮೇಕೆದಾಟು ಜಲಾಶಯ ನಿರ್ಮಾಣವನ್ನು ತಮಿಳುನಾಡು ಸರ್ಕಾರ ವಿರೋಧಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸುವಾಗ ತಮಿಳುನಾಡು ಪರ ವಕೀಲ ಶೇಖರ್ ನಫಾಡೆ ಹೇಳಿದ್ದರು. ಈಗ ರಾಜ್ಯದ ಜನರು ಒಗ್ಗಟ್ಟಿನಿಂದ ಪ್ರಯತ್ನ ಮಾಡಬೇಕಿದೆ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಕೆದಾಟು ಜಲಾಶಯ ನಿರ್ಮಾಣ ಯೋಜನೆಯನ್ನು ಬಜೆಟ್‌ನಲ್ಲೇ ಘೋಷಿಸಿದ್ದಾರೆ. ಬಿ.ಎಸ್‌. ಯಡಿಯೂರಪ್ಪ ಅವರು ಮುಖ್ಯ-ಮಂತ್ರಿಯಾಗಿದ್ದಾಗ ಈ ಯೋಜನೆ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಿದ್ದರು. ಅಂತಹ ಪ್ರಯತ್ನ ಈಗಲೂ ಮುಂದುವರಿಯಬೇಕು' ಎಂದು ದೇವೇಗೌಡ ಹೇಳಿದರು.


ರಾಜಕೀಯ ಬೇಡ: 'ಕಾವೇರಿ ನೀರಿನ ವಿಷಯದಲ್ಲಿ ರಾಜಕೀಯ ಬೆರೆಸುವುದು ಬೇಡ. ಬೆಂಗಳೂರು ಸೇರಿದಂತೆ ಕಾವೇರಿ ಕಣಿವೆಯ ಒಂಬತ್ತು ಜಿಲ್ಲೆಗಳ 22 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಜನರು ಮನೆಗಳ ಬಾಗಿಲಿಗೆ ಬೀಗ ಹಾಕಿ ವಲಸೆ ಹೋಗುತ್ತಿದ್ದಾರೆ' ಎಂದರು.

'ತಮಿಳುನಾಡಿಗೆ ಹರಿಸುತ್ತಿರುವ ನೀರಿನ ಪ್ರಮಾಣವನ್ನು ಕಡಿಮೆ ಮಾಡುವಂತೆ ಮತ್ತು ಮೇಕೆದಾಟು ಜಲಾಶಯ ನಿರ್ಮಾಣ ಯೋಜನೆಗೆ ಅಗತ್ಯವಿರುವ ಅನುಮತಿಗಳನ್ನು ತ್ವರಿತವಾಗಿ ಕೊಡಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದೇನೆ' ಎಂದು ಪತ್ರದ ಪ್ರತಿ ಪ್ರದರ್ಶಿಸಿದರು. 'ಮೇಕೆದಾಟು ಯೋಜನೆಯಿಂದ 5 ಸಾವಿರ ಎಕರೆ ಅರಣ್ಯ ಮುಳುಗಡೆ ಆಗುತ್ತದೆ ಎಂಬುದು ನಿಜವಲ್ಲ. ಆ ಕಾರಣವನ್ನು ಮುಂದಿಟ್ಟುಕೊಂಡು ಯೋಜನೆಯನ್ನು ವಿರೋಧಿಸುವ ಕೆಲಸವನ್ನು ಪರಿಸರವಾದಿಗಳು ಮಾಡಬಾರದು' ಎಂದು ಮನವಿ ಮಾಡಿದರು.

'ಮೈತ್ರಿಯಿಂದ ಸಮಸ್ಯೆ ಇಲ್ಲ'

'ಬಿಜೆಪಿ ಜತೆ ಮೈತ್ರಿಯಿಂದ ನಮಗೆ ಸಮಸ್ಯೆ ಆಗಿಲ್ಲ. ನಮಗೆ ಮೂರು ಕ್ಷೇತ್ರ ಕೊಟ್ಟಿದ್ದಾರೆ. ನನ್ನನ್ನು, ಕುಮಾರಸ್ವಾಮಿ ಹಾಗೂ ಜಿ.ಟಿ. ದೇವೇಗೌಡರನ್ನು ತಾರಾ ಪ್ರಚಾರಕರನ್ನಾಗಿ ಪಟ್ಟಿಗೆ ಸೇರಿಸಿದ್ದಾರೆ' ಎಂದು ಎಚ್‌.ಡಿ. ದೇವೇಗೌಡ ಹೇಳಿದರು.

'ಕುಮಾರಸ್ವಾಮಿ ಅವರು ಆಸ್ಪತ್ರೆಯಿಂದ ಭಾನುವಾರವಷ್ಟೆ ಮನೆಗೆ ಬಂದಿದ್ದಾರೆ. ಡಾ.ಸಿ.ಎನ್‌. ಮಂಜುನಾಥ್ ಪರ ನಾವೆಲ್ಲರೂ ಪ್ರಚಾರ ಮಾಡುತ್ತೇವೆ. ಮಂಡ್ಯದಲ್ಲಿ ಯಾವುದೇ ಸಮಸ್ಯೆ ಇಲ್ಲ' ಎಂದರು.



ಎಚ್‌.ಡಿ. ದೇವೇಗೌಡ

'ರಾಸಾಯನಿಕ ಬಣ್ಣಗಳಿಂದ ಕಣ್ಣಿಗೆ ಹಾನಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಸಾಯನಿಕ ಮಿಶ್ರಿತ ಬಣ್ಣಗಳು ಕಣ್ಣಿಗೆ ಹಾನಿ ಮಾಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಹೋಳಿ ಹಬ್ಬದ ಆಚರಣೆ ವೇಳೆ ನೈಸರ್ಗಿಕ ಬಣ್ಣಗಳನ್ನೇ ಬಳಸಬೇಕು' ಎಂದು ನೇತ್ರ ತಜ್ಞರು ಮನವಿ ಮಾಡಿಕೊಂಡಿದ್ದಾರೆ.

'ರಾಸಾಯನಿಕ ಬಣ್ಣಗಳು ಚರ್ಮದ ಜತೆಗೆ ಕಣ್ಣಿಗೂ ಅಪಾಯಕಾರಿ. ಹಾನಿಕಾರಕ ಬಣ್ಣವು ಕಣ್ಣಿಗೆ ಬಿದ್ದರೆ ಸೋಂಕು ಕಾಣಿಸಿಕೊಳ್ಳಲಿದೆ. ಬಣ್ಣಗಳಲ್ಲಿರುವ ಸೀಸದಿಂದ ಕಣ್ಣಿನ ಉರಿಯೂತ, ಅಲರ್ಜಿ, ತಾತ್ಕಾಲಿಕ ಅಂಧತ್ವ ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಹೂವುಗಳು, ತರಕಾರಿಗಳು ಮತ್ತು ಇತರ ನೈಸರ್ಗಿಕ ಮೂಲಗಳಿಂದ ತಯಾರಿಸಿದ ಬಣ್ಣಗಳನ್ನೇ ಬಳಸಬೇಕು. ಇವು ಚರ್ಮ ಮತ್ತು ಕಣ್ಣುಗಳಿಗೆ ಸುರಕ್ಷಿತವಾಗಿರುವ ಜತೆಗೆ ಪರಿಸರ ಸ್ನೇಹಿಯೂ ಹೌದು' ಎಂದು ಡಾ. ಅಗರ್‌ವಾಲ್ಸ್‌ ಕಣ್ಣಿನ ಆಸ್ಪತ್ರೆಯ ಕ್ಲಿನಿಕಲ್ ಸೇವೆಗಳ ಮುಖ್ಯಸ್ಥ ಡಾ. ದೇವರಾಜ್ ತಿಳಿಸಿದ್ದಾರೆ.

'ವಾಟರ್ ಬಲೂನ್‌ಗಳಿಂದ ಮನರಂಜನೆ ಸಿಗುತ್ತದೆಯಾದರೂ ಅವುಗಳಿಂದ ಕಣ್ಣಿಗೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ, ಇವುಗಳಿಂದ ದೂರವಿರುವುದು ಉತ್ತಮ. ಈ ಸಮಯದಲ್ಲಿ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ತುಂಬಾ ಮುಖ್ಯ' ಎಂದು ಹೇಳಿದ್ದಾರೆ.

'ಕಣ್ಣು ಕೆಂಪಾಗುವಿಕೆ, ಊತ ಅಥವಾ ತುರಿಕೆ ಕಾಣಿಸಿಕೊಂಡರೆ ತಕ್ಷಣವೇ ವೈದ್ಯಕೀಯ ನೆರವನ್ನು ಪಡೆಯಬೇಕು. ಹಬ್ಬದ ಸಂಭ್ರಮದಲ್ಲಿ ಮುಳುಗುವುದಕ್ಕೂ ಮೊದಲು ನಮ್ಮ ಕಣ್ಣುಗಳ ರಕ್ಷಣೆಯನ್ನೂ ನೋಡಿಕೊಳ್ಳಬೇಕು. ಎಚ್ಚರ ತಪ್ಪಿದರೆ ದೃಷ್ಟಿ ದೋಷಕ್ಕೆ ಒಳಗಾಗಬೇಕಾಗುತ್ತದೆ' ಎಂದು ತಿಳಿಸಿದ್ದಾರೆ.

ವೈದ್ಯರು ನೀಡಿದ ಸಲಹೆಗಳು

- ಬಣ್ಣಗಳಿಂದ ಕಣ್ಣಿಗೆ ಹಾನಿಯಾಗುವುದನ್ನು ತಪ್ಪಿಸಲು ಕನ್ನಡಕಗಳನ್ನು ಧರಿಸಿ
- ಬಣ್ಣ ಎರಚುವ ವೇಳೆ ಕಣ್ಣುಗಳನ್ನು ಮುಚ್ಚಿಕೊಳ್ಳಿ
- ಬಣ್ಣಗಳು ಕಣ್ಣಿನ ಒಳಕ್ಕೆ ಹೋಗುತ್ತಿದ್ದಂತೆ ಹಾನಿ ತಡೆಯಲು ನೀರಿನಿಂದ ಕಣ್ಣುಗಳನ್ನು ತೊಳೆದುಕೊಳ್ಳಿ
- ಕಣ್ಣಿನ ಸುತ್ತಲೂ ಕೊಬ್ಬರಿ ಎಣ್ಣೆ ಹಚ್ಚಿಕೊಳ್ಳಿ
- ವಾಟರ್ ಬಲೂನ್‌ಗಳನ್ನು ಬಳಸಬೇಡಿ
- ಕಣ್ಣಿಗೆ ಹಾನಿಯಾದ ಕೂಡಲೇ ವೈದ್ಯರನ್ನು ಸಂಪರ್ಕಿಸಿ

ಗುರಪ್ಪನಪಾಳ್ಯದಲ್ಲಿ ಶಂಕಿತರ ಸಭೆ

ಒಂದನೇ ಪುಟದಿಂದ...

ಗುರಪ್ಪನಪಾಳ್ಯದ ಮನೆಯೊಂದರಲ್ಲಿ ವಾಸವಿದ್ದ ಈತ, ಅದೇ ಮನೆಯಲ್ಲಿ 2019ರಿಂದ 2020ರವರೆಗೆ ಸರಣಿ ಸಭೆಗಳನ್ನು ನಡೆಸಿದ್ದ' ಎಂದು ತನಿಖಾ ಮೂಲಗಳು ತಿಳಿಸಿವೆ.

'ಮುಸ್ಲಿಂ ಸಮುದಾಯದ ವಿದ್ಯಾವಂತ ಯುವಕರನ್ನು ಸಂಪರ್ಕಿಸುತ್ತಿದ್ದ ಮೆಹಬೂಬ್ ಪಾಷಾ, 'ಧರ್ಮ ರಕ್ಷಣೆಗೆ ಪ್ರಾಣವನ್ನೂ ಲೆಕ್ಕಿಸದೇ ಹೋರಾಡಬೇಕಿದೆ. ನನ್ನ ಜೊತೆ ಬನ್ನಿ' ಎನ್ನುತ್ತಿದ್ದ. ಪ್ರಚೋದನಕಾರಿ ಪುಸ್ತಕ ಹಾಗೂ ಕರಪತ್ರಗಳನ್ನು ಯುವಕರಿಗೆ ಕೊಡುತ್ತಿದ್ದ. ಈತನ ಮಾತಿನಿಂದ ಪ್ರಚೋದನೆಗೊಂಡ ಮುಸಾವೀರ್ ಹಾಗೂ ಇತರರು, ಭಯೋತ್ಪಾದನಾ ಕೃತ್ಯ ಎಸಗಲು ಅಣಿಯಾಗಿದ್ದರು' ಎಂದು ಮೂಲಗಳು ಹೇಳಿವೆ.

'ಮೆಹಬೂಬ್ ಪಾಷಾ ನಡೆಸುತ್ತಿದ್ದ ಸಭೆಯಲ್ಲಿ ಮುಸಾವೀರ್ ಹಾಗೂ ಇತರೆ ಶಂಕಿತರು ಪಾಲ್ಗೊಳ್ಳುತ್ತಿದ್ದರು. ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಭಯೋತ್ಪಾದನಾ ಕೃತ್ಯಗಳನ್ನು ಎಸಗುವ ಬಗ್ಗೆ ಚರ್ಚಿಸುತ್ತಿದ್ದರು. ಹಿಂದೂ ಸಂಘಟನೆಗಳ ಮುಖಂಡರನ್ನು ಹತ್ಯೆ ಹಾಗೂ ಮತೀಯ ಗಲಭೆ ಹುಟ್ಟುಹಾಕಲು ಸಂಚು ರೂಪಿಸುತ್ತಿದ್ದರು. ಇದಕ್ಕೆ ಅಗತ್ಯವಿದ್ದ ಸ್ಫೋಟಕಗಳನ್ನು ಸಂಗ್ರಹಿಸುವ ಹಾಗೂ ಹೊಸ ಯುವಕರನ್ನು ನೇಮಿಸಿಕೊಳ್ಳುವ ಬಗ್ಗೆಯೂ ಚರ್ಚೆ ನಡೆಯುತ್ತಿತ್ತು' ಎಂದು ಮೂಲಗಳು ತಿಳಿಸಿವೆ.

ಶಂಕಿತರ ಜಾಡು ಭೇದಿಸಿದ್ದ ಸಿಸಿಬಿ: 'ಶಂಕಿತ ಮೆಹಬೂಬ್ ಪಾಷಾ, 2019ರ ಜುಲೈ 1ರಿಂದ 2020ರ ಜನವರಿ 10ರವರೆಗೆ ಗುರಪ್ಪನಪಾಳ್ಯದ ಮನೆಯಲ್ಲಿ ವಾಸವಿದ್ದ. ಅದೇ ಮನೆಯಲ್ಲಿ ಸರಣಿ ಸಭೆ ನಡೆಸಿ ಭಯೋತ್ಪಾದನಾ ಕೃತ್ಯದ ಸಂಚಿನ ಬಗ್ಗೆ ಚರ್ಚಿಸುತ್ತಿದ್ದ. ಈ ಕುರಿತು ಸಿಸಿಬಿ ಪೊಲೀಸರು ಹಾಗೂ ಗುಪ್ತಚರ ಇಲಾಖೆ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದ್ದರು. ಬಳಿಕ, ಜಂಟಿ ಕಾರ್ಯಾಚರಣೆ ನಡೆಸಿ ಮೆಹಬೂಬ್ ಪಾಷಾ ಹಾಗೂ ಹಲವರನ್ನು ಬಂಧಿಸಿದ್ದರು. ಸ್ಫೋಟಕ ಹಾಗೂ ಇತರೆ ಸಾಮಗ್ರಿಗಳನ್ನೂ ಜಪ್ತಿ ಮಾಡಿದ್ದರು' ಎಂದು ತನಿಖಾ ಸಂಸ್ಥೆ ಮೂಲಗಳು ವಿವರಿಸಿವೆ.

'ತಮಿಳುನಾಡಿನ ಹಿಂದೂ ಸಂಘಟನೆ ಮುಖಂಡ ಸುರೇಶ್ ಹತ್ಯೆ ಪ್ರಕರಣ ಪ್ರಮುಖ ಆರೋಪಿ ಖ್ವಾಜಾ ಮುಹಿನುದ್ದೀನ್ ಅಲಿಯಾಸ್ ಜಲಾಲ್, ಈತನ ಸಹಚರರಾದ ಅಬ್ದುಲ್ ಸಮದ್, ತೌಸಿಫ್ ಅಲಿಯಾಸ್ ತೌಕಿರ್, ಸೈಯದ್ ಅಲಿ ನವಾಜ್, ಜಾಫರ್ ಅಲಿ ಅಲಿಯಾಸ್ ಉಮರ್, ಅಬ್ದುಲ್ ಶಮೀನ್, ಇಮ್ರಾನ್ ಖಾನ್, ಮೊಹಮ್ಮದ್ ಹನೀಫ್, ಮೊಹಮ್ಮದ್ ಮನ್ಸೂರ್, ಸಲೀಂ ಖಾನ್, ಅಬ್ದುಲ್ ಮಥೀನ್ ಅಹ್ಮದ್, ಹುಸೇನ್, ಅನಿಸ್, ಶಾಜಿಬ್ ಜಬೀವುಲ್ಲಾ, ಅಜಾಜ್ ಪಾಷ, ಜಬೀಬ್‌ವುಲ್ಲಾ ಹಾಗೂ ಮುಸಾವೀರ್ ಹುಸೇನ್ ಶಾಜೀಬ್ ಜೊತೆ ಮೆಹಬೂಬ್ ಪಾಷಾ ಸಭೆ ನಡೆಸಿದ್ದ ಮಾಹಿತಿ ಲಭ್ಯವಾಗಿತ್ತು. ಪುರಾವೆಗಳನ್ನು ಆಧರಿಸಿ ಎಲ್ಲರ ವಿರುದ್ಧವೂ 2020ರ ಜನವರಿ 10ರಂದು ಸುದ್ದಗುಂಟೆಪಾಳ್ಯ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದೇ ಪ್ರಕರಣದ ತನಿಖೆ ಎನ್‌ಐಎಗೆ ವರ್ಗಾವಣೆಯಾಗಿದೆ. ಕೆಲ ಶಂಕಿತರು ಇದುವರೆಗೂ ಸಿಕ್ಕಿಬಿದ್ದಿಲ್ಲ' ಎಂದು ಮೂಲಗಳು ತಿಳಿಸಿವೆ.

ಬಾಲಕಿ ಮೇಲೆ ಅತ್ಯಾಚಾರ: ಆರೋಪ

ಕಲಬುರಗಿ: ಕಾಳಗಿ ತಾಲ್ಲೂಕಿನ ಗ್ರಾಮವೊಂದರಲ್ಲಿ 13 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಅದೇ ಗ್ರಾಮದ ಯುವಕನ ವಿರುದ್ಧ ಕಾಳಗಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪಿ ಭೀಮು ಶೇಖಪ್ಪ (20) ಎಂಬಾತನನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಆರೋಪಿ ಭೀಮು, ಸಂತ್ರಸ್ತೆ ಪೋಷಕರ ಮನೆಯಲ್ಲಿ ಬಾಡಿಗೆ ಪಡೆದು ವಾಸವಾಗಿದ್ದ. ಪೋಷಕರು ಬಾಲಕಿಯನ್ನು ಮನೆಯಲ್ಲಿ ಬಿಟ್ಟು ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಬಾಲಕಿಯ ಕುಟುಂಬಸ್ಥರೊಂದಿಗೆ ಒಡನಾಟ ಇರಿಸಿಕೊಂಡಿದ್ದ ಭೀಮು, ಆಗಾಗ ಮನೆಗೆ ಹೋಗಿ ಬರುತ್ತಿದ್ದ. ಇದೇ ಸಲುಗೆಯನ್ನು ದುರುಪಯೋಗ ಪಡಿಸಿಕೊಂಡು ಹಲವು ದಿನಗಳಿಂದ ಬಾಲಕಿಯ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ. ಈ ಬಗ್ಗೆ ಅರಿವಿರದ ಬಾಲಕಿ ಪೋಷಕರ ಮುಂದೆ ಹೊಟ್ಟೆ ನೋವಾಗುತ್ತಿದೆ ಎಂದಷ್ಟೇ ಹೇಳುತ್ತಿದ್ದಳು. ಬಾಲಕಿಯನ್ನು ಭಾನುವಾರ ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಅತ್ಯಾಚಾರಕ್ಕೆ ಒಳಗಾಗಿದ್ದು ಗೊತ್ತಾಯಿತು ಎಂದಿದ್ದಾರೆ.

ರಾಜ್ಯ ಸರ್ಕಾರದ 'ಗ್ಯಾರಂಟಿ' ವಿರುದ್ಧ ವಿತ್ತ ಸಚಿವೆ ನಿರ್ಮಲಾ ಟೀಕೆ

ಪುಕ್ಕಟೆ ಯೋಜನೆಗೆ ಕೇಂದ್ರದ ನೆರವಿಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯ ಕಾಂಗ್ರೆಸ್ ಸರ್ಕಾರವು ಉಚಿತ ಯೋಜನೆಗಳಿಗೆ ಹಣ ಹೊಂದಿಸಲಾರದೇ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರೋಪಿಸಿದರು.

'ಥಿಂಕರ್ಸ್ ಫೋರಂ ಮೈಸೂರು' ಸಂಘಟನೆಯು ಇಲ್ಲಿನ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಾಂಗ್ರೆಸ್ ಘೋಷಿಸಿದ್ದ ಐದು ಪುಕ್ಕಟೆ ಯೋಜನೆಗಳಿಗೆ ₹60 ಸಾವಿರ ಕೋಟಿ ಹಣ ಬೇಕು. ನಿಮಗೆ ಬಜೆಟ್‌ನಲ್ಲಿ ಅವಕಾಶ ಇದ್ದರೆ ಎಷ್ಟು ಬೇಕಾದರೂ ಉಚಿತ ಯೋಜನೆಗಳನ್ನು ನೀಡಿ. ಅದಕ್ಕೆ ಹಣ ಹೊಂದಿಸಿಕೊಳ್ಳಿ. ಅದಕ್ಕೆ ಕೇಂದ್ರದಿಂದ ಏಕೆ ಅನುದಾನ ನಿರೀಕ್ಷಿಸುತ್ತೀರಿ' ಎಂದು ಪ್ರಶ್ನಿಸಿದರು.

'ಕೇಂದ್ರದಿಂದ ಕರ್ನಾಟಕಕ್ಕೆ ಸಲ್ಲಬೇಕಾದ ಎಲ್ಲ ಅನುದಾನ ನೀಡಲಾಗಿದೆ. ಇದರ ಆಡಿಟ್ ಪ್ರಮಾಣಪತ್ರವನ್ನೂ ಬಿಡುಗಡೆ ಮಾಡುತ್ತೇವೆ. ಯಾವ ರಾಜ್ಯಕ್ಕೆ ಎಷ್ಟು ಪಾಲು ಸಲ್ಲಬೇಕು ಎಂಬ ಹಣಕಾಸು ಆಯೋಗದ ಶಿಫಾರಸಿನ ಕನ್ನಡ ಆವೃತ್ತಿಯನ್ನೂ ಕರ್ನಾಟಕ ಸರ್ಕಾರಕ್ಕೆ ತಲುಪಿಸುತ್ತೇವೆ' ಎಂದರು.

'ಎನ್‌ಡಿಆರ್‌ಎಫ್ ಅನುದಾನದ ನೆಪ ಇಟ್ಟುಕೊಂಡು ಇದೀಗ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ನ್ಯಾಯ ಕೇಳುವುದು ಪ್ರಜೆಗಳ ಹಕ್ಕು. ಎಲ್ಲ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಇಡಿ. ನ್ಯಾಯಾಲಯವೇ ತೀರ್ಮಾನಿಸಲಿ' ಎಂದರು.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಬಂಧನ ವಿಷಯ ಪ್ರಸ್ತಾಪಿಸಿದ ಅವರು, 'ದಾಖಲೆ, ತನಿಖೆ ಇಲ್ಲದೇ ಯಾರನ್ನೂ ಬಂಧಿಸಲು ಆಗದು. ಸಾಕಷ್ಟು ಸಮನ್ಸ್ ನೀಡಿಯೇ ಬಂಧಿಸಲಾಗಿದೆ. ಇದಕ್ಕೆ ನ್ಯಾಯಾಲಯದ ಸೂಚನೆಯೂ ಇತ್ತು ಎಂದರು.



ನಿರ್ಮಲಾ ಸೀತಾರಾಮನ್

> ರಾಜ್ಯ ಸರ್ಕಾರದ ಯೋಜನೆಗಳಿಗೆ ಅವರೇ ಹಣ ಹೊಂದಿಸಿಕೊಳ್ಳಬೇಕು, ಕೇಂದ್ರ ಸರ್ಕಾರವನ್ನು ಕೇಳಬಾರದು ಎನ್ನುವ ನಿರ್ಮಲಾ ಸೀತಾರಾಮನ್ ಅವರ ಯಜಮಾನಿಕೆಯ ಧೋರಣೆ ಅತ್ಯಂತ ಖಂಡನೀಯ. ಇದು ಆರೂವರೆ ಕೋಟಿ ಕನ್ನಡಿಗರಿಗೆ ತೋರಿರುವ ಅಗೌರವ ಮತ್ತು ಮಾಡಿರುವ ಅವಮಾನ ಎಂದು ತಿಳಿದುಕೊಳ್ಳಬೇಕಾಗುತ್ತದೆ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಚುನಾವಣೆ ಗಿಮಿಕ್: ಜಗದೀಶ ಶೆಟ್ಟರ್

ಹುಬ್ಬಳ್ಳಿ: 'ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಬರ ಪರಿಹಾರ ಕೊಡುತ್ತಿಲ್ಲ ಎಂದು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿರುವುದು ಚುನಾವಣಾ ಗಿಮಿಕ್' ಎಂದು ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಆರೋಪಿಸಿದರು.

'ಚುನಾವಣೆ ಸಂದರ್ಭದಲ್ಲಿ ಜನರ ಗಮನ ಬೇರೆಡೆ ಸೆಳೆಯಲು ರಾಜ್ಯ ಸರ್ಕಾರ ಈ ತಂತ್ರ ಅನುಸರಿಸುತ್ತಿದೆ. ಅನುದಾನದ ಬಗ್ಗೆ ಚರ್ಚಿಸಲು ಬೇರೆ ವೇದಿಕೆಗಳಿವೆ. ಆದರೆ, ಅನುದಾನ ಬಂದಿಲ್ಲ ಎಂದು ಸುಪ್ರೀಂ ಕೋರ್ಟ್ ಮೊರೆ ಹೋಗಿರುವುದು ದೇಶದ ಇತಿಹಾಸದಲ್ಲಿಯೇ ಇದು ಮೊದಲ ಪ್ರಕರಣ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ಸುಬ್ರಹ್ಮಣ್ಯದ ಐನೆಕಿದು ಗ್ರಾಮದ ಮನೆಗೆ ಶಂಕಿತರ ಭೇಟಿ ಪ್ರಕರಣ

ಡ್ರೋನ್ ಮೂಲಕ ಶೋಧ ಕಾರ್ಯ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಐನೆಕಿದು ಗ್ರಾಮದ ಅರಣ್ಯದಂಚಿನ ಮನೆಯೊಂದಕ್ಕೆ ಶನಿವಾರ ಸಂಜೆ ನಾಲ್ವರು ಶಂಕಿತರು ಭೇಟಿ ನೀಡಿದ್ದ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಹಾಗೂ ನಕ್ಸಲ್ ನಿಗ್ರಹ ದಳದವರು ವಿವಿಧ ಆಯಾಮಗಳಲ್ಲಿ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಶಂಕಿತರಲ್ಲಿ ಇಬ್ಬರು ಮಹಿಳೆಯರು, ಇಬ್ಬರು ಪುರುಷರು ಇದ್ದರು. ಮನೆಯಲ್ಲಿ ಸುಮಾರು 45 ನಿಮಿಷ ಕಳೆದಿದ್ದ ಅವರು, ಆ ಮನೆಯಿಂದ ಊಟ, ಅಕ್ಕಿ, ಸಕ್ಕರೆ ಪಡೆದು ಬಂದ ದಾರಿಯತ್ತ ತೆರಳಿದ್ದರು.

ಭಾನುವಾರ ಬೆಳಿಗ್ಗೆ ನಕ್ಸಲ್ ನಿಗ್ರಹ ದಳದ ಡಿವೈಎಸ್‌ಪಿ ರಾಘವೇಂದ್ರ, ಪುತ್ತೂರು ಉಪವಿಭಾಗದ ಡಿವೈಎಸ್‌ಪಿ ಅರುಣ್ ನಾಗೇಗೌಡ, ಸುಬ್ರಹ್ಮಣ್ಯ ಪಿಎಸ್‌ಐ ಕಾರ್ತಿಕ್ ಸೇರಿದಂತೆ ನಕ್ಸಲ್ ನಿಗ್ರಹ ದಳದ ಅಧಿಕಾರಿಗಳು, ಸಿಬ್ಬಂದಿ, ಗುಪ್ತದಳದ ಅಧಿಕಾರಿಗಳು ಭೇಟಿ ನೀಡಿ ಮನೆಯವರಿಂದ ಮಾಹಿತಿ ಪಡೆದರು.

ಸಣ್ಣದಾಗಿ ಮಳೆಯಾಗುತ್ತಿದ್ದಾಗ ಅರಣ್ಯ ಪ್ರದೇಶದಿಂದ ಕಾಡಂಚಿನ ಮನೆಯ ಬಳಿಗೆ ಬಂದಿದ್ದ ಶಂಕಿತರಿಗೆ ವ್ಯಕ್ತಿಯೊಬ್ಬರು ಸಿಕ್ಕಿದ್ದು, ಅವರ ಬಳಿ ಮಾತನಾಡಿದ್ದಾರೆ. ಅಲ್ಲಿಂದ ರಸ್ತೆ ಬದಿಯ ಮನೆಯೊಂದಕ್ಕೆ ತೆರಳಲು ಉದ್ದೇಶಿಸಿದ್ದ ಶಂಕಿತರು, ಆ ಮನೆಯ ಜಾಗಕ್ಕೆ ಸೋಲಾರ್ ಬೇಲಿ ಅಳವಡಿಸಿದ್ದರಿಂದ ಬೇರೆ ಮನೆಗೆ ತೆರಳಿದ್ದಾರೆ ಎಂದು ಅಂದಾಜಿಸಲಾಗಿದೆ.

ಬಣ್ಣದ ಉಡುಪು ಧರಿಸಿದ್ದ ಶಂಕಿತರು ತಲೆಗೆ ಬಟ್ಟೆ ಕಟ್ಟಿಕೊಂಡಿದ್ದರು. 'ನಾವು ಯಾರೆಂದು ನಿಮಗೆ ತಿಳಿದಿದೆಯಾ?' ಎಂದು ಮನೆಯವರಲ್ಲಿ ಕೇಳಿದ್ದರು. 'ಕಳೆದ ವಾರ ನಮ್ಮ ತಂಡದ ಸದಸ್ಯರೇ ಕೂಜಿಮಲೆ ಎಸ್ಟೇಟ್ ಅಂಗಡಿಗೆ ಹೋಗಿದ್ದು' ಎಂದೂ ತಿಳಿಸಿದ್ದಾರೆ. ಬಳಿಕ ಕೆಲ ವಿಚಾರಗಳ ಬಗ್ಗೆ ಮನೆಯವರೊಂದಿಗೆ ಮಾತುಕತೆ ನಡೆಸಿದ್ದಾರೆ. ಮನೆಯ ಹೊರಗಿದ್ದ ಕೆಲಸದವರಲ್ಲೂ ಮಾತನಾಡಿದ್ದಾರೆ ಎಂದು ಗೊತ್ತಾಗಿದೆ.

'ನಾವು ಬರುವ ವೇಳೆ ನಮ್ಮನ್ನು ವ್ಯಕ್ತಿಯೊಬ್ಬರು ನೋಡಿದ್ದು, ಅವರು ಹೊರಗೆ ಮಾಹಿತಿ ನೀಡಬಹುದು. ನಾವು ಇಲ್ಲಿ ತುಂಬ ಹೊತ್ತು ಇರುವುದು ಸರಿಯಲ್ಲ' ಎಂದು ಅಲ್ಲಿಂದ ಅರಣ್ಯದತ್ತ ತೆರಳಿದ್ದಾರೆ ಎಂದು ಮಾಹಿತಿ ಲಭ್ಯವಾಗಿದೆ.ಶಂಕಿತರ ಜತೆಗಿದ್ದ ಗನ್ ಅನ್ನು ಗೋಡೆಗೆ ಒರಗಿಸಿಟ್ಟಿದ್ದರು ಎನ್ನಲಾಗಿದೆ.



ಅಧಿಕಾರಿಗಳು ಡ್ರೋನ್ ಮೂಲಕ ಶಂಕಿತರ ಶೋಧ ನಡೆಸಿದರು

ಗಡಿಯಲ್ಲಿ ಮತ್ತೆ ಶಂಕಿತ ನಕ್ಸಲರು

ಮಡಿಕೇರಿ: ಪಕ್ಕದ ದಕ್ಷಿಣಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಸುಬ್ರಹ್ಮಣ್ಯ ಸಮೀಪದ ಐನೆಕಿದು ಗ್ರಾಮದ ಕಾಡಂಚಿನ ಮನೆಗೆ ಶನಿವಾರ ರಾತ್ರಿ ಬಂದಿದ್ದ ನಾಲ್ವರು ನಕ್ಸಲರು ಎಂಬುದು ಖಚಿತವಾಗಿದೆ. ಹೀಗಾಗಿ, ಕೊಡಗು ಭಾಗದಲ್ಲಿ ಭಾನುವಾರ ಕೂಂಬಿಂಗ್ ಚುರುಕುಗೊಳಿಸಲಾಗಿದೆ.

'ಕೊಡಗಿನ ಗಡಿ ಭಾಗವಾದ ಕಡಮಕಲ್ಲು ಸಮೀಪದ ಕೂಜಿಮಲೆಯಲ್ಲಿ ಕಳೆದ ಶನಿವಾರ ರಾತ್ರಿ ಅಂಗಡಿಯೊಂದರಲ್ಲಿ ದಿನಸಿ ಖರೀದಿಸಿದ್ದ ಶಂಕಿತ ನಕ್ಸಲರು ಇವರೇ ಆಗಿರಬೇಕು ಎಂಬ ಅನುಮಾನ ಬಲಗೊಂಡಿದೆ. ಜೊತೆಗೆ, ಇನ್ನೂ ನಾಲ್ವರು ಇರುವ ಶಂಕೆಯೂ ಇದೆ. ಹೀಗಾಗಿ, ಕೊಡಗು ಭಾಗದ ಅರಣ್ಯದಲ್ಲಿ ಕೂಂಬಿಂಗ್ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ಚಿತ್ರರಂಗಕ್ಕೆ ಸಿನಿಮಾ ಪಠ್ಯದ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ವರ್ಷಗಳಲ್ಲಿ ಪ್ರತಿ ವಾರ 7 ರಿಂದ 8 ಕನ್ನಡ ಚಿತ್ರಗಳು ಬಿಡುಗಡೆಯಾಗುತ್ತಿವೆ. ಅವು ಎರಡು-ಮೂರು ದಿನಗಳಲ್ಲಿ ಚಿತ್ರಮಂದಿರಗಳಿಂದ ಖಾಲಿಯಾಗುತ್ತಿವೆ. ಸಿನಿಮಾದ ಪಠ್ಯ ಇರದಿರುವುದೇ ಇದಕ್ಕೆ ಕಾರಣ' ಎಂದು ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಬೇಸರ ವ್ಯಕ್ತಪಡಿಸಿದರು.

ವೀರಲೋಕ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಗಿರೀಶ್ ಕಾಸರವಳ್ಳಿ ಹಾಗೂ ಗೋಪಾಲಕೃಷ್ಣ ಪೈ ಅವರ 'ಬಿಂಬ ಬಿಂಬನ' ಪುಸ್ತಕ ಬಿಡುಗಡೆ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

'ಕನ್ನಡ ಚಿತ್ರರಂಗ 90 ವರ್ಷಗಳನ್ನು ಕಳೆದಿದ್ದು, 4 ಸಾವಿರಕ್ಕೂ ಹೆಚ್ಚು ಚಿತ್ರಗಳು ಬಿಡುಗಡೆಯಾಗಿವೆ. ನೂರಕ್ಕೂ ಹೆಚ್ಚು ಚಿತ್ರಗಳು ಬರಹರೂಪಕ್ಕೆ ಇಳಿಯುವ ಅರ್ಹತೆ ಹೊಂದಿವೆ. ಪ್ರಾತಿನಿಧಿಕ ಕನ್ನಡ ಚಿತ್ರ ಸಂಸ್ಥೆಗಳು ಅಂತಹ ಸಿನಿಮಾಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಮೂಲಕ ಒಳ್ಳೆಯ ಪ್ರೇಕ್ಷಕರನ್ನು ಸೃಷ್ಟಿಸಬೇಕು. ಆಗ ಕನ್ನಡ ಚಿತ್ರರಂಗ ಇನ್ನಷ್ಟು ಎತ್ತರಕ್ಕೆ ಬೆಳೆಯುತ್ತದೆ' ಎಂದು ಹೇಳಿದರು.

'ಗಿರೀಶ್ ಕಾಸರವಳ್ಳಿ ಅವರು ಕನ್ನಡ ಚಿತ್ರರಂಗದಲ್ಲಿ ದೊಡ್ಡ ಆಲದ ಮರವಾಗಿದ್ದು, ಆಳವಾಗಿ ಬೇರೂರಿದ್ದಾರೆ. 50 ವರ್ಷಗಳಿಂದ ಸಿನಿಮಾವನ್ನು ತಪಸ್ಸಿನ ರೀತಿ ಮಾಡುತ್ತಾ ಬಂದಿದ್ದಾರೆ. ಈ ಪುಸ್ತಕವು ಕನ್ನಡ ಚಿತ್ರರಂಗಕ್ಕೆ ಪಠ್ಯವಾಗಲಿದೆ. ಸಿನಿಮಾ ಮಾಡಬೇಕೆಂಬ ವ್ಯಕ್ತಿಗಳು ಈ ಪುಸ್ತಕವನ್ನು ಓದಿದರೆ ಅವರ ಅರಿವು ವಿಸ್ತಾರವಾಗುತ್ತದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಲನಚಿತ್ರ ನಟಿ, ನಿರ್ಮಾಪಕಿ ಜಯಮಾಲಾ, 'ಕಾಸರವಳ್ಳಿ ಅವರು ನಿರ್ದೇಶಿಸಿದ 'ತಾಯಿ ಸಾಹೇಬ' ಸಿನಿಮಾದಿಂದ ಚಿತ್ರರಂಗದಲ್ಲಿ ನನಗೆ ಅನೇಕ ಅವಕಾಶಗಳು ದೊರೆತವು. ಅವರು ತಮ್ಮ ಚಿತ್ರಗಳ ಮೂಲಕವೇ ಕನ್ನಡ ಚಿತ್ರರಂಗಕ್ಕೆ ಉತ್ತಮವಾದ ಹೆಸರನ್ನು ತಂದು ಕೊಟ್ಟಿದ್ದಾರೆ. ಅವರ ಸಿನಿಮಾಗಳು ಚಿಂತನೆಯನ್ನು ಉದ್ದೀಪಿಸುತ್ತವೆ. ಭಾರತೀಯ ಚಿತ್ರರಂಗಕ್ಕೆ 100 ವರ್ಷಗಳಾದಾಗ ಆಯ್ಕೆ ಮಾಡಲಾದ 20 ಸಿನಿಮಾಗಳಲ್ಲಿ ಕಾಸರವಳ್ಳಿ ಅವರ 'ಘಟಶ್ರಾದ್ಧ' ಸಿನಿಮಾ ಸ್ಥಾನ ಪಡೆದಿತ್ತು. ಅವರು ಕನ್ನಡ ಭಾಷೆಯನ್ನು ಎಲ್ಲೆಡೆಯೂ ಪಸರಿಸಿ, ನಾಲ್ಕು 'ಸ್ವರ್ಣ ಕಮಲ'ವನ್ನು ನಮ್ಮ ರಾಜ್ಯಕ್ಕೆ ತಂದು ಕೊಟ್ಟಿದ್ದಾರೆ' ಎಂದು ಹೇಳಿದರು.

ಗಿರೀಶ್ ಕಾಸರವಳ್ಳಿ, 'ಜನರಿಗೆ ಸಿನಿಮಾದ ಒಳಮರ್ಮ ಗೊತ್ತಿರುವುದಿಲ್ಲ. ಸಿನಿಮಾ ಅನ್ನುವುದು ಒಬ್ಬನ ಕೃತಿಯಲ್ಲ. ಹೊಸದಾಗಿ ಸಿನಿಮಾ ಕ್ಷೇತ್ರಕ್ಕೆ ಕಾಲಿಡುವವರಿಗೆ ಸಿನಿಮಾದ ಸಾಧ್ಯತೆಗಳನ್ನು ತಿಳಿಸಿಕೊಡಲು ಈ ಕೃತಿ ಉಪಯುಕ್ತವಾಗಿದೆ' ಎಂದು ತಿಳಿಸಿದರು.

ಪ್ರಕಾಶಕ ವೀರಕಪುತ್ರ ಶ್ರೀನಿವಾಸ, 'ಸುಧಾ' ವಾರಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ಚ.ಹ.ರಘುನಾಥ, ನಿರ್ದೇಶಕ ಬಿ.ಎಸ್‌. ಲಿಂಗದೇವರು ಹಾಗೂ ಸಿನಿಮಾ ವಿಮರ್ಶಕ ಕೆ. ಪುಟ್ಟಸ್ವಾಮಿ ಪಾಲ್ಗೊಂಡಿದ್ದರು.



ಕಾರ್ಯಕ್ರಮದಲ್ಲಿ 'ಬಿಂಬ ಬಿಂಬನ' ಕೃತಿಯನ್ನು ಜಯಮಾಲಾ ಲೋಕಾರ್ಪಣೆ ಮಾಡಿದರು. ಪಿ.ಶೇಷಾದ್ರಿ, ಚಲನಚಿತ್ರ ನಿರ್ದೇಶಕ ಬಿ.ಎಸ್‌. ಲಿಂಗದೇವರು,ಗಿರೀಶ್ ಕಾಸರವಳ್ಳಿ ಮತ್ತು ಸಾಹಿತಿ ಗೋಪಾಲಕೃಷ್ಣ ಪೈ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ: 'ಬಿಂಬ ಬಿಂಬನ'
ಲೇಖಕ: ಗಿರೀಶ್ ಕಾಸರವಳ್ಳಿ, ಗೋಪಾಲಕೃಷ್ಣ ಪೈ
ಬೆಲೆ: ₹350
ಪುಟಗಳು: 298
ಪ್ರಕಾಶನ: ವೀರಲೋಕ

ಸಂಕ್ಷಿಪ್ತ ಸುದ್ದಿ

ಕೆಲವೆಡೆ ಮೋಡ ಕವಿದ ವಾತಾವರಣ

ಬೆಂಗಳೂರು/ ಹುಬ್ಬಳ್ಳಿ: ರಾಜ್ಯದ ಅಲ್ಲಲ್ಲಿ ಮೋಡ ಕವಿದ ವಾತಾವರಣ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉಳಿದೆಡೆ ಒಣಹವೆ ಮುಂದುವರಿಯಲಿದೆ. ರಾಜ್ಯದಲ್ಲಿಯೇ ಕಲಬುರಗಿ ಜಿಲ್ಲೆಯಲ್ಲಿ ಭಾನುವಾರ ಗರಿಷ್ಠ ಉಷ್ಣಾಂಶ 39.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಮಂಡ್ಯದಲ್ಲಿ ಅತಿ ಕನಿಷ್ಠ ಉಷ್ಣಾಂಶ 19.6 ಡಿಗ್ರಿ ಸೆಲ್ಸಿಯಸ್ ತಾಪಮಾನ ಇತ್ತು.ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿ 2 ಸೆಂ.ಮೀ ಹಾಗೂ ಬೆಳಗಾವಿ ಜಿಲ್ಲೆಯ ಲೋಂಡಾದಲ್ಲಿ 1 ಸೆಂ.ಮೀ ಮಳೆಯಾಗಿದೆ.

ಹುಬ್ಬಳ್ಳಿಯಲ್ಲಿ ಮಳೆ: ಹುಬ್ಬಳ್ಳಿ ನಗರದಲ್ಲಿ ಭಾನುವಾರ ಮುಸ್ಸಂಜೆ10 ನಿಮಿಷ ಬಿರುಸಾಗಿ ಮಳೆ ಸುರಿಯಿತು. ಬಾಗಲಕೋಟೆ ಜಿಲ್ಲೆಯ ಹುನಗುಂದ ಹಾಗೂ ಅಮೀನಗಡದಲ್ಲಿಯೂ ಅರ್ಧತಾಸು ಮಳೆಯಾಗಿದೆ.

ಆನೆ ಸಾವು: ಆರೋಪಿ ಬಂಧನ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ದೇಹಳ್ಳಿ ಗ್ರಾಮದ ಇಡ್ಕೆಮನೆಯಲ್ಲಿ ಈಚೆಗೆ ವಿದ್ಯುತ್ ಸ್ಪರ್ಶದಿಂದ ಆನೆ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ಆರೋಪಿ ಇಡ್ಕೆಮನೆಯ ಪರಮೇಶ್ವರ ರಾಮಾ ಕುಣಬಿ (48) ಎಂಬುವವರನ್ನು ಭಾನುವಾರ ಬಂಧಿಸಲಾಗಿದೆ.

ನಾಲೆಯ ಜೊಂಡು ತೆರವು ನೀರಿನ ಸಮಸ್ಯೆ ಪರಿಹಾರ

ಜಲಮಂಡಳಿ ಸಿಬ್ಬಂದಿಯಿಂದ ತಡರಾತ್ರಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ



ನೆಟ್ಟಕಲ್ಲಪ್ಪ ಸಮತೋಲಿತ ಜಲಾಶಯದಿಂದ ಕಾವೇರಿ ನೀರು ಸರಬರಾಜು ಮಾಡುವ ನಾಲೆಯ ಸ್ಕ್ರೀನ್ ರೈಲಿಂಗ್‌ನಲ್ಲಿ ಜೊಂಡು (ಜಲಸಸ್ಯ) ಸಿಲುಕಿಕೊಂಡಿತ್ತು

ಬೆಂಗಳೂರು: ನೆಟ್ಟಕಲ್ಲಪ್ಪ ಸಮತೋಲಿತ ಜಲಾಶಯದಿಂದ ಕಾವೇರಿ ನೀರು ಸರಬರಾಜು ಮಾಡುವ ನಾಲೆಯ ಸ್ಕ್ರೀನ್ ರೈಲಿಂಗ್‌ನಲ್ಲಿ ಜೊಂಡು (ಜಲಸಸ್ಯ) ಸಿಕ್ಕಿ ಹಾಕಿಕೊಂಡು ನೀರಿನ ಹರಿವಿಗೆ ತೊಂದರೆಯಾಗಿತ್ತು. ಜಲಮಂಡಳಿ ಸಿಬ್ಬಂದಿಯು ಶನಿವಾರ ರಾತ್ರಿ ಕಾರ್ಯಾಚರಣೆ ನಡೆಸಿ ಸರಿಪಡಿಸಿ, ನೀರಿನ ಸಮಸ್ಯೆ ಉಂಟಾಗದಂತೆ ನೋಡಿಕೊಂಡಿದ್ದಾರೆ.

ನಾಲೆಗಳ ಪಾತ್ರದಲ್ಲಿ ಬೆಳೆದಿದ್ದ ಜೊಂಡು ಶನಿವಾರ ರಾತ್ರಿ ಬೀಸಿದ ಗಾಳಿಗೆ ಸ್ಕ್ರೀನ್ ರೈಲಿಂಗ್‌ನಲ್ಲಿ ಸಿಲುಕಿಕೊಂಡಿತ್ತು. ಇದರಿಂದ ಕಾವೇರಿ ನೀರು ಪೂರೈಕೆಗೆ ತಡೆಯಾಗಿತ್ತು. ಒಂದೇ ದಿನ 1000 ಎಂಎಲ್‌ಡಿ ನೀರು ಕೊರತೆಯಾಗುವ ಸಂಭವ ಎದುರಾಗಿತ್ತು. ಸಿಬ್ಬಂದಿ ರಾತ್ರಿ 10 ರಿಂದ ತಡರಾತ್ರಿ 2ರವರೆಗೆ ಕೆಲಸ ಮಾಡಿ ತಡೆ ನಿವಾರಿಸಿದರು. ಸಿಬ್ಬಂದಿಯ ಪ್ರಯತ್ನದಿಂದಾಗಿ ನಗರಕ್ಕೆ ಎದುರಾಗಬಹುದಾಗಿದ್ದ ದೊಡ್ಡ ನೀರಿನ ಕೊರತೆ ತಪ್ಪಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ವಿವಿಧಡೆ ನೀರು ಪೂರೈಕೆ: ನಗರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ, ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುತ್ತಿದೆ. ಕೊಳೆಗೇರಿಗಳು ಹಾಗೂ ಜನಸಾಂದ್ರತೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜಿಗೆ ಆದ್ಯತೆ ನೀಡಲಾಗುತ್ತಿದ್ದು, ನಿತ್ಯ 1 ಲಕ್ಷ ಲೀಟರ್ ನೀರು ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ ಎಂದು ರಾಮ್‌ಪ್ರಸಾತ್ ಮಾಹಿತಿ ನೀಡಿದರು.

ನಗರದ ನಾಯಂಡಹಳ್ಳಿ-ಪಂತರಪಾಳ್ಯದ ಅಂಬೇಡ್ಕರ್ ಕೊಳೆಗೇರಿ, ಗಾಂಧಿನಗರ ಮತ್ತು ಬಂಗಾರಪ್ಪ ನಗರ ಕೊಳೆಗೇರಿಗೆಳಿಗೆ ಭಾನುವಾರ ಭೇಟಿ ನೀಡಿ, ಕುಡಿಯುವ ನೀರಿನ ಪೂರೈಕೆಯ ಬಗ್ಗೆ ಪರಿಶೀಲನೆ ನಡೆಸಿದರು.

ಅಂಬೇಡ್ಕರ್ ಕೊಳೆಗೇರಿಯ 34 ಬ್ಲಾಕ್‌ಗಳಲ್ಲಿ 1,088 ಮನೆಗಳಿದ್ದು, ಸುಮಾರು 8 ಸಾವಿರ ಜನರು ವಾಸಿಸುತ್ತಿದ್ದಾರೆ. ಕೊಳೆಗೇರಿ ಮಂಡಳಿ ವತಿಯಿಂದ ಕೊರೆಸಲಾಗಿದ್ದ ಕೊಳವೆಬಾವಿಗಳಲ್ಲಿ ನೀರಿನ ಮಟ್ಟ ಕುಸಿದಿದೆ. ಈ ಪ್ರದೇಶದ ವಿವಿಧೆಡೆ 22 ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಇರಿಸಲಾಗಿದೆ ಎಂದು ತಿಳಿಸಿದರು.

ಕೊಳೆಗೇರಿಗಳಿಗೆ ಅಗತ್ಯ ಬಿದ್ದರೆ ಹೆಚ್ಚುವರಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸುವಂತೆ ರಾಮ್‌ಪ್ರಸಾತ್ ಮನೋಹರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅನ್ಯ ಉದ್ದೇಶಕ್ಕೆ ನೀರು ಬಳಕೆ: ದಂಡ

ಕಾವೇರಿ ನೀರು ಮತ್ತು ಕೊಳವೆಬಾವಿ ನೀರನ್ನು ಕುಡಿಯುವ ಉದ್ದೇಶ ಹೊರತುಪಡಿಸಿ ಅನ್ಯ ಉದ್ದೇಶಕ್ಕೆ ಬಳಸಿರುವವರಿಗೆ ಜಲಮಂಡಳಿ ಅಧಿಕಾರಿಗಳು ದಂಡ ವಿಧಿಸಿದ್ದಾರೆ.

ಪ್ರತಿ ಪ್ರಕರಣಕ್ಕೆ ತಲಾ ₹ 5,000ದಂತೆ ದಂಡ ವಿಧಿಸಲಾಗಿದೆ. ಬೆಂಗಳೂರು ಪೂರ್ವ–1ರಲ್ಲಿ ಒಂದು ಪ್ರಕರಣ, ಬೆಂಗಳೂರು ಪೂರ್ವ–2ರಲ್ಲಿ 2, ಬೆಂಗಳೂರು ಉತ್ತರ–2ರಲ್ಲಿ 2 ಪ್ರಕರಣ, ಬೆಂಗಳೂರು ಈಶಾನ್ಯದಲ್ಲಿ 1, ಬೆಂಗಳೂರು ಆಗ್ನೇಯ–1ರಲ್ಲಿ 12, ಬೆಂಗಳೂರು ಆಗ್ನೇಯ –2ರಲ್ಲಿ 1, ನೈರುತ್ಯದಲ್ಲಿ 3 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಒಟ್ಟು ₹ 1.10 ಲಕ್ಷ ದಂಡ ವಿಧಿಸಲಾಗಿದೆ.

ಕೆಂಗೇರಿ ಕೆರೆಗೆ ಸಂಸ್ಕರಿಸಿದ ನೀರು

ಪ್ರಜಾವಾಣಿ ವಾರ್ತೆ



ಕೆಂಗೇರಿ ಕೆರೆಗೆ ಸಂಸ್ಕರಿಸಿದ ನೀರನ್ನು ಪೈಪ್ ಮೂಲಕ ಹರಿಸುವ ಕಾರ್ಯ ಭಾನುವಾರ ಆರಂಭವಾಗಿದ್ದು, ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಪರಿಶೀಲಿಸಿದರು.

ಬೆಂಗಳೂರು: ಕೆಂಗೇರಿ ಕೆರೆಗೆ ಸಂಸ್ಕರಿಸಿದ ನೀರನ್ನು ಹರಿಸುವ ಮೂಲಕ ಕುಸಿದಿರುವ ಅಂತರ್ಜಲವನ್ನು ಮರುಪೂರಣಗೊಳಿಸಲು ಜಲಮಂಡಳಿ ಮುಂದಾಗಿದೆ.

‘ಎರಡನೇ ಹಂತದಲ್ಲಿ ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ತುಂಬಿಸುವ ಕಾರ್ಯಕ್ಕೆ ಈಗಾಗಲೇ ಚಾಲನೆ ನೀಡಲಾಗಿತ್ತು. ಕೆಲವು ದಿನಗಳ ಹಿಂದೆ ಕೆಂಗೇರಿ ಕೆರೆಗೆ ಭೇಟಿ ನೀಡಿ ಕಾಮಗಾರಿಯ ಪ್ರಗತಿಯನ್ನು ಚುರುಕುಗೊಳಿಸುವಂತೆ ಸೂಚನೆ ನೀಡಿದ್ದೆ. ಕೆರೆಗೆ ನೀರು ಹರಿಸುವ ಪೈಪ್‌ಲೈನ್ ಅಳವಡಿಸಲಾಗಿದ್ದು, ಭಾನುವಾರ ನೀರು ಹರಿಸುವ ಕಾರ್ಯಕ್ಕೆ ಚಾಲನೆ ಸಿಕ್ಕಿದೆ’ ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ಮಾಹಿತಿ ನೀಡಿದರು.

‘ಜಲಮಂಡಳಿಯ ವತಿಯಿಂದ ಕಡಿಮೆ ಸಮಯದಲ್ಲಿ ಅಗತ್ಯ ಕಾಮಗಾರಿಯನ್ನು ಪೂರೈಸಲಾಗಿದ್ದು, ಬತ್ತಿ ಹೋಗಿದ್ದ ಕೆಂಗೇರಿ ಕೆರೆಗೆ ಮತ್ತೊಮ್ಮೆ ಜೀವ ಜಲ ತುಂಬಿಸಲಾಗುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಈ ಕೆರೆ ತುಂಬಲಿದೆ. ಈಗಾಗಲೇ ನಾಯಂಡಹಳ್ಳಿ ಕೆರೆ ಸೇರಿದಂತೆ 14 ಕೆರೆಗಳಿಗೆ ಸಂಸ್ಕರಿತ ನೀರು ತುಂಬಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಕೆರೆಗಳಿಗೆ ನೀರನ್ನು ತುಂಬಿಸುವುದು ಜಲಮಂಡಳಿಯ ಗುರಿ’ ಎಂದು ತಿಳಿಸಿದರು.

‘ನಗರದಲ್ಲಿ ಅವ್ಯಾಹತವಾಗಿ ಅಂತರ್ಜಲ ಬಳಕೆಯಾಗುತ್ತಿದೆ. ಭವಿಷ್ಯದ ನೀರಿನ ಅವಶ್ಯಕತೆ ಪೂರೈಸಲು ಜಲ ಮರುಪೂರಣಕ್ಕೆ ಅಗತ್ಯವಿರುವ ಎಲ್ಲ ಕ್ರಮಗಳನ್ನುಮಂಡಳಿ ಕೈಗೊಳ್ಳುತ್ತಿದೆ’ಎಂದು ಮನೋಹರ್ ತಿಳಿಸಿದರು.

ಅಣಕು ನ್ಯಾಯಾಲಯ ಸ್ಪರ್ಧೆ: ಕ್ರೈಸ್ಟ್ ಕಾಲೇಜು ಪ್ರಥಮ

ಪ್ರಜಾವಾಣಿ ವಾರ್ತೆ

ಆನೇಕಲ್: ಅಲಯನ್ಸ್ ವಿಶ್ವವಿದ್ಯಾಲಯ ಆಯೋಜಿಸಿದ್ದ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದ ಅದಿತ್ ಶಾ ಪ್ರಥಮ ಮತ್ತು ಗೋವಾದ ಪಣಜಿಯ ವಿ.ಎಂ. ಸಲಗಾಂವಕರ್ ಕಾನೂನು ವಿದ್ಯಾಲಯದ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದಿದ್ದಾರೆ.

ಪ್ರಥಮ ಬಹುಮಾನವಾಗಿ ₹1 ಲಕ್ಷ ನಗದು ಮತ್ತು ಟ್ರೋಫಿ, ದ್ವಿತೀಯ ಬಹುಮಾನವಾಗಿ ₹60 ಸಾವಿರ ನಗದು ವಿತರಿಸಲಾಯಿತು. ಸ್ಪರ್ಧೆಯಲ್ಲಿ 10 ರಾಜ್ಯಗಳ 41 ಕಾನೂನು ಮಹಾವಿದ್ಯಾಲಯಗಳು ಪಾಲ್ಗೊಂಡಿದ್ದವು.

ಸ್ಪರ್ಧೆ ಉದ್ಘಾಟಿಸಿದ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ವಕೀಲ ವೃತ್ತಿಯಲ್ಲಿ ನೈತಿಕತೆ ಅಳವಡಿಸಿಕೊಳ್ಳುವ ಮೂಲಕ ವೃತ್ತಿ ಪಾವಿತ್ರ್ಯತೆ ಕಾಪಾಡಬೇಕು. ಯುವ ವಕೀಲರು ಮತ್ತು ಕಾನೂನು ವಿದ್ಯಾರ್ಥಿಗಳು ನಿರಂತರ ಅಭ್ಯಾಸ ಮಾಡಬೇಕು ಎಂದು ಸಲಹೆ ನೀಡಿದರು.

ಅಲಯನ್ಸ್ ವಿಶ್ವವಿದ್ಯಾಲಯದ ಸಹ ಕುಲಪತಿ ಅಭಯ್ ಛೆಬ್ಬಿ ಭಾಗವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಬಿ.ವೈ.ರಾಘವೇಂದ್ರ ವಿರುದ್ಧ ದೂರು


ಚಿತ್ರದುರ್ಗ: ಇಲ್ಲಿರುವ ಭೋವಿ ಗುರುಪೀಠವನ್ನು ರಾಜಕೀಯ ಉದ್ದೇಶಕ್ಕೆ ಬಳಸಿಕೊಂಡು ಭಾಷಣ ಮಾಡಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ರಾಘವೇಂದ್ರ ಅವರು ಶನಿವಾರ ಮಠಕ್ಕೆ ಭೇಟಿ ನೀಡಿ ಮಠಾಧೀಶರೊಂದಿಗೆ ಸಭೆ ನಡೆಸಿದ್ದರು. ಅನುಮತಿ ಪಡೆಯದೇ ಸಭೆ ನಡೆಸಿ ಬಿಜೆಪಿ ಪರ ಪ್ರಚಾರ ಮಾಡಿದ್ದಾರೆ ಹಾಗೂ ಧಾರ್ಮಿಕ ಸ್ಥಳವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಬಿ.ಎಸ್.ಯಡಿಯೂರಪ್ಪ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಚುನಾವಣೆ ಮೂಲಕ ಪಕ್ಷವೊಂದನ್ನು ಅಧಿಕಾರಕ್ಕೆ ತರುವ ಉದ್ದೇಶವಿಲ್ಲ. ಅಂತಹ ಚುನಾವಣೆ ಕೂಡ ಇದಲ್ಲ. ರಾಷ್ಟ್ರ ಪರ ಹಾಗೂ ರಾಷ್ಟ್ರ ವಿರೋಧಿ ಚಿಂತನೆ ಮಾಡುತ್ತಿರುವ ಶಕ್ತಿಗಳ ವಿರುದ್ಧ ನಡೆಯುತ್ತಿರುವ ಧರ್ಮ ಯುದ್ಧ’ ಎಂದು ಭಾಷಣ ಮಾಡಿದ್ದರು. ಸಭೆಯ ವಿಡಿಯೊ ಆಧರಿಸಿ ಚುನಾವಣಾ ಸಿಬ್ಬಂದಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಹೆಜ್ಜೇನು ದಾಳಿ: 50 ಜನರಿಗೆ ಗಾಯ

ಮಧುಗಿರಿ: ಪಟ್ಟಣದ ಡೂಂ ಲೈಟ್ ವೃತ್ತದ ಬಳಿ ಭಾನುವಾರ ಹೆಜ್ಜೇನು ದಾಳಿಯಲ್ಲಿ 50ಕ್ಕೂ ಹೆಚ್ಚು ಜನ ಗಾಯ ಗೊಂಡಿದ್ದಾರೆ. ಮಲ್ಲೇಶ್ವರ ದೇವಸ್ಥಾನದ ರಸ್ತೆಯಿಂದ ಬಂದ ಜೇನು ನೊಣಗಳು ಜನರ ಮೇಲೆ ದಾಳಿ ಮಾಡಿವೆ.



ರಾಮಗೊಂಡನಹಳ್ಳಿಯಲ್ಲಿ ವೆಂಕಟೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ಹಾಗೂ ದ್ರೌಪದಮ್ಮ ಧರ್ಮರಾಯಸ್ವಾಮಿ ಕರಗಶಕ್ತೋತ್ಸವ ವಿಜೃಂಭಣೆಯಿಂದ ನೆರವೇರಿತು

ವೆಂಕಟೇಶ್ವರಸ್ವಾಮಿಯ ಅದ್ದೂರಿ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕಿನ ರಾಮಗೊಂಡನಹಳ್ಳಿ ಗ್ರಾಮದಲ್ಲಿ ವೆಂಕಟೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ಹಾಗೂ ದ್ರೌಪದಮ್ಮ ಧರ್ಮರಾಯಸ್ವಾಮಿ ಕರಗಶಕ್ತೋತ್ಸವ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವದ ಅಂಗವಾಗಿ ವೆಂಕಟೇಶ್ವರ ಸ್ವಾಮಿ ದೇವಾಲಯ ಮತ್ತು ದ್ರೌಪದಮ್ಮ ಧರ್ಮರಾಯ ಸ್ವಾಮಿ, ಮಾರಮ್ಮ, ಮುನೇಶ್ವರ ದೇವಾಲಯ ಯಲ್ಲಮ್ಮ, ಆಂಜನೇಯ ಸ್ವಾಮಿ ಸೇರಿದಂತೆ ಗ್ರಾಮದ ದೇವಾಲಯಗಳಲ್ಲಿ ವಿಶೇಷ ಹೂವಿನ ಅಲಂಕಾರ, ಪೂಜಾ ಕೈಂಕರ್ಯಗಳು ನಡೆದವು.

ಗ್ರಾಮದ ಮುಖಂಡರು ಹಾಗೂ ಸಾವಿರಾರು ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ, ದೇವರಿಗೆ ಪೂಜೆ ನೆರವೇರಿಸಿ ವೆಂಕಟೇಶ್ವರ ಸ್ವಾಮಿ ಬ್ರಹ್ಮರಥ ಎಳೆಯುವ ಮೂಲಕ ದೇವರ ಸೇವೆಯಲ್ಲಿ ಪಾತ್ರರಾದರು.

ವರ್ತೂರು ಮಾರತ್ತಹಳ್ಳಿ ಮುಖ್ಯರಸ್ತೆ ಹಾಗೂ ರಾಮಗೊಂಡನಹಳ್ಳಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ತಮಟೆ, ಪೂಜಾಕುಣಿತ, ನಾದಸ್ವರ, ವೀರಗಾಸೆ, ಗಾರುಡಿಗೊಂಬೆ, ಡೊಳ್ಳು ಕುಣಿತದೊಂದಿಗೆ ಬ್ರಹ್ಮರಥೋತ್ಸವ ಸಾಗಿತು.

ರಥೋತ್ಸವಕ್ಕೆ ರಾಮಗೊಂಡನಹಳ್ಳಿ, ಸಿದ್ದಾಪುರ, ನಲ್ಲೂರಹಳ್ಳಿ, ವೈಟ್‌ಫೀಲ್ಡ್, ವರ್ತೂರು, ವರ್ತೂರು ಕೋಡಿ, ಮಧುರನಗರ, ಗುಂಜೂರು, ಸೊರುಹುಣಸೆ ಸೇರಿದಂತೆ ಸುತ್ತ-ಮುತ್ತಲಿನ ಗ್ರಾಮಗಳು ಹಾಗೂ ಬಡಾವಣೆಗಳ ಸಾವಿರಾರು ಭಕ್ತರ ಪಾಲ್ಗೊಂಡಿದ್ದರು. ಭಕ್ತರಿಗೆ ಪಾನಕ ಮತ್ತು ಮಜ್ಜಿಗೆಯನ್ನು ವಿತರಿಸಲಾಯಿತು.

ಕರ್ನಾಟಕಕ್ಕೆ ಯಾವುದೇ ಅನುದಾನ ತಡೆಹಿಡಿದಿಲ್ಲ: ನಿರ್ಮಲಾ ಸೀತಾರಾಮನ್

‘5ನೇ ಅತಿದೊಡ್ಡ ಆರ್ಥಿಕತೆಯ ರಾಷ್ಟ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2008ರಲ್ಲಿ ಉಂಟಾದ ಆರ್ಥಿಕ ಹಿಂಜರಿತ ಕೆಲವೇ ದೇಶಕ್ಕೆ ಸೀಮಿತವಾಗಿತ್ತು. ಆದರೆ, ಕೋವಿಡ್ ಸಂಕಷ್ಟ ಭಾರತ ಸೇರಿದಂತೆ ಎಲ್ಲ ರಾಷ್ಟ್ರವನ್ನೂ ಬಾಧಿಸಿತು. ಈ ಸವಾಲು ಮೆಟ್ಟಿನಿಂತು ಭಾರತವು 5ನೇ ಅತಿದೊಡ್ಡ ಆರ್ಥಿಕತೆ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮಿದೆ’ ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ನಗರದಲ್ಲಿ ಥಿಂಕರ್ಸ್ ಫೋರಂ ಭಾನುವಾರ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

‘ದೇಶದ ಪ್ರಗತಿಗೆ ಬೆಂಗಳೂರು ಕೊಡುಗೆ ದೊಡ್ಡದಿದೆ. ಮೇಕ್ ಇನ್ ಇಂಡಿಯಾ ಭಾಗವಾಗಿ ಹಲವು ಪ್ರತಿಷ್ಠಿತ ಕಂಪನಿಗಳು ಬೆಂಗಳೂರಿನಲ್ಲಿ ಆರಂಭವಾಗಿವೆ. ಬೆಂಗಳೂರು ನಗರದಲ್ಲೇ 14.68 ಲಕ್ಷ ‘ಜನ್‌ಧನ್’ ಖಾತೆ ತೆರೆಯಲಾಗಿದೆ‘ ಎಂದು ಮಾಹಿತಿ ನೀಡಿದರು.

‘ಜಲಜೀವನ್ ಮಿಷನ್‌ನ ಯೋಜನೆ ಅಡಿ ಬೆಂಗಳೂರಿನಲ್ಲಿ 72,489 ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ರಾಷ್ಟ್ರದಲ್ಲಿ ಒಟ್ಟು 11 ಕೋಟಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಬೆಂಗಳೂರಿನಲ್ಲಿ 28,075 ಶೌಚಾಲಯ ಕಟ್ಟಲಾಗಿದೆ. ದೇಶದಲ್ಲಿ 11 ಸಾವಿರ ಹಾಗೂ ಬೆಂಗಳೂರಿನಲ್ಲಿ 323 ಜನಔಷಧಿ ಕೇಂದ್ರ ತೆರೆಯಲಾಗಿದೆ. ಜನಔಷಧಿ ಕೇಂದ್ರ ಸ್ಥಾಪನೆಯಲ್ಲಿ ಕರ್ನಾಟಕವು 2ನೇ ಸ್ಥಾನದಲ್ಲಿದೆ. ಈ ಕೇಂದ್ರಗಳಿಂದ ಬಡವರಿಗೆ ಹೆಚ್ಚು ಅನುಕೂಲವಾಗಿದೆ’ ಎಂದು ಕೇಂದ್ರದ ಹಲವು ಯೋಜನೆಗಳನ್ನು ಅಂಕಿ–ಸಂಖ್ಯೆ ಸಹಿತ ಸಚಿವರು ವಿವರಿಸಿದರು.

‘ಕಿಸಾನ್ ಸಮ್ಮಾನ್ ಯೋಜನೆ ಅಡಿ ದೇಶದಲ್ಲಿ 8.7 ಕೋಟಿ ರೈತರಿಗೆ ಮೂರು ಕಂತುಗಳಲ್ಲಿ ನೆರವು ನೀಡಲಾಗುತ್ತಿದೆ’ ಎಂದು ಹೇಳಿದರು.

ಅನುದಾನ ತಡೆಹಿಡಿದಿಲ್ಲ: ‘ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಅನುದಾನವನ್ನೂ ಕೇಂದ್ರ ಸರ್ಕಾರ ತಡೆಹಿಡಿದಿಲ್ಲ. ಸಕಾಲದಲ್ಲೇ ಅನುದಾನ ಬಿಡುಗಡೆ ಮಾಡಲಾಗಿದೆ. ಯುಪಿಎ ಸರ್ಕಾರದ ಆಡಳಿತಕ್ಕೆ ಹೋಲಿಸಿದರೆ ರಾಜ್ಯಗಳಿಗೆ ನೀಡಲಾಗುತ್ತಿರುವ ತೆರಿಗೆ ಪಾಲು ಹಾಗೂ ಅನುದಾನವನ್ನು ಬಿಜೆಪಿ ಸರ್ಕಾರ ಹೆಚ್ಚಿಸಿದೆ’ ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು

‘2004ರಿಂದ 2014ರ ಯುಪಿಎ ಆಡಳಿತದ ಅವಧಿಯಲ್ಲಿ ಕರ್ನಾಟಕಕ್ಕೆ ₹81,795 ಕೋಟಿ ಅನುದಾನ ಸಿಕ್ಕಿತ್ತು. ಅದೇ ಬಿಜೆಪಿ ಅವಧಿಯಲ್ಲಿ ₹2,93,226 ಕೋಟಿ ಲಭಿಸಿದೆ. ಕರ್ನಾಟಕಕ್ಕೆ ಮುಂಗಡವಾಗಿ ಹಣವನ್ನೂ ಬಿಡುಗಡೆ ಮಾಡಲಾಗಿದೆ. ಅನುದಾನ ಬಿಡುಗಡೆ ಮಾಡಿರುವುದಕ್ಕೆ ದಾಖಲೆಗಳಿವೆ. ಆದರೆ, ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರ, ಸುಳ್ಳು ಆರೋಪ ಮಾಡುತ್ತಿದೆ. ರಾಜ್ಯದ ಜನರನ್ನು ಕಾಂಗ್ರೆಸ್ ದಿಕ್ಕು ತಪ್ಪಿಸುತ್ತಿದೆ’ ಎಂದು ಕಿಡಿಕಾರಿದರು.

‘₹5,495 ಕೋಟಿ ವಿಶೇಷ ಅನುದಾನ ಸಹ ನೀಡಿಲ್ಲ’ ಎಂದೂ ರಾಜ್ಯ ಸರ್ಕಾರ ಆರೋಪ ಹೊರಿಸಿದೆ. ಈ ರೀತಿಯ ಅನುದಾನ ನೀಡುವಂತೆ ಹಣಕಾಸು ಆಯೋಗದ ಅಂತಿಮ ವರದಿಯಲ್ಲಿ ಯಾವುದೇ ಪ್ರಸ್ತಾಪ ಇರಲಿಲ್ಲ’ ಎಂದು ಹೇಳಿದರು.



ನಿರ್ಮಲಾ ಸೀತಾರಾಮನ್

‘ಜಿಎಸ್‌ಟಿಯಿಂದ ನಿಮಗೇ ಲಾಭ’

‘2017ರಿಂದ 2024ರ ಮಾರ್ಚ್ 1ರ ವರೆಗೆ ಜಿಎಸ್‌ಟಿ ಪರಿಹಾರದ ಸಂಪೂರ್ಣ ಪಾಲನ್ನು ಕರ್ನಾಟಕ ಪಡೆದುಕೊಂಡಿದೆ. ಜಿಎಸ್‌ಟಿ ಪೂರ್ವದ ಬೆಳವಣಿಗೆಯ ದರ ಕೇವಲ ಶೇ 11.68ರಷ್ಟಿತ್ತು. ಇಂದು ಅದು ಶೇ 15ಕ್ಕೆ ತಲುಪುತ್ತಿರುವುದರಿಂದ ಅದನ್ನು ಒಪ್ಪಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಸಾಧ್ಯವಿಲ್ಲ. ಅಂಕಿಅಂಶಗಳನ್ನು ಉತ್ಪ್ರೇಕ್ಷೆ ಎಂದು ಆರೋಪಿಸುತ್ತಿದ್ದಾರೆ. ಜಿಎಸ್‌ಟಿಯಿಂದ ನಿಮಗೆ ಲಾಭವಾಗುತ್ತಿದೆ ಎಂದು ರಾಜ್ಯ ಸರ್ಕಾರಕ್ಕೆ ನಾನು ಹೇಳಲು ಬಯಸುತ್ತೇನೆ’ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

ಅನುದಾನ ಪಡೆಯಲು ಹೋರಾಟ: ಸುರೇಶ್

ರಾಜರಾಜೇಶ್ವರಿನಗರ: ‘ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸಿಗಬೇಕಾದ ಅನುದಾನ, ಸವಲತ್ತು ಪಡೆಯಲು ನಿರಂತರ ಹೋರಾಟ ನಡೆಸುತ್ತೇನೆ’ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಅವರು ಹೇಳಿದರು.

ವಿವಿಧೆಡೆ ಮತಯಾಚನೆ ಮಾಡಿ ಮಾತನಾಡಿದ ಅವರು, ಕರ್ನಾಟಕ ರಾಜ್ಯದ ಯುವ ಜನಾಂಗಕ್ಕೆ ಸಿಗಬೇಕಾದ ಉದ್ಯೋಗಗಳು ಗುಜರಾತ್, ಉತ್ತರ ಪ್ರದೇಶದ ಪಾಲಾಗುತ್ತಿವೆ. ನಮ್ಮ ಮಕ್ಕಳ ಭವಿಷ್ಯಕ್ಕಾಗಿ, ರಾಜ್ಯದ ಜನತೆ, ಪೋಷಕರು ದೊಡ್ಡ ಮಟ್ಟದಲ್ಲಿ ಗಟ್ಟಿಧ್ವನಿ ಎತ್ತಬೇಕು ಎಂದು ಹೇಳಿದರು.

‘ಎಂತಹ ಸಮಸ್ಯೆ ಎದುರಾದರೂ ಮೇಕೆದಾಟು ಯೋಜನೆ ಪ್ರಾರಂಭ ಮಾಡಿ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಕೊಡಿಸಿಯೇ ತೀರುತ್ತೇನೆ. ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು, ನಮ್ಮ ತೆರಿಗೆ ಹಣ ತರಲು, ಕ್ಷೇತ್ರದ ಸಮಗ್ರ ಅಭಿವೃದ್ಧಿ ಮಾಡಿ ತೋರಿಸುತ್ತೇನೆ’ ಎಂದರು.



ಗೊರಗುಂಟೆಪಾಳ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಅವರನ್ನು ಕಾರ್ಯಕರ್ತರು ಸನ್ಮಾನಿಸಿದರು

ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಎಸ್.ರವಿ, ಪಾಲಿಕೆ ಮಾಜಿ ಸದಸ್ಯರಾದ ವೇಲು ನಾಯಕ್, ಬಿ.ಆರ್.ನಂಜುಂಡಪ್ಪ, ಶ್ರೀನಿವಾಸ ಮೂರ್ತಿ(ಜಾನಿ), ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲ್ ಕೃಷ್ಣ, ಕೆಪಿಸಿಸಿ ಸದಸ್ಯ ಎಸ್.ಬೆಟ್ಟಸ್ವಾಮಿಗೌಡ ಹಾಜರಿದ್ದರು.



ರಥೋತ್ಸವ ವಿಜಯನಗರದ ಅತ್ತಿಗುಪ್ಪೆಯ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ಬ್ರಹ್ಮರಥೋತ್ಸವವು ಭಕ್ತರ ಸಮ್ಮುಖದಲ್ಲಿ ನೆರವೇರಿತು –ಪ್ರಜಾವಾಣಿ ಚಿತ್ರ

‘ಮಾಧ್ಯಮ ಶಿಕ್ಷಣದ ಪಠ್ಯಕ್ರಮ ಪರಿವರ್ತನೆ ಅಗತ್ಯ’

ಬೆಂಗಳೂರು: ‘ಮಾಧ್ಯಮ ಕ್ಷೇತ್ರದ ಮೇಲೆ ತಂತ್ರಜ್ಞಾನದ ಪ್ರಭಾವ ಹೆಚ್ಚಾಗಿದ್ದು, ಓದುಗರ ಆಸಕ್ತಿಗೆ ತಕ್ಕಂತೆ ಉದ್ಯೋಗದ ನಿರೀಕ್ಷೆಗಳೂ ಬದಲಾಗುತ್ತಿವೆ. ಇದಕ್ಕೆ ಅನುಗುಣವಾಗಿ ಮಾಧ್ಯಮ ಶಿಕ್ಷಣದ ಪಠ್ಯಕ್ರಮ, ಪ್ರಾಯೋಗಿಕ ಶಿಕ್ಷಣವೂ ಪರಿವರ್ತನೆ ಆಗಬೇಕಾಗಿದೆ’ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ. ರವಿ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ಉನ್ನತ ಶಿಕ್ಷಣ ಮಂಡಳಿ ಮತ್ತು ಪತ್ರಿಕೋದ್ಯಮ ಅಧ್ಯಾಪಕರ ಸಂಘದ ಆಶ್ರಯದಲ್ಲಿ ಭಾನುವಾರ ‘ಮಾಧ್ಯಮ ಶಿಕ್ಷಣದ ಪಠ್ಯಕ್ರಮದ ಮರುವಿನ್ಯಾಸ’ ಕುರಿತು ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಪ್ರಸ್ತುತ ಮಾಧ್ಯಮದಲ್ಲಿ ಹಲವು ಡಿಜಿಟಲ್ ತಂತ್ರಜ್ಞಾನಗಳು ಬಳಕೆಯಾಗುತ್ತಿವೆ. ಅವಶ್ಯಕತೆ, ಅಗತ್ಯಗಳನ್ನು ಅರಿತು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಮಾಧ್ಯಮ ಶಿಕ್ಷಣ ಶಿಕ್ಷಕರೂ ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾಗಬೇಕಾಗಿದೆ’ ಎಂದು ಹೇಳಿದರು.

‘ಪಿಯುಸಿ ಮತ್ತು ಕಾಲೇಜು ಹಂತಗಳಿಂದಲೇ ಮಾಧ್ಯಮ ಶಿಕ್ಷಣವನ್ನು ಅಳವಡಿಸಲು ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿದೆ. ಸಂಘಟನೆಯ ಮೂಲಕ ಮುಂದಿನ ದಿನಗಳಲ್ಲಿ ಈ ಕುರಿತು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಿರಂಜನ ವಾನಳ್ಳಿ ಮಾತನಾಡಿ, ‘ಅಧ್ಯಾಪಕರು ಪಾಠ ಮಾಡುವುದಕ್ಕಷ್ಟೇ ಸೀಮಿತವಾಗದೆ ಮಾಧ್ಯಮ ಶಿಕ್ಷಣಕ್ಕೆ ಅಗತ್ಯವಿರುವ ಪಠ್ಯಪುಸ್ತಕ ಸಿದ್ಧಪಡಿಸಲು ಆದ್ಯತೆ ನೀಡಬೇಕು. ಪತ್ರಿಕೋದ್ಯಮಕ್ಕೆ ಪ್ರತ್ಯೇಕ ಪಠ್ಯಕ್ರಮವಿದ್ದರೆ ವಿದ್ಯಾರ್ಥಿಗಳ ಕಲಿಕೆಗೂ ಅನುಕೂಲವಾಗಲಿದೆ’ ಎಂದು ತಿಳಿಸಿದರು.

ಪತ್ರಿಕೋದ್ಯಮ ಅಧ್ಯಾಪಕರ ಸಂಘಕ್ಕೆ ಕೊಪ್ಪಳ ವಿ.ವಿ ಕುಲಪತಿ ರವಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಪತ್ರಿಕೋದ್ಯಮ ಅಧ್ಯಾಪಕರ ಸಂಘದ ಅಧ್ಯಕ್ಷರಾಗಿ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ರವಿ ಅವರು ಮರು ಆಯ್ಕೆಯಾಗಿದ್ದಾರೆ.

ಇಲ್ಲಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಕಚೇರಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.

ಪದಾಧಿಕಾರಿಗಳ ವಿವರ: ಹಿರಿಯ ಉಪಾಧ್ಯಕ್ಷ–ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಕುಲಪತಿ ನಿರಂಜನ ವಾನಳ್ಳಿ. ಉಪಾಧ್ಯಕ್ಷರು – ಮಮತಾ (ಮೈಸೂರು), ಶೈಲಶ್ರೀ (ಬೆಂಗಳೂರು), ಜೆ.ಎಂ. ಚಂದುನವರ (ಧಾರವಾಡ), ಓಂಕಾರ ಕಾಕಡೆ(ವಿಜಯಪುರ). ಪ್ರಧಾನ ಕಾರ್ಯದರ್ಶಿ–ಪ್ರಶಾಂತ(ಬೆಂಗಳೂರು), ಕಾರ್ಯದರ್ಶಿ – ಭಾಸ್ಕರ ಹೆಗಡೆ(ಉಜಿರೆ), ಖಜಾಂಚಿ- ಟಿ.ಶಾರದಾ(ಬೆಂಗಳೂರು). ಮಾಧ್ಯಮ ಸಂಯೋಜಕ – ರಾಜೇಶ್ವರಿ ತಾರಕೇಶ್ (ಬೆಂಗಳೂರು),

ಸಂಘಟನಾ ಕಾರ್ಯದರ್ಶಿಗಳು – ಬಿ.ಟಿ.ಮುದ್ದೇಶ (ತುಮಕೂರು), ವಾಹಿನಿ ಅರವಿಂದ (ಬೆಂಗಳೂರು), ರಾಕೇಶ ತಾಳೀಕೋಟೆ (ಬಳ್ಳಾರಿ), ಶಿವಕುಮಾರ ಕಣಸೋಗಿ (ದಾವಣಗೆರೆ), ಸತೀಶಕುಮಾರ(ಶಿವಮೊಗ್ಗ), ಜೀವರಾಜ (ಬೆಂಗಳೂರು).ಕಾರ್ಯಕಾರಿ ಸಮಿತಿ ಸದಸ್ಯರು – ಮಹೇಶ (ಬೆಂಗಳೂರು), ಜೆನಿನ್ (ಬೆಂಗಳೂರು), ಪುಟ್ಟಸ್ವಾಮಿ (ಮೈಸೂರು), ಸೌಮ್ಯಾ(ಮಂಗಳೂರು), ತಹಮೀನಾ ಕೋಲಾರ(ವಿಜಯಪುರ), ರಾಘವೇಂದ್ರ (ಬೆಂಗಳೂರು), ವಿಜಯ(ಕೋಲಾರ), ತೇಜಸ್ವಿ ನವಿಲೂರ (ಮೈಸೂರು), ಸಿಬಂತಿ ಪದ್ಮನಾಭ (ತುಮಕೂರು), ಭಾಗ್ಯಲಕ್ಷ್ಮಿ ಪದಕಿ (ಬೆಂಗಳೂರು), ಸಿ.ಎಸ್.ಮಂಜುಳಾ (ಹಾಸನ).

ಅಧಿಕಾರಿಗಳಿಗೆ ಸಂಗೀತ ನಿರ್ದೇಶಕ ಹಂಸಲೇಖ ಕಿವಿಮಾತು

‘ಕನ್ನಡ ಕಲಿತರೆ ಕೆಲಸವೂ ಸುಲಭ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊರ ರಾಜ್ಯಗಳಿಂದ ಇಲ್ಲಿಗೆ ಬರುವ ಅಧಿಕಾರಿಗಳು ಕನ್ನಡ ಕಲಿತು, ಈ ಭಾಷೆಯನ್ನು ಪ್ರೀತಿಸಬೇಕು. ಭಾಷೆ ಕಲಿಯುವುದರಿಂದ ಅವರ ಕೆಲಸವೂ ಸುಲಭವಾಗಲಿದೆ’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

ಪ್ರದ್ಯೋತ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ದೀಪ್ತಿ ಪಟ್ನಾಯಕ್ ಅವರ ‘ಬೊಗಸೆ ತುಂಬ ಕನಸುಗಳು’ ಪುಸ್ತಕ ಬಿಡುಗಡೆಯಾಯಿತು. ಮೂಲ ಕೃತಿ ಒಡಿಯಾ ಭಾಷೆಯಲ್ಲಿದ್ದು, ಅದನ್ನು ಕನ್ನಡಕ್ಕೆ ಪ್ರಣವ್ ಮೊಹಾಂತಿ ಅನುವಾದಿಸಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಹಂಸಲೇಖ, ‘ವಿವಿಧ ರಾಜ್ಯಗಳಿಂದ ಬರುವ ಅಧಿಕಾರಿಗಳು ಕನ್ನಡವನ್ನು ಪ್ರೀತಿಸಿ, ಭಾಷೆಯನ್ನು ಕಲಿಯಬೇಕು. ಆಗ ಇಲ್ಲಿಯ ಜನರೊಂದಿಗೆ ಸುಲಭವಾಗಿ ಸಂವಹನ ನಡೆಸಬಹುದು’ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಚಂದ್ರಶೇಖರ ಕಂಬಾರ ಅವರು ‘ಬೊಗಸೆ ತುಂಬ ಕನಸುಗಳು’ ಪುಸ್ತಕವನ್ನು ಬಿಡುಗಡೆ ಮಾಡಿದರು. ದೊಡ್ಡಣ್ಣ, ಹಂಸಲೇಖ, ಲೇಖಕಿ ದೀಪ್ತಿ ಪಟ್ನಾಯಕ್ ಹಾಗೂ ಚಲನಚಿತ್ರ ನಿರ್ದೇಶಕಿ ಕವಿತಾ ಲಂಕೇಶ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಕೃತಿಯಲ್ಲಿ ಸ್ತ್ರೀ ಬಗ್ಗೆ ವಿವರಿಸಲಾಗಿದೆ. ಹೆಣ್ಣನ್ನು ಯಾವುದೆ ಕಾರಣಕ್ಕೂ ಕೀಳಾಗಿ ನೋಡಬಾರದು. ಅವರನ್ನು ಗೌರವಿಸುವ ಅಭ್ಯಾಸ ರೂಢಿಸಿಕೊಳ್ಳಬೇಕು. ಪುರುಷರು ಸಾಧಿಸಲು ಸಾಧ್ಯವಾಗದ್ದನ್ನು ಮಹಿಳೆಯರು ಸಾಧಿಸಿ ತೋರಿಸುತ್ತಿದ್ದಾರೆ. ಕ್ರಿಕೆಟ್ ಎಂಬ ದೊಡ್ಡ ಆಟದಲ್ಲಿ ಆರ್‌ಸಿಬಿ ಮಹಿಳೆಯರ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿದೆ. ಪುರುಷರ ಕ್ರಿಕೆಟ್‌ನ್ನು ಮಾತ್ರ ನೋಡುತ್ತಿದ್ದ ನನಗೆ, ಈಗ ಮಹಿಳೆಯರ ಕ್ರಿಕೆಟ್ ನೋಡುವುದೂ ಆದ್ಯತೆಯಾಗಿದೆ’ ಎಂದು ಹೇಳಿದರು.

ಸಾಹಿತಿ ಚಂದ್ರಶೇಖರ ಕಂಬಾರ, ‘ಕೃತಿಯು ಮಾನವ ಸಂಬಂಧಗಳ ವಿಶೇಷ ಚಿತ್ರಣವನ್ನು ಹೊಂದಿದೆ. ಸ್ವಾತಂತ್ರ್ಯೋತ್ತರ ಭಾರತದ ತಲ್ಲಣಗಳ ಜೊತೆಗೆ ಸಮಕಾಲೀನ ತಲ್ಲಣಗಳನ್ನು, ಬದುಕನ್ನು ಕಟ್ಟಿಕೊಡಲಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಲನಚಿತ್ರ ನಟ ದೊಡ್ಡಣ್ಣ, ‘ಪುಸ್ತಕಗಳಿಂದ ಸಿಗುವ ಜ್ಞಾನವು ಮೊಬೈಲ್‌ಗಳಿಂದ ಸಿಗುವುದಿಲ್ಲ. ಆದ್ದರಿಂದ ಮೊಬೈಲ್‌ಗಳ ಬಳಕೆಯನ್ನು ಕಡಿಮೆ ಮಾಡಿ, ಪುಸ್ತಕಗಳನ್ನು ಓದಬೇಕು’ ಎಂದು ಹೇಳಿದರು.

ಐಪಿಎಸ್ ಅಧಿಕಾರಿ ಪ್ರಣವ್ ಮೊಹಾಂತಿ, ‘ಕುವೆಂಪು, ದ.ರಾ.ಬೇಂದ್ರೆ ಹಾಗೂ ಲಂಕೇಶ್ ಅವರ ಕೃತಿಗಳನ್ನು ಓದಿದ್ದೇನೆ. ಕನ್ನಡವು ಅದ್ಭುತವಾದ ಭಾಷೆಯಾಗಿದೆ. ಪುರಿಯ ಜಗನ್ನಾಥ ದೇವಾಲಯದಲ್ಲಿ ಹಳಗನ್ನಡದ ಬರಹವಿದೆ. ಒಡಿಶಾ ಜತೆಗೆ ಕನ್ನಡ ನಂಟನ್ನು ಹೊಂದಿದೆ. ಒಡಿಯಾ ಭಾಷೆಯಲ್ಲಿನ ಪ್ರಮುಖ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುತ್ತೇನೆ’ ಎಂದು ತಿಳಿಸಿದರು.

ಪುಸ್ತಕಪರಿಚಯ

ಪುಸ್ತಕ: ‘ಬೊಗಸೆ ತುಂಬ ಕನಸುಗಳು’
ಲೇಖಕರು: ದೀಪ್ತಿ ಪಟ್ನಾಯಕ್
ಪುಟಗಳು: 178
ಬೆಲೆ: ₹200
ಪ್ರಕಾಶನ: ಪ್ರದ್ಯೋತ ಪ್ರಕಾಶನ

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಸುರಕ್ಷಾ ಸ್ಕಾಲರ್‌ಶಿಪ್

- **ವಿವರ:** ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್ ಸ್ಕಾಲರ್‌ಶಿಪ್ ನೀಡುತ್ತಿದ್ದು, ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.
- **ಅರ್ಹತೆ:** ಪ್ರಸ್ತುತ 9 ರಿಂದ 12ನೇ ತರಗತಿಗಳಲ್ಲಿ ಓದುತ್ತಿರುವ ಅಥವಾ ಸಾಮಾನ್ಯ/ವೃತ್ತಿಪರ ಪದವಿ ಅಧ್ಯಯನ ಮಾಡುತ್ತಿರುವ ಅರ್ಜಿದಾರರಿಗೆ ಮುಕ್ತವಾಗಿದೆ. ಅರ್ಜಿದಾರರು ತಮ್ಮ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 55 ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು₹ 3,20,000 ಮೀರಬಾರದು.
- **ಆರ್ಥಿಕ ಸಹಾಯ:** ವಾರ್ಷಿಕ ₹ 1,00,000ದವರೆಗೆ
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-04-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/KSSP1

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು


ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ನಮ್ಮ ದೇಶದಲ್ಲಿ ಯಾವ ರಾಜ್ಯದಲ್ಲಿ ಅತಿಹೆಚ್ಚು ಅರಣ್ಯ ಕ್ಷೇತ್ರವಿದೆ?

ಎ) ಕರ್ನಾಟಕ ಬಿ) ಓಡಿಶಾ
ಸಿ) ಮಧ್ಯಪ್ರದೇಶ ಡಿ) ಉತ್ತರಪ್ರದೇಶ

ಉತ್ತರ:- (ಸಿ) ಮಧ್ಯಪ್ರದೇಶ

2) ಈ ನಕ್ಷೆಯಲ್ಲಿ ಗುರುತಿಸಿರುವ ನದಿ ಕಣಿವೆ ಯೋಜನೆಗಳು ಯಾವ ಉತ್ತರ ಸಂಕೇತದಲ್ಲಿ ಸರಿಯಾಗಿ ಹೊಂದಾಣಿಕೆಯಾಗುತ್ತದೆ?



(ಎ) 1- ಹಿರಾಕುಡ್, 2- ತುಂಗಭದ್ರಾ, 3- ಭಾಕ್ರಾ ನಂಗಲ್
(ಬಿ) 1- ತುಂಗಭಾದ್ರಾ, 2- ಭಾಕ್ರಾ ನಂಗಲ್, 3- ಹಿರಾಕುಡ್
(ಸಿ) 1- ಭಾಕ್ರಾ ನಂಗಲ್, 2- ತುಂಗಭದ್ರಾ, 3- ಹಿರಾಕುಡ್
(ಡಿ) 1- ಭಾಕ್ರಾ ನಂಗಲ್, 2- ಹಿರಾಕುಡ್, 3- ತುಂಗಭದ್ರಾ

ಉತ್ತರ:(ಡಿ) **1- ಭಾಕ್ರಾ ನಂಗಲ್, 2 - ಹಿರಾಕುಡ್, 3-ತುಂಗಭದ್ರಾ**

3) 1800ರಲ್ಲಿ ನಾಗರಿಕ ಸೇವೆಗೆ ಸೇರ ಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್‌ವಾಲೀಸನು ಕಲ್ಕತ್ತಾದಲ್ಲಿ ....ನ್ನು ಸ್ಥಾಪಿಸಿದನು.

ಎ) ಫೋರ್ಟ್ ವಿಲಿಯಂ ಕಾಲೇಜು
ಬಿ) ಲಾಹೋರ್ ಹಿಂದು ಕಾಲೇಜು
ಸಿ) ಅಲಿಘರ್ ಮುಸ್ಲಿಂ ಯೂನಿವರ್ಸಿಟಿ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ಫೋರ್ಟ್ ವಿಲಿಯಂ ಕಾಲೇಜು

4) ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ________ ಇಲಾಖೆಯು ನೀಡುತ್ತದೆ.

ಎ) ಸಹಕಾರ ಬ್ಯಾಂಕ್ ಬಿ) ಸಹಕಾರ ಪತ್ತಿನ ಸೊಸೈಟಿ
ಸಿ) ಅಂಚೆ ಇಲಾಖೆ ಡಿ) ಯಾರೂ ಅಲ್ಲ

ಉತ್ತರ: (ಸಿ) ಅಂಚೆ ಇಲಾಖೆ

5) ....ನ ಬೆಂಬಲದಿಂದ 1829ರಲ್ಲಿ ಸತಿಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು.

ಎ) ವಿಲಿಯಂ ಬೆಂಟಿಂಕ್ ಬಿ) ಮೌಂಟ್ ಬ್ಯಾಟನ್
ಸಿ) ಲಾರ್ಡ್ ಡಫರಿನ್ ಡಿ) ಲಾರ್ಡ್ ಇರ್ವಿನ್

ಉತ್ತರ:- (ಎ) **ವಿಲಿಯಂ ಬೆಂಟಿಂಕ್**

6) ಸಹಾಯಕ ಸೈನ್ಯ ಪದ್ಧತಿ ಜಾರಿಗೆ ತಂದ ಗವರ್ನರ್ ಜನರಲ್ ....

ಎ) ಲಾರ್ಡ್ ಕರ್ಜನ್ ಬಿ) ಲಾರ್ಡ್ ಡಾಲ್‌ಹೌಸಿ
ಸಿ) ಲಾರ್ಡ್ ವೆಲ್ಲೆಸ್ಲಿ ಡಿ) ಲಾರ್ಡ್ ಕಾರನ್‌ವಾಲಿಸ್


ಉತ್ತರ:- (ಸಿ) ಲಾರ್ಡ್ ವೆಲ್ಲೆಸ್ಲಿ

7) ಸಂವಿಧಾನದ .... ವಿಧಿಯ ಅಸ್ಪೃಶ್ಯತಾ

ಎ) 11ನೇಯ ವಿಧಿ ಬಿ) 17ನೇಯ ವಿಧಿ
ಸಿ) 13ನೇಯ ವಿಧಿ ಡಿ) 15ನೇಯ ವಿಧಿ

ಉತ್ತರ: (ಬಿ) **17ನೇಯ ವಿಧಿ**

8) ಚಿತ್ರದಲ್ಲಿರುವವರನ್ನು ಗುರುತಿಸಿ. ಇವರು ಬರೆದಿರುವ ಯಾವುದಾದರೂ ಒಂದು ಪುಸ್ತಕವನ್ನು ಹೆಸರಿಸಿ



ಎ) ಬಾಲಗಂಗಾಧರ್ ತಿಲಕ್- ಗೀತಾ ರಹಸ್ಯ
ಬಿ) ಮಹಾತ್ಮ ಗಾಂಧಿ- ಎಕ್ಸ್‌ಪರಿಮೆಂಟ್ ವಿಥ್ ಟ್ರೂಥ್
ಸಿ) ಜವಾಹರ್ ಲಾಲ್ ನೆಹರು- ಡಿಸ್ಕವರಿ ಆಫ್ ಇಂಡಿಯಾ
ಡಿ) ಮೇಲಿನ ಯಾವುದೂ ಸರಿಯಾಗಿಲ್ಲ

ಉತ್ತರ:(ಸಿ)ಜವಾಹರ್ ಲಾಲ್ ನೆಹರು-ಡಿಸ್ಕವರಿ ಆಫ್ ಇಂಡಿಯಾ

9) ಹಸಿರು ಕ್ರಾಂತಿಯನ್ನು ಆಹಾರ ಧಾನ್ಯಗಳ ಉತ್ಪಾದನೆ ಮಾಡಲಾಗಿತ್ತು, ಹಾಗಾದರೆ ನೀಲಿ ಕ್ರಾಂತಿ ಯಾವುದಕ್ಕಾಗಿ ಮಾಡಲಾಗಿತ್ತು?

(ಎ) ಮೊಟ್ಟೆಗಳ ಉತ್ಪಾದನೆ (ಬಿ) ಎಣ್ಣೆ ಬೀಜಗಳ ಉತ್ಪಾದನೆ
(ಸಿ) ಮೀನುಗಳ ಉತ್ಪಾದನೆ (ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಸಿ) ಮೀನುಗಳ ಉತ್ಪಾದನೆ

10) ಬಂಗಾಲದಲ್ಲಿ ದ್ವಿ ಸರ್ಕಾರ ಪದ್ದತಿ ಜಾರಿಗೆ ತಂದವನು ಯಾರು?

ಎ) ರಾಬರ್ಟ್ ಕ್ಲೈವ್ ಬಿ) ಡೂಪ್ಲೆ
ಸಿ) ವಾಸ್ಕೋಡಿಗಾಮ ಡಿ) ಮೇಲಿನ ಯಾರೂ ಅಲ್ಲ

ಉತ್ತರ:- (ಎ) ರಾಬರ್ಟ್ ಕ್ಲೈವ್

11) ಒಂದು ವೇಳೆ ಗ್ರಾಹಕರೊಬ್ಬರಿಗೆ 20 ಲಕ್ಷದ ತನಕ ಕಂಪನಿಯ ಸೇವೆಯ ಕಾರಣಕ್ಕಾಗಿ ನಷ್ಟವಾದರೆ ಯಾರಿಗೆ ದೂರು ನೀಡಲು ಸಾಧ್ಯ?

ಎ) ಜಿಲ್ಲಾ ಗ್ರಾಹಕ ವಿವಾದ ಪರಿಹಾರ ವೇದಿಕೆ
ಬಿ) ರಾಜ್ಯ ಗ್ರಾಹಕ ವಿವಾದ ಪರಿಹಾರ ಆಯೋಗ
ಸಿ) ರಾಷ್ಟ್ರೀಯ ಗ್ರಾಹಕ ವಿವಾದ ಪರಿಹಾರ ಆಯೋಗ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) **ಜಿಲ್ಲಾ ಗ್ರಾಹಕ ವಿವಾದ ಪರಿಹಾರ ವೇದಿಕೆ**

12) ಬಕ್ಸಾರ್ ಕದನದಲ್ಲಿ ಮೊಘಲ್ ಚಕ್ರವರ್ತಿ ಷಾ ಅಲಂ, ಔಧ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್‌ಖಾಸಿಮರ ತ್ರಿಮೈತ್ರಿಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಈ ಘಟನೆ ನಡೆದ ವರ್ಷ ಯಾವುದು?

ಎ) 1734 ಬಿ) 1526
ಸಿ) 1764 ಡಿ) 1943

ಉತ್ತರ:- (ಸಿ) **1764**

13) ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದವನು. ಯಾರು?

ಎ) ಜೋಜೋ ಮೆಥ್ಯೂ ಬಿ) ರೋಜ್ ಮೇರಿ
ಸಿ) ಲಾರ್ಡ್ ಮೆಕಾಲೆ ಡಿ) ಎಡಂಡ್ ಬರ್ಕ್

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET BIOLOGY

18. Identify the desirable charecteristics for a plasmid used in rDNA technology from the following (.....Contd)

Expl:- a lasmid is a small DNA molecule that is a physically separate form and can replicate independently of chromosomal DNA within a cell. All the statements given in the options are appropriate excepting the one that is has ability to multiply and express outside the host in a bioreactor because plasmid always multiply inside the host using cell machinery.

19. Which compounds were used by Miller in his experiment for obtaining amino acids and other organic substances?

(a) Carbon dioxide, water vapour and methane
(b) Methane, ammonia, water vapour and hydrogen cyanide
(c) Ammonia, methane, hydrogen and water vapour
(d) Ammonia. methane and carbon dioxide.

Ans:C

Expl:- miller in his experiment used methane, ammonia, hydrogen and water vapour in the ratio 2: 1: 2. Electric discharge was then allowed to be created in a closed flask containing these compounds at 800^0C.

The conditions were set similar to those in the primitive atmosphere in the laboratory. After a week he observed the presence of substances like amino acids and other organic substances such as sugar, pigments, nitrogen bases, fats, etc.

20. Which of the following is true for eutrophicated water body?

(a) High mineral content
(b) High oxygen content
(c) Rich species diversity
(d) Low organic content

Ans:a

Expl:- Eutrophication is the natural aging of lake by the biological enrichment of its water. The acceleration of aging process starts due to heavy discharge of pollutants from the industry and home.

The prime contaminants are nutrients such as nitrates and phosphates which acts as plant nutrient and over stimulate the growth of algae known as algal bloom

21. IUDs which are used by females

(a) Act as spermicidal jellies
(b) Block the entry of sperms into vagina
(c) Are implanted under the skin and they release progestogen and estrogen
(d) Release copper ions in the uterus that increase phagocytosis of sperms.

Ans: d

Expl:- IUDs are T-shaped intrauterine devices containing either copper or progesterone which are inserted by doctors into the uterus through vagina. They are a form of long reversible contraceptive methods.

They prevent contraception by increasing the phagocytosis of sperms within the uterus thus, making it unsuitable for implantation. They also suppress sperm motility and fertilizing ability, e.g., Cu-T, Cu 7, LNG-20, Mirene, etc.

22. Which of the following hormones are secreted in large quantities during pregnancy in women?


(a) hCG, progesterone, estradiol and FSH
(b) hCG, hPL, progesterone, estrogen and LH
(c) LH, estrogen and estradiol
(d) hCG and hPL

Ans:b

Expl:- During the pregnancy placenta acts as an endocrine tissue and produces several hormones such as hCG (human Chorionic Gonadotropin), hPL (human Placental Lactogen), progestone, oestrogen, LH (Leuteinising Hormone), etc.

In the later phase of pregnancy, a hormone called relaxin is also secreted by the ovary.

23. The kind of coelom represented in the diagram given below is characteristic of



(a) Earthworm (b) cockroach
(c) Roundworm (d) tapeworm

Ans:C

Expl:- the coelom given in the diagram is of an animal roundworm (Ascaris) which belongs to the phylum-Aschelminthes. The body cavity in the diagram is not lined by mesoderm instead; the mesoderm is present in the form of scattered pouches in between the ectoderm and endoderm. Such a body cavity is called pseudocoelom and the animals possessing these cavities are called pseudcoelomates.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಿಮ್ಮ ಹೃದಯಕ್ಕೆ ಮಾರ್ಗ ಯಾವುದೆಂದು ಗೊತ್ತಿರುತ್ತದೆ. ಅದೇ ದಿಕ್ಕಿನಲ್ಲಿ ಮುಂದಡಿ ಇಡಿ.

–ರೂಮಿ

ಕೇಜ್ರಿವಾಲ್ ಬಂಧನ: ಕೆಟ್ಟ ಬಗೆಯ ದ್ವೇಷ ರಾಜಕಾರಣ

ಜಾರಿ ನಿರ್ದೇಶನಾಲಯವು ದೆಹಲಿ ಅಬಕಾರಿ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿದೆ. ಈ ಬಂಧನವು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸೃಷ್ಟಿಸುತ್ತಿರುವ ಒತ್ತಡ ಹಾಗೂ ಅದು ವಿರೋಧ ಪಕ್ಷಗಳ ಮೇಲೆ ನಡೆಸುತ್ತಿರುವ ದಾಳಿಯ ಸ್ವರೂಪವನ್ನು ಇನ್ನಾವುದೇ ನಾಯಕನ ಬಂಧನಕ್ಕಿಂತ ಹೆಚ್ಚಿನ ಮಟ್ಟದಲ್ಲಿ ತೋರಿಸಿಕೊಟ್ಟಿದೆ. ಅಧಿಕಾರದಲ್ಲಿ ಇರುವ ಮುಖ್ಯಮಂತ್ರಿಯೊಬ್ಬರನ್ನು ಬಂಧಿಸಿರುವುದು ಇದೇ ಮೊದಲು. ಇ.ಡಿ. ಹಾಗೂ ಇತರ ತನಿಖಾ ಸಂಸ್ಥೆಗಳು ಕೇಜ್ರಿವಾಲ್ ಅವರನ್ನು ಕೆಲವು ತಿಂಗಳುಗಳಿಂದ ಕಾಡಲು ಆರಂಭಿಸಿದ್ದವು. ಅವರ ಬಂಧನ ಆಗುವುದು ಬಹುತೇಕ ಖಚಿತವಾಗಿತ್ತು. ಕೇಜ್ರಿವಾಲ್ ಅವರ ಕೆಲವು ಹಿರಿಯ ಸಹೋದ್ಯೋಗಿಗಳನ್ನು ಬಂಧಿಸಲಾಗಿದೆ, ಅವರು ಕೆಲವು ತಿಂಗಳುಗಳಿಂದ ಜೈಲಿನಲ್ಲಿ ಇದ್ದಾರೆ. ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣದಲ್ಲಿ ಇವರೆಲ್ಲ ತಪ್ಪು ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕತ್ವ ಹಾಗೂ ಕೆಲವು ಉದ್ಯಮಿಗಳ ನಡುವೆ ಕ್ರಿಮಿನಲ್ ಸಂಬಂಧ ಇತ್ತು ಎಂಬುದು ಇ.ಡಿ. ಆರೋಪ. ಎಎಪಿ ನಾಯಕರಿಗೆ ಲಂಚ ಕೊಡಲಾಗಿದೆ ಎಂದು ಕೂಡ ಇ.ಡಿ. ಆರೋಪಿಸಿದೆ. ಇಡೀ ಹಗರಣದ ಸೂತ್ರಧಾರ ಕೇಜ್ರಿವಾಲ್ ಎಂದು ಇ.ಡಿ. ಹೇಳುತ್ತಿದೆ.



ಇ.ಡಿ.ಯನ್ನು ಬಳಸಿಕೊಂಡು ಕೇಂದ್ರ ಸರ್ಕಾರ ಮಾಡುತ್ತಿರುವ ಕೆಲಸವು ದ್ವೇಷ ರಾಜಕಾರಣ ಮತ್ತು ವಿರೋಧಪಕ್ಷ ಮುಕ್ತ ಭಾರತ ನಿರ್ಮಿಸುವ ಯತ್ನದ ಒಂದು ಭಾಗ

ಹಣದ ಅಕ್ರಮ ವರ್ಗಾವಣೆ ಪ್ರಕರಣಗಳ ಕುರಿತ ದೆಹಲಿ ವಿಶೇಷ ನ್ಯಾಯಾಲಯವು ಕೇಜ್ರಿವಾಲ್ ಅವರನ್ನು ಇದೇ ತಿಂಗಳ 28ರವರೆಗೆ ಇ.ಡಿ. ವಶಕ್ಕೆ ಒಪ್ಪಿಸಿದೆ. ಕೇಜ್ರಿವಾಲ್ ಅವರು ಜೈಲಿನಲ್ಲಿ ಬಹಳ ಕಾಲ ಇರುವುದು ಬಹುತೇಕ ಖಚಿತ. ಕೇಜ್ರಿವಾಲ್ ಅವರ ಬಂಧನ ಹಾಗೂ ಅವರನ್ನು ಜೈಲಿನಲ್ಲಿ ಇರಿಸಿರುವುದರ ರಾಜಕೀಯ ಪರಿಣಾಮಗಳು ಮತ್ತು ಆಡಳಿತಾತ್ಮಕ ಪರಿಣಾಮಗಳು ಹಲವು. ಎಎಪಿಯ ಉನ್ನತ ನಾಯಕ ಈಗ ಜೈಲಿನಲ್ಲಿರುವ ಕಾರಣ ಪಕ್ಷದ ಉಳಿವಿನ ಪ್ರಶ್ನೆ ಎದುರಾಗಬಹುದು. ಪಕ್ಷವನ್ನು ಒಂದಾಗಿ ಇರಿಸಿದ್ದು ಕೇಜ್ರಿವಾಲ್. ಅವರು ಹೊರಗಡೆ ಪಕ್ಷದ ಚಟುವಟಿಕೆಗಳಿಗೆ ಲಭ್ಯವಾಗದೇ ಇರುವ ಕಾರಣ, ಪಕ್ಷದ ಮೇಲೆ ತೀವ್ರ ಒತ್ತಡ ಸೃಷ್ಟಿಯಾಗಬಹುದು. ದೇಶದ ಇತರ ಕಡೆಗಳಲ್ಲಿ ಬಿಜೆಪಿಯು ಇಂತಹ ಪಕ್ಷಗಳನ್ನು ಒಡೆಯುವ ಕೆಲಸ ಮಾಡಿದೆ ಅಥವಾ ನುಂಗಿಹಾಕಿದೆ. ಕಳೆದ ಒಂದು ದಶಕದ ಅವಧಿಯಲ್ಲಿ ಎಎಪಿಯು ಬಹಳ ಬೇಗ ಪ್ರವರ್ಧಮಾನಕ್ಕೆ ಬಂತು. ಈಗ ಅದು ರಾಷ್ಟ್ರೀಯ ಪಕ್ಷ ಕೂಡ ಹೌದು. ದೆಹಲಿ ಮತ್ತು ಪಂಜಾಬ್‌ನಲ್ಲಿ ಅದು ಸರ್ಕಾರ ರಚಿಸಿದೆ. ಕೆಲವು ರಾಜ್ಯಗಳಲ್ಲಿ ಪಕ್ಷವು ನೆಲೆ ಕಂಡುಕೊಂಡಿದೆ. ಬಿಜೆಪಿಗೆ ಕೆಲವು ಕಡೆಗಳಲ್ಲಿ ಸವಾಲು ಒಡ್ಡುತ್ತಿದೆ, ವಿರೋಧ ಪಕ್ಷಗಳ ಮೈತ್ರಿಕೂಟವಾಗಿರುವ 'ಇಂಡಿಯಾ'ದ ಭಾಗ ಕೂಡ ಹೌದು. ಕೇಜ್ರಿವಾಲ್ ಅವರ ಬಂಧನವು ತನ್ನ ಕಾಲುಗಳ ಮೇಲೆ ನಿಂತುಕೊಳ್ಳುವುದಕ್ಕೂ ಕಷ್ಟಪಡುತ್ತಿರುವ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಒಂದು ಏಟು.

ಮೈತ್ರಿಕೂಟವನ್ನು ದುರ್ಬಲಗೊಳಿಸಿ, ಚುನಾವಣಾ ಪ್ರಚಾರ ಅಭಿಯಾನಕ್ಕೆ ಅಡ್ಡಿ ಉಂಟುಮಾಡುವ ಉದ್ದೇಶವು ಬಂಧನದ ಹಿಂದೆ ಇದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಇದನ್ನು ತಿಳಿಸಲು 'ಇಂಡಿಯಾ' ಮೈತ್ರಿಕೂಟದ ಪ್ರತಿನಿಧಿಗಳು ಚುನಾವಣಾ ಆಯೋಗವನ್ನು ಭೇಟಿ ಮಾಡಿದ್ದಾರೆ. ಕೇಜ್ರಿವಾಲ್ ಅವರನ್ನು ಬಂಧಿಸಿರುವ ಸಂದರ್ಭವು ಅವರ ಆರೋಪಕ್ಕೆ ಪುಷ್ಟಿ ನೀಡುವಂತೆ ಇದೆ. ಬಂಧನವು ನೀತಿ ಸಂಹಿತೆಯ ಉಲ್ಲಂಘನೆಯೂ ಹೌದು ಎಂದು ಅವರು ಆರೋಪಿಸಿದ್ದಾರೆ. ರಾಜ್ಯಗಳಲ್ಲಿ ಅಧಿಕಾರದಲ್ಲಿ ಇರುವ ಅಥವಾ ಅಧಿಕಾರದಲ್ಲಿ ಇಲ್ಲದೆ ಇರುವ, ತನ್ನನ್ನು ವಿರೋಧಿಸುವ ರಾಜಕೀಯ ಪಕ್ಷಗಳು ಮಾತು ಕೇಳುವಂತೆ ಮಾಡಲು ಅಥವಾ ಆ ಪಕ್ಷಗಳ ನಡು ಮುರಿಯಲು ಕೇಂದ್ರ ಸರ್ಕಾರವು ಹಲವು ಮಾರ್ಗಗಳನ್ನು ಅನುಸರಿಸಿದೆ. ದೇಶದ ಮೂರನೆಯ ಅತಿದೊಡ್ಡ ಪಕ್ಷದ ಎಲ್ಲ ಪ್ರಮುಖ ನಾಯಕರನ್ನು ಚುನಾವಣೆಗೂ ಮೊದಲು ಜೈಲಿಗೆ ಕಳುಹಿಸಲಾಗಿದೆ, ಅವರಿಂದ ಚುನಾವಣಾ ಪ್ರಚಾರ ಕಾರ್ಯ ಕೈಗೊಳ್ಳಲು ಸಾಧ್ಯವಿಲ್ಲ. ಇದು ಬಹಳ ವಿಚಿತ್ರವಾದ ಸಂದರ್ಭ. ಕೇಜ್ರಿವಾಲ್ ಅವರು ಮುಖ್ಯಮಂತ್ರಿಯಾಗಿಯೇ ಮುಂದುವರಿಯಲಿದ್ದಾರೆ, ಅವರು ಜೈಲಿನಿಂದಲೇ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ಎಎಪಿ ಹೇಳಿದೆ. ಇದು ಕೇಂದ್ರ ಸರ್ಕಾರಕ್ಕೆ, ದೆಹಲಿಯ ಸರ್ಕಾರವನ್ನು ವಜಾಗೊಳಿಸಿ, ಅಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ತರಲು ಒಂದು ಅವಕಾಶ ಕಲ್ಪಿಸಿಕೊಡಬಹುದು. ಇ.ಡಿ.ಯನ್ನು ಬಳಸಿಕೊಂಡು ಕೇಂದ್ರ ಸರ್ಕಾರ ಮಾಡುತ್ತಿರುವ ಕೆಲಸವು ದ್ವೇಷ ರಾಜಕಾರಣ, ಇದು ವಿರೋಧಪಕ್ಷ ಮುಕ್ತ ಭಾರತ ನಿರ್ಮಿಸುವ ಯತ್ನದ ಒಂದು ಭಾಗ.

ದಿನದ ಟ್ವೀಟ್

ನಾಯಕನೋ ಖಳನಾಯಕನೋ?!



ಹಲವು ಮಂದಿ ಪ್ರತಿಷ್ಠಿತ ವೈದ್ಯರು, ಎಂಜಿನಿಯರುಗಳು, ನಾಗರಿಕ ಸೇವಾ ಅಧಿಕಾರಿಗಳು, ಕಲಾವಿದರು ಮತ್ತು ಸಾಮಾನ್ಯವಾಗಿ ಕಠಿಣ ಪರಿಶ್ರಮಿಗಳಾಗಿರುವ ಬಹಳಷ್ಟು ಮಂದಿ ವನ್ನಿಯಾರ್ ಸಮುದಾಯಕ್ಕೆ ಸೇರಿದ್ದಾರೆ. ವೀರಪ್ಪನ್‌ನನ್ನು ಆ ಸಮುದಾಯದ ನಾಯಕನಂತೆ ಚಿತ್ರಿಸುತ್ತಿರುವುದು ಅತ್ಯಂತ ದುರ್ದೈವದ ಸಂಗತಿ. ದಯವಿಟ್ಟು ಹಾಗೆ ಮಾಡಬೇಡಿ.

ಉಧವ್ ಎನ್., ಪತ್ರಕರ್ತ

ಕಿಡಿನುಡಿ



ನರೇಂದ್ರ ಮೋದಿ ಅವರು ಹೇಳಿರುವಂಥ ಪರಿವಾರವಾದ ಮುಕ್ತ, ಭ್ರಷ್ಟಾಚಾರ ಮುಕ್ತ, ಜಾತಿವಾದ ಮುಕ್ತ ರಾಜನೀತಿಯ ಪರಿಕಲ್ಪನೆ ಸಾಕಾರಗೊಳ್ಳಬೇಕು. ರಾಜ್ಯದಲ್ಲಿ ಪಕ್ಷದ ಜವಾಬ್ದಾರಿ ಹೊತ್ತವರು ಪರಿವಾರವಾದ, ಭ್ರಷ್ಟಾಚಾರ, ಜಾತಿವಾದದಿಂದ ಹೊರತಾಗಿಲ್ಲದ ಕಾರಣ ಅದನ್ನು ನಾವು ಶುದ್ಧೀಕರಣ ಮಾಡಲಿದ್ದೇವೆ. ನನ್ನ ಪ್ರಾಮಾಣಿಕತೆ, ಸಚ್ಚಾರಿತ್ರ್ಯಕ್ಕೆ ಯಾರದೇ ಸರ್ಟಿಫಿಕೇಟ್ ಅಗತ್ಯ ಇಲ್ಲ.

ಸದಾನಂದ ಗೌಡ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಗುರುವಾರ, 25-3-1999

• ದತ್ತಪೀಠದಲ್ಲಿ ಧ್ವಜ ಹಾರಿಸಲು ಅವಕಾಶ ಇಲ್ಲ

ಚಿಕ್ಕಮಗಳೂರು, ಮಾರ್ಚ್ 24– ಬಾಬಾ ಬುಡನ್‌ಗಿರಿಯಲ್ಲಿ ಶಾಂತಿ ಧ್ವಜ (ಶ್ವೇತ ಧ್ವಜ) ಹಾರಿಸಲು ಅವಕಾಶ ನೀಡಲಾಗದು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ರಕ್ಷಣಾಧಿಕಾರಿ ಸ್ಪಷ್ಟಪಡಿಸಿದ್ದಾರೆ.

ದತ್ತಪೀಠದಲ್ಲಿ ಭಾವೈಕ್ಯ ಯಾತ್ರೆ ಅಥವಾ ಪದ್ಧತಿಯಂತೆ ಪೂಜೆ ನಡೆಸುವುದಕ್ಕೆ ಅಡ್ಡಿ ಇಲ್ಲವಾದರೂ ಧ್ವಜ ಹಾರಿಸಲು ಅನುಮತಿ ನೀಡಿಲ್ಲ ಎಂದು ಜಿಲ್ಲಾಧಿಕಾರಿ ಕೆ.ಎಸ್. ಮಂಜುನಾಥ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಎಸ್. ಪರಶಿವಮೂರ್ತಿ ತಿಳಿಸಿದ್ದಾರೆ. ಧ್ವಜ ಹಾರಿಸಿ ಮತ್ತೊಂದು ವಿವಾದ ಹುಟ್ಟುಹಾಕಲು ಅವಕಾಶ ಕೊಡಲಾಗದು ಎಂದಿದ್ದಾರೆ.

• ತಮಿಳುನಾಡು ಶಾಸಕನ ಬಿಡುಗಡೆ, ಪುನಃ ಬಂಧನ

ಚೆನ್ನೈ, ಮಾರ್ಚ್ 24 (ಪಿಟಿಐ, ಯುಎನ್‌ಐ)– ಅಣ್ಣಾ ಡಿಎಂಕೆಯ ಶಾಸಕ ಆರ್.ತಾಮರೈಕ್ಕಣಿ ಅವರ ವಿಷಯದಲ್ಲಿ ತಮಿಳುನಾಡಿನಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗದ ಘರ್ಷಣೆ ಮುಂದುವರಿದಿದೆ.

ಮದರಾಸು ಹೈಕೋರ್ಟ್, ಬಂಧನಕ್ಕೊಳಗಾಗಿರುವ ಶಾಸಕನನ್ನು ಬಿಡುಗಡೆ ಮಾಡುವಂತೆ ಇಂದು ಪುನಃ ಆಜ್ಞೆ ಮಾಡಿತು. ಇದೇ ರೀತಿ ವಿಧಾನಸಭೆಯ ಸ್ಪೀಕರ್ ಪಳನಿವೇಲು ರಾಜನ್ ಅವರು ತಾಮರೈಕ್ಕಣಿ ಅವರನ್ನು ಬಂಧಿಸಲು ಇಂದು ಪುನಃ ಆಜ್ಞೆ ಮಾಡಿದರು. ತಕ್ಷಣ ಶಾಸಕರನ್ನು ಮತ್ತೆ ಬಂಧಿಸಲಾಯಿತು. ಈ ನಡುವೆ, ಶಾಸಕರನ್ನು ಬಿಡುಗಡೆ ಮಾಡುವಂತೆ ಕೋರಿ ಹೈಕೋರ್ಟ್‌ನಲ್ಲಿ ಮತ್ತೊಂದು ಅರ್ಜಿ ಸಲ್ಲಿಸಲಾಗಿದೆ.

ತಮಿಳುನಾಡು ವಿಧಾನಸಭೆಯಲ್ಲಿ ಸೋಮವಾರ ತಾಮರೈಕ್ಕಣಿ ಅವರು ಕೃಷಿ ಸಚಿವ ವೀರಂಪಾಡಿ ಎಸ್. ಆರ್ಮುಗಂ ಅವರ ಮೇಲೆ ಹಲ್ಲೆ ನಡೆಸಿದ್ದಕ್ಕಾಗಿ ಅದೇ ದಿನ ಅವರನ್ನು ಬಂಧಿಸಿ ಒಂದು ವಾರ ಕಾಲ ಸೆರೆಮನೆಯಲ್ಲಿಡಲು ಸ್ಪೀಕರ್ ಅವರು ಆಜ್ಞೆ ಮಾಡಿದ್ದರು. ಅದರಂತೆ ಸೋಮವಾರ ಸಂಜೆ ತಾಮರೈಕ್ಕಣಿ ಅವರನ್ನು ಬಂಧಿಸಿ ಕೇಂದ್ರೀಯ ಕಾರಾಗೃಹದಲ್ಲಿ ಇಡಲಾಯಿತು. ಮಂಗಳವಾರ ವಿಧಾನಸಭೆಯಲ್ಲಿ ತಾಮರೈಕ್ಕಣಿ ಅವರಿಗೆ 15 ದಿನ ಜೈಲು ಶಿಕ್ಷೆ ವಿಧಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಆದರೆ ಮದರಾಸು ಹೈಕೋರ್ಟ್‌ನ ವಿಭಾಗೀಯ ಪೀಠ ತಾಮರೈಕ್ಕಣಿ ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಮಂಗಳವಾರ ಮಧ್ಯಂತರ ತೀರ್ಪು ನೀಡಿತ್ತು.

• ಖಾದ್ಯತೈಲ ಬೀಜಗಳ ವಾಯಿದಾ ವಹಿವಾಟಿಗೆ ಕೇಂದ್ರ ಸಮ್ಮತಿ

ನವದೆಹಲಿ, ಮಾರ್ಚ್ 24 (ಯುಎನ್‌ಐ)– ಖಾದ್ಯತೈಲಗಳ ಬೆಲೆಗಳ ತೀವ್ರ ಏರಿಳಿತಗಳನ್ನು ನಿಯಂತ್ರಿಸುವ ಹಿನ್ನೆಲೆಯಲ್ಲಿ ಎಂಟು ವಿಧದ ಖಾದ್ಯತೈಲ ಮತ್ತು ಖಾದ್ಯತೈಲ ಬೀಜಗಳ ವಾಯಿದಾ ವಹಿವಾಟಿಗೆ ಕೇಂದ್ರ ಸಚಿವ ಸಂಪುಟವು ಅನುಮತಿ ನೀಡಿದೆ.

ಕಳೆದ ರಾತ್ರಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿಯು ಈ ನಿರ್ಧಾರ ಕೈಗೊಂಡಿತು. ಸಾಸಿವೆ ಬೀಜ, ಶೇಂಗಾ, ಸೂರ್ಯಕಾಂತಿ, ಹತ್ತಿ ಬೀಜ, ತೆಂಗಿನಕಾಯಿ ಮುಂತಾದವುಗಳನ್ನು ವಾಯಿದಾ ವಹಿವಾಟಿಗೆ ಒಳಪಡಿಸಲಾಗಿದೆ.

ಆದರೆ ಸೋಯಾಬೀನ್ ಮತ್ತು ಅದರ ಉತ್ಪನ್ನಗಳನ್ನು ವಾಯಿದಾ ವಹಿವಾಟಿನಿಂದ ಹೊರಗಿಡಲಾಗಿದೆ. ಒಟ್ಟು ಎಣ್ಣೆ ಬೀಜಗಳ ಉತ್ಪಾದನೆಯಲ್ಲಿ ಸೋಯಾಬೀನ್ ಪಾಲು ಶೇಕಡ 23ರಷ್ಟು.

ಕೊಟ್ಟಕೊನೆಯ ಮಹಿಳೆಯೂ ಘನತೆಯ ಬದುಕು ಕಾಣಲು ಕಾರಣವಾದ ಚಳವಳಿ ಮತ್ತೆ ಹುಟ್ಟಲಿ

ನಾವೂ ಭವಿಷ್ಯವನು ಕಟ್ಟಿದೆವು



ವಿಶ್ಲೇಷಣೆ

ಸಬಿತಾ ಬನ್ನಾಡಿ

ಇದು ಹೊಸ ಇತಿಹಾಸ ಸೃಷ್ಟಿಸುವ ಹುಚ್ಚಿಗೆ ಬಿದ್ದ ಕಾಲ. ಈಗ ತುರ್ತಾಗಿ ಹೊಸ ರಾಜಕುಮಾರರು ಬೇಕಾಗಿರುವುದರಿಂದ ಮಾಧ್ಯಮಗಳು ದೊಡ್ಡ ದೊಡ್ಡ ಕ್ಯಾಮೆರಾಗಳನ್ನು ಹೊತ್ತು ತಿರುಗುತ್ತಿವೆ. ಅವರ ವೈಭವಗಳನ್ನು ಧಾರಾವಾಹಿಗಳಂತೆ ಪ್ರಸಾರ ಮಾಡಿ ಪುಳಕಗೊಳ್ಳುತ್ತಿವೆ. 'ಅಯ್ಯೋ, ನಮ್ಮ ಪರಂಪರೆಯ ಸೌಭಾಗ್ಯವೇ! ಎಷ್ಟೋ ಲಕ್ಷ ಕೋಟಿ ಆಸ್ತಿಯ ಒಡೆಯನಾದರೂ ಎಂಥಾ ಸರಳತೆ!' ಎಂದು ಉದ್ಗರಿಸುತ್ತವೆ. ಮತ್ತದೇ ಉಸಿರಿನಲ್ಲಿ ಆ ಮನೆಯ ಹೆಂಗಸರ ಒಂದೊಂದು ಒಡವೆಯ ಕಿಮ್ಮತ್ತು ಎಷ್ಟಿರಬಹುದು ಎಂದು ನಿದ್ದೆ ಬಿಟ್ಟು ಲೆಕ್ಕ ಹಾಕುತ್ತವೆ. ಪಾಪ! ಹೀಗಾಗಿ, ಇವರಿಗೆ ಭಾರತದ ಅಮೂಲ್ಯ ಪ್ರಾಕೃತಿಕ ಸಂಪತ್ತು ಕರಗಿ ಹೋಗುವುದು ಕಾಣಿಸುತ್ತಿಲ್ಲ. ಲಡಾಖ್‌ಗೆ ರಾಜ್ಯ ಸ್ಥಾನಮಾನಕ್ಕೆ ಆಗ್ರಹಿಸಿ ನೂರಾರು ಜನರ ಜೊತೆಗೆ ಆಮರಣಾಂತ ಉಪವಾಸ ಮಾಡುತ್ತಿರುವ ಸೋನಮ್ ವಾಂಗ್‌ಚುಕ್, ದೆಹಲಿ ರೈತರ ಕಡೆಗೆ ಕ್ಯಾಮೆರಾ ಹೊರಳಿಸಿದಲ್ಲಿ ಎಲ್ಲಿ ಮುರಿದೀತೋ ಎಂಬ ಭಯ! ಇಂತಹ 'ಸುವರ್ಣ ಕಾಲ'ದಲ್ಲಿ ಸಾವಿರಾರು ಕೋಟಿ ಬಾಂಡ್ ಖರೀದಿಸಿದವರ ಇತಿಹಾಸ ನೋಡಿದರೆ, 'ವಾರಕ್ಕೆ 'ಎಪ್ಪತ್ತು ಗಂಟೆ' ಕೆಲಸ ಮಾಡುವುದಾದರೂ ಯಾಕೆ?' ಎಂಬ ವೈರಾಗ್ಯ ಯಾರಿಗೂ ಇನ್ನೂ ಬಂದಂತಿಲ್ಲ.

ಹೀಗೆಲ್ಲಾ ಇರುವಾಗ, ಇತಿಹಾಸದಲ್ಲಿ ನಡೆದುಹೋದ ನಿಜ ವಿಸ್ಮಯವು ಮಾತ್ರ ನಮಗೆ ಸರಿದಾರಿಯನ್ನು ತೋರಬಲ್ಲದು. ಇಂತಹ ನಿಜ ಇತಿಹಾಸ ದಾಖಲಿಸಿದ ಒಂದು ಅಪೂರ್ವ ಕೃತಿ 'ನಾವೂ ಇತಿಹಾಸ ಕಟ್ಟಿದೆವು'. ಊರ್ಮಿಳಾ ಪವಾರ್ ಮತ್ತು ಮೀನಾಕ್ಷಿ ಮೂನ್ ಮರಾಠಿಯಲ್ಲಿ ಬರೆದ ಕೃತಿಯ ಇಂಗ್ಲಿಷ್ ಅವತರಣಿಕೆಯನ್ನು ದು.ಸರಸ್ವತಿಯವರು ಕನ್ನಡಕ್ಕೆ ತಂದಿದ್ದಾರೆ. (ಕವಿ ಪ್ರಕಾಶನ, ಕವಲಕ್ಕಿ). 'ಆ ಕಾಲದ ಸುದ್ದಿ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಅಕ್ಷರಶಃ ಅಂಬೇಡ್ಕರ್ ಅವರ ಚಳವಳಿಯನ್ನು ಬಹಿಷ್ಕರಿಸಿದ್ದವು. ಅಸ್ಪೃಶ್ಯ ಕಾರ್ಯಕರ್ತರ ಸುದ್ದಿ, ಅವರ ಕೆಲಸ ಮತ್ತು ಒಟ್ಟಾರೆಯಾಗಿ ಚಳವಳಿಗೆ ಸಿಗುತ್ತಿದ್ದ ಪ್ರಚಾರ ವಿರಳ' (ಪುಟ 7). ಅಂಬೇಡ್ಕರ್ ಸ್ವತಃ ಪತ್ರಿಕೆಗಳನ್ನು ತರಲಾರಂಭಿಸಿದರು. ಅವುಗಳಿಗೆ 'ಮೂಕ ನಾಯಕ', 'ಬಹಿಷ್ಕೃತ ಭಾರತ' ಎಂಬ ಹೆಸರಿಟ್ಟಿದ್ದರು. ಆ ಹೆಸರುಗಳು ರೂಪಕದಂತೆ ಧ್ವನಿಸುತ್ತಿವೆ.


ದಲಿತ ಮಹಿಳೆಯರು ಕಟ್ಟಿದ ಚಳವಳಿಗೆ ಅಂಬೇಡ್ಕರ್ ಸ್ಫೂರ್ತಿ ಮತ್ತು ಮಾರ್ಗದರ್ಶಿ ಮಾತ್ರ ಆಗಿದ್ದರು. ಮಹಿಳೆಯರೇ ಅದನ್ನು ಕಟ್ಟಿ ಬೆಳೆಸಿದರು. ಎಲ್ಲರೂ ಶ್ರಮಜೀವಿಗಳು. ಯಾವ ಬಂಡವಾಳಶಾಹಿಯ ಬೆಂಬಲವೂ ಇಲ್ಲದ ಹೋರಾಟವದು. 'ನೀವು ಎಷ್ಟೇ ಕಡಿಮೆ ದುಡಿದರೂ ನಿಮ್ಮ ಕೂಲಿಯ ಹಣದಲ್ಲಿ ನಾಲ್ಕಾಣೆಯನ್ನು ಮಹಿಳಾ ಮಂಡಲದ ಕೆಲಸಕ್ಕೆ ನೀಡಿ' ಎಂಬ ಅಂಬೇಡ್ಕರ್ ಮಾತನ್ನು ಅಕ್ಷರಶಃ ಪಾಲಿಸಿದರು. ಬೆವರಿನ ಈ ನಾಲ್ಕಾಣೆಯ ವಜ್ರಖಚಿತ ಹೊಳಪಿನ ಮುಂದೆ ರಕ್ತಚರಿತ್ರೆಯ ಲಕ್ಷ ಕೋಟಿಯ ಬೃಹತ್ ವಿಲಾಸಕ್ಕೆ ಬೆಲೆಯೇ ಇಲ್ಲ ಎಂಬುದನ್ನು ಸಾಬೀತು ಮಾಡಿದರು.

ಸಾವಿರಾರು ಸಂಖ್ಯೆಯಲ್ಲಿ ಸಭೆ ಮತ್ತು ಹೋರಾಟಕ್ಕೆ ಬಂದರು. ಬಸುರಿ, ಬಾಣಂತಿಯರೂ ಜೈಲಿಗೆ ಹೋದರು. ಏಕಕಾಲಕ್ಕೆ ಹೊರಗಿನ ಮತ್ತು ಒಳಗಿನ ಪಿತೃಪ್ರಧಾನ ವ್ಯವಸ್ಥೆಯ ಝಳವನ್ನು ಎದುರಿಸಿದರು.

'ನಿತ್ಯ ಜೀವನದ ಸಮಸ್ಯೆಗಳನ್ನು ಪುರುಷರು ಮತ್ತು ಮಹಿಳೆಯರಿಬ್ಬರೂ ಸೇರಿ ಬಗೆಹರಿಸಿಕೊಳ್ಳಬೇಕು. ಹಾಗೆಯೇ ಪುರುಷರು ಮತ್ತು ಮಹಿಳೆಯರು ಒಟ್ಟಿಗೆ ಕೆಲಸ ಮಾಡುವ ಮೂಲಕ ಸಮಾಜದ ಸಮಸ್ಯೆಗಳನ್ನು ಪರಿಹರಿಸಬೇಕು' ಎಂಬ ಅಂಬೇಡ್ಕರ್ ಅವರ ಮಾತುಗಳನ್ನು ಕೇಳಿದ ಪುರುಷರು ಚಳವಳಿಗೆ ಬಂದರೂ ಮನೆಯಲ್ಲೇನೂ ಅಷ್ಟು ಸುಲಭಕ್ಕೆ ಬದಲಾಗಲಿಲ್ಲ. 'ನಾವಿಬ್ಬರೂ ಸಭೆಗಳಲ್ಲಿ ಮತ್ತು ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದೆವು. ಮನೆಗೆ ಹಿಂತಿರುಗಿ ಬಂದ ಮೇಲೆ ಜಗಳಗಳು, ವಾದಗಳು ನಡೆಯುತ್ತಿದ್ದವು. ಅಂಥ ಸಂದರ್ಭಗಳಲ್ಲಿ ಹೊಡೆತವನ್ನೂ ತಿಂದಿದ್ದೇನೆ. ನನಗದು ಅಭ್ಯಾಸ ಆಗಿಬಿಟ್ಟಿತ್ತು' (ಪುಟ 346) ಎಂಬ ಬೇಬಿತಾಯಿ ಕಾಂಬ್ಳೆಯವರ ಮಾತು, ಮಹಿಳೆಯು ಎದುರಿಸುವ ಸವಾಲಿನ ಪ್ರತೀಕವಾಗಿದೆ. ಆದರೆ ಇದೆಲ್ಲವನ್ನೂ ಮೀರಿ ಆ ಹೆಣ್ಣುಮಕ್ಕಳು ಹೊಂದಿದ್ದ ಸ್ಪಷ್ಟತೆ ಅಸದೃಶ.

ಧರ್ಮ, ಆಚರಣೆ, ಸಂಪ್ರದಾಯಗಳಲ್ಲಿ ಪಿತೃಸತ್ತೆಯ ಬೇರು ಆಳವಾಗಿ ಬೇರೂರಿದೆ ಎಂಬುದನ್ನು ಅನುಭವದಿಂದ ಕಂಡುಕೊಂಡಿದ್ದರು. ಮತಾಂತರದ ಬಗ್ಗೆ ಅಂಬೇಡ್ಕರ್ ಯೋಚಿಸುತ್ತಿದ್ದಾಗ, 'ಬಾಬಾಸಾಹೇಬರೇ ನಮಗೆ ಹೊಸ ಧರ್ಮವನ್ನು ನೀಡಿ, ಆದರೆ ನಾವು ಪರದಾ ಧರಿಸುವಂತೆ ಮಾಡುವ ಧರ್ಮವನ್ನು ನಮಗೆ ನೀಡಬೇಡಿ', 'ಬಾಬಾಸಾಹೇಬ್ ನಮ್ಮದೆನಿಸುವ ಧರ್ಮವನ್ನು ನಮಗೆ ಕೊಡಿ. ನಾವು ಮನುಷ್ಯರಂತೆ ಬದುಕಲು ಬಿಡುವ ಧರ್ಮವನ್ನು ನಮಗೆ ಕೊಡಿ' (ಪುಟ 208, 209) ಎಂದವರು ಇವರು.

ದೇವದಾಸಿ– ಮುರಳಿ ಮೊದಲಾದ ಪದ್ಧತಿಗಳು ಅಸ್ಪೃಶ್ಯ ಮಹಿಳೆಯರನ್ನು ಪೀಡಿಸುತ್ತಿದ್ದ ಬಹುದೊಡ್ಡ ಸಮಸ್ಯೆಗಳಾಗಿದ್ದವು. ಇದರ ವಿರುದ್ಧ ಅಂಬೇಡ್ಕರ್ ಕಾರ್ಯೋನ್ಮುಖರಾಗಿದ್ದರು. ಜೊತೆಗೇ, ಪಾರಂಪರಿಕವಾಗಿ ತಮ್ಮ ಸ್ಥಿತಿಯನ್ನು ಲೋಕಕ್ಕೆ ಎತ್ತಿತೋರಿಸುವ ಉಡುಗೆಗಳನ್ನು ಧಿಕ್ಕರಿಸಲು ಕರೆ ಕೊಟ್ಟರು. ಆ ಮೂಲಕ, ಕಟ್ಟಿಕೊಳ್ಳಬೇಕಾದ ಅಸ್ಮಿತೆ ಯಾವುದು ಎಂಬುದನ್ನು ಸ್ಪಷ್ಟಪಡಿಸಿದರು. ಇಂದು ಅಸ್ಮಿತೆಯ ರಾಜಕಾರಣವನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಅಸ್ಮಿತೆ ಎಂಬುದು ವ್ಯಕ್ತಿ, ಸಮುದಾಯಗಳ ಕರ್ತೃತ್ವಶಕ್ತಿಯ ಗುರುತಿಸುವಿಕೆ ಮತ್ತು ಸಹಜವಾಗಿ ಅವರಿಗೆ ದಕ್ಕಬೇಕಾದ ಅವಕಾಶಗಳ ಹಕ್ಕೊತ್ತಾಯ ಆಗಿರುತ್ತದೆ. ಅದು ಅತ್ಯಂತ ಸ್ಪಷ್ಟವಾಗಿ ರಾಜಕೀಯ ಮಂಡನೆಯಾಗಿದೆ. ಆದರೆ ಅದೊಂದು ಸಾಂಸ್ಕೃತಿಕ ಪರಂಪರೆ ಎಂಬ ಕಟ್ಟುಕಥನಗಳನ್ನು ವೈಭವೀಕರಿಸಲಾಗುತ್ತಿದೆ. ಇಂತಹ ಪ್ರತಿರಾಜಕಾರಣವು ವಿನಾಶಕಾರಿಯಾದುದು. ಇದು ಮೌಢ್ಯಗಳನ್ನೇ ಜ್ಞಾನ ಎಂಬಂತೆ ಬಿಂಬಿಸುತ್ತದೆ. ಗುಲಾಮಿ ಮನಃಸ್ಥಿತಿಯನ್ನು ಪೋಷಿಸುತ್ತದೆ.



ಶ್ರೇಣೀಕರಣದ ತುದಿಯಲ್ಲಿ ಕುಳಿತಿರುವ ಕೆಲವು ಮತಿಗೇಡಿಗಳು ಈಗ ಚುರುಕಾಗಿದ್ದಾರೆ. ದೇವದಾಸಿ ಪದ್ಧತಿಯು ನಮ್ಮ ಅಸ್ಮಿತೆಯಾಗಿದ್ದು ಇವರು ನಮ್ಮ ಕಲೆ, ಸಂಪ್ರದಾಯಗಳನ್ನು ಪೋಷಿಸುವ ಈವೆಂಟ್ ಮ್ಯಾನೇಜರ್‌ಗಳಾಗಿದ್ದರು, ಇದರ ಬಗ್ಗೆ ಗೊತ್ತಿಲ್ಲದ ಬ್ರಿಟಿಷರು, ತಲೆಕೆಟ್ಟ ಎಡಪಂಥೀಯರು, ತಲೆಕೆಟ್ಟ ಫೆಮಿನಿಸ್ಟರು ದೇವದಾಸಿಯರನ್ನು ದೇವಸ್ಥಾನಗಳಿಂದ ಹೊರದಬ್ಬಿದರು ಎಂದೆಲ್ಲಾ ಗಳುಹುವ ಲಜ್ಜೆಗೆಟ್ಟ ಭಾಷಣಗಳು ಯುಟ್ಯೂಬ್‌ನಲ್ಲಿ ಲಭ್ಯವಿವೆ. ಇವರು ದೇವಸ್ಥಾನದ ಆಡಳಿತವನ್ನೇ ಈ ಪ್ರತಿಭಾವಂತೆಯರಿಗೆ ಬಿಟ್ಟುಕೊಡುವರೇ? ಇವರ ಮನೆತನದಿಂದ ಎಷ್ಟು ಜನ ಇಂತಹ ಈವೆಂಟ್ ಮ್ಯಾನೇಜರ್‌ಗಳಾಗಿದ್ದರು ಎಂದು ಲೆಕ್ಕ ಕೊಡಬಲ್ಲರೇ?

'ಇಂಡಿಯಾಸ್ ಪ್ರಾಸ್ಟಿಟ್ಯೂಶನ್ ವಿಲೇಜಸ್' ಎಂಬುದು 2023ರಲ್ಲಿ ಬಂದ ಡಾಕ್ಯುಮೆಂಟರಿ. ದೇಶದ ರಾಜಧಾನಿಯ ಸಮೀಪದ ವಾಸ್ತವದ ಚಿತ್ರಣವಿದು. ಅಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಇಡೀ ಹಳ್ಳಿಯ ಕೇರಿಗಳಲ್ಲಿ ಈ ವೃತ್ತಿ ಮಾಡುತ್ತಿರುವವರೆಲ್ಲಾ ಶ್ರೇಣೀಕರಣದ ಕೊಟ್ಟಕೊನೆಯಲ್ಲಿರುವ ಜಾತಿಗಳ ಮಹಿಳೆಯರು. ಬಡತನ, ತಲೆಮೇಲೆ ಬಿದ್ದ ಸಾಲ, ಅನಕ್ಷರತೆಯೇ ತಾವು ಹೀಗಿರಲು ಕಾರಣ ಎಂದು ಅವರಿಗೆ ತಿಳಿದಿದೆ. ತಮ್ಮ ಮಕ್ಕಳು ಇದರಿಂದ ಹೊರಗೆ ಬರಲು ಶಿಕ್ಷಣದ ಆಸರೆ ಬಯಸುತ್ತಿದ್ದಾರೆ. ಚಿಕ್ಕ ಹುಡುಗಿಯರು ಓದಿ ಭವಿಷ್ಯ ಕಟ್ಟಿಕೊಳ್ಳುವ ಕನಸು ಕಾಣುತ್ತಿದ್ದಾರೆ. ಅಂಬೇಡ್ಕರ್ ಕಾಲದ ಮಹಿಳಾ ಚಳವಳಿ ಯಾಕೆ ಮುಖ್ಯ ಎಂದು ಗೊತ್ತಾಗಬೇಕೆಂದರೆ ಇಂತಹ ಹಲವು ಸುಡು ವಾಸ್ತವಗಳ ಅರಿವು ನಮಗಿರಬೇಕು.

'ಹುಡುಗಿಯರನ್ನು ದೇವದಾಸಿಯರು, ಮುರಳಿಯರು ಮತ್ತು ಜೋಗತಿಯರಾಗಿ ದೇವರ ಹೆಸರಿನಲ್ಲಿ ಅರ್ಪಿಸುವ ಪದ್ಧತಿಯು ನವ ಬೌದ್ಧರಲ್ಲಿ ಮತಾಂತರದ ನಂತರ ಕೊನೆಯಾಯಿತು' (ಪುಟ 213) ಎಂಬ ವಿವರವು ದೇವದಾಸಿ, ಲೈಂಗಿಕ ಕಾರ್ಯಕರ್ತೆಯಾಗುವುದು ಎಂದಿಗೂ ಮಹಿಳೆಯರ ಆಯ್ಕೆ ಆಗಿರಲಿಲ್ಲ ಎನ್ನುವುದನ್ನೂ ಹೇಳುತ್ತದಲ್ಲವೇ? ಹಾಗೆಯೇ ಆ ಚಳವಳಿ ಕೋಟ್ಯಂತರ ಜನರ ಭವಿಷ್ಯವನ್ನೂ ಕಟ್ಟಿಕೊಟ್ಟಿದ್ದರ ಕುರುಹೂ ಹೌದು.

ನೂರು ವರ್ಷಗಳ ಹಿಂದೆ ಬಲಿಷ್ಠ ಶಕ್ತಿಗಳ ಎದುರು ನೆಲದ ಮರೆಯ ಎರೆಹುಳುಗಳಂತೆ ಕೆಲಸ ಮಾಡಿದ ಹೆಂಗಳೆಯರ ಚೈತನ್ಯವಿದು. ಇಂದಿನ ವರ್ತಮಾನಕ್ಕೆ ಕೈದೀವಿಗೆಯೂ ಹೌದು. ಮಹಿಳಾ ಮಂಡಲಗಳನ್ನು ಮಾಡಿಕೊಂಡ ಈ ಮಹಿಳೆಯರು ಕೇರಿಗಳಲ್ಲಿ, ಮನೆಗಳಲ್ಲಿ ಸಂಘಟನೆ ಮಾಡಿ ಅರಿವನ್ನು ಮೂಡಿಸಿದರು. ಅಧಿಕಾರಕ್ಕಾಗಿ ಜನರ ದಿಕ್ಕು ತಪ್ಪಿಸಲಿಲ್ಲ. ಮನ್ನಣೆಗಾಗಿ ಕಚ್ಚಾಡಲಿಲ್ಲ. ಮೌಢ್ಯಗಳು ಪುನಃ ಅಪ್ಪಳಿಸತೊಡಗಿರುವ ಈ ಕಾಲದಲ್ಲಿ, 'ನಾನು ಚಳವಳಿಯಲ್ಲಿ ಕೆಲಸ ಮಾಡಿದೆ. ನನ್ನ ಹೆಣ್ಣುಮಕ್ಕಳು ಮತ್ತು ಸೊಸೆಯಂದಿರೂ ಚಳವಳಿಯಲ್ಲಿ ಕೆಲಸ ಮಾಡಬೇಕೆಂದು ನಾನು ಭಾವಿಸುತ್ತೇನೆ' ಎಂಬ ಸೋನುತಾಯಿ ಲಾಂಜೆವಾರ್ ಮಾತುಗಳು ನಮ್ಮ ಕಿವಿಯಲ್ಲಿ ಅನುರಣಿಸಲಿ.

ಚುರುಮುರಿ



ಕಪ್ಪಕಾಣಿಕೆ

• ಸುಮಂಗಲಾ

ಬೆಕ್ಕಣ್ಣ ಸುದ್ದಿ ಓದುತ್ತ ಕಣ್ಣೊರೆಸಿಕೊಳ್ಳುತ್ತಿತ್ತು.

'ಏನಾತಲೇ' ನಾನು ಗಾಬರಿಯಿಂದ ಕೇಳಿದೆ.

'ಸದ್ಗುರು ಐಸಿಯುದಲ್ಲಿ ಇದ್ದಿದ್ದನ್ನು ನೋಡಿ ನಮ್ ಕಂಗನಾಕ್ಕ ಭಯಂಕರ ಬೇಜಾರಾಗ್ಯಾಳ. ಸದ್ಗುರು ಮನುಷ್ಯರೇ ಅಲ್ಲ, ದೇವರು ಅಂದ್ಕಂಡಿದ್ಲೆ. ಈಗ ದೇವರೇ ಕುಸಿದು ಬಿದ್ದಂಗೆ ಅನ್ನಿಸಿತು ಅಂತ ಹೇಳ್ಯಾಳ. ಛೇ... ಪಾಪ' ಎಂದು ಲೊಚಗುಟ್ಟಿತು.

'ಎಲ್ಲರ ಬಗ್ಗೆ ಬಾಯಿಗೆ ಬಂದಂಗೆ ಕಾಮೆಂಟ್ ಮಾಡೂ ಕಂಗನಾಕ್ಕನೂ ದೊಡ್ಡ ದೇವರೇ ಇರಬಕು ಅಂದ್ಕಂಡಿದ್ದೆ ನಾನು!' ನನ್ನ ಉದ್ಗಾರ.

'ನೀ ಏನರೇ ಒಂದ್ ಕೊಂಕು ತೆಗೀಬ್ಯಾಡ. ನೋಡಿಲ್ಲಿ... ಸದ್ಗುರು ಜೊತಿಗಿ ಫೋಟೊದಾಗೆ ಎಷ್ಟ್ ಚಂದ ಖರೇನೆ ದೇವರ ಜೊತಿಗಿ ಕುಂತಾಗೇ ಕಾಣತಾಳೆ' ಎಂದು ಫೋಟೊ ತೋರಿಸಿತು.

'ನಮ್ ದೇಶದಾಗೆ ದೇವರ ಥರಾ ಇರೂ ಮನಷ್ಯಾರು ಭಾಳ ಮಂದಿ ಇದ್ದಾರಲೇ' ಎಂದೆ.

'ಹೌದ್ದೌದು... ಹಂಗ ನೋಡಿದರೆ ಜಾರಿ ನಿರ್ದೇಶನಾಲಯದವ್ರು, ಅಂದ್ರ ಇ.ಡಿ ಮಂದಿನೂ ಒಂಥರಾ ದೇವರ ಥರಾ ಇರೋ ಮನುಷ್ಯರೇ ಹೌದಿಲ್ಲೋ. ತಪ್ಪು ಮಾಡಿದವ್ರಿಗೆ ಬರೋಬ್ಬರಿ ಶಿಕ್ಷೆ ನೀಡತಾರೆ. ಉಪ್ಪು ತಿಂದ ಮ್ಯಾಗೆ ನೀರು ಕುಡೀಲೇಬೇಕು' ಎಂದಿತು ಬೆಕ್ಕಣ್ಣ.

'ಜಾರಿ ನಿರ್ದೇಶನಾಲಯದವ್ರು ಯಾರ ನಿರ್ದೇಶನ ಜಾರಿ ಮಾಡತಾರೆ ಅನ್ನದು ಮುಖ್ಯ. ಇ.ಡಿ ದಾಳಿಯಿಂದ ಬಚಾವಾಗಬೇಕು ಅಂದ್ರ ಕಮಲದಳ ಹಿಡೀಬಕು ಇಲ್ಲಾಂದ್ರ ಚುನಾವಣಾ ಬಾಂಡ್ ತಗಬಕು. ಈಗ ಬಾಂಡೂ ಇಲ್ಲ... ಬರೀ ಜೇಮ್ಸುಬಾಂಡುಗಳೇ ಇರದು!'

'ನೋಡಾ... ನೀವು ಬ್ಯಾರೆಬ್ಯಾರೆ ದೇವರಿಗೆ ತಪ್ಪು ಕಾಣಿಕೆ ಒಪ್ಪಿಸತೀರಿ, ದುಡ್ಡು, ಬಂಗಾರ ವಜ್ರದ ಆಭರಣಗಳನ್ನು ಒಪ್ಪಿಸತೀರಿ. ಈಗ ಮಾಡಿರೋ ತಪ್ಪು ಮನ್ನಿಸಿ, ಮುಂದೆ ಇನ್ನೂ ದೊಡ್ಡ ತಪ್ಪು ಮಾಡಾಕೆ ಒಪ್ಪಿಗೆ ಕೇಳಿದಂತೆ ಹೌದಿಲ್ಲೋ. ಹಂಗೇ ಉದ್ದಿಮೆದಾರರು ರಾಜಕೀಯ ಪಕ್ಷಗಳಿಗೆ ಕಪ್ಪಕಾಣಿಕೆ ಒಪ್ಪಿಸಿ, ಹಳೆ ತಪ್ಪುಗಳ ತೊಳಕಂಡು, ಹೊಸ ತಪ್ಪು ಮಾಡಾಕೆ ಸಿದ್ಧರಾಗತಾರೆ. ಅದ್ರಾಗೇನು ತಪ್ಪೈತಿ?' ಬೆಕ್ಕಣ್ಣ ಕಪ್ಪಕಾಣಿಕೆಯ ಹೊಸ ವಾದ ಮಂಡಿಸಿತು.

ಸಂಗತ

ಅಡಿಕೆ ಕೃಷಿ: ಅಂದು, ಇಂದು

ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ

• ಕಡಿದಾಳ್ ಗೋಪಾಲ್

ರಾಜ್ಯದ ಹಲವು ಜಿಲ್ಲೆಗಳಲ್ಲಿ ಈಗ ಅಡಿಕೆ ಬೆಳೆಯುವ ಪ್ರದೇಶ ದುಪ್ಪಟ್ಟಾಗಿದೆ. ರಾಗಿ, ಜೋಳ, ಹುರುಳಿಯಂತಹ ಧಾನ್ಯಗಳನ್ನು ಬೆಳೆದು ಲಾಭಕ್ಕಿಂತ ನಷ್ಟವೇ ಜಾಸ್ತಿಯಾಗಿ ಹತಾಶರಾಗಿರುವ ರೈತರು, ಸಾಂಪ್ರದಾಯಿಕ ಕೃಷಿ ಬೆಳೆಗಳಿಂದ ವಿಮುಖರಾಗುತ್ತಿದ್ದಾರೆ. ಸದ್ಯದಲ್ಲಿ ಉತ್ತಮ ಬೆಲೆ ಇರುವಂತಹ ಅಡಿಕೆ ತೋಟದತ್ತ ಮುಖ ಮಾಡುತ್ತಿದ್ದಾರೆ. ಹೀಗಾಗಿ, ರಾಜ್ಯದಲ್ಲೇ ಅತಿ ಹೆಚ್ಚು ಹಾಗೂ ಗುಣಮಟ್ಟದ ಅಡಿಕೆ ಬೆಳೆಯುವ ಪ್ರದೇಶ ಎನಿಸಿಕೊಂಡಿದ್ದ ಶಿವಮೊಗ್ಗ ಜಿಲ್ಲೆಯನ್ನೂ ಮೀರಿಸಿ ಇತರ ಜಿಲ್ಲೆಗಳಲ್ಲೂ ಅಡಿಕೆ ವ್ಯಾಪಿಸಿದೆ. ಉದಾಹರಣೆಗೆ, ದಾವಣಗೆರೆ ಜಿಲ್ಲೆಯಲ್ಲಿ ಐದು ವರ್ಷಗಳಲ್ಲಿ ಅಡಿಕೆ ತೋಟದ ವ್ಯಾಪ್ತಿ ದುಪ್ಪಟ್ಟಾಗಿದೆ. ಇದೇ ರೀತಿ ತುಮಕೂರು, ಚಿತ್ರದುರ್ಗ, ಹಾವೇರಿ, ಬಳ್ಳಾರಿ ಜಿಲ್ಲೆಗಳಲ್ಲೂ ಅಡಿಕೆ ಕೃಷಿ ಬಹಳಷ್ಟು ಹೆಚ್ಚಾಗಿದೆ.

ಇಂದು ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಪ್ರಮುಖವಾದವು, ಕೃಷಿ ಕಾರ್ಮಿಕರ ಸಮಸ್ಯೆ, ಅಡಿಕೆಗೆ ಬರುವ ರೋಗಗಳು, ಸುಪ್ರೀಂ ಕೋರ್ಟ್‌ನಲ್ಲಿರುವ ಪ್ರಕರಣ, ಕಾಡುಪ್ರಾಣಿ ಮತ್ತು ಪಕ್ಷಿಗಳಿಂದ ಬೆಳೆಯನ್ನು ರಕ್ಷಿಸಿಕೊಳ್ಳಲು ಹೆಣಗಾಡಬೇಕಾದ ಪರಿಸ್ಥಿತಿ.

ಮೊದಲನೆಯದಾಗಿ, ಕೃಷಿ ಕಾರ್ಮಿಕರ ಸಮಸ್ಯೆ ಇಂದು ಗಂಭೀರವಾಗಿದೆ. ಯುವ ಕೃಷಿ ಕಾರ್ಮಿಕರು ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರಿದ್ದಾರೆ. ಆದ್ದರಿಂದ ರೈತರು ಅನಿವಾರ್ಯವಾಗಿ ಯಂತ್ರಗಳನ್ನು ಹೆಚ್ಚಾಗಿ ಅವಲಂಬಿಸುವಂತಾಗಿದೆ ಮತ್ತು ಅವರು ಕೃಷಿ ಕಾರ್ಯದಲ್ಲೂ ಬಹಳಷ್ಟು ಬದಲಾವಣೆ ಮಾಡಿಕೊಳ್ಳುವಂತಾಗಿದೆ. ಎರಡನೆಯದಾಗಿ, ಅಡಿಕೆ ಬೆಳೆಗೆ ಕಾಣಿಸಿಕೊಳ್ಳುವ ಪ್ರಮುಖ ರೋಗಗಳಾದ ಹಳದಿಎಲೆ ರೋಗ, ಹಿಡಿಮುಂಡಿಗೆ ರೋಗ ಮತ್ತು ಎಲೆಚುಕ್ಕಿ ರೋಗದಿಂದ ಬೆಳೆಗಾರರು ಭಾರಿ ನಷ್ಟ ಅನುಭವಿಸುತ್ತಿದ್ದಾರೆ. ಬೇಸರದ ಸಂಗತಿ ಎಂದರೆ, ಈ ಕಾಯಿಲೆಗಳಿಗೆ ಸೂಕ್ತ ಔಷಧ ಕಂಡುಹಿಡಿಯುವ ವಿಜ್ಞಾನಿಗಳ ಪ್ರಯತ್ನ ಈವರೆಗೂ ಫಲ ನೀಡದಿರುವುದು. ಮೂರನೆಯ ಸಮಸ್ಯೆ, ಸುಪ್ರೀಂ ಕೋರ್ಟಿನಲ್ಲಿ ನಡೆಯುತ್ತಿರುವ ಪ್ರಕರಣ. ಅಡಿಕೆ ಆರೋಗ್ಯಕ್ಕೆ ಹಾನಿಕಾರಕ, ಅಡಿಕೆ ತಿನ್ನುವುದರಿಂದ ಕ್ಯಾನ್ಸರ್ ಬರುತ್ತದೆ ಎಂಬಂತಹ ವರದಿಗಳು ಕೇಂದ್ರ ಸರ್ಕಾರದ ಬಳಿ ಇವೆ. ಅಡಿಕೆ ಆರೋಗ್ಯಕ್ಕೆ ಹಾನಿಕಾರಕವಲ್ಲ ಎಂಬುದಕ್ಕೆ ಪೂರಕವಾದ ವೈಜ್ಞಾನಿಕ ವರದಿಯನ್ನು ಸಿದ್ಧಪಡಿಸಿ, ಅದನ್ನು ಸುಪ್ರೀಂ ಕೋರ್ಟಿಗೆ ಸಲ್ಲಿಸಿ ಮನವರಿಕೆ ಮಾಡಿಕೊಡಬೇಕಾದ ಹೊಣೆ ಈಗ ಕೇಂದ್ರದ ಮೇಲಿದೆ. ಈ ಕೆಲಸ ಈವರೆಗೂ ಆಗಿಲ್ಲ ಎಂಬ ವಿಷಾದ ಅಡಿಕೆ ಬೆಳೆಗಾರರಲ್ಲಿದೆ.

ನಾಲ್ಕನೆಯ ಸಮಸ್ಯೆ, ಕೆಲವೆಡೆ ಬೆಳೆದ ಫಸಲನ್ನು ಕಾಡುಪ್ರಾಣಿಗಳು ಹಾಗೂ ಪಕ್ಷಿಗಳಿಂದ ಉಳಿಸಿಕೊಳ್ಳಲು ರೈತರಿಗೆ ಆಗದಿರುವುದು. ಅಡಿಕೆ ಬೆಳೆಗಾರರು ಅಡಿಕೆ ಜೊತೆಯಲ್ಲಿ ಮಿಶ್ರ ಬೆಳೆಯನ್ನು ಬೆಳೆಯುತ್ತಿದ್ದಾರೆ. ಆದರೆ ಕಾಡುಪ್ರಾಣಿ ಹಾಗೂ ಪಕ್ಷಿಗಳ ಕಾಟದಿಂದ ಈಚೆಗೆ ಯಾವ ಫಸಲನ್ನೂ ಉಳಿಸಿಕೊಳ್ಳಲು ಆಗುತ್ತಿಲ್ಲ. ಈ ಪ್ರಮುಖ ಸಮಸ್ಯೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತುರ್ತಾಗಿ, ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಇಂದು ದೇಶದಲ್ಲಿ ಉತ್ಪಾದನೆಯಾಗುವ ಕೆಂಪು ಅಡಿಕೆಯಲ್ಲಿ ಹೆಚ್ಚಿನ ಪಾಲನ್ನು ಪಾನ್‌ಮಸಾಲಕ್ಕೆ ಬಳಸಲಾಗುತ್ತದೆ. ಪಾನ್‌ಮಸಾಲಕ್ಕೆ ಬಳಸುವ ಉತ್ಪನ್ನಗಳಿಗೆ ಶೇ 10ರಷ್ಟು ಹೊಗೆಸೊಪ್ಪನ್ನು ಸೇರಿಸಿದರೆ ಗುಟ್ಕಾ ಆಗುತ್ತದೆ. ದೇಶದಲ್ಲಿ ಗುಟ್ಕಾ ನಿಷೇಧ ಆಗಿರುವುದರಿಂದ ಗುಟ್ಕಾ ತಿನ್ನುವವರು ಪಾನ್‌ಮಸಾಲ ಜೊತೆಗೆ ಹೊಗೆಸೊಪ್ಪನ್ನು ಸೇರಿಸಿ ತಿನ್ನುತ್ತಾರೆ. ಈ ಉತ್ಪನ್ನಗಳು ಹೊರದೇಶಗಳಿಗೆ ಹೆಚ್ಚೆಚ್ಚು ಪ್ರಮಾಣದಲ್ಲಿ ರಫ್ತಾಗುತ್ತಿವೆ. ಈ ಎಲ್ಲ ಕಾರಣಗಳಿಂದ ಅಡಿಕೆಗೆ ಉತ್ತಮವಾದ ಧಾರಣೆ ಇದೆ. ಆದರೆ ಅಡಿಕೆ ತೋಟದ ಪ್ರಮಾಣ ಹೆಚ್ಚಾಗುತ್ತಾ ಹೋಗುತ್ತಿರುವುದರಿಂದ, ಇದು ಭವಿಷ್ಯದಲ್ಲಿ ಧಾರಣೆ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ದಕ್ಷಿಣ ಏಷ್ಯಾ ರಾಷ್ಟ್ರಗಳ ಪ್ರಾದೇಶಿಕ ಸಹಕಾರ ಒಪ್ಪಂದದ ಪ್ರಕಾರ, ವಿದೇಶಗಳಿಂದ ಅಡಿಕೆ ಆಮದನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಿಲ್ಲ. ಭೂತಾನ್‌ನಿಂದ ಸ್ವಲ್ಪ ಪ್ರಮಾಣದಲ್ಲಿ ಅಡಿಕೆ ಬಂದ ಮಾತ್ರಕ್ಕೆ ಧಾರಣೆಯೇನೂ ಕಡಿಮೆ ಆಗುವುದಿಲ್ಲ. ಆದರೆ ಮ್ಯಾನ್ಮಾರ್, ಇಂಡೋನೇಷ್ಯಾ, ಶ್ರೀಲಂಕಾ ಹಾಗೂ ಇತರ ದೇಶಗಳಿಂದ ಹಡಗಿನ ಮೂಲಕ ಕಳ್ಳತನದಲ್ಲಿ ಭಾರತಕ್ಕೆ ಬರುವ ಅಡಿಕೆಯನ್ನು ತಡೆಗಟ್ಟಬೇಕು. ಆಮದಾಗುವ ಅಡಿಕೆ ಮೇಲೆ ಕೇಂದ್ರ ಸರ್ಕಾರದ ನಿಯಂತ್ರಣ ಇರಬೇಕು.



ರಾಜ್ಯದಿಂದ ಸರ್ಕಾರಕ್ಕೆ ತೆರಿಗೆ ವಂಚಿಸಿ ಪ್ರತಿದಿನ ನೂರಾರು ಲಾರಿ ಲೋಡ್ ಅಡಿಕೆಯನ್ನು ಉತ್ತರ ಭಾರತಕ್ಕೆ ಸಾಗಿಸುತ್ತಿರುವುದು ಆತಂಕಕಾರಿ ಬೆಳವಣಿಗೆ ಆಗಿದೆ. ಇದು ಧಾರಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಹಾಗೂ ಸರ್ಕಾರಕ್ಕೂ ನಷ್ಟ ಉಂಟಾಗುತ್ತದೆ. ಜೊತೆಗೆ, ಕಾನೂನಿನ ಪ್ರಕಾರ ಎಪಿಎಂಸಿ ಒಳಗೆ ವ್ಯಾಪಾರ ಮಾಡುವವರಿಗೆ ವ್ಯಾಪಾರ ಮಾಡುವುದೇ ಕಷ್ಟವಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಜಾಗೃತವಾಗಬೇಕು.

ಈಗ ಹೊಸದಾಗಿ ಅಡಿಕೆ ಗಿಡ ಹಾಕಿದ ತೋಟಗಳು ಫಸಲಿಗೆ ಬರುವ ಹೊತ್ತಿಗೆ ಒಳ್ಳೆಯ ಧಾರಣೆ ಸಿಗಬೇಕೆಂದರೆ ಹೊಸ ಹೊಸ ಉತ್ಪನ್ನಗಳು, ಮೌಲ್ಯವರ್ಧಿತ ಪದಾರ್ಥಗಳು ಇನ್ನೂ ಹೆಚ್ಚಾಗಿ ಮಾರುಕಟ್ಟೆಗೆ ಬರಬೇಕು. ವಿದೇಶಗಳಿಗೆ ರಫ್ತಿನ ಪ್ರಮಾಣ ಹೆಚ್ಚಿಸುವುದರ ಜೊತೆಗೆ ಆಮದು ಶುಲ್ಕ ಜಾಸ್ತಿ ಮಾಡಿದರೆ ಬೆಳೆಗಾರರ ಹಿತರಕ್ಷಣೆ ಸಾಧ್ಯವಾಗುತ್ತದೆ.

ವಾಚಕರ ವಾಣಿ

ನೀತಿ ಸಂಹಿತೆ: ಸಾಮಾನ್ಯರಿಗೆ ತೊಂದರೆಯಾಗದಿರಲಿ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಾರಿಯಲ್ಲಿರುವ ನೀತಿ ಸಂಹಿತೆಯ ಹೆಸರಿನಲ್ಲಿ ಜನಸಾಮಾನ್ಯರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕಾಗಿದೆ. ಮನೆ ನಿರ್ಮಾಣ, ಮದುವೆ, ಗೃಹ ಪ್ರವೇಶ, ವ್ಯಾಪಾರ ವ್ಯವಹಾರದಂತಹ ಕಾರ್ಯಗಳಿಗೆ ಹಣ ರವಾನೆಯಾಗುತ್ತಿರುತ್ತದೆ. ಆದರೆ ಎಷ್ಟೋ ಬಾರಿ ಸಣ್ಣಪ್ರಮಾಣದಲ್ಲಿ ಸಾಗಿಸುವ ಇಂತಹ ಹಣಕ್ಕೆಲ್ಲ ದಾಖಲೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಹಾಗೊಂದುವೇಳೆ ಇದನ್ನು ಕೊಂಡೊಯ್ಯುವಾಗ ಸೀಜ್ ಮಾಡಿದರೆ ಅಂತಹವರ ಗತಿ ಏನು? ಅವರು ಮುಂದಿನ ಮೂರು ತಿಂಗಳ ಕಾಲ ವ್ಯವಹಾರ ಮಾಡುವುದಾದರೂ ಹೇಗೆ?

ಚುನಾವಣಾ ಆಯೋಗವು ಕಾನೂನಿನ ಪ್ರಕಾರ ಅಕ್ರಮ ತಡೆಗಟ್ಟಲಿ. ಆದರೆ ಚುನಾವಣಾ ಅಧಿಕಾರಿಗಳು ವಿವೇಚನೆಯಿಂದ ಕಾರ್ಯ ನಿರ್ವಹಿಸಿದರೆ ಸಾರ್ವಜನಿಕರಿಗೆ ತೊಂದರೆ ಆಗುವುದನ್ನು ತಪ್ಪಿಸಬಹುದು.

ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ

ಪೊಲೀಸರಿಗೆ ಶಿಕ್ಷೆ: ಬೆಕ್ಕಿಗೆ ಗಂಟೆ ಕಟ್ಟುವವರಾರು?

ಪೊಲೀಸರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕೆಂದು ಹಿರಿಯ ಅಧಿಕಾರಿಗಳು ಈಗ ಆದೇಶಿಸಿರುವುದರಿಂದ, 'ಪೊಲೀಸರಿಗೆ ಈವರೆಗೆ ಅಂತಹದ್ದೊಂದು ನಿಯಮ ಇರಲಿಲ್ಲವೇ?' ಎಂದು ಜಿ.ಬೈರೇಗೌಡ ಪ್ರಶ್ನಿಸಿದ್ದಾರೆ (ವಾ.ವಾ., ಮಾರ್ಚ್ 23). ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಾರ್ಯಾಚರಣೆ ಮಾಡುವ ಪೊಲೀಸರು ಸ್ವತಃ ಸಂಚಾರ ನಿಯಮಗಳನ್ನು ಉಲ್ಲಂಘಿಸಿದರೆ ಎರಡು ಪಟ್ಟು ದಂಡ ಮತ್ತು ಶಿಕ್ಷೆಯನ್ನು ವಿಧಿಸಲು ಅದೇ ಕಾನೂನಿನಲ್ಲಿ ಅವಕಾಶವಿದೆ. ಆದರೆ, ಬೆಕ್ಕಿಗೆ ಗಂಟೆ ಕಟ್ಟುವವರಾರು?

ಪಿ.ಜೆ.ರಾಘವೇಂದ್ರ, ಮೈಸೂರು

ಪ್ರಶ್ನೆಪತ್ರಿಕೆ ಸೋರಿಕೆ: ಗಂಭೀರವಾಗಿ ಪರಿಗಣಿಸಿ

ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ವ್ಯಾಪ್ತಿಯ ಬಿ.ಕಾಂ. ಎರಡನೇ ಸೆಮಿಸ್ಟರ್‌ನ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಪ್ರಶ್ನೆಪತ್ರಿಕೆ ಸೋರಿಕೆಯಾದ್ದರಿಂದ ಇತ್ತೀಚೆಗೆ ಪರೀಕ್ಷೆ ರದ್ದುಪಡಿಸಿದ್ದು, ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾದ ಪ್ರಸಂಗ ಪತ್ರಿಕೆಗಳಲ್ಲಿ ವರದಿಯಾಗಿದೆ. ಕೆಲವು ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗುವ ವಿಷಯ ಈಗ ಸಾಮಾನ್ಯವಾಗಿದೆ. ಇಂತಹ ಬೆಳವಣಿಗೆಯು ಕಷ್ಟಪಟ್ಟು ಪರೀಕ್ಷೆಗೆ ತಯಾರಾಗಿ, ದೂರದ ಊರುಗಳಿಗೆ ಪ್ರಯಾಣಿಸಿ, ಸರಿಯಾಗಿ ಊಟ, ನಿದ್ದೆ ಇಲ್ಲದೆ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ. ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಮತ್ತು ಪರೀಕ್ಷಾ ಮಂಡಳಿಗಳ ಮೇಲಿನ ಗೌರವವನ್ನು ಕಡಿಮೆ ಮಾಡುತ್ತದೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮುಂದಿನ ದಿನಗಳಲ್ಲಿ ಇಂತಹ ಕೀಳು ವಿದ್ಯಮಾನಗಳು ನಡೆಯದಂತೆ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು.

ಸುರೇಶ ಅರಳಿಮರ, ಬಾದಾಮಿ

ಟಿ.ಎಂ.ಕೃಷ್ಣ ವರ್ಸಸ್ ಸಂಪ್ರದಾಯವಾದ

ಮದ್ರಾಸ್ ಸಂಗೀತ ಅಕಾಡೆಮಿಯು ಗಾಯಕ ಟಿ.ಎಂ.ಕೃಷ್ಣ ಅವರಿಗೆ 'ಸಂಗೀತ ಕಲಾನಿಧಿ' ಪ್ರಶಸ್ತಿ ಘೋಷಿಸಿದ್ದರಿಂದ ಅವರ ವಿರುದ್ಧ ಎತ್ತಿದ್ದ ಎಲ್ಲ ಧ್ವನಿಗಳಿಗೂ ತಮಿಳುನಾಡಿನ ಬಿಜೆಪಿ ಬೆಂಬಲ ವ್ಯಕ್ತಪಡಿಸಿದೆ. ಇದು ಸಂಗೀತದ ಸಮಸ್ಯೆಯಲ್ಲ, ರಾಜಕೀಯದ್ದು ಎಂಬುದು ಸ್ಪಷ್ಟ. ಕೃಷ್ಣ ಅವರು ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧದ ರಾಜಕೀಯ ನಿಲುವು ಹೊಂದಿರುವುದೂ ಅಷ್ಟೇ ಸ್ಪಷ್ಟ. ಕೃಷ್ಣ ಅವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ನಿಲುವುಗಳು ಎಲ್ಲರಿಗೂ ಗೊತ್ತಿರುವಂತಹವೇ. ಶಾಸ್ತ್ರೀಯ ಸಂಗೀತ ಸದ್ಯದ ಪರಿಸ್ಥಿತಿಯಲ್ಲಿ ಬರೀ ಮೇಲ್ವರ್ಗಕ್ಕೆ ಅದರಲ್ಲೂ ಬ್ರಾಹ್ಮಣ ವರ್ಗಕ್ಕೆ ಸೀಮಿತವಾಗಿದೆ. ಹಾಡುವವರೂ ಅವರೇ ಕೇಳುವವರೂ ಅವರೇ. ಇಂಥ ಅದ್ಭುತ ಕಲಾಪ್ರಕಾರ ಬಾವಿಗಪ್ಪೆಯ ಥರ ಇದ್ದಲ್ಲೇ ಕೊಳೆಯಬಾರದು, ಅದು ಎಲ್ಲ ಜನಸಮುದಾಯವನ್ನೂ ತಲುಪಬೇಕು ಮತ್ತು ಮತ್ತಷ್ಟು ಬೆಳೆಯಬೇಕು ಎಂಬ ಹಾದಿಯಲ್ಲಿ ಕೃಷ್ಣ ಶ್ರಮಿಸುತ್ತಿದ್ದಾರೆ. ಇದು ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾಗಿದೆ. ಅವರ ಅಭಿಪ್ರಾಯದಲ್ಲಿ ಶಾಸ್ತ್ರೀಯ ಸಂಗೀತ ಕಲೆ ಮಾತ್ರವಲ್ಲ ಅದಕ್ಕೆ ಧಾರ್ಮಿಕ ನಂಟೂ ಇದೆ. ನಮ್ಮ ಕಲೆ ನಮ್ಮಲ್ಲೇ ಉಳಿಯಬೇಕು ಎಂಬುದು ಒಂದು ಬಗೆಯ ಶ್ರೇಷ್ಠತೆಯ ವ್ಯಸನ ಎಂಬುದು ಕೃಷ್ಣ ಅವರ ನಿಲುವು.

ಇನ್ನು ಅವರ ಪ್ರಗತಿಪರ ಸಾಮಾಜಿಕ ದೃಷ್ಟಿಕೋನವೂ ಸಂಪ್ರದಾಯಸ್ಥ ಸನಾತನಿಗಳಿಗೆ ಅಪಥ್ಯವಾಗಿದೆ. ಅವರು ಎಲ್ಲ ಪ್ರಗತಿಪರರಂತೆ ಹಿಂದೂ ಸನಾತನ ಧರ್ಮದ ಅವಿಭಾಜ್ಯ ಅಂಗವಾದ ಬ್ರಾಹ್ಮಣ್ಯದ (ಎಂದರೆ ಮೇಲು ಕೀಳಿನ ಜಾತಿಪದ್ಧತಿ, ಮನುಪ್ರಣೀತ ವರ್ಣಾಶ್ರಮ ಪದ್ಧತಿ ಎಂಬ ಸೀಮಿತ ಅರ್ಥದಲ್ಲಿ) ವಿರುದ್ಧ ಸ್ವತಃ ಬ್ರಾಹ್ಮಣರಾಗಿ ಮಾತು, ಕೃತಿಗಳ ಮೂಲಕ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಇಲ್ಲೇ ಸಮಸ್ಯೆ ಇರುವುದು! ಈ ನಿಲುವಿನ ಹಿನ್ನೆಲೆಯಲ್ಲಿ ಪೆರಿಯಾರ್ ಅವರ ಅನೇಕ ವಿಚಾರಗಳನ್ನು ಸಮರ್ಥಿಸಿಕೊಂಡಿದ್ದಾರೆ. ಪೆರಿಯಾರ್ ಒಮ್ಮೆ ಭಾಷಣದಲ್ಲಿ ಬ್ರಾಹ್ಮಣ ಜಾತಿಯನ್ನೇ ನಾಶ ಮಾಡಲು ಕರೆ ಕೊಟ್ಟರು ಎನ್ನಲಾಗಿದೆ. ಇದನ್ನೇ ಕೃಷ್ಣ ಅವರ ವಿರುದ್ಧ ಈಗ ಬಳಸಲಾಗುತ್ತಿದೆ. ಪೆರಿಯಾರ್ ಅವರು ಬ್ರಾಹ್ಮಣ ಜಾತಿಯ ಬಗ್ಗೆ ಹೇಳಿದರೋ ಅಥವಾ ಬ್ರಾಹ್ಮಣ್ಯದ ಬಗ್ಗೆ ಹೇಳಿದರೋ ಗೊತ್ತಿಲ್ಲ. ಜಾತಿಯ ಬಗ್ಗೆ ಹೇಳಿದ್ದರೆ ಅದು ಖಂಡನಾರ್ಹವೇ ಸರಿ. ಆದರೆ ಅದನ್ನೇ ಕೃಷ್ಣ ಅವರ ಮೇಲೆ ಆರೋಪಿಸಿ ಹೇಳುವುದು ಎಷ್ಟು ಸರಿ?

ಕೆಲವು ಸನಾತನಿ ಸಂಗೀತಗಾರ್ತಿಯರು ತಮ್ಮ ಬಹಿಷ್ಕಾರದ ಹೇಳಿಕೆಯಲ್ಲಿ, ತ್ಯಾಗರಾಜರು ಮತ್ತು ಎಂ.ಎಸ್. ಸುಬ್ಬುಲಕ್ಷ್ಮಿ ಅವರನ್ನು ಕೃಷ್ಣ ಅವಹೇಳನ ಮಾಡಿದ್ದಾರೆ ಎಂಬ ಹುಸಿ ಆರೋಪ ಮಾಡಿದ್ದಾರೆ. ಒಬ್ಬ ವ್ಯಕ್ತಿಯ ಕುರಿತಾದ ವಿಮರ್ಶೆಯು ಅವಮಾನ ಹೇಗಾಗುತ್ತದೆ? ಒಬ್ಬ ಸಂಗೀತಗಾರ ಸಂಗೀತ ದಿಗ್ಗಜರನ್ನು ಅವಮಾನಿಸಿದರು ಎಂಬುದೇ ಹಾಸ್ಯಾಸ್ಪದ ವಿಷಯ. ಒಟ್ಟಿನಲ್ಲಿ ಕೃಷ್ಣ ಅವರ ಅಸಾಮಾನ್ಯ ಪ್ರತಿಭೆ, ಜನಪ್ರಿಯತೆಯನ್ನು ಸಹಿಸಲಾಗದ ಮನಃಸ್ಥಿತಿಗಳು ಈ ಅನಗತ್ಯ ವಿವಾದವನ್ನು ಹುಟ್ಟುಹಾಕಿವೆ.

ಎಸ್.ಶ್ರೀನಿವಾಸ ರಂಗನ್, ಮೈಸೂರು

ಧ(ಹ)ಗೆ!

ಏನೆಂಥ ಪ್ರಚಂಡ ಬೇಸಗೆ!
ಹೇಗೊ ಸಹಿಸಿಕೊಳ್ಳಬಹುದು ಈ ಧಗೆಯನ್ನು;
ಆದರೆ ಸೈರಿಸಬಹುದೆ ಮಾನವ
ಮನೋಲೋಕದ ಹಗೆತನದ
ಪ್ರಖರ ಪಾಪವನ್ನು?
(ಅಂತೆಯೆ ಬದುಕಿನ 'ತಾಪತ್ರಯ'ಗಳನ್ನು?)

ಸಿ.ಪಿ.ಕೆ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಜಾ ಮತ
ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಕೇಂದ್ರದ ತನಿಖಾ ಸಂಸ್ಥೆಗಳ ದುರ್ಬಳಕೆ ಆರೋಪದ ಸುತ್ತ...

ಕೇಂದ್ರದ ಬಿಜೆಪಿ ಸರ್ಕಾರವು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಸಿಬಿಐ, ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆಗಳಂಥ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಗಂಭೀರ ಆರೋಪವಿದೆ. ಅದನ್ನು ಪುಷ್ಟೀಕರಿಸುವಂತೆ ಈ ಸಂಸ್ಥೆಗಳು ಬಿಜೆಪಿ ಅಧಿಕಾರದ ಅವಧಿಯಲ್ಲಿ ಹೆಚ್ಚು ಕ್ರಮ ತೆಗೆದುಕೊಂಡಿದ್ದು ವಿರೋಧ ಪಕ್ಷಗಳ ನಾಯಕರ ವಿರುದ್ಧವೇ. ಬಿಜೆಪಿಯನ್ನು ಚುನಾವಣೆಯಲ್ಲಿ ಎದುರಿಸಲು ವಿರೋಧ ಪಕ್ಷಗಳು 'ಇಂಡಿಯಾ' ಒಕ್ಕೂಟ ರಚಿಸಿಕೊಳ್ಳಲು ಇದೂ ಒಂದು ಕಾರಣ

ಪ್ರಜಾವಾಣಿ ವಾರ್ತೆ


'ವಿರೋಧ ಪಕ್ಷಗಳ ನಾಯಕರ ಮೇಲೆ ಕಿರುಕುಳ ಎಸಗಲು ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ ಅನ್ನು ಕೇಂದ್ರ ಸರ್ಕಾರವು ಬಳಸಿಕೊಳ್ಳುತ್ತಿದೆ'- ಕೇಂದ್ರದಲ್ಲಿ ಬಿಜೆಪಿ ನೇತೃತ್ವದ, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಸರ್ಕಾರವು 2014ರಲ್ಲಿ ರಚನೆಗೊಂಡ ಬಳಿಕ ಪದೇ ಪದೇ ಕೇಳಿಬರುತ್ತಿರುವ ಆರೋಪವಿದು. ವಿರೋಧ ಪಕ್ಷಗಳ ನಾಯಕರು, ಹೋರಾಟಗಾರರು ಹೀಗೆ ಎಲ್ಲರೂ ಇದೇ ವಾದವನ್ನು ಕಳೆದ ಸುಮಾರು 10 ವರ್ಷಗಳಿಂದ ಮಂಡಿಸುತ್ತಲೇ ಬಂದಿದ್ದಾರೆ. ಇದೇ ವಿಚಾರವಾಗಿ 14 ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್ ಮೆಟ್ಟಿಲನ್ನೂ ಏರಿವೆ.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಹಾಗೂ ಹಣ ಅಕ್ರಮ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯವು ಮುಖ್ಯವಾಗಿ ಕಾರ್ಯ ನಿರ್ವಹಿಸುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಎನ್‌ಜಿಒಗಳ ಮೇಲೆ, ಸಂಘ-ಸಂಸ್ಥೆಗಳ ಮೇಲೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಅಡಿಯಲ್ಲಿ ಇ.ಡಿ. ಅಧಿಕಾರಿಗಳು ಪ್ರಕರಣ ದಾಖಲಿಸುತ್ತಾರೆ. ರಾಜಕೀಯ ನಾಯಕರ ಮೇಲೆ ಹಣ ಅಕ್ರಮ ವರ್ಗಾವಣೆ ಕಾಯ್ದೆ ಅಡಿಯಲ್ಲಿ ಹೆಚ್ಚಿನ ಪ್ರಕರಣಗಳು ದಾಖಲಾಗಿವೆ.

'ಹಣ ಅಕ್ರಮ ವರ್ಗಾವಣೆ ಪ್ರಕರಣಗಳಲ್ಲಿ ವಿರೋಧ ಪಕ್ಷಗಳ ನಾಯಕರ ವಿರುದ್ಧವೇ ಹೆಚ್ಚಿನ ಅಂದರೆ, ಶೇ 95ರಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು 14 ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್‌ನಲ್ಲಿ 2023ರಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ಹೇಳಿವೆ. ವಿವಿಧ ಮಾಧ್ಯಮ ಸಂಸ್ಥೆಗಳು ಕೂಡ ಇದೇ ಅಂಕಿ ಅಂಶವನ್ನೇ ವರದಿ ಮಾಡಿವೆ. '2014ರಿಂದ ಇಲ್ಲಿಯವರೆಗೆ ಇ.ಡಿ. ಅಧಿಕಾರಿಗಳು ವಿರೋಧ ಪಕ್ಷಗಳ 150 ನಾಯಕರ ಮನೆ ಮೇಲೆ ದಾಳಿ ನಡೆಸಿದ್ದಾರೆ' ಎಂದು ರಾಯಿಟರ್ಸ್ ವರದಿ ಮಾಡಿದೆ.

ಬಿಜೆಪಿ ನೇತೃತ್ವದ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ, ಜಾರಿ ನಿರ್ದೇಶನಾಲಯಕ್ಕೆ ಹೆಚ್ಚು 'ಶಕ್ತಿ' ತುಂಬಲಾಯಿತು. 2014ರ ಬಳಿಕ ಇ.ಡಿ ಅಧಿಕಾರಿಗಳು ದಾಖಲಿಸುತ್ತಿದ್ದ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಕೇಂದ್ರ ಸರ್ಕಾರ ಸಂಸತ್ತಿಗೆ ನೀಡಿದ ಮಾಹಿತಿ ಪ್ರಕಾರ, ಹಣ ಅಕ್ರಮ ವರ್ಗಾವಣೆ ಕಾಯ್ದೆ ಜಾರಿಯಾದ ಬಳಿಕ, ಅಂದರೆ, 2005ರಿಂದ 2023ರವರೆಗೆ 6,349 ಪ್ರಕರಣಗಳು ದಾಖಲಾಗಿವೆ. ಈ 18 ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಕಳೆದ 10 ವರ್ಷಗಳ ಅವಧಿಯಲ್ಲಿಯೇ 4,504 ಪ್ರಕರಣಗಳು ದಾಖಲಾಗಿವೆ. 2005ರಿಂದ 2014ಕ್ಕೂ ಮೊದಲು, ಅಂದರೆ, ಕಾಯ್ದೆ ಜಾರಿಯಾದ 8 ವರ್ಷಗಳಲ್ಲಿ ದಾಖಲಾದ ಪ್ರಕರಣ ಸಂಖ್ಯೆ 1,845 ಮಾತ್ರ. ಅಂದರೆ, ಕಳೆದ 10 ವರ್ಷಗಳಲ್ಲಿ ಇ.ಡಿ. ದಾಖಲಿಸುತ್ತಿರುವ ಪ್ರಕರಣಗಳ ಸಂಖ್ಯೆ ಸುಮಾರು ಶೇ 144ರಷ್ಟು ಏರಿಕೆಯಾಗಿದೆ.

ಆದರೆ, ಇಷ್ಟೊಂದು ದೊಡ್ಡ ಸಂಖ್ಯೆಯ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾದವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಕಳೆದ ಐದು ವರ್ಷಗಳಲ್ಲಿ (2018-19ರಿಂದ 2022-23) ಕೇವಲ 32 ಮಂದಿ ಶಿಕ್ಷೆಗೆ ಒಳಗಾಗಿದ್ದಾರೆ. ಇದೇ ಅವಧಿಯಲ್ಲಿ ಬಂಧನಕ್ಕೆ ಒಳಗಾದವರ ಸಂಖ್ಯೆ 354. ಆದರೆ, ಈ ಅವಧಿಯಲ್ಲಿ ದಾಖಲಾದ ಪ್ರಕರಣ ಸಂಖ್ಯೆ ಮಾತ್ರ 3,867.



14 ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಹಲವು ವಿಚಾರಗಳನ್ನು ಅಂಕಿ-ಅಂಶದ ಮೂಲಕ ಪ್ರಸ್ತಾಪಿಸಿವೆ. 2014ಕ್ಕೂ ಮೊದಲು ಶೇ 93ರಷ್ಟು ದಾಳಿಗಳು ವ್ಯಕ್ತಿಗಳು ನೀಡಿದ ದೂರಿನ ಅನ್ವಯ ನಡೆಯುತ್ತಿದ್ದವು. ಈಗ ಈ ಪ್ರಮಾಣ ಶೇ 29ಕ್ಕೆ ಕುಸಿದಿದೆ. ಹಾಗಿದ್ದರೆ, ಅಧಿಕಾರಿಗಳು ಈಗ ಯಾವ ಆಧಾರದಲ್ಲಿ ದಾಳಿ ನಡೆಸುತ್ತಿದ್ದಾರೆ ಎನ್ನುವ ಪ್ರಶ್ನೆ ಮೂಡದೇ ಇರದು. 2004ರಿಂದ 2014ರವರೆಗೆ 72 ರಾಜಕೀಯ ನಾಯಕರ ಮೇಲೆ ಸಿಬಿಐ ತನಿಖೆ ನಡೆಸಿದೆ. ಈ ಸಂಖ್ಯೆಯಲ್ಲಿ ವಿರೋಧ ಪಕ್ಷಗಳ ನಾಯಕರ ಸಂಖ್ಯೆ 43, ಅಂದರೆ ಶೇ 60ರಷ್ಟು. ಆದರೆ, ಈಗ ಈ ಪ್ರಮಾಣ ಶೇ 95ಕ್ಕೆ ಏರಿಕೆಯಾಗಿದೆ' ಎಂದೂ ಅರ್ಜಿಯಲ್ಲಿ ಹೇಳಲಾಗಿದೆ.

ದಾಳಿಗೂ ಉಂಟು 'ಸೂಕ್ತ' ಸಮಯ: ಜಾರಿ ನಿರ್ದೇಶನಾಲಯ ಅಧಿಕಾರಿಗಳು 'ಸೂಕ್ತ ಸಮಯ'ದಲ್ಲಿ ದಾಳಿ ನಡೆಸುತ್ತಾರೆ ಎಂದು ವಿರೋಧ ಪಕ್ಷಗಳು ದೂರುತ್ತವೆ.

ವಿಧಾನಸಭೆ ಚುನಾವಣೆ ಅಥವಾ ಲೋಕಸಭೆ ಚುನಾವಣೆ ನಡೆಯುವ ಹಿಂದೆ-ಮುಂದೆ ಇಂಥ ದಾಳಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗುತ್ತವೆ. ಇದಕ್ಕೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನವೇ ಪುರಾವೆ ಎಂದೂ ಹೇಳುತ್ತವೆ ಪಕ್ಷಗಳು. ಈಗ ಜಾರಿ ನಿರ್ದೇಶನಾಲಯದ ಮೇಲೆ ಇನ್ನೊಂದು ಗಂಭೀರ ಆರೋಪ ಕೇಳಿಬರುತ್ತಿವೆ. ಕೇಂದ್ರ ಸರ್ಕಾರವು ಈ ವಿಭಾಗವನ್ನು ತನಗೆ ಬೇಕಾದಂತೆ ಬಳಸಿಕೊಳ್ಳುತ್ತಿದೆ ಎಂಬ ವಿರೋಧ ಪಕ್ಷಗಳ ನಾಯಕರ ಆರೋಪಕ್ಕೆ ಸಾಕ್ಷ್ಯ ಒದಗಿಸುವಂತೆ ಚುನಾವಣಾ ಬಾಂಡ್‌ನ ವಿವರಗಳು ಬಹಿರಂಗಗೊಂಡಿವೆ. 'ಇ.ಡಿ. ಅಧಿಕಾರಿಗಳು ದಾಳಿ ನಡೆಸಿದ ಬಳಿಕ, ಹಲವು ಕಂಪನಿಗಳು ದೊಡ್ಡ ದೊಡ್ಡ ಮೊತ್ತದ ಚುನಾವಣಾ ಬಾಂಡ್‌ಗಳನ್ನು ಖರೀದಿಸಿ, ಬಿಜೆಪಿಗೆ ನೀಡಿವೆ' ಎಂದು ಇತ್ತೀಚೆಗೆ ವಕೀಲ ಪ್ರಶಾಂತ್ ಭೂಷಣ್ ಅವರು ಆರೋಪಿಸಿದ್ದರು.

ನಿರ್ದೇಶಕರೇ ಇಲ್ಲದ ಇ.ಡಿ

ಸಂಜಯ್ ಕೆ.ಮಿಶ್ರಾ ಅವರು ಇ.ಡಿ ನಿರ್ದೇಶಕರಾಗಿದ್ದ ಅವಧಿಯಲ್ಲಿ ವಿರೋಧ ಪಕ್ಷಗಳ ನಾಯಕರ ವಿರುದ್ಧ ಹೆಚ್ಚಿನ ಪ್ರಕರಣಗಳು ದಾಖಲಾಗಿದೆ. ಅವರ ಅಧಿಕಾರದ ಅವಧಿಯನ್ನು ಮೋದಿ ಅವರ ಸರ್ಕಾರವು ಪದೇ ಪದೇ ವಿಸ್ತರಿಸಿತ್ತು. ಅದರ ವಿರುದ್ಧ ಸುಪ್ರೀಂ ಕೋರ್ಟ್ ಆದೇಶ ನೀಡಿದಾಗ, ಅಧಿಕಾರದ ಅವಧಿಯನ್ನು ಎರಡು ವರ್ಷಗಳಿಂದ ಐದು ವರ್ಷಗಳಿಗೆ ವಿಸ್ತರಿಸಿ ಸುಗ್ರೀವಾಜ್ಞೆ ಹೊರಡಿಸಿತು. ಹೀಗೆ ವಿಸ್ತರಿಸಲಾದ ಅವಧಿ ಮುಗಿಯುವ ಮುನ್ನವೇ ಸಂಜಯ್ ಮಿಶ್ರಾ ಅವರನ್ನು ಅಧಿಕಾರದಿಂದ ಸುಪ್ರೀಂ ಕೋರ್ಟ್ 2023ರ ಸೆಪ್ಟೆಂಬರ್ 15ರಂದು ಕೆಳಗಿಳಿಸಿತು. ಆದರೆ ಅಲ್ಲಿಂದ ಈವರೆಗೂ ನೂತನ ನಿರ್ದೇಶಕರನ್ನು ಕೇಂದ್ರ ಸರ್ಕಾರ ನೇಮಕ ಮಾಡಿಲ್ಲ. ಪೂರ್ಣ ಪ್ರಮಾಣದ ನಿರ್ದೇಶಕರು ಇಲ್ಲದೆಯೇ ಇ.ಡಿ ಕೆಲಸ ಮಾಡುತ್ತಿದೆ.

'ಸಿಬಿಐ ಈಗಲೂ ಪಂಜರದ ಗಿಳಿ'



ಸಿಬಿಐ 'ಪಂಜರದ ಗಿಳಿ' ಮತ್ತು 'ತನ್ನ ಯಜಮಾನನ ದನಿಯಲ್ಲೇ ಮಾತನಾಡುವ ಸಂಸ್ಥೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆರ್.ಎಂ. ಲೋಧಾ ಅವರು 2013ರಲ್ಲಿ ಹೇಳಿದ್ದರು. ಕಲ್ಲಿದ್ದಲು ಹಗರಣದಲ್ಲಿ ತನಿಖಾ ವರದಿಯನ್ನು ಬದಲಿಸಿದ್ದರ ಬಗ್ಗೆ ಸುಪ್ರೀಂ ಕೋರ್ಟ್ ಮಾಡಿದ್ದ ಕಟುಟೀಕೆ ಇದಾಗಿತ್ತು. ಸೆಂಟ್ರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್ ಎಂಬುದನ್ನು ಕಾಂಗ್ರೆಸ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್ ಎಂದೂ ಲೇವಡಿ ಮಾಡುವ ಕಾಲವೊಂದಿತ್ತು. ಈಗ ಕೇಂದ್ರದಲ್ಲಿ ಆಡಳಿತದಲ್ಲಿರುವ ಬಿಜೆಪಿ ಸಹ ತನ್ನ ವಿರೋಧಿಗಳನ್ನು ಹತ್ತಿಕ್ಕಲು ಸಿಬಿಐ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಆರೋಪಗಳಿವೆ.

2014ರ ನಂತರ ಸಿಬಿಐ ವಿರೋಧಿ ಪಾಳಯದ ನಾಯಕರ ವಿರುದ್ಧ ಹಲವು ಪ್ರಕರಣಗಳನ್ನು ದಾಖಲಿಸಿವೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಕಲ್ಲಿದ್ದಲು ಹಗರಣ, ಶಾಲಾ ಶಿಕ್ಷಕರ ನೇಮಕಾತಿ ಹಗರಣ ಪ್ರಕರಣಗಳನ್ನು ಸಿಬಿಐ ದಾಖಲಿಸಿಕೊಂಡಿದೆ. ಯುಪಿಎ ಅವಧಿಯ 2ಜಿ ಹಗರಣದಲ್ಲಿ ಖುಲಾಸೆಯಾಗಿದ್ದ ಡಿಎಂಕೆ ನಾಯಕರ ವಿರುದ್ಧ ಮತ್ತೆ ತನಿಖೆಗೆ ಅನುಮತಿ ಕೋರಿದೆ. ಬಿಜೆಪಿಯ ಮಿತ್ರ ಪಕ್ಷವಾಗಿದ್ದ ಶಿರೋಮಣಿ ಅಕಾಲಿ ದಳದ ಹಲವು ನಾಯಕರ ವಿರುದ್ಧ, ಅದು ಎನ್‌ಡಿಎ ಮೈತ್ರಿಕೂಟ ತೊರೆದ ನಂತರ ಸಿಬಿಐ ಪ್ರಕರಣಗಳನ್ನು ದಾಖಲಿಸಿದೆ. ಕರ್ನಾಟಕ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ವಿರುದ್ಧವೂ ಸಿಬಿಐನಲ್ಲಿ ಪ್ರಕರಣವಿದೆ. ಆದರೆ ಈ ಅವಧಿಯಲ್ಲಿ ಸಿಬಿಐ ತನಿಖೆಗೆ ಒಳಪಟ್ಟ ರಾಜಕಾರಣಿಗಳ ಪಟ್ಟಿಯಲ್ಲಿ ಬಿಜೆಪಿಯ ಒಬ್ಬರೂ ಸಿಗುವುದಿಲ್ಲ. ಬಿಜೆಪಿ ನಾಯಕರ ವಿರುದ್ಧ 2014ಕ್ಕೂ ಮುನ್ನ ದಾಖಲಾಗಿದ್ದ ಪ್ರಕರಣಗಳಲ್ಲಿ ತನಿಖೆ ಸ್ಥಗಿತವಾಗಿದೆ ಅಥವಾ ತನಿಖೆಯಲ್ಲಿ ಯಾವುದೇ ಪ್ರಗತಿ ಇಲ್ಲ. ಇದನ್ನೇ ವಿರೋಧ ಪಕ್ಷಗಳು ಬಿಜೆಪಿಯತ್ತ ಬೊಟ್ಟುಮಾಡಿ ತೋರಿಸುತ್ತಿವೆ.

ಸಿಬಿಐ ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಣ ಜಟಾಪಟಿಗೂ ಕಾರಣವಾಗಿದೆ. ಸಿಬಿಐನ ವ್ಯಾಪ್ತಿ ದೆಹಲಿಗೆ ಮಾತ್ರ ಸೀಮಿತವಾಗಿರುವ ಕಾರಣ, ಹೊರ ರಾಜ್ಯಗಳಲ್ಲಿ ತನಿಖೆ ನಡೆಸಲು ಮತ್ತು ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರಗಳ ಅನುಮತಿ ಪಡೆದುಕೊಳ್ಳಬೇಕು. ಕೇಂದ್ರ ಸರ್ಕಾರವು ಸಿಬಿಐ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸುತ್ತಿರುವ ವಿರೋಧ ಪಕ್ಷಗಳ ರಾಜ್ಯ ಸರ್ಕಾರಗಳು ಅಂತಹ ಅನುಮತಿಯನ್ನು ವಾಪಸ್ ಪಡೆದುಕೊಂಡಿವೆ.

ಆದಾಯ ತೆರಿಗೆ ಇಲಾಖೆಗೂ ಮಸಿ

ಕೇಂದ್ರ ಸರ್ಕಾರವು ಆದಾಯ ತೆರಿಗೆ ಇಲಾಖೆಯನ್ನೂ ದುರ್ಬಳಕೆ ಮಾಡಿಕೊಂಡು, ವಿರೋಧ ಪಕ್ಷಗಳ ನಾಯಕರನ್ನು ಹತ್ತಿಕ್ಕಲು ಯತ್ನಿಸುತ್ತಿದೆ ಎಂಬ ಆರೋಪವೂ ಇದೆ. ಈ ಆರೋಪಕ್ಕೆ ಪೂರಕ ಎಂಬಂತೆಯೇ ಮಹಾಲೇಖಪಾಲರು (ಸಿಎಜಿ) ವರದಿ ನೀಡಿದ್ದರು.

'ತನಗೆ ಬಂದ ದೂರನ್ನು ಪರಿಶೀಲಿಸುವ ಗೋಜಿಗೆ ಹೋಗದೆಯೇ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ ಮತ್ತು ಶೋಧ ಕಾರ್ಯ ನಡೆಸಿದ್ದಾರೆ. ಶೋಧ ಕಾರ್ಯ ನಡೆಸಿದಾಗ ಪತ್ತೆಯಾದ ಹಣ/ಸಂಪತ್ತನ್ನು ತೆರಿಗೆ ವ್ಯಾಪ್ತಿಗೆ ತಂದರೆ, ಬರಬಹುದಾದ ತೆರಿಗೆಯನ್ನು ಅಂದಾಜಿಸಲಾಗುತ್ತದೆ. 2014-15ರಿಂದ 2017-18ರ ಅವಧಿಯಲ್ಲಿ ದೇಶದಲ್ಲಿ ಹೀಗೆ ಶೋಧ ಕಾರ್ಯ ನಡೆಸಿ, ಅಂದಾಜಿಸಲಾದ ತೆರಿಗೆ ಹಣದಲ್ಲಿ ಶೇ 75ಕ್ಕೂ ಹೆಚ್ಚು ಮೊತ್ತವು ತೆರಿಗೆ ವ್ಯಾಪ್ತಿಗೆ ಬರುವುದೇ ಇಲ್ಲ ಎಂಬುದು ನ್ಯಾಯಾಲಯದಲ್ಲಿ ಸಾಬೀತಾಗಿದೆ. ಶೋಧಕಾರ್ಯದ ನಂತರ ತೆರಿಗೆ ಅಂದಾಜಿಸುವಲ್ಲಿ ಆದಾಯ ತೆರಿಗೆ ಇಲಾಖೆ ಎಡವಿದೆ' ಎಂದು ಸಿಎಜಿ ವರದಿಯಲ್ಲಿ ಹೇಳಲಾಗಿತ್ತು. '2014-15ರಿಂದ 2017-18ರ ಅವಧಿಯಲ್ಲಿ ಇಲಾಖೆಯ ಅಧಿಕಾರಿಗಳ ವಿವಿಧ ತಂಡಗಳು ನಡೆಸಿರುವ ಶೋಧಕಾರ್ಯ ಮತ್ತು ಹೆಚ್ಚುವರಿ ತೆರಿಗೆ ಅಂದಾಜು ಪ್ರಕರಣಗಳಲ್ಲಿ, ನ್ಯಾಯಾಲಯಕ್ಕೆ ಬಂದ ಪ್ರಕರಣಗಳನ್ನು ಲೆಕ್ಕಪರಿಶೋಧನೆಗೆ ತೆಗೆದುಕೊಳ್ಳಲಾಗಿತ್ತು. ಈ ಪ್ರಕರಣಗಳಲ್ಲಿ ₹24,965 ಕೋಟಿ ಹೆಚ್ಚುವರಿ ತೆರಿಗೆಯನ್ನು ಅಂದಾಜು ಮಾಡಲಾಗಿತ್ತು. ಆದರೆ ನ್ಯಾಯಾಲಯದ ವಿಚಾರಣೆ ಮತ್ತು ತೀರ್ಪಿನ ನಂತರ ₹5,857 ಕೋಟಿ ಹೆಚ್ಚುವರಿ ಅಂದಾಜು ತೆರಿಗೆಯಷ್ಟೇ ಆದಾಯ ತೆರಿಗೆ ಇಲಾಖೆಗೆ ಬಂತು. ₹19,108 ಕೋಟಿಯಷ್ಟು ಹೆಚ್ಚುವರಿ ಅಂದಾಜು ತೆರಿಗೆಯು ಅಸೆಸ್ ಅಧಿಕಾರಿಗಳ ಕಲ್ಪನೆಯ ಪ್ರತಿಫಲ' ಎಂದೇ ಸಿಎಜಿ ಹೇಳಿತ್ತು.ಆದಾಯ ತೆರಿಗೆ ಇಲಾಖೆಯನ್ನು ಕೇಂದ್ರ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬುದನ್ನೇ ಇವೆಲ್ಲವೂ ಸೂಚಿಸುತ್ತವೆ.

ಆಧಾರ: ಪಿಟಿಐ, ಕೇಂದ್ರ ಹಣಕಾಸು ಸಚಿವಾಲಯವು ಲೋಕಸಭೆ ಮತ್ತು ರಾಜ್ಯಸಭೆಗೆ ನೀಡಿದ ಮಾಹಿತಿಗಳು, ರಾಯಿಟರ್ಸ್, ಸಿಎಜಿ ವರದಿ

ಸಿನಿ ಬಿಟ್ಸ್

ಸೆಟ್ಟೇರಿದ 'ಸಿದ್ಲಿಂಗು–2'

ಲೂಸ್ ಮಾದ ಯೋಗಿ, ರಮ್ಯಾ ಜೋಡಿಯಾಗಿ ನಟಿಸಿದ್ದ 'ಸಿದ್ಲಿಂಗು' ಹೊಸ ರೀತಿಯ ನಿರೂಪಣೆಯಿಂದ ಜನಮನ್ನಣೆ ಗಳಿಸಿತ್ತು. ಆ ಸಿನಿಮಾ ತೆರೆಕಂಡು 12 ವರ್ಷಗಳ ಬಳಿಕ 'ಸಿದ್ಲಿಂಗು-2' ಸೆಟ್ಟೇರಿದೆ. 'ತೋತಾಪುರಿ' ಬಳಿಕ ನಿರ್ದೇಶಕ ವಿಜಯ್ ಪ್ರಸಾದ್ 'ಸಿದ್ಲಿಂಗು' ಸೀಕ್ವೆಲ್ ಕಥೆಯನ್ನು ಕೈಗೆತ್ತಿಕೊಂಡಿದ್ದಾರೆ.

'ಜಮಾಲಿಗುಡ್ಡ' ಚಿತ್ರದ ನಿರ್ಮಾಪಕ ಶ್ರೀಹರಿ ರೆಡ್ಡಿ ನಿಹಾರಿಕಾ ಫಿಲ್ಮ್ಸ್ ಅಡಿಯಲ್ಲಿ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. 'ಸಿದ್ಲಿಂಗು ಹಾಸ್ಯ, ಸಂಬಂಧಗಳು, ಪ್ರೀತಿ, ಭಾವನೆಗಳಿಂದ ಜನರ ಮೆಚ್ಚುಗೆ ಗಳಿಸಿತ್ತು. ಇಲ್ಲಿ ಬರೀ ಮೀನಿಂಗ್ ಇರಲಿದೆ. ನನ್ನ ಹಿಂದಿನ ಸಿನಿಮಾಗಳಂತೆ ಡಬಲ್ ಮೀನಿಂಗ್ ಇರುವುದಿಲ್ಲ' ಎಂದರು ನಿರ್ದೇಶಕರು.

ಅಂದಹಾಗೆ ಈ ಚಿತ್ರದಲ್ಲಿ ರಮ್ಯಾ ಜಾಗಕ್ಕೆ 'ಕಿರಗೂರಿನ ಗಯ್ಯಾಳಿಗಳು' ಖ್ಯಾತಿಯ ಸೋನುಗೌಡ ಬಂದಿದ್ದಾರೆ. ಮೊದಲ ಭಾಗದಲ್ಲಿ ಜನಪ್ರಿಯವಾಗಿದ್ದ ಆಂಡಾಳಮ್ಮನ ಪಾತ್ರ ಕೂಡ ಇರಲಿದೆ ಎಂದು ಚಿತ್ರತಂಡ ಹೇಳಿದೆ.

ಅನೂಪ್ ಸೀಳಿನ್ ಸಂಗೀತ, ಅರಸು ಅಂತಾರೆ ಸಾಹಿತ್ಯ ಚಿತ್ರಕ್ಕಿರಲಿದ್ದು, ಪದ್ಮಜಾ ರಾಜ್, ಆಂಟೋನಿ ಕಮಲ್, ಮಹಾಂತೇಶ್ ಸೇರಿದಂತೆ ದೊಡ್ಡ ತಾರಾಗಣವಿದೆ. ಏಪ್ರಿಲ್ ಮೊದಲ ವಾರದಿಂದ ಚಿತ್ರೀಕರಣ ಶುರುವಾಗಲಿದ್ದು, ಬೆಂಗಳೂರು ಹಾಗೂ ಮೈಸೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ನಡೆಸಲು ತಂಡ ನಿರ್ಧರಿಸಿದೆ. ❖


ಸೋನುಗೌಡ, ಯೋಗಿ

'ಅಮ್ಮನ ಲಾಲಿ' ಹಾಡಿದ ಭವ್ಯ

ನಟಿ ಭವ್ಯ ಮುಖ್ಯಭೂಮಿಕೆಯಲ್ಲಿರುವ 'ಅಮ್ಮನ ಲಾಲಿ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಹಿರಿಯ ನಟ, ನಿರ್ದೇಶಕ ಎಂ.ಡಿ.ಕೌಶಿಕ್ ಕಾದಂಬರಿ ಆಧಾರಿತ ಈ ಚಿತ್ರಕ್ಕೆ ಆ್ಯಕ್ಷನ್-ಕಟ್ ಹೇಳುತ್ತಿದ್ದಾರೆ. ಜೊತೆಗೆ ನಿರ್ಮಾಣದ ಹೊಣೆಯನ್ನೂ ಹೊತ್ತುಕೊಂಡಿದ್ದಾರೆ.

'ಲೇಖಕಿ ಗೀತಾ.ಡಿ.ಎನ್ ಬರೆದಿರುವ ಕಥೆಯು ಇವತ್ತಿನ ಕಾಲಘಟ್ಟದಲ್ಲಿ ಕೆಲವೊಂದು ಮನೆಯಲ್ಲಿ ನಡೆಯುವ ಘಟನಾವಳಿಗಳು, ತಾಯಿ ಮಗಳ ನಡುವಿನ ಆರೋಗ್ಯಕರ ವಾಗ್ವಾದಗಳು, ಸಮಸ್ಯೆಗಳನ್ನು ಹೊಂದಿದೆ. ಇವತ್ತಿನ ಕಾಲಘಟ್ಟಕ್ಕೆ ಹೇಳಲೇ ಬೇಕಾದ ಕಥೆಯಿದು' ಎಂದರು ನಿರ್ದೇಶಕ ಎಂ.ಡಿ.ಕೌಶಿಕ್. ಚಿತ್ರದಲ್ಲಿ ಭವ್ಯ ಅವರ ಪತಿಯಾಗಿ ಯತಿರಾಜ್ ಕಾಣಿಸಿಕೊಂಡಿದ್ದಾರೆ. ಪದ್ಮ, ರೂಪಾ, ಶರತ್ ಮುಂತಾದವರು ನಟಿಸುತ್ತಿದ್ದಾರೆ. ರವಿ.ಇ.ದತ್ತಾತ್ರೇಯ ನಾಲ್ಕು ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದು, ಪಿ.ವಿ.ಆರ್.ಸ್ವಾಮಿ ಛಾಯಾಚಿತ್ರಗ್ರಹಣವಿದೆ. ಬೆಂಗಳೂರು, ಲಾಸ್‌ಏಂಜಲಿಸ್, ಕ್ಯಾಲಿಫೋರ್ನಿಯಾದಲ್ಲಿ ಚಿತ್ರೀಕರಣ ನಡೆಸಲು ತಂಡ ನಿರ್ಧರಿಸಿದೆ. ❖



ಭವ್ಯ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಇತ್ತೀಚೆಗೆ 2024 ಆವೃತ್ತಿಯ ಐಪಿಎಲ್ ಆರಂಭಗೊಂಡಿದೆ. ಇದರ ಮೊದಲ ಪಂದ್ಯ ಆರ್‌ಬಿಸಿ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ಮಧ್ಯೆ ಮಾರ್ಚ್ 22ರಂದು ನಡೆಯಿತು. ಈ ಪಂದ್ಯದ ವೇಳೆ ಆರ್‌ಬಿಐಯ ವಿರಾಟ್ ಕೊಹ್ಲಿ ಅವರು ತಮ್ಮ ಮೊಬೈಲ್ ನೋಡುತ್ತಿರುವ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿರಾಟ್ ಅವರು ರಾಹುಲ್ ಗಾಂಧಿ ಅವರ ಪತ್ರಿಕಾಗೋಷ್ಠಿಯೊಂದನ್ನು ನೋಡುತ್ತಿದ್ದಾರೆ ಎಂದು ಜಾಲತಾಣಗಳ ಪೋಸ್ಟ್‌ಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಈ ಚಿತ್ರವನ್ನು ಕಾಂಗ್ರೆಸ್ ಪರ ಇರುವ ಹಲವು ಎಕ್ಸ್ ಖಾತೆಗಳು ಹಂಚಿಕೊಂಡಿವೆ. ಆದರೆ, ಇದು ತಿರುಚಿದ ಚಿತ್ರವಾಗಿದೆ.





ಕಾಂಗ್ರೆಸ್ ನವದೆಹಲಿಯಲ್ಲಿ ತನ್ನ ಬ್ಯಾಂಕ್ ಖಾತೆಯನ್ನು ಕೇಂದ್ರ ಸರ್ಕಾರವು ನಿಷ್ಕ್ರಿಯಗೊಳಿಸಿದೆ ಎಂದು ಆರೋಪಪಿಸಿ ಪತ್ರಿಕಾಗೋಷ್ಠಿಯನ್ನು ಮಾರ್ಚ್21ರಂದು ನಡೆಸಿತ್ತು. ಈ ಪತ್ರಿಕಾಗೋಷ್ಠಿಯಲ್ಲಿ ರಾಹುಲ್ ಅವರೂ ಮಾತನಾಡಿದ್ದರು. ಇದೇ ಪತ್ರಿಕಾಗೋಷ್ಠಿಯನ್ನು ವಿರಾಟ್ ಅವರು ನೋಡುತ್ತಿದ್ದಾರೆ ಎಂದು ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ವಿರಾಟ್ ಅವರು ಈ ಪತ್ರಿಕಾಗೋಷ್ಠಿಯನ್ನು ನೋಡುತ್ತಿರಲಿಲ್ಲ. ವಿರಾಟ್ ಅವರ ಅಭಿಮಾನಿಗಳ ವೆರಿಫೈಡ್ ಖಾತೆ ವಿರಾಟ್‌ಗ್ಯಾಂಗ್(ViratGang) ವಿರಾಟ್ ಅವರ ಚಿತ್ರವೊಂದನ್ನು ಹಂಚಿಕೊಂಡಿದೆ. ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರಕ್ಕೂ ಈ ಚಿತ್ರಕ್ಕೂ ಹೋಲಿಕೆ ಇದೆ. ಆದರೆ, ವಿರಾಟ್ ಅವರ ಮೊಬೈಲ್ ಸ್ಕ್ರೀನ್ ಅನ್ನು ತಿರುಚಿ ರಾಹುಲ್ ಅವರ ಚಿತ್ರವನ್ನು ಜೋಡಿಸಲಾಗಿದೆ ಎಂದು 'ನ್ಯೂಸ್‌ಚಕ್ಕರ್' ಹಾಗೂ 'ಬೂಮ್‌ಲೈವ್' ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

ಗುಂಡಣ್ಣ



ನಮ್ಮ ಭವಿಷ್ಯ ನಮ್ಮ ಕೈಯಲ್ಲೇ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಂದು ಊರಿನಲ್ಲಿ ಒಬ್ಬ ತತ್ವಜ್ಞಾನಿ ಇದ್ದ. ಅವನು ಹೇಳಿದ್ದೆಲ್ಲ ನಿಜವಾಗುತ್ತಿತ್ತು. ಆ ಊರಿನ ಇಬ್ಬರು ಕಿಡಿಗೇಡಿ ಹುಡುಗರಿಗೆ ಏನಾದರೂ ಮಾಡಿ ಇವನ ಬಾಯಿಂದ ಸುಳ್ಳು ಹೊರಡಿಸಬೇಕೆಂಬ ಕೆಟ್ಟ ಆಸೆ. ಅದಕ್ಕಾಗಿ ಅವರು ಒಂದು ಉಪಾಯ ಮಾಡಿದರು. ಒಂದು ಪುಟಾಣಿ ಹಕ್ಕಿಮರಿಯನ್ನು ತಮ್ಮ ಮುಷ್ಟಿಯೊಳಗೆ ಹಿಡಿದುಕೊಂಡು ಹೋಗಿ ಇದರೊಳಗೆ ಇರುವುದೇನು ಎಂದು ತತ್ವಜ್ಞಾನಿಯನ್ನು ಪ್ರಶ್ನಿಸಿದರು. ಎಲ್ಲವನ್ನು ಬಲ್ಲವನಾದ ಆತ 'ಅದೊಂದು ಪುಟ್ಟ ಹಕ್ಕಿಮರಿ' ಎಂದು ಉತ್ತರಿಸಿದ. ಮುಂದಿನ ಪ್ರಶ್ನೆಗೆ ಅವನು ಕೊಡುವ ಉತ್ತರ ಸುಳ್ಳಾಗಲೇಬೇಕು ಆ ರೀತಿ ಇತ್ತು, ಅವರ ಯೋಜನೆ. 'ಅದು ಬದುಕಿದೆಯೋ ಇಲ್ಲ ಸತ್ತಿದೆಯೋ' ಎಂಬುದಾಗಿತ್ತು ಅವರ ಪ್ರಶ್ನೆ. ತತ್ವಜ್ಞಾನಿ ಹೇಳುವ ಉತ್ತರವನ್ನು ಸುಳ್ಳು ಮಾಡಲು ಆತ ಹಕ್ಕಿಮರಿ ಬದುಕಿದೆ ಎಂದರೆ, ಅದನ್ನು ಆ ಕಿಡಿಗೇಡಿ ಹುಡುಗರು ಮುಷ್ಟಿಯಿಂದ ಹಿಚುಕಿ, ಸಾಯಿಸಿಬಿಡುತ್ತಿದ್ದರು. ಅದು ಸತ್ತಿದೆ ಎಂದರೆ ಹಾಗೆ ಹಾರಲು ಬಿಡುತ್ತಿದ್ದರು. ಇವರ ಉದ್ದೇಶವನ್ನರಿತ ತತ್ವಜ್ಞಾನಿ 'ಅದರ ಭವಿಷ್ಯ ನಿಮ್ಮ ಕೈನಲ್ಲೇ ಇದೆ' ಎಂದು ಉತ್ತರಿಸಿದ.

ನಮ್ಮ ಭವಿಷ್ಯ ನಮ್ಮ ಕೈಯಲ್ಲಿ ಇರುತ್ತದೆ. ಅದನ್ನು ಹಿಸುಕಿ ಸಾಯಿಸುವ ಅಥವಾ ಸ್ವಚ್ಛಂದವಾಗಿ ಹಾರಿ ಬಿಡುವ ಶಕ್ತಿ ನಮ್ಮ ಕೈನಲ್ಲೇ ಇದೆ. ನಾವೇ ನಮ್ಮ ಭವಿಷ್ಯದ ಶಿಲ್ಪಿಗಳು. ನಮ್ಮೊಳಗಿರುವ ಶಿಲೆಯನ್ನು ವ್ಯಕ್ತಿತ್ವವೆಂಬ ಸುಂದರ ಶಿಲ್ಪವಾಗಿ ರೂಪಿಸಿಕೊಳ್ಳಬೇಕಾದವರು ನಾವೇ. ಅದಕ್ಕೆ ಅತಿ ಮುಖ್ಯವೆಂದರೆ ಸಿಕ್ಕಿರುವ ಸದವಕಾಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಮನಃಸ್ಥಿತಿ. ಇದನ್ನು ಇಂಗ್ಲಿಷ್‌ನಲ್ಲಿ Grabbing the opportunity ಎನ್ನುತ್ತಾರೆ. ನಾನು ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ತರಬೇತಿಯನ್ನು ನೀಡುವಾಗ, ಕಾರ್ಯಕ್ರಮ ಮುಗಿದ ನಂತರ ನಿಮ್ಮಲ್ಲಿ ಯಾರಾದರೂ ಕಾರ್ಯಕ್ರಮದ ಕುರಿತು ನಿಮ್ಮ ಅನಿಸಿಕೆಗಳನ್ನು ಅಭಿಪ್ರಾಯಗಳನ್ನು ಹೇಳಿ ಅಥವಾ ಪ್ರಶ್ನೆಗಳಿದ್ದರೆ ಕೇಳಿ ಎಂದು ಹೇಳುತ್ತೇನೆ. ಆದರೆ ಬಹುಪಾಲು ಕಡೆಗಳಲ್ಲಿ ಈ ಮುಕ್ತ ಆಹ್ವಾನವನ್ನು, ಅವಕಾಶವನ್ನು ಯಾರೂ ಸ್ವೀಕರಿಸುವುದೇ ಇಲ್ಲ. ನಾನೇ ಒತ್ತಾಯ ಮಾಡಿ ಕರೆದ ನಂತರ ಕೆಲವರು ಮುಂದೆ ಬರುತ್ತಾರೆ.

ಇವೆಲ್ಲವೂ ನಮ್ಮ ಭವಿಷ್ಯವನ್ನು ನಾವು ರೂಪಿಸಿಕೊಳ್ಳಲು ಸಿಗುವ ಚಿಕ್ಕ ಚಿಕ್ಕ ಅವಕಾಶಗಳು. ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಳ್ಳುವವರು ತಮ್ಮ ಭವಿಷ್ಯವನ್ನು ಸಹ ಸುಂದರವಾಗಿ ರೂಪಿಸಿಕೊಳ್ಳುತ್ತಾರೆ. ನಮ್ಮ ಭವಿಷ್ಯ ನಮ್ಮ ಕೈ ರೇಖೆಯಾಗಲಿ, ಹಣೆ ಬರಹದಲ್ಲಾಗಲಿ ಖಂಡಿತ ಅಡಗಿಲ್ಲ. ಅದು ಸೂಕ್ತ ಸಮಯದಲ್ಲಿ ನಾವು ತೆಗೆದುಕೊಳ್ಳುವ ಸರಿಯಾದ ನಿರ್ಧಾರವನ್ನು ಅವಲಂಬಿಸಿರುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮಾರ್ಚ್ 25, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪೂರ್ಣಿಮಾ ಗಂ. 12-30 ನಕ್ಷತ್ರ: ಉತ್ತರಫಲ್ಗುನಿ ಗಂ. 10-38 ಯೋಗ: ವೃದ್ಧಿ ಗಂ. 21-30 ಕರಣ: ಬವ ಗಂ. 12-30, ಮೀನ ಮಾಸದ 11 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 3.
ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-34 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 14 ರಂಜಾನ್
ದಿನ ವಿಶೇಷ : ಹೋಳಿ, ಡೋಲಾಯಾತ್ರಾ, ಶ್ರೀ ಚೈತನ್ಯರ ಜನ್ಮದಿನ
ಅದೃಷ್ಟ ಸಂಖ್ಯೆ : 3, 6

ಮೇಷ: ಔಷಧ ವ್ಯಾಪಾರಿಗಳಿಗೆ ಲಾಭದ ದಿನ. ಆಟಿಕೆಗಳ ಅಥವಾ ಕ್ರೀಡಾ ವಸ್ತುಗಳ ವ್ಯಾಪಾರಿಗಳಿಗೆ ಲಾಭದಾಯಕ ಬೆಳವಣಿಗೆ. ಆಂಜನೇಯನ ಅನುಗ್ರಹ ಪಡೆದಲ್ಲಿ ಮಾನಸಿಕ ಧೈರ್ಯ ಹೆಚ್ಚಾಗುವುದು.

ವೃಷಭ: ಮಕ್ಕಳ ವಿಷಯದಲ್ಲಿ ಕಾಳಜಿಯನ್ನು ತೋರಿದಲ್ಲಿ ಭವಿಷ್ಯ ಉತ್ತಮಗೊಳ್ಳಲಿದೆ. ಕ್ರೀಡಾಸಕ್ತರಿಗೆ ಉತ್ತಮ ಸಮಯ ಮತ್ತು ಅವಕಾಶ ಸಿಗಲಿದೆ. ವೈವಾಹಿಕ ಜೀವನಕ್ಕೆ ಸಮಯ ಕೂಡಿಬರಲಿದೆ.

ಮಿಥುನ: ಆಪ್ತರ ಸಲಹೆ ತೆಗೆದುಕೊಂಡು ಮಾಡಿದ ಕೆಲಸ ಸಮಸ್ಯೆ ಇಲ್ಲದೆ ಮುಕ್ತಾಯ ಹಂತ ತಲುಪುವುದು. ತಾಂತ್ರಿಕ ಕ್ಷೇತ್ರದಲ್ಲಿ ನೂತನ ಉದ್ಯೋಗ ಸಂಪಾದನೆಗೆ ಹೊರಟಂಥ ವ್ಯಕ್ತಿಗಳಿಗೆ ಈ ದಿನ ಅಭಿವೃದ್ಧಿದಾಯಕ ಅನಿಸಲಿದೆ.

ಕರ್ಕಾಟಕ: ಜಮೀನು ಖರೀದಿ ಅಥವಾ ಜಮೀನಿನ ಗುತ್ತಿಗೆಯಂಥ ವ್ಯವಹಾರಗಳಿಂದ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವೈದ್ಯ ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಪರಿಶ್ರಮ ವಹಿಸುವುದು ಅಗತ್ಯವಾಗುತ್ತದೆ.

ಸಿಂಹ: ನೀರಿಗೆ ಸಂಬಂಧಿಸಿದ ಸಮಸ್ಯೆಗಳು ನಿವಾರಣೆಗೊಳ್ಳುವ ಹಂತಕ್ಕೆ ಬರಲಿದೆ. ಸವಾಲೊಡ್ಡುವ ಸನ್ನಿವೇಶಗಳು ಸಹೋದರಿ ಅಥವಾ ಭಾವನ ಬಳಿಯಲ್ಲಿ ಎದುರಾಗಬಹುದು. ಹೈನು ಉತ್ಪನ್ನಗಳಿಂದ ಆದಾಯ ಪಡೆಯುವಿರಿ.

ಕನ್ಯಾ: ಪರಿಸ್ಥಿತಿಗಳು ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ಸಹೋದರರಿಗೋಸ್ಕರವಾಗಿ ತ್ಯಾಗ ಮಾಡುವ ಮನೋಭಾವ ಬೆಳೆಸಿಕೊಳ್ಳಿ. ಋಣಾತ್ಮಕವಾಗಿ ಚಿಂತಿಸದಿರಿ.

ತುಲಾ: ಬತ್ತದ ಉತ್ಸಾಹ, ಹುಮ್ಮಸ್ಸಿನಿಂದ ಹೊಸ ಅವಕಾಶಗಳನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಕೃಷಿ ಕೆಲಸದಲ್ಲಿನ ಆಯುಧಗಳನ್ನು ಬಳಸುವಾಗ ಅತ್ಯಂತ ಜಾಗ್ರತೆಯಿಂದ ಕೆಲಸ ಮಾಡಿ.

ವೃಶ್ಚಿಕ: ತಾಯಿಯ ಅಥವಾ ಬಾಳ ಸಂಗಾತಿಯ ಮಾತನ್ನು ಮೀರದಿರುವುದು ಲೇಸು. ಉದ್ಯೋಗದಲ್ಲಿ ಎದುರಾಗುವ ಅಯ್ಕೆಯಂಥ ಸಮಸ್ಯೆಗೆ ಈ ದಿನ ಉತ್ತರ ಕಂಡುಕೊಳ್ಳುವುದು ಸ್ವಲ್ಪ ಕಷ್ಟಕರವೆನಿಸುವುದು.

ಧನು: ವ್ಯವಹಾರಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೃಧು ಧೋರಣೆಯಿಂದ ಕೆಲವು ಮಂದಿ ನಿಮ್ಮ ವಿರುದ್ಧ ಧ್ವನಿ ಎತ್ತುವ ಸಾಧ್ಯತೆ ಇದೆ. ಮನೆಯಲ್ಲಿ ಗುರುಹಿರಿಯರ ಶುಭ ಆಶೀರ್ವಾದದಿಂದ ಮಂಗಳ ಕೆಲಸ ನಡೆಯಲಿದೆ.

ಮಕರ: ಹೊಸ ಮನೆಯನ್ನು ಕೊಳ್ಳುವ ಬಗ್ಗೆ ದಲ್ಲಾಳಿಗಳೊಂದಿಗೆ ಮಾತುಕತೆ ನಡೆಸಬಹುದು. ಕೌಟುಂಬಿಕವಾಗಿ ಕೆಟ್ಟುಹೋದಂತಹ ಸಂಬಂಧಗಳು ಇಂದು ಮತ್ತೆ ಮರಳಿ ಸರಿಯಾಗಬಹುದು. ಸ್ವಲ್ಪ ಜಾಣತನವನ್ನು ಪ್ರದರ್ಶಿಸಿ.

ಕುಂಭ: ಅಬಕಾರಿ ಮತ್ತು ಕಂದಾಯ ಇಲಾಖೆಯವರಿಗೆ ಉದ್ಯೋಗದಲ್ಲಿ ಹೆಸರು, ಕೀರ್ತಿಗಳನ್ನು ಕಾಪಾಡಿಕೊಳ್ಳಲು ಕಷ್ಟವಾಗಲಿದೆ. ವಿದ್ಯುತ್ ಸ್ಥಾವರದ ಕಾರ್ಮಿಕರು ವಿದ್ಯುತ್ ಶಕ್ತಿಯ ಬಳಕೆ ಮಾಡುವಾಗ ಗಮನವಿರಲಿ.


ಮೀನ: ಯಶಸ್ಸಿಗೆ ಕಾರಣರಾದವರನ್ನು ಮತ್ತು ಹೆಗಲು ಕೊಟ್ಟವರನ್ನು ಕಾರ್ಯ ಮುಗಿಯುವವರೆಗೆ ಜತೆಯಲ್ಲಿಯೆ ಇರಿಸಿಕೊಳ್ಳಿ. ಅಧಿಕವಾದ ಪ್ರಯತ್ನದಿಂದ ನಿವೇಶನ ಕೊಳ್ಳುವ ನಿಮ್ಮ ಕನಸು ನನಸಾಗಲಿದೆ.

ಪದಬಂಧ 5631

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಹೆದರುವ ವ್ಯಕ್ತಿ (3)
2.ಕನ್ನಡಿಗನ ಬಾಯಲ್ಲಿ ನೈಟ್ರೋಜನ್! (5)
4.ಎದುರಿಗೆ ಮೂರ್ತೀಭವಿಸುವುದು (4)
6.ಚಾವಟಿಯನ್ನು ಹೀಗೂ ಹೇಳುವರು (4)
7.ಮತ ಹಾಕುವಾಗ ಆವರಿಸಿದ ಕತ್ತಲು (2)
9.ಆ ದಿನ ಕಾಣಿಸಿರುವ ಮಂತ್ರಿ (3)
11.ತಿಕ್ಕಲ ಹಿಡಿದಿರುವ ಎಳ್ಳು (2)
13.ಅದೇ ತಾನೆ ಅರಳಿದ ಹೂವು (4)
14.ಕೈಯಲ್ಲಿರಿಸಿಕೊಂಡಿರುವ ಖಡ್ಗ (4)
15.ಕಲಹ ಮಾಡುವ ಸ್ವಭಾವದವಳು (5)
16.ಒದಗಿಸುವಿಕೆಗೆ ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1.ಹಿಂಸೆ ಮಾಡಬಾರದೆಂಬ ವ್ರತ (5)
3.ಅದೇ ತಾನೆ ಮದುವೆಯಾದ ಜೋಡಿ (5)
5.ಪಾವತಿ ಪತ್ರ ಇಲ್ಲಿದೆ (3)
8.ಈತ ಲಗ್ನವಾಗುತ್ತಿರುವವ (5)
10.ಪಾಪಗೈದ ನರನಿಗೆ ಪ್ರಾಪ್ತಿಯಾಗಿರುವ ಲೋಕ (3)
12.ರಾಮನ ಮಗನಿರುವುದಕ್ಕೇ ಈ ಹುರುಪು! (5)



5630ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಲಯಜ 3.ವರಮಾನ 5.ಗಹನ 7.ವಿರಹ 9.ಬಾಲಕ 10.ಪ್ರಭವ 11.ಬಯಕೆ 12.ನಯನ 14.ಕಲಭ 16.ಮಾನ್ಯತೆ 18.ಕಳೆಬರ 19.ನೆರೆಮನೆ

ಮೇಲಿಂದ ಕೆಳಕ್ಕೆ:
1.ಮನವಿ 2.ಜಗ 3.ವನ 4.ನಡುಕ 6.ಹಸಿವೆ 8.ಹಯವದನ 9.ಬಾಲಬಡುಕ 12.ಅನನ್ಯ 13.ನರ್ತಕ 15.ಭಜನೆ 16.ಮಾರ 17.ತೆನೆ

ಸುಡೊಕು 6016

1		9		2			8	
	6				9		5	2
	8			4	5			
2							6	
		4		3				1
5					2			
		5		9			7	6
7			2		6	8		
9	4			7			3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


6015 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ಗುಸುಗುಸು

ನಂಬಿಸಿ 'ಕೈ' ಕೊಟ್ಟ ರೆಡ್ಡಿ

ರಾಜ್ಯಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಿ ತನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಹತ್ತಾರು ಕಡತಗಳನ್ನು ಸಲೀಸಾಗಿ ವಿಲೇವಾರಿ ಮಾಡಿಸಿಕೊಂಡಿದ್ದ ಗಂಗಾವತಿ ಶಾಸಕ ಜಿ. ಜನಾರ್ದನ ರೆಡ್ಡಿ, ಈಗ ತಮ್ಮ ನೇತೃತ್ವದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷವನ್ನೇ (ಕೆಆರ್‌ಪಿಪಿ) ಬಿಜೆಪಿಯೊಳಗೆ ವಿಲೀನ ಮಾಡಲು ನಿರ್ಧರಿಸಿದ್ದಾರೆ. ರೆಡ್ಡಿ ಅವರ ಈ ನಡೆ ಆಡಳಿತಾರೂಢ 'ಕೈ' ಪಾಳಯ ಮತ್ತು ವಿರೋಧ ಪಕ್ಷದಲ್ಲಿರುವ 'ಕಮಲ ಪಡೆ' ಇಬ್ಬರನ್ನೂ ಏಕಕಾಲಕ್ಕೆ ದಿಗ್ಭ್ರಾಂತರಾಗುವಂತೆ ಮಾಡಿದೆಯಂತೆ.



ಬಿಜೆಪಿ ವಿರುದ್ಧ ಬುಸುಗುಡುತ್ತಲೇ ಕೆಆರ್‌ಪಿಪಿ ಕಟ್ಟಿದ್ದ ರೆಡ್ಡಿ, ಗಂಗಾವತಿಯಿಂದ ಗೆದ್ದು ಬಂದರು. ಮತ್ತೆ ಬಿಜೆಪಿಯೊಳಕ್ಕೆ ಪ್ರವೇಶಿಸಲು ಸತತ ಪ್ರಯತ್ನ ನಡೆಸುತ್ತಲೇ ಇದ್ದರು. ಮಂಡ್ಯ ಜಿಲ್ಲೆಯ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜದ ವಿವಾದ ಕಾವು ಪಡೆದಿದ್ದಾಗ ಬಿಜೆಪಿ ನಾಯಕರ ಜತೆ ಅಲ್ಲಿಗೆ ತೆರಳಿ ಕೇಸರಿ ಶಾಲು ಧರಿಸಿಕೊಂಡು ಮೆರವಣಿಗೆ ನಡೆಸಿದ್ದರು. 'ರೆಡ್ಡಿ ಬಿಜೆಪಿ ಸೇರಲು ಪ್ರಯತ್ನಿಸುತ್ತಿದ್ದಾರೆ. ಆದರೆ, ರೆಡ್ಡಿ ಮನವಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿರಸ್ಕರಿಸಿದ್ದಾರೆ' ಎಂದು ಬಿಜೆಪಿಯ ಪ್ರಮುಖ ನಾಯಕರೇ ಹೇಳುತ್ತಿದ್ದರು. ನಂತರ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ರೆಡ್ಡಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸಿದ್ದರು. ಅತ್ತ ಬಿಜೆಪಿಯವರು ರೆಡ್ಡಿಯವರ ಮತ ಪಡೆಯುವ ಪ್ರಯತ್ನವನ್ನೂ ನಡೆಸಿರಲಿಲ್ಲ. ರಾಜ್ಯಸಭೆ ಚುನಾವಣೆಯ ಅವಕಾಶ ಬಳಸಿಕೊಂಡ ರೆಡ್ಡಿ, ಕಾಂಗ್ರೆಸ್ ಸರ್ಕಾರದಿಂದ ದೊಡ್ಡ ಮೊತ್ತದ ಅನುದಾನ ಪಡೆದುಕೊಂಡಿದ್ದಾರೆ ಎಂಬ ಮಾತುಗಳು ವಿಧಾನಸಭೆಯ ಮೊಗಸಾಲೆಯಲ್ಲಿ ಓಡಾಡುತ್ತಿದ್ದವು.

ಸಹೋದರರ ನಡುವೆ ಸಂಘರ್ಷ ತಂದಿಕ್ಕಿದ್ದಾರೆ ಎಂಬ ಕಾರಣಕ್ಕೆ ಬಿ. ಶ್ರೀರಾಮುಲು ವಿರುದ್ಧ ರೆಡ್ಡಿ ಮುನಿಸಿಕೊಂಡಿದ್ದರು. ಬಳ್ಳಾರಿಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಶ್ರೀರಾಮುಲು ಕಣಕ್ಕಿಳಿದರೆ ಸೋಲಿಸಲು ಸಜ್ಜಾಗಿದ್ದಾರೆ ಎಂಬ ಸುದ್ದಿ ಜೋರಾಗಿತ್ತು. ಇದರಿಂದ ಕಾಂಗ್ರೆಸ್ ನಾಯಕರ ಖುಷಿ ಇಮ್ಮಡಿಸಿತ್ತು. ಈಗ ದಿಢೀರನೆ ಪಕ್ಷವನ್ನೇ ಬಿಜೆಪಿಯಲ್ಲಿ ವಿಲೀನಗೊಳಿಸಲು ರೆಡ್ಡಿ ನಿರ್ಧರಿಸಿದ್ದಾರೆ. ಬಿಜೆಪಿ ನಾಯಕರು ಮತ್ತು ಜನಾರ್ದನ ರೆಡ್ಡಿ ಇಬ್ಬರ ನಿಲುವಿನಲ್ಲೂ ಹಠಾತ್ ಬದಲಾವಣೆ ತಂದ 'ಅಸ್ತ್ರ' ಯಾವುದು ಎಂಬುದು ಮಾತ್ರ ನಿಗೂಢವಾಗಿಯೇ ಉಳಿದಿದೆ.

ಎಂಥಾ ಮಾತು!



ಬಿಜೆಪಿಯವರ ಮನೆ ಹಾಳಾಗ. ಇವರು ಯಾವಾಗಲಾದರೂ ಒಂದು ದಿನ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದಾರಾ? 1925ರಲ್ಲಿ ಆರ್‌ಎಸ್‌ಎಸ್ ಆರಂಭವಾಯಿತು. ಅದ್ಯಾರೋ ಹೆಡಗೇವಾರ್, ಗುರೂಜಿ ಅನ್ತಾರಲ್ಲ, ಅವರೇನಾದರೂ ಒಂದು ದಿನ ಸ್ವಾತಂತ್ರ್ಯ ಹೋರಾಟ ಮಾಡಿದ್ದಾರಾ? ಭಾರತ ಮಾತೆ ಮಕ್ಕಳು ಅಂತ ಬೇರೆ ಹೇಳಿಕೊಳ್ಳುತ್ತಾರೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ನಾವು (ಕಾಂಗ್ರೆಸ್) ಭಾರತ ಮಾತೆ ಮಕ್ಕಳಲ್ವಾ?

ಸಿದ್ದರಾಮಯ್ಯ, ಮುಖ್ಯಮಂತ್ರಿ



ಕಾಂಗ್ರೆಸ್‌ನವರ ಮನೆ ಹಾಳಾಗಬೇಕು. ದೇಶದಲ್ಲಿ ಭಯೋತ್ಪಾದಕರ ಹಾವಳಿ ಜೋರಾಗಿದ್ದೇ ಕಾಂಗ್ರೆಸ್ ಮನೆ ಹಾಳರಿಂದ. ಇವರಿಂದಲೇ ಜಮ್ಮು–ಕಾಶ್ಮೀರದಲ್ಲಿ ಗ್ರೆನೇಡ್, ಮಿಸೈಲ್, ಕಲ್ಲು ತೂರಾಟ ಆರಂಭವಾಗಿದ್ದು. ಮೋದಿ ಆಡಳಿತ ಬಂದ ಮೇಲೆ ಭಯೋತ್ಪಾದಕರು ಬಾಲ ಮುದುಡಿ ಕುಳಿತಿದ್ದಾರೆ. ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿಸಿದ ಕಾಂಗ್ರೆಸ್‌ನವರು ಮನೆಹಾಳರೇ ಅಲ್ಲವೇ?

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಕ್ಷೇತ್ರ ಮಹಾತ್ಮೆ

ದಾವಣಗೆರೆ



'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು, ಒಮ್ಮೆ ಚುನಾವಣೆಯಲ್ಲಿ ಸೋತರೆ ಅಡಿಕೆ ವ್ಯಾಪಾರವೇ ಮಾಡಬಾರದು' ಎಂಬ ಛಲ ಇಟ್ಟುಕೊಂಡೇ ನೆರೆ ಜಿಲ್ಲೆಯ ಭೀಮಸಮುದ್ರದಿಂದ 'ಬೆಣ್ಣೆ' ನಗರಿ ದಾವಣಗೆರೆಗೆ ಬಂದು 1996ಕ್ಕೂ ಮೊದಲು ಇದ್ದ 'ಚನ್ನಯ್ಯ ಒಡೆಯರ್' ಸಾಮ್ರಾಜ್ಯ ಪತನಗೊಳಿಸಿ, 'ಲೋಕ ಸಮರ'ದಲ್ಲಿ ಗೆಲುವು ಸಾಧಿಸಿದ್ದ ಜಿ. ಮಲ್ಲಿಕಾರ್ಜುನಪ್ಪ, ನಂತರ ಅವರ ಪುತ್ರ ಸಿದ್ದೇಶ್ವರ ಅವರು ಮೂರು ದಶಕಗಳಿಂದ ಕ್ಷೇತ್ರದಲ್ಲಿ ಕಮಲ ಬಾಡದಂತೆ ಕಾಪಾಡಿಕೊಂಡಿದ್ದಾರೆ.

ಒಡೆಯರ ಸಾಮ್ರಾಜ್ಯ ಪತನ ಮಾಡಿದ್ದ 'ಸುಪಾರಿ' ವ್ಯಾಪಾರಿಗಳ ಮಣಿಸಲು 'ಕೈ' ಪಡೆಯಿಂದ ಅಂದು 'ಸುಪಾರಿ' ಪಡೆದದ್ದು ಅವರ ಬೀಗರಾದ ಶಾಮನೂರು ಕುಟುಂಬ. 1998ರಲ್ಲಿ ಒಮ್ಮೆ ಮಣಿಸಿದ್ದು ಬಿಟ್ಟರೆ ಅಪ್ಪ (ಶಾಮನೂರು), ಮಗ (ಎಸ್‌ಎಸ್. ಮಲ್ಲಿಕಾರ್ಜುನ) ಮತ್ತೆ ಯಶಸ್ಸು ಕಾಣಲಿಲ್ಲ. ಬೀಗರನ್ನು ಮಣಿಸಲು ಬೀಗತಿಗೆ ರಣವೀಳ್ಯ ಕೊಡುವ ಕೈಪಡೆಯ ಸುಳಿವು ಅರಿತ 'ಭೀಮ' ಪುತ್ರ ಅವರಿಗಿಂತ ಮೊದಲೇ ಮಡದಿ 'ಗಾಯತ್ರಿ'ಗೆ ಕಮಲ ಹಿಡಿಸಿಬಿಟ್ಟರು. ಅತ್ತ ಶಾಮನೂರು ಕುಟುಂಬದ ಸೊಸೆ ಪ್ರಭಾ 'ಕೈ' ಹಿಡಿದಿದ್ದಾರೆ. ಈಗ ಬೀಗತಿಯರ ಕದನ ಕುತೂಹಲಘಟ್ಟ ತಲುಪಿದೆ. ಎಲೆ, ಅಡಿಕೆ ಬದಲು ಬರೀ ಸುಣ್ಣ ಕೊಟ್ಟರೆಂದು ಮುನಿಸಿಕೊಂಡ ರೇಣುಕಾಚಾರ್ಯ, ರವೀಂದ್ರನಾಥ್, ಮಾಡಾಳು ವಂಶ ಹಾಗೂ ಅವರ ಗುರುಗಳಾದ ಯಡಿಯೂರಪ್ಪ ಅವರ ಕೃಪೆ, ಇಬ್ಬರೂ ಬೀಗರೂ ತಮ್ಮವರೇ ಎಂದು ಬೀಗುತ್ತಿರುವ 'ಸಾದರ' ಚಿತ್ತದ ಫಲದಿಂದ 'ಪ್ರಭೆ' ಅರಳುತ್ತದೋ.. 'ಗಾಯತ್ರಿ' ಮಂತ್ರವೇ ಮಾರ್ದನಿಸುತ್ತದೋ...

ಲೋಕಸಭೆ ಚುನಾವಣೆ ಬಳಿಕ ಸಿ.ಎಂ ರಾಜೀನಾಮೆ: ಶೆಟ್ಟರ್

ಪ್ರಜಾವಾಣಿ ವಾರ್ತೆ



ಜಗದೀಶ ಶೆಟ್ಟರ್

ಹುಬ್ಬಳ್ಳಿ: 'ಲೋಕಸಭಾ ಚುನಾವಣೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡುತ್ತಾರೆ. ಕಾಂಗ್ರೆಸ್‌ನಲ್ಲಿನ ಗುಂಪುಗಾರಿಕೆಯಿಂದ ಸರ್ಕಾರ ಪತನವಾಗಲಿದೆ. ನಾವು ಆಪರೇಷನ್ ಕಮಲ ಮಾಡುವ ಅವಶ್ಯಕತೆ ಇಲ್ಲ' ಎಂದು ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಹೇಳಿದರು.

'ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲದಿದ್ದರೆ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಾಗುತ್ತದೆ' ಎಂದು ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಹೇಳಿದ್ದಾರೆ. ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕುತಂತ್ರ, ಒಳತಂತ್ರದ ಭಾಗವಾಗಿ ಅವರು ಈ ಹೇಳಿಕೆ ನೀಡಿದ್ದಾರೆ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಕಾಂಗ್ರೆಸ್ ಶಾಸಕರಿಗೆ ಬಿಜೆಪಿಯವರು ₹50 ಕೋಟಿ ಆಮಿಷವೊಡುತ್ತಿದ್ದಾರೆ ಎಂಬುದು ಸುಳ್ಳು. ಯಾರು ಆಮಿಷವೊಡ್ಡಿದ್ದಾರೆ ಎಂಬುದನ್ನು ಸಿದ್ದರಾಮಯ್ಯ ಬಹಿರಂಗಪಡಿಸಬೇಕು. ಲೋಕಸಭೆ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗುವುದಿಲ್ಲ ಎಂಬ ಭಯ ಕಾಂಗ್ರೆಸ್‌ನವರಿಗೆ ಶುರುವಾಗಿದೆ. ಹೀಗಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಸಿ ಸುಳ್ಳು ಹೇಳುತ್ತಿದ್ದಾರೆ' ಎಂದರು.

ಮತ ಆಮಿಷ: ಆಯೋಗದ ವಶ

₹17.66 ಕೋಟಿ ನಗದು

ಉಚಿತ ಉಡುಗೊರೆ	₹ 18.85 ಲಕ್ಷ
ಮದ್ಯ	₹ 24.25 ಕೋಟಿ (7.69 ಲಕ್ಷ ಲೀ)
ಮಾದಕವಸ್ತು	₹74.89 ಲಕ್ಷ (87.04 ಕೆ.ಜಿ.)
ಚಿನ್ನ ಮತ್ತು ಬೆಳ್ಳಿ	₹ 46.45 ಕೋಟಿ (48.41 ಕೆ.ಜಿ.)

'ಚುನಾವಣೆ ಧರ್ಮಕೇಂದ್ರಿತ ಆಗಬಾರದು'

ಪ್ರಜಾವಾಣಿ ಸಂದರ್ಶನ

ಡಾ. ಸಿ.ಎನ್. ಮಂಜುನಾಥ್

ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಜಯದೇವ ಹೃದ್ರೋಗ ಆಸ್ಪತ್ರೆ ನಿವೃತ್ತ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಮತ್ತು ಹಾಲಿ ಸಂಸದ, ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಮಧ್ಯೆ ನೇರ ಹಣಾಹಣಿಗೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವು ಸಜ್ಜಾಗುತ್ತಿದೆ. ಸರ್ಕಾರಿ ಸೇವೆಯಿಂದ ನಿವೃತ್ತರಾದ ಬೆನ್ನಲ್ಲೇ ಚುನಾವಣಾ ಅಖಾಡಕ್ಕೆ ಧುಮುಕಿರುವ ಮಂಜುನಾಥ್, ರಾಜಕೀಯ ಪ್ರವೇಶ, ಗೆಲುವಿನ ಲೆಕ್ಕಚಾರ ಸೇರಿದಂತೆ ವಿವಿಧ ವಿಷಯಗಳ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ್ದಾರೆ



• ಓದೇಶ ಸಕಲೇಶಪುರ

• **ರಾಜಕೀಯ ಪ್ರವೇಶ ಪೂರ್ವಯೋಜಿತವೊ ಅಥವಾ ಆಕಸ್ಮಿಕವೊ?**

ನಿಜಕ್ಕೂ ಆಕಸ್ಮಿಕ. ರಾಜಕೀಯ ಕುಟುಂಬದ ನಂಟಿದ್ದರೂ ನನಗೆ ಆಸಕ್ತಿ ಇರಲಿಲ್ಲ. ವೈದ್ಯನಾಗಿ ನನ್ನದೇ ಹಾದಿಯಲ್ಲಿ ಸೇವೆ ಮಾಡುತ್ತಿದ್ದೆ. ನಿವೃತ್ತಿಯ ಬಳಿಕ ರಾಜಕೀಯ ಸೇರುವಂತೆ ಹಲವರು ಸಲಹೆ ನೀಡಿದ್ದರು. ನಾನು ನಿರಾಕರಿಸಿದ್ದೆ. ಆದರೆ, ಪಕ್ಷಾತೀತವಾಗಿ ಹಿತೈಷಿಗಳು, ವಿವಿಧ ಕ್ಷೇತ್ರಗಳ ತಜ್ಞರು ಸೇರಿದಂತೆ ಹಲವರು ಒತ್ತಡ ಹೇರಿದರು. ಬಿಜೆಪಿ ವರಿಷ್ಠರಿಂದಲೂ ಸ್ಪರ್ಧಿಸುವಂತೆ ಕರೆ ಬಂತು. ಕುಟುಂಬದಲ್ಲಿ ರಾಜಕೀಯವಾಗಿ ಸಕ್ರಿಯವಾಗಿರುವವರು ಒಪ್ಪಿಕೊಳ್ಳುವಂತೆ ಮನವೊಲಿಸಿದರು. ನನ್ನ ಸೇವೆಗೆ ರಾಷ್ಟ್ರಮಟ್ಟದ ವೇದಿಕೆಯೊಂದು ಸಿಗುವಾಗ ನಿರಾಕರಣೆ ಸಲ್ಲದು ಎಂದು ನಿರ್ಧರಿಸಿ ಸ್ಪರ್ಧೆಗೆ ಸಮ್ಮತಿಸಿದೆ.

• **ನಿಮ್ಮ ನಿರ್ಧಾರದ ಕುರಿತು ಕುಟುಂಬದವರ ಮೊದಲ ಪ್ರತಿಕ್ರಿಯೆ ಹೇಗಿತ್ತು?**

ನಾನೂ ಸೇರಿದಂತೆ ನನ್ನ ಕುಟುಂಬ ಎಂದಿಗೂ ರಾಜಕೀಯದ ಕುರಿತು ಯೋಚಿಸಿಯೇ ಇಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಬರುತ್ತಿರುವ ಸಲಹೆ–ಸೂಚನೆಗಳ ಕುರಿತು ಪತ್ನಿ ಹಾಗೂ ಮಕ್ಕಳಿಗೆ ತಿಳಿಸಿದಾಗ, 'ನಮಗೆ ರಾಜಕೀಯ ಒಗ್ಗುವುದಿಲ್ಲ ಸುಮ್ಮನಿರಿ' ಎಂದರು. ನನ್ನ ಪತ್ನಿಗೂ ಸುತಾರಾಂ ಇಷ್ಟವಿರಲಿಲ್ಲ. ಆಪ್ತರು ಮನವೊಲಿಸಿದ ಬಳಿಕ ಕುಟುಂಬದವರು ಹಸಿರು ನಿಶಾನೆ ತೋರಿದರು.

• **ವೈದ್ಯರಾಗಿ ನೀವು ಸಂಪಾದಿಸಿದ ಜನಪ್ರಿಯತೆ ಹಾಗೂ ಜನಮೆಚ್ಚುಗೆಯನ್ನು ಮತಬ್ಯಾಂಕ್ ಆಗಿ ಪರಿವರ್ತಿಸಿಕೊಳ್ಳುವ ಬಿಜೆಪಿ–ಜೆಡಿಎಸ್ ತಂತ್ರಕ್ಕೆ ಕೈಗೊಂಬೆಯಾಗಿದ್ದೀರಾ?**

ಹಾಗೇನಿಲ್ಲ. ನನ್ನಂತೆ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿದವರು ಸಹ ರಾಜಕಾರಣದಲ್ಲಿದ್ದಾರೆ. ಚುನಾವಣೆಯಲ್ಲಿ ಗೆಲುವು ಮುಖ್ಯ. ಅದಕ್ಕೆ ಜನಪ್ರಿಯತೆ ಜೊತೆಗೆ ರಾಜಕೀಯ ತಂತ್ರಗಾರಿಕೆಯೂ ಬೇಕು. ನನ್ನ ಸ್ಪರ್ಧೆಯಲ್ಲಿ ಅವೆರಡೂ ಇವೆ.

• **ಧರ್ಮದ ಆಧಾರದ ಮೇಲೆ ಚುನಾವಣೆ ಎದುರಿಸುವ ಬಿಜೆಪಿಯ ಕಾರ್ಯತಂತ್ರವನ್ನು ನೀವು ಒಪ್ಪುತ್ತೀರಾ?**

ಚುನಾವಣೆ ಜನ ಕೇಂದ್ರಿತವಾಗಿರಬೇಕೇ ಹೊರತು, ಧರ್ಮ ಕೇಂದ್ರಿತವಾಗಿರಬಾರದು. ನನ್ನ ಬದುಕಿನಲ್ಲಿ ಎಂದಿಗೂ ಜಾತಿ ಮತ್ತು ಧರ್ಮದ ಆಧಾರದಲ್ಲಿ ಜನರನ್ನು ನೋಡಿದವನಲ್ಲ. ನನಗೆ ಗೊತ್ತಿರುವುದು ಎರಡೇ ಜಾತಿ. ಕೆಲಸ ಮಾಡುವವರು ಮತ್ತು ಮಾಡದವರು. ಅಭಿವೃದ್ಧಿಯ ದೂರದೃಷ್ಟಿ ಹಾಗೂ ನಾನು ಮಾಡಿದ ಕೆಲಸಗಳನ್ನು ಹೇಳಿಯೇ ಜನರ ಬಳಿ ಮತ ಕೇಳುವೆ.

• **ರಾಜಕಾರಣಿಗೆ ದಪ್ಪ ಚರ್ಮ ಇರಬೇಕು ಅಂತಾರೆ. ಸೌಮ್ಯ ಸ್ವಭಾವದ ನಿಮಗೆ ರಾಜಕಾರಣ ಹೊಂದಿಕೊಳ್ಳುತ್ತದೆಯೆ?**

ನಾನು ರಾಜಕಾರಣಿಯ ಬದಲು ರಾಷ್ಟ್ರಕಾರಣಿಯಾಗುವೆ. ರಾಜಕಾರಣಿ ಯಾವಾಗಲೂ ಚುನಾವಣೆ ದೃಷ್ಟಿಯಿಂದಲೇ ರಾಜಕಾರಣ ಮಾಡುತ್ತಾರೆ. ರಾಷ್ಟ್ರಕಾರಣಿಗೆ ಸ್ವಾರ್ಥವಿರುವುದಿಲ್ಲ. ಸೇವಾ ಮನೋಭಾವ, ದೇಶಸೇವೆ ಹಾಗೂ ಅಭಿವೃದ್ಧಿಯೇ ಆದ್ಯತೆಯಾಗಿರುತ್ತದೆ. ನಾನು ಸಹ ಅಂತಹದ್ದೇ ದೂರದೃಷ್ಟಿ ಹೊಂದಿರುವವನು.

• **ನಿಮಗೆ ರಾಜಕೀಯದ ಗಂಧ–ಗಾಳಿ ಗೊತ್ತಿಲ್ಲ, ನಿಮ್ಮನ್ನು ಹರಕೆ ಕುರಿ ಮಾಡಲಾಗಿದೆ ಎಂದು ವಿರೋಧಿಗಳು ಹೇಳುತ್ತಿದ್ದಾರಲ್ಲ?**

ರಾಜಕೀಯದಲ್ಲಿ ಸಕ್ರಿಯವಾಗಿದ್ದರೆ ಮಾತ್ರ ರಾಜಕೀಯದ ಗಂಧ–ಗಾಳಿ ಗೊತ್ತಿರುತ್ತದೆ ಎಂಬುದೇ ತಪ್ಪು. ಕುಟುಂಬದೊಳಗೆ ದೊಡ್ಡಮಟ್ಟದ ರಾಜಕೀಯ ನೇತಾರರನ್ನು ನೋಡಿರುವ ನನಗೆ ರಾಜಕೀಯ ಆಗುಹೋಗುಗಳ ಬಗ್ಗೆ ಅರಿವಿದೆ. ಆದರೆ, ನಾನು ಸಕ್ರಿಯವಾಗಿರಲಿಲ್ಲ. ನನ್ನ ಎದುರಾಳಿಗಳು ವೈಯಕ್ತಿಕವಾಗಿ ಏನೇ ಹೇಳಿದರೂ ಪ್ರತಿಕ್ರಿಯಿಸುವುದಿಲ್ಲ. ಸ್ಪರ್ಧೆಯು ಆರೋಗ್ಯಕರವಾಗಿರಬೇಷ್ಟೇ.

• **ನೀವು ಗೆದ್ದರೆ ಮುಂದೆ ಕೇಂದ್ರ ಆರೋಗ್ಯ ಸಚಿವರಾಗುತ್ತೀರಿ ಎಂಬ ಮಾತುಗಳು ಈಗಾಗಲೇ ಹರಿದಾಡುತ್ತಿವೆ? ಅಂತಹ ಭರವಸೆ ಸಿಕ್ಕಿದೆಯೆ?**

ನನ್ನ ವೃತ್ತಿಯ ಹಿನ್ನೆಲೆ ನೋಡಿ ಗೆದ್ದಾಗ ಸಚಿವನಾಗುತ್ತೇನೆ ಎಂದು ಪಕ್ಷದ ಕಾರ್ಯಕರ್ತರು ಸೇರಿದಂತೆ ಹಿತೈಷಿಗಳು ಹೇಳುತ್ತಿದ್ದಾರಷ್ಟೇ. ಸಚಿವ ಸ್ಥಾನ ಬೇಕು ಎಂದು ನಾನು ಸ್ಪರ್ಧಿಸಿಲ್ಲ. ನಮ್ಮ ಕುಟುಂಬದವರು ಸಹ ಅಂತಹ ಷರತ್ತು ಹಾಕಿಲ್ಲ. ಚುನಾವಣೆ ಗೆಲ್ಲುವುದಷ್ಟೇ ಸದ್ಯದ ಆದ್ಯತೆ. ಮುಂದಿನದನ್ನು ವರಿಷ್ಠರು ತೀರ್ಮಾನಿಸುತ್ತಾರೆ.

• **ಡಿ.ಕೆ ಸೋದರರ ರಾಜಕೀಯ ಪ್ರಭಾವ ಹಾಗೂ ಅಧಿಕಾರದ ಬಲವನ್ನು ಹೇಗೆ ಎದುರಿಸುತ್ತೀರಿ?**

ಎಲ್ಲರಿಗೂ ಅವರದ್ದೇ ಆದ ಪ್ರಭಾವ ಹಾಗೂ ಶಕ್ತಿ ಇರುತ್ತದೆ. ವೃತ್ತಿಯಲ್ಲಿ ಮಾಡಿದ ಸಾಧನೆ ನನ್ನ ಜತೆಗಿದೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯ ಬಲವಿದೆ. ಜನ ನನ್ನನ್ನು ಪಕ್ಷಾತೀತವಾಗಿ ನೋಡಿ ಬೆಂಬಲಿಸುತ್ತಿದ್ದಾರೆ. ಜಯದೇವ ಆಸ್ಪತ್ರೆಯಲ್ಲಿ 75 ಲಕ್ಷ ಜನರಿಗೆ ಚಿಕಿತ್ಸೆ ನೀಡಿದ್ದೇನೆ. ಸುಮಾರು 2 ಕೋಟಿ ಜನರನ್ನು ಭೇಟಿ ಮಾಡಿದ್ದೇನೆ. ಹವಾ ನಿಯಂತ್ರಿತ ಕಚೇರಿಯಲ್ಲಿ ಕುಳಿತಿದ್ದಕ್ಕಿಂತ ಹೆಚ್ಚಾಗಿ ಆಪರೇಷನ್ ಥಿಯೇಟರ್ ಹಾಗೂ ವಾರ್ಡ್‌ಗಳಲ್ಲಿ ಸುತ್ತಾಡಿದ್ದೇ ಹೆಚ್ಚು. ಸರ್ಕಾರಿ ಆಸ್ಪತ್ರೆಯನ್ನು ಪಂಚತಾರಾ ಹೋಟೆಲ್‌ನಂತೆ ಕಟ್ಟಿ, ಅತ್ಯುತ್ತಮ ಸೇವೆಯ ಆಸ್ಪತ್ರೆಯಾಗಿ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯುವಂತೆ ಮಾಡಿದ್ದೇನೆ.

• **ಕಾಂಗ್ರೆಸ್ ಪಕ್ಷ ಹಾಗೂ ಅಲ್ಲಿನ ರಾಜಕೀಯ ನಾಯಕತ್ವದ ಕುರಿತು ನಿಮ್ಮ ಅಭಿಪ್ರಾಯವೇನು? ನಿಮ್ಮ ಗೆಲುವಿಗೆ ಪ್ರಧಾನಿ ಮೋದಿ ಜನಪ್ರಿಯತೆಯೊಂದೇ ಸಾಕೆ?**


ಬೇರೆ ಪಕ್ಷ ಮತ್ತು ನಾಯಕತ್ವದ ಕುರಿತು ನಾನು ಪ್ರತಿಕ್ರಿಯಿಸುವುದಿಲ್ಲ. ಬಿಜೆಪಿ–ಜೆಡಿಎಸ್ ಮೈತ್ರಿಯೇ ಗೆಲುವಿಗೆ ದೊಡ್ಡ ಕಾರಣವಾಗಲಿದೆ. ಜೊತೆಗೆ ಪ್ರಧಾನಿ ಮೋದಿ ಅವರು ಹತ್ತು ವರ್ಷಗಳಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳು, ದೂರದೃಷ್ಟಿಯ ನಾಯಕತ್ವ ಹಾಗೂ ಸ್ವಾರ್ಥರಹಿತ ರಾಜಕಾರಣ ನನ್ನ ಗೆಲುವಿಗೆ ಪೂರಕವಾಗಲಿವೆ.

• **ನಿಮ್ಮದೇ ಕುಟುಂಬದ ಜೆಡಿಎಸ್ ಪಕ್ಷವಿದ್ದರೂ ಬಿಜೆಪಿಯಿಂದ ಕಣಕ್ಕಿಳಿದಿದ್ದು ಏಕೆ?**

ಚುನಾವಣೆ ಎಂದರೆ ಸೋಲು–ಗೆಲುವಿನ ಲೆಕ್ಕಾಚಾರ. ರಾಜ್ಯದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಬಳಿಕ, ಇಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಎರಡೂ ಪಕ್ಷಗಳ ನಾಯಕರು ತಂತ್ರ ರೂಪಿಸಿದ್ದಾರೆ. ಅದರ ಭಾಗವಾಗಿ ಎನ್‌ಡಿಎ ಅಭ್ಯರ್ಥಿಯಾಗಿ ಬಿಜೆಪಿಯಿಂದ ನನ್ನ ಹೆಸರು ಘೋಷಣೆ ಮಾಡಿದ್ದಾರೆ.

• **ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದಲೇ ಅದೃಷ್ಟ ಪರೀಕ್ಷೆಗಿಳಿಯಲು ಕಾರಣವೇನು?**

ನನ್ನ ಸ್ಪರ್ಧೆ, ಕ್ಷೇತ್ರ ಹಾಗೂ ಪಕ್ಷ ಎಲ್ಲವೂ ವರಿಷ್ಠರ ಆಯ್ಕೆಯಾಗಿದೆ. ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಎರಡಕ್ಕೂ ನೆಲೆ ಇದೆ. ಇವೆರಡರ ಮತಬ್ಯಾಂಕ್ ಒಂದಾದರೆ ಗೆಲುವಿನ ಹಾದಿ ಸುಲಭವಾಗಲಿದೆ ಎಂಬ ಲೆಕ್ಕಾಚಾರವೂ ಇರಬಹುದು.



• **ಡಿ.ಕೆ. ಸಹೋದರರು ಬಿಜೆಪಿ–ಜೆಡಿಎಸ್ ಕಾರ್ಯಕರ್ತರನ್ನು ಖರೀದಿಸುತ್ತಿದ್ದಾರೆ ಎಂಬ ಆತಂಕವನ್ನು ಮೈತ್ರಿಕೂಟದ ನಾಯಕರು ಹೊರಹಾಕಿದ್ದಾರೆ. ಇದು ನಿಮ್ಮ ಗೆಲುವಿಗೆ ತೊಡಕಾಗುವುದಿಲ್ಲವೇ?**

ಅದಕ್ಕೆ ಪ್ರತಿಯಾಗಿ ನಾವು ಬಿಜೆಪಿ–ಜೆಡಿಎಸ್ ಕಾರ್ಯಕರ್ತರನ್ನು ತಳಮಟ್ಟದಲ್ಲಿ ಬೆಸೆಯುವ ಕೆಲಸಕ್ಕೆ ಚಾಲನೆ ನೀಡಿದ್ದೇವೆ. ಮುಂಚೆಯೇ ಇದು ನಡೆಯಬೇಕಿತ್ತು. ಆದರೆ, ಸ್ಪರ್ಧೆಗೆ ನಾನು ತಡವಾಗಿ ಒಪ್ಪಿಗೆ ಕೊಟ್ಟಿದ್ದರಿಂದ ಸ್ವಲ್ಪ ವಿಳಂಬವಾಗಿದೆ. ಆದರೆ, ಮೈತ್ರಿ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಬದ್ಧತೆಯುಳ್ಳವರೇ ಹೊರತು ಮಾರಿಕೊಳ್ಳುವವರಲ್ಲ.

'ಸಿದ್ದರಾಮಯ್ಯ ಸೋತು ಸುಣ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಲಾಗದೇ ಸೋತು ಸುಣ್ಣವಾಗಿದ್ದಾರೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ದೂರಿದರು.

ಕೆಟ್ಟ ಆರ್ಥಿಕ ನಿರ್ವಹಣೆಯಿಂದ ತಮ್ಮ ತಪ್ಪು ಮುಚ್ಚಿಕೊಳ್ಳಲು ಎನ್‌ಡಿಆರ್‌ಎಫ್ ನೆರವಿಗಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರುವ ಪ್ರಹಸನ ಮಾಡಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಚುನಾವಣಾ ನೀತಿ ಸಂಹಿತೆ ಜಾರಿ ಆದ ಬಳಿಕ ಈ ಪ್ರಯತ್ನ ನಡೆಸಿದ್ದಾರೆ. ಇಲ್ಲಿಯವರೆಗೆ ಇವರು ನಿದ್ದೆ ಮಾಡುತ್ತಿದ್ದರೇ? ಈ ಪ್ರಹಸದ ಮೂಲಕ ಜನರ ಗಮನ ಬೇರೆಡೆ ಸೆಳೆದು ಚುನಾವಣೆ ಮುಗಿಸಿಕೊಂಡು ಬಿಡಬೇಕು ಎಂಬ ಚಿಂತನೆ ಮಾಡಿದ್ದರೆ ಅದು ಅವರ ಭ್ರಮೆ ಎಂದು ಹೇಳಿದರು.

ಬೆಂಗಳೂರು ಸೇರಿ, ರಾಜ್ಯದ ಜನರಿಗೆ ಕುಡಿಯುವ ನೀರು ಕೊಡಲು ಇವರಿಗೆ ಸಾಧ್ಯ ಆಗುತ್ತಿಲ್ಲ. ಆದರೆ, ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂಬ ಭಂಡ ಪ್ರವೃತ್ತಿ ಮುಖ್ಯಮಂತ್ರಿಯವರದು. ಈ ರಾಜ್ಯ ದಿವಾಳಿ ಆಗಿದೆ ಎಂದು ಪ್ರಧಾನಿ ಹೇಳಿದ್ದರು. ಅದನ್ನು ಸಿದ್ದರಾಮಯ್ಯ ಸಾಬೀತು ಮಾಡಿದ್ದಾರೆ ಎಂದರು.

'ರಾಜ್ಯದಲ್ಲಿ ಅತಿ ದೊಡ್ಡ ಜಲಕ್ಷಾಮ ತಲೆದೋರಿದೆ. ಆದರೆ, ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಮನೆ ಮುಂದೆ ಗಿಡಗಳಿಗೆ ನೀರು ಹಾಕಬೇಡಿ, ಕಾರು ತೊಳೀಬೇಡಿ ಎನ್ನುವ ಸುತ್ತೋಲೆ ಹೊರಡಿಸಿದ್ದಾರೆ. ಇನ್ನು ಸ್ವಲ್ಪ ದಿನ ಕಳೆದರೆ ಇನ್ನೇನು ತೊಳೀಬೇಡಿ ಎನ್ನುತ್ತಾರೋ ಗೊತ್ತಿಲ್ಲ' ಎಂದು ರಾಜೀವ್ ವ್ಯಂಗ್ಯವಾಡಿದರು.

ಸ್ಪರ್ಧಿಸುವಂತೆ ಎಚ್‌ಡಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ



ಮಂಡ್ಯದ ಜೆಡಿಎಸ್ ಕಾರ್ಯಕರ್ತರನ್ನುದ್ದೇಶಿಸಿ ಎಚ್‌ಡಿ. ಕುಮಾರಸ್ವಾಮಿ ಮಾತನಾಡಿದರು

ಬೆಂಗಳೂರು: ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಕಣಕ್ಕಿಳಿಯುವಂತೆ ಜೆಡಿಎಸ್‌ನ ಸ್ಥಳೀಯ ಕಾರ್ಯಕರ್ತರು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭಾನುವಾರ ಒತ್ತಾಯಿಸಿದರು. ಜೆ.ಪಿ. ನಗರದಲ್ಲಿರುವ ಅವರ ಮನೆ ಎದುರಿನ ರಸ್ತೆಯಲ್ಲೇ ಕುಳಿತು ಘೋಷಣೆಗಳನ್ನೂ ಕೂಗಿದರು.

ಹೃದಯ ಶಸ್ತ್ರಚಿಕಿತ್ಸೆಗಾಗಿ ಚೆನ್ನೈಗೆ ತೆರಳಿದ್ದ ಕುಮಾರಸ್ವಾಮಿ, ಭಾನುವಾರ ಬೆಂಗಳೂರಿಗೆ ವಾಪಸಾದರು. ಈ ವಿಷಯ ತಿಳಿದಿದ್ದ ಮಂಡ್ಯದ ಜೆಡಿಎಸ್ ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ರಾಜಧಾನಿಯತ್ತ ದೌಡಾಯಿಸಿದ್ದರು.

ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಾರ್ಯಕರ್ತರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು. ಸೋಮವಾರ ಸಂಜೆಯೊಳಗೆ ಮಂಡ್ಯ ಕ್ಷೇತ್ರದ ಅಭ್ಯರ್ಥಿ ಹೆಸರನ್ನು ಪ್ರಕಟಿಸುವ ಭರವಸೆ ನೀಡಿದರು. ಆದರೆ, ಕಾರ್ಯಕರ್ತರು ಸಮಾಧಾನಗೊಳ್ಳಲಿಲ್ಲ.

ಮನೆಯ ಮಹಡಿಯಿಂದಲೇ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ, 'ಮಂಡ್ಯದಲ್ಲಿ ನನಗೆ ವಿಶೇಷ ಪ್ರೀತಿ ಸಿಕ್ಕಿದೆ. ಪಕ್ಷವು ಬೆಳೆಸಿದ ನಾಯಕರು ನಮ್ಮನ್ನು ಬೀದಿಯಲ್ಲಿ ನಿಲ್ಲಿಸಿ ಹೋಗಿದ್ದಾರೆ. ನಿಮಗೆ ನಿರಾಸೆ ಮಾಡುವುದಿಲ್ಲ ಎಂಬ ಮಾತಿಗೆ ಬದ್ಧನಾಗಿದ್ದೇನೆ' ಎಂದರು.

'ನಾನು ಹುಟ್ಟಿದ್ದು ಹಾಸನ ಜಿಲ್ಲೆಯಲ್ಲಿ. ನನಗೆ ರಾಜಕೀಯ ಜನ್ಮ ಕೊಟ್ಟಿರುವುದು ರಾಮನಗರ ಜಿಲ್ಲೆ. ಜೀವಕ್ಕೆ ಜೀವವಾಗಿ ನನ್ನನ್ನು ಪೊರೆದು ಸಲಹುತ್ತಿರುವುದು ಮಂಡ್ಯ ಜಿಲ್ಲೆ. ಚನ್ನಪಟ್ಟಣ ಕ್ಷೇತ್ರದ ಮುಖಂಡರನ್ನು ಸೋಮವಾರ ಕರೆಸಿ ಮಾತನಾಡುತ್ತೇನೆ. ನಂತರದಲ್ಲಿ ತೀರ್ಮಾನ ಪ್ರಕಟಿಸುತ್ತೇನೆ' ಎಂದು ಭರವಸೆ ನೀಡಿದರು.

'ರಾಜಕೀಯ ಸ್ಟಂಟ್ ಬಿಡಿ'

'ಬರ ಪರಿಹಾರದ ಹಣ ಬಿಡುಗಡೆಗೆ ಆದೇಶ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವುದು ರಾಜಕೀಯ ಸ್ಟಂಟ್. ಈ ರೀತಿಯ ರಾಜಕೀಯ ಸ್ಟಂಟ್ ಬಿಟ್ಟು ಕೆಲಸ ಮಾಡಲಿ' ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಹೃದಯ ಶಸ್ತ್ರಚಿಕಿತ್ಸೆ ಮುಗಿಸಿಕೊಂಡು ಚೆನ್ನೈನಿಂದ ಭಾನುವಾರ ಬೆಂಗಳೂರಿಗೆ ವಾಪಸಾದ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ನಮ್ಮ ತೆರಿಗೆ ನಮ್ಮ ಹಣ, ಅನುದಾನ ಕೋರಿ ಸುಪ್ರೀಂ ಕೋರ್ಟ್‌ಗೆ ಹೋಗುತ್ತೇನೆ ಎನ್ನುವುದೆಲ್ಲ ನಾಟಕ. ಮೂರನೇ ಬಾರಿ ನನಗೆ ಶಸ್ತ್ರಚಿಕಿತ್ಸೆ ಆಗಿದೆ. ಇದು ಒಂದು ರೀತಿಯಲ್ಲಿ ಪುನರ್ಜನ್ಮ ಇದ್ದಂತೆ. ನಾಡಿನ ಲಕ್ಷಾಂತರ ಅಭಿಮಾನಿಗಳ ಹಾರೈಕೆಯಿಂದ ನಾನು ಆರೋಗ್ಯವಾಗಿ ಇದ್ದೇನೆ' ಎಂದು ಹೇಳಿದರು.

'ಮೂರರಿಂದ ನಾಲ್ಕು ದಿನಗಳ ಕಾಲ ವಿಶ್ರಾಂತಿ ಪಡೆಯುತ್ತೇನೆ. ನಂತರ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತೇನೆ. ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನೂ ಮೂರರಿಂದ ನಾಲ್ಕು ದಿನಗಳೊಳಗೆ ಅಂತಿಮಗೊಳಿಸಲಾಗುವುದು' ಎಂದರು.

ಸಿ.ಎಂ, ಹೆಗ್ಡೆ ವಿರುದ್ಧ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಡುಪಿ– ಚಿಕ್ಕಮಗಳೂರು ಕ್ಷೇತ್ರದ ಅಭ್ಯರ್ಥಿ ಜಯಪ್ರಕಾಶ್ ಹೆಗ್ಡೆ ಅವರು ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ.

ಬಿಜೆಪಿ ಶಾಸಕ ಸುರೇಶ್‌ಕುಮಾರ್ ನೇತೃತ್ವದ ನಿಯೋಗ ನೃಪತುಂಗಾ ರಸ್ತೆಯಲ್ಲಿರುವ ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ದೂರು ನೀಡಿತು.

'ರಾಜ್ಯದಲ್ಲಿ ಬಿಜೆಪಿ ಆಪರೇಷನ್ ಕಮಲದ ಯತ್ನ ಮುಂದುವರಿಸಿದೆ. ನಮ್ಮ ಶಾಸಕರಿಗೆ ₹50 ಕೋಟಿ ಆಮಿಷ ಒಡ್ಡಿದ್ದಾರೆ ಎಂಬ ಸುಳ್ಳು ಆರೋಪವನ್ನು ಮಾಡುವ ಮೂಲಕ ಸಿದ್ದರಾಮಯ್ಯ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ' ಎಂದು ಆಯೋಗಕ್ಕೆ ದೂರು ಸಲ್ಲಿಸಿದ ಬಳಿಕ ಸುರೇಶ್‌ಕುಮಾರ್ ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

ಹೆಗ್ಡೆಯಿಂದ ನೀತಿ ಸಂಹಿತೆ ಉಲ್ಲಂಘನೆ: ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಯಪ್ರಕಾಶ್ ಹೆಗ್ಡೆ ಅವರು ಇದೇ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೋಟ ಶ್ರೀನಿವಾಸಪೂಜಾರಿ ಅವರ ವಿರುದ್ಧ ಹೇಳಿಕೆ ನೀಡಿ, ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಮತ್ತೊಂದು ದೂರು ದಾಖಲಾಗಿದೆ. 'ಶ್ರೀನಿವಾಸಪೂಜಾರಿ ಅವರಿಗೆ ಕನ್ನಡ ಬಿಟ್ಟರೆ ಹಿಂದಿ, ಇಂಗ್ಲಿಷ್ ಬರುವುದಿಲ್ಲ. ಅವರನ್ನು ಆಯ್ಕೆ ಮಾಡಿ ಕಳಿಸಿದರೆ ದೆಹಲಿಯಲ್ಲಿ ಕೆಲಸಗಳು ಆಗುವುದಿಲ್ಲ' ಎಂದು ಹೇಳಿಕೆ ನೀಡಿದ್ದಾರೆ. ಇದು ಆಕ್ಷೇಪಾರ್ಹ. ಭಾಷೆಯ ಹೆಸರಿನಲ್ಲಿ ಮತ ಯಾಚಿಸಿ ಪ್ರತಿಸ್ಪರ್ಧಿ ಗೆಲ್ಲದಂತೆ ಹೇಳಿಕೆ ನೀಡಿದ ಜಯಪ್ರಕಾಶ್ ಹೆಗ್ಡೆ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದೂ ಮನವಿಯಲ್ಲಿ ಕೋರಲಾಗಿದೆ.

ಯಡಿಯೂರಪ್ಪ ಕುಟುಂಬದಿಂದ ಚಂಡಿಕಾ ಹೋಮ

ಪ್ರಜಾವಾಣಿ ವಾರ್ತೆ

ಕಳಸ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೊರನಾಡಿನ ಅನ್ನಪೂರ್ಣೇಶ್ವರಿ ಸನ್ನಿಧಿಯಲ್ಲಿ ಭಾನುವಾರ ವಿಶೇಷ ಪೂಜೆ, ಹೋಮ ನೆರವೇರಿಸಿದರು.

ಪುತ್ರ ಬಿ.ವೈ. ವಿಜಯೇಂದ್ರ ಮತ್ತು ಕುಟುಂಬದ ಸದಸ್ಯರೊಂದಿಗೆ ಅವರು ನವಚಂಡಿ ಪಾರಾಯಣ ನಡೆಸಿದರು. ಆನಂತರ ಅನ್ನಪೂರ್ಣೇಶ್ವರಿಗೆ ರಥೋತ್ಸವ ಸೇವೆ ಮತ್ತು ಮಹಾಚಂಡಿಕಾ ಹೋಮ ನೆರವೇರಿಸಿದರು.

ಲೋಕಸಭಾ ಚುನಾವಣೆಗೂ ಮುನ್ನ ಯಡಿಯೂರಪ್ಪ ಕುಟುಂಬವು ಈ ಸೇವೆಗಳನ್ನು ಸಲ್ಲಿಸಿದ್ದು ವಿಶೇಷವಾಗಿತ್ತು. ದೇವಸ್ಥಾನದ ಮುಖ್ಯಸ್ಥ ಜಿ. ಭೀಮೇಶ್ವರ ಜೋಷಿ ಪ್ರಸಾದ ವಿತರಿಸಿದರು. ರಾಮನಾರಾಯಣ ಜೋಷಿ ಅವರು ಯಡಿಯೂರಪ್ಪ ಕುಟುಂಬವನ್ನು ದೇಗುಲಕ್ಕೆ ಬರಮಾಡಿಕೊಂಡರು.



ಕಳಸ ತಾಲ್ಲೂಕಿನ ಹೊರನಾಡಿನ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಯಡಿಯೂರಪ್ಪ ಕುಟುಂಬ ಭಾನುವಾರ ಚಂಡಿಕಾ ಹೋಮ ನೆರವೇರಿಸಿದ ನಂತರ ಜಿ.ಭೀಮೇಶ್ವರ ಜೋಷಿ ಪ್ರಸಾದ ವಿತರಣೆ ಮಾಡಿದರು

ಈಶ್ವರಪ್ಪ ಬಂಡಾಯ ಯಡಿಯೂರಪ್ಪ ಜೊತೆ ಒಳ ಒಪ್ಪಂದದ ಫಲ

'ಹಿಂದುಳಿದವರ ಮತ ವಿಭಜನೆಯ ಹುನ್ನಾರ'

ಪ್ರಜಾವಾಣಿ ವಾರ್ತೆ


ಶಿವಮೊಗ್ಗ: 'ಹಿಂದುಳಿದವರ ಮತ ವಿಭಜನೆ ಆದಲ್ಲಿ ಪುತ್ರ ಬಿ.ವೈ.ರಾಘವೇಂದ್ರ ಗೆಲುವು ಸುಲಭ ಎಂಬ ಕಾರಣಕ್ಕೆ ಕೆ.ಎಸ್. ಈಶ್ವರಪ್ಪ ಅವರನ್ನು ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಬಂಡಾಯ ಅಭ್ಯರ್ಥಿಯನ್ನಾಗಿ ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ ಅವರೇ ಚುನಾವಣೆಗೆ ನಿಲ್ಲಿಸುತ್ತಿದ್ದಾರೆ' ಎಂದು ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ದೂರಿದರು.

'ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ಡಮ್ಮಿ' ಎಂಬ ಕೆ.ಎಸ್. ಈಶ್ವರಪ್ಪ ಹೇಳಿಕೆಗೆ ಭಾನುವಾರ ಅವರು ಸುದ್ದಿಗೋಷ್ಠಿಯಲ್ಲಿ ತಿರುಗೇಟು ನೀಡಿದರು.

'ಈಶ್ವರಪ್ಪ ಅವರದ್ದು ಹುಸಿ ಬಂಡಾಯ. ಬಿಜೆಪಿಯಲ್ಲಿರುವ ನನ್ನ ಹಳೆಯ ಸ್ನೇಹಿತರು ಹೇಳುವಂತೆ, ಚುನಾವಣೆಯಲ್ಲಿ ಬಿ.ವೈ. ರಾಘವೇಂದ್ರ ಗೆಲ್ಲಿಸಲು ಯಡಿಯೂರಪ್ಪ-ಈಶ್ವರಪ್ಪ ನಡುವೆ ಒಳ ಒಪ್ಪಂದ ಆಗಿದೆ.

'ಹಿಂದುತ್ವಕ್ಕೆ ಈಶ್ವರಪ್ಪ ಕೊಡುಗೆ ಏನೂ ಇಲ್ಲ'

'ಬಾಯಿ ಬಡುಕತನ ಬಿಟ್ಟರೆ ಹಿಂದುತ್ವಕ್ಕೆ ಈಶ್ವರಪ್ಪ ಕೊಡುಗೆ ಏನೂ ಇಲ್ಲ. ಹೆಚ್ಚೆಂದರೆ ಹೋಮ, ಹವನ ಮಾಡಿರಬಹುದು. ಹಿಂದುತ್ವದ ಹೆಸರಿನಲ್ಲಿ ಮತ ಕೇಳುವುದೇ ಚುನಾವಣೆ ನೀತಿ ಸಂಹಿತೆಯ ಉಲ್ಲಂಘನೆ. ಅವರ ಮೇಲೆ ಚುನಾವಣಾ ಆಯೋಗ ಪ್ರಕರಣ ದಾಖಲಿಸಲಿ' ಎಂದು ಆಯನೂರು ಮಂಜುನಾಥ್ ಆಗ್ರಹಿಸಿದರು. 'ಮಠಾಧೀಶರನ್ನು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿಸಿಕೊಳ್ಳುವುದು ಅಪರಾಧ. ಆ ಕೆಲಸವನ್ನು ಕೆ.ಎಸ್.ಈಶ್ವರಪ್ಪ, ಬಿ.ವೈ.ರಾಘವೇಂದ್ರ ಮಾಡುತ್ತಿದ್ದಾರೆ. ಅದರಿಂದ ಸ್ವಾಮೀಜಿಗಳ ವಿರುದ್ಧವೂ ಚುನಾವಣಾ ಆಯೋಗ ಪ್ರಕರಣ ದಾಖಲಿಸುವ ಸಾಧ್ಯತೆ ಇದೆ' ಎಂದರು.



ಅದರಂತೆ ಚುನಾವಣೆ ಮುಗಿದ ನಂತರ ಕೆ.ಎಸ್.ಈಶ್ವರಪ್ಪ ಯಾವುದಾದರೂ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಳ್ಳಲಿದ್ದಾರೆ. ಅವರ ಪುತ್ರ ಕೆ.ಈ. ಕಾಂತೇಶ ಅವರನ್ನು ವಿಧಾನ ಪರಿಷತ್‌ಗೆ ನಾಮ ನಿರ್ದೇಶನ ಮಾಡಲಾಗುತ್ತದೆ' ಎಂದರು.

'ಈಶ್ವರಪ್ಪ ದೊಡ್ಡ ಕಲಾವಿದ. ನಾಲಿಗೆಗೆ ಬಣ್ಣ ಹಚ್ಚಿಕೊಂಡಿದ್ದಾರೆ. ಸ್ವತಂತ್ರವಾಗಿ ಸ್ಪರ್ಧಿಸುವಷ್ಟು ಧೈರ್ಯ ಅವರಿಗಿಲ್ಲ. ಯಡಿಯೂರಪ್ಪ, ಬಿಜೆಪಿಯವರ ಒತ್ತಾಸೆಯಿಂದ ಈ ಸಾಹಸಕ್ಕೆ ಮುಂದಾಗಿದ್ದಾರೆ. ಕಾಂಗ್ರೆಸ್ ಪರವಾಗಿರುವ ಹಿಂದುಳಿದವರು, ದಲಿತರ ಮತಗಳನ್ನು ವಿಭಜಿಸುವ ತಂತ್ರ ಇದರಲ್ಲಿ ಅಡಗಿದೆ' ಎಂದರು.

'ಈಶ್ವರಪ್ಪ ಸ್ಪರ್ಧಿಸುವ ಬಗ್ಗೆ ನನಗೆ ಅನುಮಾನ ಇತ್ತು. ನಾಮಪತ್ರ ಹಿಂದಕ್ಕೆ ಪಡೆಯುವ ಕೊನೆಯ ದಿನದವರೆಗೂ ಅವರು ಕಣದಲ್ಲಿ ಇರುವ ಬಗ್ಗೆ ನಂಬಿಕೆ ಇಲ್ಲ. ಆದರೆ, ಈಗ ಸ್ಪರ್ಧಿಸಲೇಬೇಕಿದೆ. ಕಣದಿಂದ ಹಿಂದಕ್ಕೆ ಸರಿದರೆ ಶೇ 40 ಕಮಿಷನ್ ಹಗರಣದಲ್ಲಿ ಐಟಿ–ಇ.ಡಿ ದಾಳಿಗೆ ಒಳಗಾಗಿ ಈಶ್ವರಪ್ಪ ಜೈಲಿಗೆ ಹೋಗಲಿದ್ದಾರೆ' ಎಂದು ಅವರು ಹೇಳಿದರು.

'ಶಿವಮೊಗ್ಗ ಕ್ಷೇತ್ರದಲ್ಲಿ ಬಂಗಾರಪ್ಪ ಅವರ ಸೋಲಿನ ಸೇಡಿಗೆ ಅವರ ಪುತ್ರಿ ಗೀತಾ ಶಿವರಾಜಕುಮಾರ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಅವರನ್ನು ಮತದಾರರು ಬೆಂಬಲಿಸಲಿದ್ದಾರೆ. ಈಶ್ವರಪ್ಪ–ಬಿಜೆಪಿಯ ತಂತ್ರ ಫಲಿಸುವುದಿಲ್ಲ' ಎಂದರು.

'ಬಿ.ವೈ.ರಾಘವೇಂದ್ರ ಅವರನ್ನು ಲಿಂಗಾಯತರು ಬೆಂಬಲಿಸಬೇಕು ಎಂದು ಕೆಲವು ದಿನಗಳ ಹಿಂದೆ ಕಾಂಗ್ರೆಸ್ ನಾಯಕ ಶಾಮನೂರು ಶಿವಶಂಕರಪ್ಪ ಹೇಳಿದ್ದು ಕಾಂಗ್ರೆಸ್‌ನ ಚುನಾವಣಾ ತಂತ್ರದ ಭಾಗ. ಇದರಿಂದ ಅಹಿಂದ ಮತಗಳು ಕಾಂಗ್ರೆಸ್‌ಗೆ ಹರಿದು ಬರಲಿವೆ. ಗೀತಾ ಶಿವರಾಜಕುಮಾರ್ ಗೆಲುವು ನಿಶ್ಚಿತ' ಎಂದರು.

ಈಶ್ವರಪ್ಪ ಹೇಳುವಂತೆ ಗೀತಾ ಅಭ್ಯರ್ಥಿ ಆಗಿರುವುದರ ಹಿಂದೆ ಒಳಒಪ್ಪಂದ ಇಲ್ಲ. ದಿಟ್ಟ ಹೋರಾಟಗಾರ ಬಂಗಾರಪ್ಪ ಅವರ ಮಕ್ಕಳು ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಷ್ಟು ದುರ್ಬಲರಲ್ಲ. ಈಶ್ವರಪ್ಪ ಅವರೇ ಡಮ್ಮಿ

ಆಯನೂರು ಮಂಜುನಾಥ್, ಕೆಪಿಸಿಸಿ ವಕ್ತಾರ

ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಒಂದು ವಾರದ ನಂತರ ಮತ್ತೆ ಬಿಜೆಪಿಗೆ ಬರ್ತಾರೆ. ಈಶ್ವರಪ್ಪ ಅವರು ನಮ್ಮ ಪಕ್ಷದ ಹಳೆಯ ಕಾರ್ಯಕರ್ತರು. ಅಯೋಧ್ಯೆ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಕರ ಸೇವೆ ಮಾಡಿದ್ದರು

ಆರ್. ಅಶೋಕ, ವಿರೋಧ ಪಕ್ಷದ ನಾಯಕ

ಚುನಾವಣಾ ಬಾಂಡ್ ಈ ಲೋಕಸಭಾ ಚುನಾವಣೆಯ ಪ್ರಚಾರದಲ್ಲಿ ಕಂಪನ ಸೃಷ್ಟಿಸಲಿರುವ ವಿಷಯಗಳಲ್ಲಿ ಒಂದು ಎಂಬುದು ಖಂಡಿತ ಹೌದು. ಅದು ಚುನಾವಣೆಯನ್ನು ಪ್ರಭಾವಿಸುತ್ತದೆಯೇ ಎಂಬ ಪ್ರಶ್ನೆ ಹಾಕಿಕೊಂಡರೆ, ಬಹುತೇಕ ಇಲ್ಲ ಎಂಬ ಉತ್ತರವೇ ಸಿಗುತ್ತದೆ. ಈ ವಿಚಾರವು ಮತದಾರನ ನಿರ್ಧಾರವನ್ನು ಪ್ರಭಾವಿಸುವ ಸಾಧ್ಯತೆ ತೀರಾ ಕಡಿಮೆ. ಆದರೆ ಚುನಾವಣಾ ಬಾಂಡ್ ಪ್ರಕರಣವು ದೇಶದ ಪ್ರಮುಖ ರಾಜಕೀಯ ಪಕ್ಷಗಳನ್ನು ಮತದಾರ ನೋಡಬೇಕಾದ ರೀತಿಯನ್ನು ಖಂಡಿತ ಬದಲಿಸುತ್ತಿದೆ ಎಂಬುದನ್ನಂತೂ ತಳ್ಳಿ ಹಾಕಲಾಗದು. ಇದರ ಜತೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ಪಾರದರ್ಶಕತೆಯನ್ನು ಮೈಗೂಡಿಸಿಕೊಳ್ಳಲೇಬೇಕಾದ ಅಗತ್ಯವನ್ನು ಈ ಪ್ರಸಂಗ ಒತ್ತಿ ಹೇಳುತ್ತಿದೆ

ಚುನಾವಣಾ ಬಾಂಡ್ 'ಕೊಡು–ಕೊಳ್ಳು' ಸಂಬಂಧ, ಭ್ರಷ್ಟಾಚಾರದ ಆರೋಪ

ಬಿಜೆಪಿಯತ್ತಲೇ ಬೊಟ್ಟು, ಆದರೆ...

• ಜಯಸಿಂಹ ಆರ್.


ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಯಲ್ಲಿ ಪಾರದರ್ಶಕತೆ ತರುವ ಸಲುವಾಗಿ ಚುನಾವಣಾ ಬಾಂಡ್ ಯೋಜನೆ ಜಾರಿಗೆ ತರುತ್ತಿದ್ದೇವೆ ಎಂದು ಕೇಂದ್ರದ ಬಿಜೆಪಿ ಸರ್ಕಾರವು ಸಂಸತ್ತಿನ ಒಳಗೆ ಮತ್ತು ಹೊರಗೆ ಹಲವು ಬಾರಿ ಹೇಳಿತ್ತು. ಆದರೆ ಚುನಾವಣಾ ಬಾಂಡ್‌ಗೆ ಸಂಬಂಧಿಸಿದ ಕಾನೂನಿನಲ್ಲೇ ಮಾಹಿತಿಯನ್ನು ಗೋಪ್ಯವಾಗಿ ಇರಿಸಲು ಅವಕಾಶವಿತ್ತು. ಯಾರು, ಯಾರಿಗೆ ಮತ್ತು ಎಷ್ಟು ದೇಣಿಗೆ ನೀಡಿದರು ಎಂಬುದನ್ನು ಬಹಿರಂಗಪಡಿಸಲು ಈ ಕಾನೂನಿನಲ್ಲಿ ಅವಕಾಶವೇ ಇರಲಿಲ್ಲ. ಯಾವುದೇ ರೀತಿಯ ಲೆಕ್ಕ ಪರಿಶೋಧನೆಗೆ ಒಳಪಡಿಸಲು ಸಾಧ್ಯವಿಲ್ಲದಂತೆ ಮತ್ತು ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಗೆ ಬರದಂತೆ ಈ ಕಾನೂನನ್ನು ರೂಪಿಸಲಾಗಿತ್ತು. ಪಾರದರ್ಶಕತೆ ಹೆಸರಿನಲ್ಲಿ ಹೀಗೆ ಅಪಾರದರ್ಶಕವಾಗಿದ್ದ ಕಾರಣದಿಂದಲೇ ಚುನಾವಣಾ ಬಾಂಡ್ ಅನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿತು. ಜತೆಗೆ ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡಿದವರ ಮತ್ತು ಪಡೆದುಕೊಂಡವರ ಮಾಹಿತಿ ಬಹಿರಂಗಕ್ಕೆ ಆದೇಶಿಸಿತು. ಐದು ವರ್ಷಗಳಿಂದ ನ್ಯಾಯಾಲಯದಲ್ಲಿ ಇದ್ದರೂ, ಈ ವಿಚಾರ ಜನರ ಗಮನ ಸೆಳೆದದ್ದು ಸುಪ್ರೀಂ ಕೋರ್ಟ್‌ನ ತೀರ್ಪಿನ ನಂತರವೇ.

ಸುಪ್ರೀಂ ಕೋರ್ಟ್ ಆದೇಶಿಸಿದಂತೆ ಮಾಹಿತಿಯನ್ನು ಬಹಿರಂಗಪಡಿಸಲು ಭಾರತೀಯ ಸ್ಟೇಟ್‌ಬ್ಯಾಂಕ್ ತಡ ಮಾಡಿದ್ದು ಮತ್ತು ವಿವಿಧ ನೆಪಹೇಳಿದ್ದು ದೇಶದಾದ್ಯಂತ ದೊಡ್ಡ ಸುದ್ದಿಯಾಯಿತು. ಈವರೆಗೆ ಚುನಾವಣಾ ಬಾಂಡ್‌ನತ್ತ ತಿರುಗಿಯೂ ನೋಡದವರು, ಈ ಕಾರಣದಿಂದಲೇ ಅತ್ತ ಗಮನ ಕೇಂದ್ರೀಕರಿಸಿದ್ದು. ಚುನಾವಣಾ ಬಾಂಡ್ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದ ಸ್ವಯಂಸೇವಾ ಸಂಘಟನೆಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಇದನ್ನು, ಅವ್ಯವಹಾರ ಅಥವಾ ಭ್ರಷ್ಟಾಚಾರವನ್ನು ಮುಚ್ಚಿಡುವ ಯತ್ನ ಎಂದು ಆರೋಪಿಸಿದರು. ಆ ಆರೋಪಕ್ಕೆ ಇಂಬು ನೀಡುವಂತೆ ಎಸ್‌ಬಿಐ ಮೊದಲ ಕಂತಿನಲ್ಲಿ ಅರೆಬರೆ ಮಾಹಿತಿ ನೀಡಿತು. ಇದು ಚುನಾವಣಾ ಬಾಂಡ್ ಮತ್ತು ಆಡಳಿತ ಪಕ್ಷದ ಬಗ್ಗೆ ಇದ್ದ ಸಂದೇಹವನ್ನು ಹೆಚ್ಚಿಸಿದ್ದಂತೂ ಸುಳ್ಳಲ್ಲ. ಈಗ 2019ರ ಏಪ್ರಿಲ್ 12ರಿಂದ ಈವರೆಗೆ ನೀಡಲಾದ ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಬಹಿರಂಗವಾಗಿದೆ. ಅದರಿಂದ ದೇಶದ ರಾಜಕಾರಣದ ಹಲವು ವಿಷಯಗಳು ಸ್ಪಷ್ಟವಾಗಿವೆ.

ಕೇಂದ್ರದ ಬಿಜೆಪಿ ಸರ್ಕಾರವು ಕಾರ್ಪೊರೇಟ್ ಸಂಸ್ಥೆಗಳಿಂದ ನೂರಾರು ಕೋಟಿ ದೇಣಿಗೆ ಪಡೆದುಕೊಂಡು, ಆ ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟಿದೆ ಎಂಬುದು ಚುನಾವಣಾ ಬಾಂಡ್‌ಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಬಹಿರಂಗಕ್ಕೂ ಮುನ್ನ ಬಿಜೆಪಿ ವಿರುದ್ಧ ಇದ್ದ ಪ್ರಮುಖ ಆರೋಪ. ಬಹಿರಂಗವಾದ ಮಾಹಿತಿ ಇದನ್ನು ದೃಢಪಡಿಸಿದೆ.

ಅತಿಹೆಚ್ಚು ದೇಣಿಗೆ ನೀಡಿದ ಎರಡನೇ ಕಂಪನಿ ಎಂಇಐಎಲ್ ಮತ್ತು ಅದರ ಅಧೀನ ಕಂಪನಿಗಳು ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ ₹669 ಕೋಟಿ ದೇಣಿಗೆ ನೀಡಿವೆ. ಈ ಅವಧಿಯಲ್ಲೇ ಈ ಕಂಪನಿಗಳು ದೇಶದಾದ್ಯಂತ ಒಟ್ಟು ₹1.87 ಲಕ್ಷ ಕೋಟಿಯಷ್ಟು ಮೊತ್ತದ ವಿವಿಧ ಕಾಮಗಾರಿಗಳ ಗುತ್ತಿಗೆ ಪಡೆದಿವೆ. 'ಇದೇ ಅವಧಿಯಲ್ಲಿ ಒಟ್ಟು ₹3.7 ಲಕ್ಷ ಕೋಟಿ ಮೊತ್ತದ ವಿವಿಧ ಕಾಮಗಾರಿಗಳ ಗುತ್ತಿಗೆ ಪಡೆದಿರುವ 33 ಕಂಪನಿಗಳು ಬಿಜೆಪಿಗೆ ಚುನಾವಣಾ ಬಾಂಡ್ ಮೂಲಕ ₹1,750 ಕೋಟಿ ದೇಣಿಗೆ ಪಡೆದಿವೆ' ಎಂದು ಎಡಿಆರ್ ಹೇಳಿದೆ. ಚುನಾವಣಾ ಬಾಂಡ್ ವಿಚಾರವನ್ನು ಸುಪ್ರೀಂ ಕೋರ್ಟ್‌ಗೆ ತೆಗೆದುಕೊಂಡು ಹೋಗಿ ಆ ಮೊಕದ್ದಮೆಯನ್ನು ಗೆದ್ದ ಎಡಿಆರ್, ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ವಿಶ್ಲೇಷಿಸಿ ವರದಿ ಪ್ರಕಟಿಸಿದೆ. ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದೂ ಒತ್ತಾಯಿಸಿದೆ.

ಸಿಬಿಐ, ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಗಳ ಮೂಲಕ ಬೆದರಿಸಿ, ಬಿಜೆಪಿಯು ಕಂಪನಿಗಳಿಂದ ದೇಣಿಗೆ ವಸೂಲಿ ಮಾಡಿದೆ ಎಂಬುದು ಬಿಜೆಪಿ ವಿರುದ್ಧದ ಇನ್ನೊಂದು ಆರೋಪ. ಕೇಂದ್ರದ ಈ ತನಿಖಾ ಸಂಸ್ಥೆಗಳ ಮೂಲಕ ಕಂಪನಿಗಳ ಮೇಲೆ ಪ್ರಕರಣ ದಾಖಲಿಸಿ, ಶೋಧ ಕಾರ್ಯ ನಡೆಸಿ ಆನಂತರ ದೇಣಿಗೆ ವಸೂಲಿ ಮಾಡಲಾಗಿದೆ ಎನ್ನಲಾಗುತ್ತಿತ್ತು. ಎಸ್‌ಬಿಐ ಬಹಿರಂಗ ಪಡಿಸಿದ ಮಾಹಿತಿಗಳೂ ತನಿಖಾ ಸಂಸ್ಥೆಗಳ ಶೋಧ ಕಾರ್ಯದ ನಂತರ ಕಂಪನಿಗಳು ಬಿಜೆಪಿಗೆ ದೇಣಿಗೆ ನೀಡಿವೆ ಎಂಬುದನ್ನು ದೃಢಪಡಿಸಿದೆ. ಚುನಾವಣಾ ಬಾಂಡ್ ಚಾಲ್ತಿಯಲ್ಲಿ ಇದ್ದ ಅವಧಿಯಲ್ಲಿ ದೇಶದ 41 ಕಂಪನಿಗಳ ಮೇಲೆ ಹೀಗೆ ಶೋಧಕಾರ್ಯ ನಡೆಸಲಾಗಿದೆ. ಆ ಶೋಧಕಾರ್ಯದ ನಂತರ ಆ ಕಂಪನಿಗಳು ಬಿಜೆಪಿಗೆ ₹1,698 ಕೋಟಿಯನ್ನು ಚುನಾವಣಾ ಬಾಂಡ್‌ಗಳ ಮೂಲಕ ನೀಡಿವೆ. ದಾಳಿ ಮತ್ತು ದೇಣಿಗೆ ಮಧ್ಯೆ ಸಂಬಂಧವಿದೆಯೇ ಎಂಬುದನ್ನು ತನಿಖೆಯ ಮೂಲಕ ದೃಢಪಡಿಸಿಕೊಳ್ಳಬೇಕಿದೆ. ಆದರೆ ಬಿಜೆಪಿಯ ಬಗ್ಗೆ ಸಣ್ಣ ಅಪನಂಬಿಕೆಯನ್ನಂತೂ ಇದು ಹುಟ್ಟುಹಾಕಿದೆ. ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ಚರ್ಚೆಗಳು, 'ಚಂದಾ ದೋ, ದಂದಾ ಲೋ' ಅಭಿಯಾನಗಳು ಇದನ್ನೇ ಹೇಳುತ್ತವೆ.



ಎಲ್ಲ ಪಕ್ಷಗಳೂ ಉತ್ತರಿಸಬೇಕಿದೆ

ಇದಕ್ಕಿಂತಲೂ ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ, ಪ್ರಾದೇಶಿಕ ಪಕ್ಷಗಳಿಗೆ ದೊರೆತ ದೇಣಿಗೆ. ಅತಿಹೆಚ್ಚು ದೇಣಿಗೆ ನೀಡಿದ ಫ್ಯೂಚರ್ ಗೇಮಿಂಗ್ ಆ್ಯಂಡ್ ಹೋಟೆಲ್ ಸರ್ವಿಸಸ್ ಲಿಮಿಟೆಡ್ ತಮಿಳುನಾಡಿನ ಡಿಎಂಕೆಗೆ (₹509 ಕೋಟಿ), ಪಶ್ಚಿಮ ಬಂಗಾಳದ ಟಿಎಂಸಿಗೆ (₹540 ಕೋಟಿ), ಆಂಧ್ರಪ್ರದೇಶದ ವೈಎಸ್‌ಆರ್‌ಸಿಗೆ (₹154 ಕೋಟಿ), ಕಾಂಗ್ರೆಸ್‌ಗೆ (₹50 ಕೋಟಿ) ದೇಣಿಗೆ ನೀಡಿದೆ. ಈ ಕಂಪನಿ ಬಿಜೆಪಿಗೂ (₹104 ಕೋಟಿ) ದೇಣಿಗೆ ನೀಡಿದೆಯಾದರೂ, ತನ್ನ ವಿರುದ್ಧ ರಾಜ್ಯಮಟ್ಟದಲ್ಲಿ ವಂಚನೆ ಪ್ರಕರಣಗಳಿದ್ದ ರಾಜ್ಯದಲ್ಲಿನ ಪ್ರಾದೇಶಿಕ ಪಕ್ಷಗಳಿಗೇ ಹೆಚ್ಚು ದೇಣಿಗೆ ನೀಡಿದೆ. (ಈ ಕಂಪನಿಯಿಂದ ದೇಣಿಗೆ ಪಡೆದಿರುವುದಾಗಿ ತಾನೇ ಘೋಷಿಸಿಕೊಂಡಿದ್ದು ಡಿಎಂಕೆ ಮಾತ್ರ). ₹6,000 ಕೋಟಿ ಮೊತ್ತದ ವಂಚನೆ ಪ್ರಕರಣ ಎದುರಿಸುತ್ತಿರುವ ಕಂಪನಿಯಿಂದ ನೂರಾರು ಕೋಟಿ ದೇಣಿಗೆ ಪಡೆದುಕೊಂಡದ್ದು ಏಕೆ ಎಂಬುದಕ್ಕೆ ಬಿಜೆಪಿಯಾದಿಯಾಗಿ, ಈ ಎಲ್ಲಾ ಪಕ್ಷಗಳು ಉತ್ತರ ನೀಡಬೇಕಿದೆ.

ವೀರಪ್ಪನ್ ಮಗಳು ಕಣಕ್ಕೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಧರ್ಮಪುರಿ ಮತ್ತು ಕೃಷ್ಣಗಿರಿ ಜಿಲ್ಲೆಗಳಲ್ಲಿ ಕಾಡುಗಳ್ಳ ವೀರಪ್ಪನ್ ದಶಕಗಳ ಕಾಲ ಭಯದ ವಾತಾವರಣ ಸೃಷ್ಟಿಸಿದ್ದ. ಅದೇ ಕೃಷ್ಣಗಿರಿ ಲೋಕಸಭಾ ಕ್ಷೇತ್ರದಿಂದ ವೀರಪ್ಪನ್ ಮಗಳು ವಿದ್ಯಾ ರಾಣಿ ಚುನಾವಣೆಗೆ ಸ್ಪರ್ಧಿಸಿದ್ದಾರೆ.

ತಮಿಳು ರಾಷ್ಟ್ರೀಯತೆ ಸಾರುವ ಸೀಮನ್ ನಾಯಕತ್ವದ 'ನಾಮ್ ತಮಿಳರ್ ಕಚ್ಚಿ' (ಎನ್‌ಟಿಕೆ) ಪಕ್ಷದ ಅಭ್ಯರ್ಥಿಯಾಗುವ ಮೂಲಕ ವಿದ್ಯಾ ರಾಣಿ (33) ರಾಜಕೀಯ ಭವಿಷ್ಯದ ಹುಡುಕಾಟ ಆರಂಭಿಸಿದ್ದಾರೆ.



ಬೆಂಗಳೂರಿನಲ್ಲಿ ಕಾನೂನು ಪದವಿ ಪಡೆದಿರುವ ವಿದ್ಯಾ ಅವರು ಕಳೆದ ಒಂಬತ್ತು ವರ್ಷಗಳಿಂದ ಕೃಷ್ಣಗಿರಿಯಲ್ಲಿ ನೆಲೆಸಿದ್ದು, ಅಲ್ಲಿ ಶಾಲೆಯೊಂದನ್ನು ನಡೆಸುತ್ತಿದ್ದಾರೆ.

'ಅಂಚೆಟ್ಟಿ, ಥಳ್ಳಿ, ಡೆಂಕಣಿಕೊಟ್ಟೈ ಮುಂತಾದ ಇಲ್ಲಿನ ಬೆಟ್ಟ ಪ್ರದೇಶಗಳ ಜನರ ಹಕ್ಕುಗಳಿಗಾಗಿ ನನ್ನ ತಂದೆ ಹೋರಾಡಿದರು. ಬೆಟ್ಟ ಪ್ರದೇಶಗಳ ಜನರಿಗೆ ಈಗಲೂ ಮೂಲಸೌಕರ್ಯಗಳ ಕೊರತೆಯಿದ್ದು, ನಾನು ಅವರಿಗೆ ಧ್ವನಿಯಾಗುತ್ತೇನೆ' ಎಂದು ವಿದ್ಯಾ 'ಪ್ರಜಾವಾಣಿ'ಗೆ ಹೇಳಿದರು.

ವಿದ್ಯಾ ಅವರು ಗೋಪಿನಾಥಂನ ಅಜ್ಜನ ಮನೆಯಲ್ಲಿದ್ದು ಮೂರನೇ ತರಗತಿ ಓದುತ್ತಿದ್ದಾಗ ಒಮ್ಮೆ ಮಾತ್ರ ತಂದೆಯನ್ನು ಭೇಟಿಯಾಗಿದ್ದರು. 2020ರಲ್ಲಿ ಬಿಜೆಪಿ ಸೇರಿದ್ದ ವಿದ್ಯಾ, ಟಿವಿಯಲ್ಲಿ 'ಕೂಸೆ ಮುನಿಸ್ವಾಮಿ ವೀರಪ್ಪನ್' ಸರಣಿ ನೋಡಿದ ನಂತರ ಎನ್‌ಟಿಕೆ ಸೇರಿದ್ದಾಗಿ ಹೇಳಿಕೊಂಡಿದ್ದಾರೆ.

ಅದೃಷ್ಟ ಪರೀಕ್ಷೆಗಿಳಿದ ಅಣ್ಣಾಮಲೈ, ಸೆಂಥಿಲ್


ತಮಿಳುನಾಡು: 'ರಾಜಕೀಯ' ಅಧಿಕಾರ ಹಿಡಿಯಲು ಚುನಾವಣಾ ಅಖಾಡಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಐಎಎಸ್, ಐಪಿಎಸ್ ಅಧಿಕಾರಿಯಾಗಿ ಕೆಲಸ ಮಾಡಿ ಗುರುತಿಸಿಕೊಂಡ ತಮಿಳುನಾಡಿನ ಇಬ್ಬರು ಅಧಿಕಾರಿಗಳು ತಮ್ಮ ರಾಜ್ಯದಲ್ಲಿ ಲೋಕಸಭೆ ಚುನಾವಣಾ ಅಖಾಡಕ್ಕಿಳಿಯುವ ಮೂಲಕ ರಾಜಕೀಯ 'ಅಧಿಕಾರ' ಸೂತ್ರ ಹಿಡಿಯಲು ಅದೃಷ್ಟದ ಪರೀಕ್ಷೆಗಿಳಿದಿದ್ದಾರೆ. ಈ ಇಬ್ಬರ ರಾಜಕೀಯ ಸಿದ್ಧಾಂತವು ಪರಸ್ಪರ ವಿರುದ್ಧವಾಗಿದೆ ಎನ್ನುವುದು ವಿಶೇಷ.

ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರಿಗೆ ಕೊಯಮತ್ತೂರು ಕ್ಷೇತ್ರದಿಂದ ಬಿಜೆಪಿ ಟಿಕೆಟ್ ನೀಡಿದರೆ, ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್ ಅವರಿಗೆ ತಿರುವಳ್ಳೂರು ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಘೋಷಿಸಿದೆ. ಈ ಇಬ್ಬರೂ ಕರ್ನಾಟಕ ಕೇಡರ್‌ನಲ್ಲಿ ಕೇಂದ್ರ ನಾಗರಿಕ ಸೇವೆಗೆ ಆಯ್ಕೆಯಾಗಿದ್ದರು.

2009ನೇ ಬ್ಯಾಚ್‌ನ ಐಎಎಸ್


ಅಣ್ಣಾಮಲೈ


ಸೆಂಥಿಲ್

ಅಧಿಕಾರಿಯಾಗಿದ್ದ ಸಸಿಕಾಂತ್ ಸೆಂಥಿಲ್ 2019ರಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಆಗಿದ್ದಾಗಲೇ ನಾಗರಿಕ ಸೇವೆಗೆ ರಾಜೀನಾಮೆ ನೀಡಿದ್ದರು. ಆ ಸಂದರ್ಭದಲ್ಲಿಯೇ ರಾಜಕೀಯಕ್ಕೆ ಬರುವುದಾಗಿ ಘೋಷಣೆ ಮಾಡಿದ್ದ ಅವರು ನಂತರ ಕಾಂಗ್ರೆಸ್ ಪಕ್ಷ ಸೇರಿದ್ದರು.

ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭೂತಪೂರ್ವ ಬಹುಮತದೊಂದಿಗೆ ಗೆಲುವು ಸಾಧಿಸುವಲ್ಲಿ ಸಸಿಕಾಂತ್ ಸೆಂಥಿಲ್ ಅವರ ಮಹತ್ವದ ಪಾತ್ರವಿದೆ. ಕರ್ನಾಟಕ ಕಾಂಗ್ರೆಸ್ ವಾರ್ ರೂಂನ ಅವರು, ಬಿಜೆಪಿ ವಿರುದ್ಧ ರೂಪಿಸಿದ ಹೋರಾಟ ಕಾರ್ಯತಂತ್ರಗಳ ಹಿಂದಿನ ರೂವಾರಿಯಾಗಿದ್ದರು. ಕಾಂಗ್ರೆಸ್ ಹಮ್ಮಿಕೊಂಡಿದ್ದ ಮೇಕೆದಾಟು ಪಾದಯಾತ್ರೆ ಸಂದರ್ಭದಲ್ಲಿಯೂ ಪಕ್ಷದ ಸಾಮಾಜಿಕ ಜಾಲತಾಣಗಳ ಉಸ್ತುವಾರಿಯಾಗಿದ್ದರು. ಐದು ಗ್ಯಾರಂಟಿ ಯೋಜನೆಗಳ ಹಿಂದೆಯೂ ಸಸಿಕಾಂತ್ ಸೆಂಥಿಲ್‌ರ ಪಾತ್ರ ಪ್ರಮುಖವಾಗಿತ್ತು.

ತಮಿಳುನಾಡಿನಲ್ಲಿ ಡಿಎಂಕೆ ಪಕ್ಷ ಅಧಿಕಾರದಲ್ಲಿದೆ. ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಮೈತ್ರಿಕೂಟದ ಭಾಗವಾಗಿರುವ ಡಿಎಂಕೆ, ಕಾಂಗ್ರೆಸ್‌ಗೆ 10 ಸ್ಥಾನಗಳನ್ನು ಬಿಟ್ಟುಕೊಟ್ಟಿದೆ. ಸಸಿಕಾಂತ್ ಸೆಂಥಿಲ್ ಸ್ಪರ್ಧಿಸುತ್ತಿರುವ ತಿರುವಳ್ಳೂರು ಕ್ಷೇತ್ರ ಸದ್ಯ ಕಾಂಗ್ರೆಸ್ ವಶದಲ್ಲಿಯೇ ಇದೆ. 2019ರಲ್ಲಿ ಕಾಂಗ್ರೆಸ್‌ನ ಕೆ. ಜಯಕುಮಾರ್ ಅವರು ಎಐಎಡಿಎಂಕೆಯ ಪಿ. ವೇಣುಗೋಪಾಲ್ ಅವರನ್ನು ಸೋಲಿಸಿದ್ದರು.

ಅಣ್ಣಾಮಲೈ ಅವರು 2011ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದರು. ಒಂಬತ್ತು ವರ್ಷ ಖಾಕಿ ಧರಿಸಿ ಖಡಕ್ ಪೊಲೀಸ್ ಅಧಿಕಾರಿಯಾಗಿ ಗುರುತಿಸಿಕೊಂಡಿದ್ದ ಅವರು ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಎಸ್‌ಪಿ ಆಗಿದ್ದರು. 2018ರ ಅಕ್ಟೋಬರ್‌ನಲ್ಲಿ ಬೆಂಗಳೂರಿನ ದಕ್ಷಿಣ ವಿಭಾಗದ ಡಿಸಿಪಿಯಾಗಿ ವರ್ಗಾವಣೆಯಾಗಿದ್ದ ಅವರು, 2019ರ ಮೇ ತಿಂಗಳಲ್ಲಿ ಹುದ್ದೆ ತ್ಯಜಿಸಿದ್ದರು. ಬಿಜೆಪಿ ಸೇರಿದ ಅವರನ್ನು ಪಕ್ಷವು ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಿದೆ. ಅಲ್ಲದೆ, ಕರ್ನಾಟಕ ವಿಧಾನಸಭೆಯ ಚುನಾವಣೆಯಲ್ಲಿ ಸಹ ಉಸ್ತುವಾರಿ ಹೊಣೆ ನೀಡಿತ್ತು.

ಅಣ್ಣಾಮಲೈ ತಮಿಳುನಾಡಿನಲ್ಲಿ 100 ದಿನ ನಡೆಸಿದ 'ಎನ್ ಮಣ್ಣ್ ಎನ್ ಮಕ್ಕಳ್' ಯಾತ್ರೆಯಿಂದ ಆ ರಾಜ್ಯದಲ್ಲಿ ಜನಪ್ರಿಯ ನಾಯಕರಾಗಿ ಹೊರಹೊಮ್ಮಿದ್ದಾರೆ. 'ಡಿಎಂಕೆ ಫೈಲ್ಸ್' ಆರೋಪಗಳ ಮೂಲಕ ಆಡಳಿತಾರೂಢ ಡಿಎಂಕೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಾರೆ.

ಬಿಹಾರ: 16 ಅಭ್ಯರ್ಥಿಗಳನ್ನು ಘೋಷಿಸಿದ ಜೆಡಿಯು

ಪಟ್ನಾ (ಪಿಟಿಐ): ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಜೆಡಿಯು ಪಕ್ಷವು ಭಾನುವಾರ 16 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ. ರಾಜ್ಯದಲ್ಲಿ ಪಕ್ಷದ ಮತಬ್ಯಾಂಕ್ ಆಗಿರುವ ಹಿಂದುಳಿದ ಮತ್ತು ಅತಿ ಹಿಂದುಳಿದ ಜಾತಿಗಳ ಅಭ್ಯರ್ಥಿಗಳಿಗೆ ಟಿಕೆಟ್ ಹಂಚಿಕೆಯಲ್ಲಿ ಪ್ರಾಶಸ್ತ್ಯ ನೀಡಲಾಗಿದೆ.

ಜೆಡಿಯು ಕಚೇರಿಯಲ್ಲಿ ಪಕ್ಷದ ಉಪಾಧ್ಯಕ್ಷ ವಸಿಷ್ಠ ನಾರಾಯಣ ಸಿಂಗ್ ಮತ್ತು ಸಂಜಯ್ ಕುಮಾರ್ ಝಾ ಸಮ್ಮುಖದಲ್ಲಿ ಪಟ್ಟಿ ಬಿಡುಗಡೆ ಮಾಡಲಾಯಿತು. ಪಕ್ಷದ ಹಾಲಿ 12 ಸಂಸದರಿಗೆ ಅವರ ಕ್ಷೇತ್ರಗಳಿಂದಲೇ ಸ್ಪರ್ಧಿಸುವ ಅವಕಾಶ ಕಲ್ಪಿಸಲಾಗಿದೆ.

'ಎಲ್ಲ ಅಭ್ಯರ್ಥಿಗಳನ್ನು ಪಕ್ಷದ ಅಧ್ಯಕ್ಷರೂ ಆದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರೇ ನಿರ್ಧರಿಸಿದ್ದಾರೆ. 6 ಹಿಂದುಳಿದ, 5 ಅತಿ ಹಿಂದುಳಿದ, ಒಬ್ಬ ದಲಿತ, ಒಬ್ಬ ಮುಸ್ಲಿಂ, ಇಬ್ಬರು ಮಹಿಳೆಯರು ಮತ್ತು ಪ್ರಬಲ ಸಮುದಾಯದ 3 ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗಿದೆ. ಸಮಾಜದ ಎಲ್ಲ ವರ್ಗಗಳಿಗೂ ಸೂಕ್ತ ಪ್ರಾತಿನಿಧ್ಯ ಸಿಗುವಂತೆ ಎಚ್ಚರಿಕೆ ವಹಿಸಲಾಗಿದೆ' ಎಂದು ಸಂಜಯ್ ಕುಮಾರ್ ಝಾ ತಿಳಿಸಿದರು.


ಬಿಹಾರದ ಆರು ಮೀಸಲು ಕ್ಷೇತ್ರಗಳ ಪೈಕಿ ಒಂದು ಕ್ಷೇತ್ರದಲ್ಲಿ (ಗೋಪಾಲಗಂಜ್) ಜೆಡಿಯು ಸ್ಪರ್ಧಿಸುತ್ತಿದ್ದು, ಹಾಲಿ ಸಂಸದ ಅಲೋಕ್ ಸುಮನ್ ಅಲ್ಲಿ ಮರು ಆಯ್ಕೆ ಬಯಸಿದ್ದಾರೆ. ಬಿಹಾರದ 40 ಲೋಕಸಭಾ ಸ್ಥಾನಗಳನ್ನು ಜೆಡಿಯು, ಎನ್‌ಡಿಎ ಜತೆಗೆ ಹಂಚಿಕೊಂಡಿದೆ. ಮೈತ್ರಿ ಒಪ್ಪಂದದ ಪ್ರಕಾರ, ಜೆಡಿಯುಗೆ 16 ಸ್ಥಾನಗಳನ್ನು ಬಿಟ್ಟುಕೊಡಲಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಯು 17 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು.

ಬಿಎಸ್‌ಪಿ: 25 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಲಖನೌ: ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ಲೋಕಸಭಾ ಚುನಾವಣೆಗಾಗಿ ಭಾನುವಾರ ಎರಡು ಪ್ರತ್ಯೇಕ ಪಟ್ಟಿಗಳಲ್ಲಿ ಉತ್ತರ ಪ್ರದೇಶದ 80 ಸ್ಥಾನಗಳ ಪೈಕಿ 25 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ.

ಮಾಯಾವತಿ ನೇತೃತ್ವದ ಪಕ್ಷವು ಮೊದಲು 16 ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿಗಳನ್ನೇ ಅಭ್ಯರ್ಥಿಗಳನ್ನಾಗಿ ಘೋಷಿಸಿತು. ನಂತರ ಉಳಿದ 9 ಕ್ಷೇತ್ರಗಳಿಗೆ ಉಮೇದುವಾರರ ಹೆಸರುಗಳನ್ನು ಪ್ರಕಟಿಸಿತು.

ಹೋಳಿ ಸಂಭ್ರಮ



ಅಪ್ಪುಗೆ

ನವದೆಹಲಿಯ ಚಾಂದಿನಿ ಚೌಕ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರವೀಣ್ ಖಂಡೇಲ್‌ವಾಲ್ ಭಾನುವಾರ ಹೋಳಿ ಉತ್ಸವದ ವೇಳೆ ಕಲಾವಿದರೊಬ್ಬರನ್ನು ಅಪ್ಪಿಕೊಂಡರು –ಪಿಟಿಐ ಚಿತ್ರ

'ಇಂಡಿಯಾ' ಕೂಟದ ಆತ್ಮಸಾಕ್ಷಿ ಸತ್ತುಹೋಗಿದೆ'

ಚೆನ್ನೈ (ಪಿಟಿಐ): ತಮಿಳುನಾಡು ಸಚಿವರಾದ ಅನಿತ ರಾಧಾಕೃಷ್ಣನ್ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಭಾಷೆ ಬಳಸಿದ್ದಾರೆಂದು ಆರೋಪಿಸಿರುವ ಬಿಜೆಪಿಯು, 'ಇಂಡಿಯಾ' ಮೈತ್ರಿಕೂಟದ ವಿರುದ್ಧ ವಾಗ್ದಾಳಿ ನಡೆಸಿದೆ. 'ವಿರೋಧ ಪಕ್ಷಗಳ ಮೈತ್ರಿಕೂಟದ ಆತ್ಮಸಾಕ್ಷಿ ಸತ್ತುಹೋಗಿದೆ' ಎಂದು ಬಿಜೆಪಿ ಪ್ರತಿಕ್ರಿಯಿಸಿದೆ.

ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ, ಅನಿತ ರಾಧಾಕೃಷ್ಣನ್ ಅವರ ವಿವಾದಿತ ವಿಡಿಯೊವನ್ನು 'ಎಕ್ಸ್' ವೇದಿಕೆಯಲ್ಲಿ ಹಂಚಿಕೊಂಡು ಈ ಬಗ್ಗೆ ಪೋಸ್ಟ್ ಮಾಡಿದ್ದಾರೆ.

'ಡಿಎಂಕೆ ಮುಖಂಡರು ತಮ್ಮ 'ಒರಟು ವರ್ತನೆ'ಯಲ್ಲಿ ತೀರಾ ಕೆಳಮಟ್ಟಕ್ಕೆ ಇಳಿದಿದ್ದು, ಅನಿತ ಅವರ ವಿರುದ್ಧ ತಕ್ಷಣವೇ ಕಠಿಣ ಕ್ರಮ ಜರುಗಿಸುವಂತೆ ಪಕ್ಷವು ಚುನಾವಣಾ ಆಯೋಗಕ್ಕೆ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಲಿದೆ' ಎಂದು ಅಣ್ಣಾಮಲೈ ತಿಳಿಸಿದ್ದಾರೆ.

'ಇಂಡಿಯಾ' 272ರ ಗಡಿ ದಾಟಲಿದೆ'

ನವದೆಹಲಿ (ಪಿಟಿಐ): ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳ 'ಇಂಡಿಯಾ' ಒಕ್ಕೂಟವು 272ರ ಗಡಿ ದಾಟುವ ಮೂಲಕ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲಿದೆ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಭಾನುವಾರ ಹೇಳಿದರು.

ಪಿಟಿಐ ಸಂಪಾದಕರ ಜೊತೆಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ₹4,000 ಕೋಟಿಯ ಚುನಾವಣಾ ಬಾಂಡ್‌ಗಳಿಗೂ ₹4 ಲಕ್ಷ ಕೋಟಿ ಮೊತ್ತದ ಕರಾರುಗಳಿಗೂ ನೇರ ಸಂಬಂಧವಿದೆ ಎಂದು ಆರೋಪಿಸಿದರು.


ಮೂಲಸೌಕರ್ಯ ಯೋಜನೆಗಳ ಗುತ್ತಿಗೆ ಲಭಿಸಿದ ಬಳಿಕ ಬಿಜೆಪಿ ಸಂಸದರು ಚುನಾವಣಾ ಬಾಂಡ್‌ಗಳನ್ನು ಖರೀದಿಸಿದ್ದಾರೆ ಎಂದೂ ಹೇಳಿದರು.

ಭದೌರಿಯಾ ಬಿಜೆಪಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ ಮಾಜಿ ಮುಖ್ಯಸ್ಥ ಆರ್. ಕೆ.ಎಸ್.ಭದೌರಿಯಾ ಭಾನುವಾರ ಬಿಜೆಪಿ ಸೇರ್ಪಡೆಯಾಗಿದ್ದಾರೆ.

ಕೇಂದ್ರ ಸಚಿವ ಅನುರಾಗ್ ಠಾಕೂರ್ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರ ಸಮ್ಮುಖದಲ್ಲಿ ಭದೌರಿಯಾ ಬಿಜೆಪಿ ಸೇರಿದರು.

ಉತ್ತರ ಪ್ರದೇಶದ ಭದೌರಿಯಾ 2021ರಲ್ಲಿ ವಾಯುಪಡೆಯಿಂದ ನಿವೃತ್ತರಾಗಿದ್ದರು. ತಮ್ಮ ವೃತ್ತಿಜೀವನದ ಕೊನೆಯ ಎಂಟರಿಂದ ಹತ್ತು ವರ್ಷಗಳನ್ನು ಅವರು 'ಸುವರ್ಣ ಯುಗ' ಎಂದು ಬಣ್ಣಿಸಿದರು. ಉತ್ತರ ಪ್ರದೇಶದ ಹಲವು ಲೋಕಸಭಾ ಕ್ಷೇತ್ರಗಳಿಗೆ ಇನ್ನೂ ಬಿಜೆಪಿ ಅಭ್ಯರ್ಥಿಗಳನ್ನು ಘೋಷಿಸಿಲ್ಲ. ಭದೌರಿಯಾ ಅವರನ್ನು ಪಕ್ಷವು ಕಣಕ್ಕಿಳಿಸುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ. ಹೊಸ 'ಇನಿಂಗ್ಸ್' ತಮಗೆ ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಿದೆ ಎಂದು ಅವರು ಹೇಳಿದರು.



ಭಾರತೀಯ ವಾಯುಪಡೆಯ ಮಾಜಿ ಮುಖ್ಯಸ್ಥ ಆರ್.ಕೆ.ಎಸ್.ಭದೌರಿಯಾ ಮತ್ತು ತಿರುಪತಿಯ ಮಾಜಿ ಸಂಸದ ವರಪ್ರಸಾದ್ ರಾವ್ ನವದೆಹಲಿಯಲ್ಲಿ ಕೇಂದ್ರ ಸಚಿವ ಅನುರಾಗ್ ಠಾಕೂರ್ ಮತ್ತು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಸಮ್ಮುಖದಲ್ಲಿ ಭಾನುವಾರ ಪಕ್ಷ ಸೇರ್ಪಡೆಯಾದರು –ಪಿಟಿಐ ಚಿತ್ರ

ಮಾಜಿ ಐಎಎಸ್ ಅಧಿಕಾರಿ ಬಿಜೆಪಿ ಸೇರ್ಪಡೆ: ಆಂಧ್ರಪ್ರದೇಶದ ಮಾಜಿ ಸಂಸದ ಮತ್ತು ತಿರುಪತಿಯ ವೈಎಸ್‌ಆರ್‌ಸಿಪಿ ಮುಖಂಡ ವರಪ್ರಸಾದ್ ರಾವ್ ಅವರು ಕೂಡ ಇದೇ ಕಾರ್ಯಕ್ರಮದಲ್ಲಿ ಬಿಜೆಪಿ ಸೇರ್ಪಡೆಯಾದರು. ಮಾಜಿ ಐಎಎಸ್ ಅಧಿಕಾರಿ ರಾವ್ ಅವರು ಪ್ರಧಾನಿ ಮೋದಿ ಅವರನ್ನು ಅತ್ಯಂತ ಕ್ರಿಯಾಶೀಲ ವ್ಯಕ್ತಿ ಎಂದು ಬಣ್ಣಿಸಿದರು.

ಪವಾರ್ ಕುಟುಂಬದ ವಿರುದ್ಧ ವಿಜಯ್ ಶಿವತಾರೆ ಕಣಕ್ಕೆ

ಪ್ರಜಾವಾಣಿ ವಾರ್ತೆ

ಮುಂಬೈ: ಶಿವಸೇನಾ ಮುಖಂಡ ವಿಜಯ್ ಶಿವತಾರೆ ಅವರು ಬಾರಾಮತಿ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ. ಇದರೊಂದಿಗೆ ಪವಾರ್ ಕುಟುಂಬದ ಪ್ರಾಬಲ್ಯವಿರುವ ಈ ಕ್ಷೇತ್ರದ ಚುನಾವಣಾ ಸಮೀಕರಣಗಳು ಬದಲಾಗುವ ಸಾಧ್ಯತೆಗಳಿವೆ.

'ನಾನು ಏಪ್ರಿಲ್ 12ರಂದು ನಾಮಪತ್ರ ಸಲ್ಲಿಸಲಿದ್ದೇನೆ. ಇದು ನಿಶ್ಚಿತ' ಎಂದು ಶಿವತಾರೆ ಹೇಳಿದ್ದಾರೆ. 'ಪವಾರ್ ಕುಟುಂಬಕ್ಕೆ ಮತ ಹಾಕುವುದನ್ನು ಬಿಟ್ಟರೆ ಬಾರಾಮತಿಯ ಜನರಿಗೆ ಬೇರೆ ಆಯ್ಕೆಯೇ ಇಲ್ಲವಾಗಿದೆ. ಮತದಾರರು ಸುಪ್ರಿಯಾ ಅವರಿಗೆ ಮತ ಹಾಕಬೇಕು. ಇಲ್ಲವೇ ಸುನೇತ್ರಾ ಅವರಿಗೆ ಮತ ಹಾಕಬೇಕು. ಇದು ಪವಾರ್ ಕುಟುಂಬ ರಾಜಕಾರಣವನ್ನು ಅಂತ್ಯಗೊಳಿಸುವ ಕಾಲವಾಗಿದೆ' ಎಂದು ಅವರು ತಿಳಿಸಿದ್ದಾರೆ.

ಪುರಂದರ ಕ್ಷೇತ್ರದಿಂದ ಮೂರು ಬಾರಿ ಗೆದ್ದು ಶಾಸಕ, ಮಂತ್ರಿಯಾಗಿದ್ದ ಶಿವತಾರೆ, ಉದ್ಧವ್ ಠಾಕ್ರೆ ಬಣ ತ್ಯಜಿಸಿ ಏಕನಾಥ್ ಶಿಂದೆ ಬಣ ಸೇರಿದ್ದರು. ಕ್ಷೇತ್ರದಲ್ಲಿ ಇದುವರೆಗೆ ಎನ್‌ಸಿಪಿಯ (ಎಸ್‌ಪಿ) ಶರದ್ ಪವಾರ್ ಅವರ ಮಗಳು ಸುಪ್ರಿಯಾ ಸುಳೆ ಮತ್ತು ಎನ್‌ಸಿಪಿ ಅಧ್ಯಕ್ಷ ಹಾಗೂ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಪತ್ನಿ, ಸುನೇತ್ರಾ ಪವಾರ್ ನಡುವಿನ ನೇರ ಹಣಾಹಣಿ ಎನ್ನಲಾಗಿತ್ತು. ಶಿವತಾರೆ ಸ್ಪರ್ಧೆಯೊಂದಿಗೆ ಅದು ತ್ರಿಕೋನ ಸ್ಪರ್ಧೆಯಾಗಿ ಮಾರ್ಪಡಲಿದೆ.

ಚುಟುಕು

ಜೈಪುರ: ಕಾಂಗ್ರೆಸ್ ಅಭ್ಯರ್ಥಿ ಬದಲು

ನವದೆಹಲಿ (ಪಿಟಿಐ): ಜೈಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಶರ್ಮಾ ವಿರುದ್ಧ ಒಂದು ವರ್ಗದ ಜನ ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಪಕ್ಷವು ಅವರನ್ನು ಬದಲಾಯಿಸಿದ್ದು, ಅವರ ಸ್ಥಾನದಲ್ಲಿ ಪ್ರತಾಪ್ ಸಿಂಗ್ ಖಚಾರಿಯಾವಾಸ್ ಅವರನ್ನು ಕಣಕ್ಕಿಳಿಸಿದೆ.

ಕಾಂಗ್ರೆಸ್ ಅನ್ನು ಟೀಕಿಸುತ್ತಿದ್ದ 'ಜೈಪುರ ಡೈಲಾಗ್' ಎನ್ನುವ ಸಾಮಾಜಿಕ ಜಾಲತಾಣ ವೇದಿಕೆಯೊಂದಿಗೆ ಗುರುತಿಸಿಕೊಂಡಿದ್ದ ಶರ್ಮಾ ಬಗ್ಗೆ ಪಕ್ಷದ ಮುಖಂಡರಿಂದಲೇ ವಿರೋಧ ವ್ಯಕ್ತವಾಗಿತ್ತು. ಆದರೆ, ತಾನು 'ಜೈಪುರ ಡೈಲಾಗ್' ಭಾಗ ಅಲ್ಲ ಎಂದಿದ್ದ ಶರ್ಮಾ, ಕಾಂಗ್ರೆಸ್ ಪಕ್ಷದ ಪರವಾಗಿ ಆಗಾಗ್ಗೆ ಅದರಲ್ಲಿ ಭಾಗಹಿಸುತ್ತಿದ್ದುದಾಗಿ ಪ್ರತಿಪಾದಿಸಿದ್ದರು.

ಜಿಗಿ–ನೆಗೆದಾಟ


ನವೀನ್ ಜಿಂದಾಲ್ ಬಿಜೆಪಿಗೆ

ನವದೆಹಲಿ (ಪಿಟಿಐ): ಉದ್ಯಮಿ, ಕಾಂಗ್ರೆಸ್‌ನ ಮಾಜಿ ಸಂಸದ ನವೀನ್ ಜಿಂದಾಲ್ ಅವರು 'ಕೈ'ಗೆ ಗುಡ್‌ಬೈ ಹೇಳಿ ಭಾನುವಾರ ಬಿಜೆಪಿ ಸೇರಿದರು. ಪ್ರಧಾನಿ ನರೇಂದ್ರ ಮೋದಿ ಅವರ 'ವಿಕಸಿತ ಭಾರತ' ಪರಿಕಲ್ಪನೆಗೆ ಕೊಡುಗೆ ನೀಡುವ ಉದ್ದೇಶದಿಂದ ಬಿಜೆಪಿ ಸೇರಿರುವುದಾಗಿ ಅವರು ಹೇಳಿದ್ದಾರೆ. ಜಿಂದಾಲ್ ಅವರನ್ನು ಹರಿಯಾಣದ ಕುರುಕ್ಷೇತ್ರದಿಂದ ಬಿಜೆಪಿ ಕಣಕ್ಕಿಳಿಸಿದೆ. ಅವರು 2004 ರಿಂದ 2014ರ ಅವಧಿಯಲ್ಲಿ ಇದೇ ಕ್ಷೇತ್ರದ ಸಂಸದರಾಗಿದ್ದರು.

ಹರಿಯಾಣ ಸಚಿವ ಬಿಜೆಪಿಗೆ (ಚಂಡೀಗಢ ವರದಿ): ಹರಿಯಾಣದ ಪಕ್ಷೇತರ ಶಾಸಕ ಮತ್ತು ಸಚಿವರೂ ಆಗಿರುವ ರಂಜಿತ್ ಸಿಂಗ್ ಚೌಟಾಲ ಅವರು ಭಾನುವಾರ ಬಿಜೆಪಿ ಸೇರಿದರು ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು. ಬಿಜೆಪಿಯು ಅವರನ್ನು ಹಿಸಾರ್ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ಚಿಂತನೆ ನಡೆಸಿದೆ ಎಂದು ಮೂಲಗಳು ಹೇಳಿವೆ.


ಶಿವಸೇನಾ ಸೇರಿದ ಕಾಂಗ್ರೆಸ್ ಶಾಸಕ (ಮುಂಬೈ ವರದಿ): ನಾಗಪುರ ಜಿಲ್ಲೆಯ ಉಮ್ರೇಡ್ ಶಾಸಕ ರಾಜು ಪರ್ವೆ ಅವರು ಭಾನುವಾರ ಕಾಂಗ್ರೆಸ್ ತೊರೆದು, ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಸೇರಿದರು. ಲೋಕಸಭಾ ಚುನಾವಣೆಯಲ್ಲಿ ಅವರನ್ನು ರಾಮ್ಟೆಕ್ ಕ್ಷೇತ್ರದಲ್ಲಿ, ಕಾಂಗ್ರೆಸ್‌ನ ರಶ್ಮಿ ಬಾರ್ವೆ ವಿರುದ್ಧ ಕಣಕ್ಕಿಳಿಸುವ ಸಾಧ್ಯತೆಯಿದೆ.

ಎಂಥಾ ಮಾತು!



ನಾವು ರಾಮ ಮಂದಿರವನ್ನು ನಿರ್ಮಿಸಿದ್ದೇವೆ. ಆದರೆ ಇದರಿಂದ ಏನೂ ಪ್ರಯೋಜನವಾಗದು. ರಾಮನ ಆದರ್ಶಗಳನ್ನೂ ಪಾಲನೆ ಮಾಡುವ ಅಗತ್ಯವಿದೆ. ಸ್ವಾತಂತ್ರ್ಯಪೂರ್ವದಲ್ಲಿ ದೇಶಕ್ಕಾಗಿ ರಾಜಕೀಯ ಮಾಡಲಾಗುತ್ತಿತ್ತು. ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ರಾಜಕೀಯವು ಕುರ್ಚಿಗೆ ಸೀಮಿತವಾಗಿದೆ. ನನ್ನ ಪಕ್ಷ ಕೂಡ ಈ ಅಲೆಗೆ ಕೊಚ್ಚಿಕೊಂಡು ಹೋಗುತ್ತಿರುವುದು ನೋವು ತಂದಿದೆ. ಇಂದು ಆದರ್ಶಯುತ ರಾಜಕೀಯದ ಅಗತ್ಯವಿದೆ. ದೇಶದ ರಾಜಕೀಯ ನಾಯಕರು ತಮ್ಮ ಮೌಲ್ಯಗಳನ್ನು ಪಾಲನೆ ಮಾಡಿ, ರಾಜಕೀಯದ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸಬೇಕು

ಶಾಂತಕುಮಾರ್, ಬಿಜೆಪಿ ಮುಖಂಡ, ಹಿಮಾಚಲ ಪ್ರದೇಶ ಮಾಜಿ ಮುಖ್ಯಮಂತ್ರಿ



ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರದಲ್ಲಿ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೇರಲಿದೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಕೇರಳದಲ್ಲಿ ಕನಿಷ್ಠ ನಾಲ್ಕರಿಂದ ಐದು ಕ್ಷೇತ್ರಗಳಲ್ಲಿ ಗೆಲ್ಲಲಿದೆ. ತ್ರಿಶ್ಶೂರ್ ಕ್ಷೇತ್ರದಲ್ಲಿ ಸುರೇಶ್ ಗೋಪಿ, ತಿರುವನಂತಪುರದಲ್ಲಿ ರಾಜೀವ್ ಚಂದ್ರಶೇಖರ್, ಆಟ್ಟಿಂಗಲ್‌ನಲ್ಲಿ ವಿ. ಮುರಳೀಧರನ್ ಮತ್ತು ಆಲಪ್ಪುಳದಲ್ಲಿ ಶೋಭಾ ಸುರೇಂದ್ರನ್ ಅವರು ಖಂಡಿತವಾಗಿಯೂ ಜಯ ಗಳಿಸುತ್ತಾರೆ

ಇ. ಶ್ರೀಧರನ್, ಮೆಟ್ರೊ ಪರಿಣತ, ಬಿಜೆಪಿ ಮುಖಂಡ

ಕ್ಷೇತ್ರ ಮಹಾತ್ಮೆ



ಅರುಣಾಚಲ ಪಶ್ಚಿಮ ಲೋಕಸಭಾ ಕ್ಷೇತ್ರವು ಈ ಬಾರಿಯೂ ಕದನ ಕಲಿಗಳ ಹೋರಾಟಕ್ಕೆ ಅಣಿಯಾಗಿದೆ. ಕೇಂದ್ರ ಸಚಿವ ಕಿರಣ್ ರಿಜಿಜು ಅವರನ್ನು ಬಿಜೆಪಿಯು ಕಣಕ್ಕಿಳಿಸಿದರೆ, ಅರುಣಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ನಬಂ ತುಕಿ ಅವರನ್ನು ಕಾಂಗ್ರೆಸ್ ಅಖಾಡಕ್ಕಿಳಿಸಿದೆ. ನಬಂ ಅವರು ಕಳೆದ ಚುನಾವಣೆಯಲ್ಲಿ ಕಿರಣ್ ವಿರುದ್ಧ ಸೆಣಸಿ ಎರಡನೇ ಸ್ಥಾನಕ್ಕೆ ಸೀಮಿತರಾಗಿದ್ದರು. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮುಖ್ಯಸ್ಥರಾಗಿರುವ ಜೆಡಿಯು ಈ ಬಾರಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರುಹಿ ತಗುಂಗ್ ಅವರನ್ನು ಸ್ಪರ್ಧೆಗಿಳಿಸಿ ಚುನಾವಣಾ ಕಣವನ್ನು ಇನ್ನಷ್ಟು ರಂಗೇರಿಸಿದೆ. ಈ ಬಾರಿಯ ಸ್ಪರ್ಧೆಯು ಕಿರಣ್ ಮತ್ತು ನಬಂ ನಡುವಣ ನೇರ ಹಣಾಹಣಿಗೆ ವೇದಿಕೆಯಾಗಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಕಳೆದ ಚುನಾವಣೆಯಲ್ಲಿ ಕಿರಣ್ ಅವರು ನಬಂ ವಿರುದ್ಧ ಭಾರಿ ಅಂತರದಿಂದ ಗೆದ್ದಿದ್ದರು. ಈಶಾನ್ಯ ರಾಜ್ಯ ಮಣಿಪುರದಲ್ಲಿನ ಗಲಭೆ ಸೇರಿದಂತೆ ವಿವಿಧ ವಿಚಾರಗಳು ಈ ಕ್ಷೇತ್ರದಲ್ಲಿ ತಮಗೆ ಅನುಕೂಲಕರ ವಾತಾವರಣ ಸೃಷ್ಟಿಸಲಿದೆ ಎಂಬುದು ಕಾಂಗ್ರೆಸ್ ನಿರೀಕ್ಷೆಯಾಗಿದೆ. ಕ್ಷೇತ್ರದ ಇತಿಹಾಸವನ್ನು ಗಮನಿಸಿದರೆ ಇದು ಬಿಜೆಪಿಯ ಭದ್ರಕೋಟೆ ಎನ್ನಬಹುದಾಗಿದೆ. 2004, 2014, 2019ರಲ್ಲಿ ಕಿರಣ್ ಅವರು ಇಲ್ಲಿಂದ ಲೋಕಸಭೆಗೆ ಆಯ್ಕೆಯಾಗಿರುವುದರಿಂದ ಬಿಜೆಪಿಯು ಇದನ್ನು ಗೆಲ್ಲುವ ಕ್ಷೇತ್ರವೆಂದೇ ಪರಿಗಣಿಸಿದೆ.

ಮುಖಾಮುಖಿ

ವಾರಾಣಸಿ ಉತ್ತರಪ್ರದೇಶ



ನರೇಂದ್ರ ಮೋದಿ
ಬಿಜೆಪಿ

ಉತ್ತರಪ್ರದೇಶದ ವಾರಾಣಸಿ ಕ್ಷೇತ್ರದಿಂದ ಎರಡು ಬಾರಿ ಗೆದ್ದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಾರಿಯೂ ಇದೇ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಸ್ಥಳೀಯ ಅಭ್ಯರ್ಥಿಯಲ್ಲದಿದ್ದರೂ ತಮ್ಮ ವರ್ಚಸ್ಸಿನಿಂದಲೇ ಇಲ್ಲಿ ಗೆಲ್ಲುತ್ತಿರುವ 73 ವರ್ಷದ ಮೋದಿ ಅವರಿಗೆ ಈ ಬಾರಿಯೂ ಜಯಗಳಿಸುವ ಆತ್ಮವಿಶ್ವಾಸವಿದೆ. 2001ರಿಂದ 2014ರವರೆಗೆ ಗುಜರಾತ್‌ನ ಮುಖ್ಯಮುಂತ್ರಿಯಾಗಿದ್ದ ಅವರು ರಾಷ್ಟ್ರಮಟ್ಟದ ರಾಜಕಾರಣದಲ್ಲಿ ತಮ್ಮ ಛಾಪು ಮೂಡಿಸಲು ಆಯ್ದುಕೊಂಡಿರುವ ಕ್ಷೇತ್ರವೇ ವಾರಾಣಸಿ. ಗುಜರಾತ್ ಮುಖ್ಯಮಂತ್ರಿಯಾಗಿದ್ದ ವೇಳೆ 2002ರಲ್ಲಿ ನಡೆದಿದ್ದ ಗಲಭೆಯ ಬಳಿಕ ಮೋದಿ ಅವರ ವಿರುದ್ಧ ತೀವ್ರ ಟೀಕೆಗಳು ಕೇಳಿ ಬಂದಿದ್ದವು. ಆದರೆ ವಾರಾಣಸಿಯ ಮತದಾರರು ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ. 2014ರಲ್ಲಿ ಎಎಪಿಯ ಅರವಿಂದ ಕೇಜ್ರಿವಾಲ್ ಅವರು ಇಲ್ಲಿ ಮೋದಿ ವಿರುದ್ಧ ಸ್ಪರ್ಧಿಸಿ ಪರಾಭವಗೊಂಡಿದ್ದರು.

v/s



ಅಜಯ್ ರಾಯ್
ಕಾಂಗ್ರೆಸ್

ವಾರಾಣಸಿ ಕ್ಷೇತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಎದುರಾಳಿಯಾಗಿ, ಕಾಂಗ್ರೆಸ್ ಈ ಬಾರಿಯೂ ಅಜಯ್ ರಾಯ್ ಅವರನ್ನು ಅಖಾಡಕ್ಕಿಳಿಸಿದೆ. 54 ವರ್ಷದ ಅಜಯ್, ಪಕ್ಷದ ಉತ್ತರ ಪ್ರದೇಶ ರಾಜ್ಯ ಘಟಕದ ಅಧ್ಯಕ್ಷರೂ ಹೌದು. ಅದಕ್ಕಿಂತಲೂ ಹೆಚ್ಚಾಗಿ ಅವರು ಈ ಕ್ಷೇತ್ರದಲ್ಲಿ ಸ್ಥಳೀಯವಾಗಿ ಪ್ರಭಾವವಿರುವ ರಾಜಕಾರಣಿ ಎಂಬುದು ಗಮನಾರ್ಹ. ಬಿಜೆಪಿಯ ವಿದ್ಯಾರ್ಥಿ ಸಂಘಟನೆಯ ಮೂಲಕ ರಾಜಕೀಯಕ್ಕೆ ಪ್ರವೇಶಿಸಿದ್ದ ಅವರು ಕೋಲಸ್ಲಾ ಕ್ಷೇತ್ರದಿಂದ ವಿಧಾನಸಭೆಗೆ ಮೂರು ಬಾರಿ ಬಿಜೆಪಿಯಿಂದ, ಒಮ್ಮೆ ಪಕ್ಷೇತರರಾಗಿ ಹಾಗೂ ಪಿಂದ್ರಾ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿದ್ದರು. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನಿರಾಕರಿಸಿದ್ದಕ್ಕೆ ಮುನಿಸಿಕೊಂಡಿದ್ದ ಅವರು ಸಮಾಜವಾದಿ ಪಕ್ಷಕ್ಕೆ ಸೇರ್ಪಡೆಗೊಂಡು, 2009ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು.

ಏ. 1ರಿಂದ ಕೊಬ್ಬರಿ ಖರೀದಿ?

ಕೋಲ್ಕತ್ತದಿಂದ ಪೂರೈಕೆಯಾಗದ ಕೊಬ್ಬರಿ ಸಂಗ್ರಹ ಚೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಏಪ್ರಿಲ್ 1ರಿಂದ ಉಂಡೆ ಕೊಬ್ಬರಿ ಖರೀದಿ ಆರಂಭಿಸಲು ಸರ್ಕಾರ ಸಿದ್ಧತೆ ನಡೆಸಿದೆ.

ಕೊಬ್ಬರಿ ಸಾಗಣೆಯ ಟೆಂಡರ್ ವಿಳಂಬ ಹಾಗೂ ಕೋಲ್ಕತ್ತದಿಂದ ಇನ್ನೂ ಕೊಬ್ಬರಿ ತುಂಬಲು ಅಗತ್ಯವಿರುವ ಖಾಲಿ ಚೀಲಗಳು ಪೂರೈಕೆಯಾಗಿಲ್ಲ. ಹಾಗಾಗಿ, ಖರೀದಿ ಪ್ರಕ್ರಿಯೆ ಆರಂಭಿಸಲು ವಿಳಂಬವಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಮೂಲಗಳು ತಿಳಿಸಿವೆ.

ತುಮಕೂರು, ಮೈಸೂರು ಮತ್ತು ಚಾಮರಾಜನಗರದಲ್ಲಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಹಾಮಂಡಳವು ಖರೀದಿ ಏಜೆನ್ಸಿಯಾಗಿದೆ. ಉಳಿದಂತೆ ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ರಾಮನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವು ಖರೀದಿ ಏಜೆನ್ಸಿಯಾಗಿದೆ.


ಜನವರಿ ಅಂತ್ಯದಲ್ಲಿ ಆರಂಭಿಸಿದ್ದ ಹೆಸರು ನೋಂದಣಿ ವೇಳೆ ರಾಜ್ಯ ಸಹಕಾರ ಮಾರಾಟ ಮಹಾಮಂಡಳವನ್ನು ಎಲ್ಲಾ ಜಿಲ್ಲೆಗಳಿಗೆ ಖರೀದಿ ಏಜೆನ್ಸಿಯಾಗಿ ಸರ್ಕಾರ ನಿಯೋಜಿಸಿತ್ತು. ಆದರೆ, ನೋಂದಣಿಯಲ್ಲಿ ಅಕ್ರಮ ನಡೆದಿರುವುದು ದೃಢಪಟ್ಟಿದ್ದರಿಂದ ಈ ನೋಂದಣಿಯನ್ನು ರದ್ದುಪಡಿಸಿತ್ತು. ಬಳಿಕ ಮಾರ್ಚ್ 4ರಿಂದ ಮರು ನೋಂದಣಿ ಆರಂಭಿಸಲಾಗಿತ್ತು.

ತುಮಕೂರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಖರೀದಿಯ ಹೊಣೆ ಹೊತ್ತಿರುವ ರಾಜ್ಯ ಕೃಷಿ ಮಾರಾಟ ಮಹಾಮಂಡಳವು ಸಾಗಣೆ, ಚೀಲ ಪೂರೈಕೆ ಸಂಬಂಧ ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸಿದೆ. ಇದೇ ತಿಂಗಳ ಅಂತ್ಯದೊಳಗೆ ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಹಾಗಾಗಿ, ಹೆಸರು ನೋಂದಾಯಿಸಿರುವ ರೈತರಿಂದ ಕೊಬ್ಬರಿ ಖರೀದಿಸಲು ವಿಳಂಬವಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರವು ಪ್ರಸಕ್ತ ಋತುವಿನಡಿ ರಾಜ್ಯದಲ್ಲಿ ಒಟ್ಟು 69,250 ಟನ್ ಕೊಬ್ಬರಿ ಖರೀದಿಸಲಿದೆ. ನಾಫೆಡ್ ಕೇಂದ್ರದ ಖರೀದಿ ಏಜೆನ್ಸಿಯಾಗಿದೆ.

ವಿಳಂಬಕ್ಕೆ ಬೆಳೆಗಾರರ ಆಕ್ರೋಶ

ಕನಿಷ್ಠ ಬೆಂಬಲ ಬೆಲೆಯಡಿ ಕೊಬ್ಬರಿ ಖರೀದಿಗೆ ರೈತರ ಹೆಸರು ನೋಂದಣಿ ಪ್ರಕ್ರಿಯೆಯು ಮುಗಿದು ಮೂರು ವಾರ ಪೂರ್ಣಗೊಂಡಿದ್ದರೂ ಈವರೆಗೂ ಖರೀದಿ ಆರಂಭವಾಗಿಲ್ಲ. ಇದಕ್ಕೆ ಬೆಳೆಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಜನವರಿ ಅಂತ್ಯದಲ್ಲಿ ನೋಂದಣಿಗೆ ಚಾಲನೆ ನೀಡಿದ್ದ ವೇಳೆಯೇ ಬಹುತೇಕ ರೈತರು ತೆಂಗಿನ ಕಾಯಿಯ ಸಿಪ್ಪೆ ಸುಲಿದು ದಾಸ್ತಾನು ಮಾಡಿಟ್ಟಿದ್ದಾರೆ. ಕಾಯಿಯ ಕಂಟ ಬೇರ್ಪಡಿಸಿ ಚೀಲಕ್ಕೆ ತುಂಬಿಕೊಂಡು ಖರೀದಿ ಕೇಂದ್ರಗಳಿಗೆ ತರಲು ಎದುರು ನೋಡುತ್ತಿದ್ದಾರೆ.

ಸಿಪ್ಪೆಯನ್ನು ಬೇರ್ಪಡಿಸಿ 3 ತಿಂಗಳು ಕಳೆದಿವೆ. ಬೇಸಿಗೆಯ ಬಿಸಿಲಿನ ಝಳ ಹೆಚ್ಚುತ್ತಿದ್ದು, ಕೊಬ್ಬರಿ ಒಣಗುತ್ತಿದೆ. ಮತ್ತಷ್ಟು ವಿಳಂಬ ಮಾಡಿದರೆ ಕ್ವಿಂಟಲ್‌ಗೆ ಕನಿಷ್ಠ 4ರಿಂದ 5 ಕೆ.ಜಿ ತೂಕ ಇಳಿಕೆಯಾಗಲಿದೆ. ಇಳುವರಿ ಮತ್ತಷ್ಟು ಕುಸಿತವಾದರೆ ನಮಗೆ ನಷ್ಟವಾಗಲಿದೆ ಎಂಬುದು ರೈತರ ಆತಂಕವಾಗಿದೆ.

ಅಲ್ಲದೆ, ಬಿಸಿಲಿಗೆ ಕೊಬ್ಬರಿ ಒಡೆದು ಹೋಳಾಗುತ್ತದೆ. ನಾಫೆಡ್ ಮಾನದಂಡದ ಪ್ರಕಾರ ಹೋಳು, ಚೂರಾದ ಕೊಬ್ಬರಿ ಖರೀದಿಗೆ ಅವಕಾಶವಿಲ್ಲ ಎಂಬುದು ಅವರ ಅಳಲು.

ಮಿಲ್ಲಿಂಗ್ ಕೊಬ್ಬರಿ ಖರೀದಿಗೆ ಅನುಮತಿ

ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆಯಡಿ ಮಿಲ್ಲಿಂಗ್ ಕೊಬ್ಬರಿ (ಹೋಳು ಕೊಬ್ಬರಿ) ಖರೀದಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆ. ಶೀಘ್ರವೇ, ಖರೀದಿ ಆರಂಭಿಸಲು ಸಂಪುಟ ಉಪ ಸಮಿತಿ ಕೂಡ ಅನುಮತಿ ನೀಡಿದೆ ಎಂದು ಮಹಾಮಂಡಳದ ಮೂಲಗಳು ತಿಳಿಸಿವೆ.

ಆದರೆ, ಕೇಂದ್ರ ಸರ್ಕಾರದಿಂದ ಮಾರ್ಗಸೂಚಿ ಬರಬೇಕಿದೆ. ಆ ನಂತರ ಖರೀದಿಗೆ ದಿನಾಂಕವನ್ನು ನಿಗದಿಪಡಿಸಲಾಗುತ್ತದೆ ಎಂದು ಹೇಳಿವೆ.

ರಾಜ್ಯದಲ್ಲಿ ಪ್ರಸಕ್ತ ಋತುವಿನಡಿ ಮಿಲ್ಲಿಂಗ್ ಕೊಬ್ಬರಿಯ ಇಳುವರಿ 11,995 ಟನ್ ಆಗಿದೆ. ಈ ಪೈಕಿ 2,999 ಟನ್ ಖರೀದಿಸಲಾಗುತ್ತದೆ. ಪ್ರತಿ ಕ್ವಿಂಟಲ್‌ಗೆ ₹11,160 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹450
12 ಕ್ಕೆ	₹62
ಮೈಸೂರು	
100ಕ್ಕೆ	₹450

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹300-444
ದ್ವಿತಳಿ (ಬಿ.ವಿ)	₹334-570

ಮದರ್ ಡೇರಿ: ಶೀಘ್ರ 30 ಹೊಸ ಉತ್ಪನ್ನ ಬಿಡುಗಡೆ

ನವದೆಹಲಿ (ಪಿಟಿಐ): ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಈ ಬೇಸಿಗೆಯಲ್ಲಿ 30 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಲು ಮದರ್ ಡೇರಿ ನಿರ್ಧರಿಸಿದೆ.

ಕಳೆದ ವರ್ಷದ ಬೇಸಿಗೆ ಅವಧಿಗೆ ಹೋಲಿಸಿದರೆ ಈ ಬಾರಿ ಡೇರಿಯಲ್ಲಿ ತಯಾರಾಗುವ ಉತ್ಪನ್ನಗಳಿಗೆ ಶೇ 25ರಿಂದ ಶೇ 30ರಷ್ಟು ಬೇಡಿಕೆ ಹೆಚ್ಚುವ ಸಾಧ್ಯತೆಯಿದೆ ಎಂದು ಹೇಳಿದೆ.

'ಬೇಸಿಗೆಯಲ್ಲಿ ಹೈನು ಉತ್ಪನ್ನಗಳ ವಹಿವಾಟು ಹೆಚ್ಚಿರುತ್ತದೆ. ಅದರಲ್ಲೂ ಐಸ್‌ಕ್ರೀಂ, ಮೊಸರು ಹಾಗೂ ಪಾನೀಯಗಳು ಹೆಚ್ಚು ಮಾರಾಟವಾಗುತ್ತವೆ' ಎಂದು ಮದರ್ ಡೇರಿಯ ಹಣ್ಣುಗಳು ಮತ್ತು ತರಕಾರಿಗಳ ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮನೀಶ್ ಬಂದ್ಲೀಶ್ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಈ ಬಾರಿ ಸಾಮಾನ್ಯ ಉಷ್ಣಾಂಶವು ಹೆಚ್ಚಿರುತ್ತದೆ. ಜೊತೆಗೆ, ಈ ವರ್ಷದ ಬೇಸಿಗೆ ಋತುವು ಹೆಚ್ಚು ತಾಪಮಾನದಿಂದ ಕೂಡಿರುತ್ತದೆ ಎಂದು ಹೇಳಿದೆ. ಹಾಗಾಗಿ, ಈ ಮೂರು ವಿಭಾಗಗಳಲ್ಲಿ ತಯಾರಾಗುವ ಉತ್ಪನ್ನಗಳಿಗೆ ಬೇಡಿಕೆ ದುಪ್ಪಟ್ಟಾಗುವ ಸಾಧ್ಯತೆಯಿದೆ' ಎಂದು ಹೇಳಿದ್ದಾರೆ.

ಈಗಾಗಲೇ, ಕಳೆದ ವರ್ಷಕ್ಕೆ ಹೋಲಿಸಿದರೆ ಐಸ್‌ಕ್ರೀಂ ಮಾರಾಟದಲ್ಲಿ ಏರಿಕೆಯಾಗಿದೆ. ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ಗ್ರಾಹಕರಿಗೆ ಉತ್ಪನ್ನಗಳನ್ನು ಪೂರೈಸಲು ಮದರ್ ಡೇರಿಯು ಈಗಾಗಲೇ ₹50 ಕೋಟಿ ಹೂಡಿಕೆ ಮಾಡಿದೆ ಎಂದು ಹೇಳಿದ್ದಾರೆ.

'ಪ್ರಸ್ತುತ ಡೇರಿಯು ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದೆ. ಹಾಗಾಗಿ, ನಮ್ಮ ಗ್ರಾಹಕರ ಬೇಡಿಕೆಗೆ ಅನುಸಾರವಾಗಿ ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಗುತ್ತದೆ. ಈ ಪೈಕಿ 20 ಬಗೆಯ ಹೊಸ ಐಸ್‌ಕ್ರೀಂಗಳು, ಕೊಬ್ಬಿಲ್ಲದ ಗ್ರೀಕ್ ಯೊಗಾರ್ಟ್ ಹಾಗೂ ಇತರ ಉತ್ಪನ್ನಗಳು ಈ ಪಟ್ಟಿಯಲ್ಲಿವೆ' ಎಂದು ಹೇಳಿದ್ದಾರೆ.

ಹಣಕಾಸು ನಿರ್ವಹಣೆಗೆ ಸರಳ ಸೂತ್ರ



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

'ದುಡ್ಡನ್ನು ನಾವು ನಿಯಂತ್ರಿಸಬೇಕೇ ಹೊರತು ದುಡ್ಡು ನಮ್ಮನ್ನು ನಿಯಂತ್ರಿಸಬಾರದು' ಎನ್ನುವ ಮಾತಿದೆ. ಆದರೆ, ಹೀಗಾಗಬೇಕಾದರೆ ನಿಮಗೆ ಹಣಕಾಸು ನಿರ್ವಹಣೆ ಬಗ್ಗೆ ಗೊತ್ತಿರಬೇಕು.

ಯಾರು ಆರ್ಥಿಕ ಶಿಸ್ತು ಹೊಂದಿರುತ್ತಾರೋ ಅವರು ಜೀವನದ ಏಳುಬೀಳುಗಳನ್ನು ಸರಾಗವಾಗಿ ನಿಭಾಯಿಸುತ್ತಾರೆ. ಬನ್ನಿ ಹಣಕಾಸು ನಿರ್ವಹಣೆ ಕಲಿತು ನೀವೂ ಹೇಗೆ ಯಶಸ್ಸಿನ ಹಾದಿಯಲ್ಲಿ ಸಾಗಬಹುದು ಎನ್ನುವುದನ್ನು ವಿವರವಾಗಿ ತಿಳಿಯೋಣ.

ಹೂಡಿಕೆ ಆರಂಭಿಸುವ ಮುನ್ನ ಜೀವನದ ಸುರಕ್ಷತೆಗೆ ಆದ್ಯತೆ ಕೊಡಿ: ವೈಯಕ್ತಿಕ ಹಣಕಾಸು ನಿರ್ವಹಣೆಯಲ್ಲಿ ಉಳಿತಾಯ ಮತ್ತು ಹೂಡಿಕೆಗೆ ಎಷ್ಟು ಆದ್ಯತೆ ಕೊಡುತ್ತೇವೆಯೋ ಅಷ್ಟೇ ಪ್ರಾಮುಖ್ಯತೆಯನ್ನು ಜೀವನದ ಸುರಕ್ಷತೆಗೂ ಕೊಡಬೇಕು. ನಿಮ್ಮ ಕನಸಿನ ಮನೆ ನಿರ್ಮಾಣ ಮಾಡಬೇಕಾದರೆ ಹೇಗೆ ಅಡಿಪಾಯ ಮುಖ್ಯವಾಗುತ್ತದೋ ಅದೇ ರೀತಿಯಲ್ಲಿ ಶ್ರೀಮಂತಿಕೆಯತ್ತ ಪಯಣ ಬೆಳೆಸಬೇಕಾದರೆ ಹಣಕಾಸಿನ ಸುರಕ್ಷತೆಯ ಬುನಾದಿ ಬಹಳ ಮುಖ್ಯವಾಗುತ್ತದೆ.

ನಿಮ್ಮ ವಯಸ್ಸು 20, 30 ಅಥವಾ 40 ಇರಲಿ. ಉಳಿತಾಯಕ್ಕೂ ಮೊದಲು ವೈಯಕ್ತಿಕ ಹಣಕಾಸಿನ ವಿಚಾರದಲ್ಲಿ ಪ್ರತಿಯೊಬ್ಬರು ಮೂರು ವಿಚಾರಗಳಿಗೆ ಗಮನಕೊಡಬೇಕು.

ಒಂದನೆಯದ್ದು ತುರ್ತು ನಿಧಿ (ಎಮರ್ಜೆನ್ಸಿ ಫಂಡ್). ನಿಮ್ಮ ತಿಂಗಳ ಖರ್ಚಿನ ಕನಿಷ್ಠ 6 ಪಟ್ಟು ಹಣವನ್ನು ಉಳಿತಾಯ ಖಾತೆಯಲ್ಲಿ ಅಥವಾ ಲಿಕ್ವಿಡ್ ಫಂಡ್‌ಗಳಲ್ಲಿ ಇರಬೇಕು. ಕೆಲಸ ಕಳೆದುಕೊಳ್ಳುವುದು, ಅನಾರೋಗ್ಯ, ತುರ್ತು ಪ್ರಯಾಣ ಹೀಗೆ ಧುತ್ತೆಂದು ಬರುವ ಅನಿಶ್ಚಿತತೆಗಳಿಗೆ ನಮ್ಮ ಬಳಿ ಒಂದಿಷ್ಟು ಹಣ ಕೂಡಿಟ್ಟುಕೊಂಡಿದ್ದರೆ ಸವಾಲುಗಳನ್ನು ಎದುರಿಸುವುದು ಸುಲಭವಾಗುತ್ತದೆ. ಒಂದೊಮ್ಮೆ ತುರ್ತು ನಿಧಿ ಸ್ಥಾಪಿಸಿಕೊಂಡಿಲ್ಲ ಎಂದಾದಲ್ಲಿ ಈ ಕೂಡಲೇ ಅದನ್ನು ಕಟ್ಟಿಕೊಳ್ಳುವ ಕೆಲಸ ಮಾಡಿ. ಯಾಕೆಂದರೆ ತುರ್ತು ನಿಧಿ ಆಪತ್ಕಾಲದ ಆಪ್ತಮಿತ್ರ.

ಎರಡನೆಯ ಮುಖ್ಯ ವಿಚಾರ ಅಂದ್ರೆ ಆರೋಗ್ಯ ವಿಮೆ. ನಮ್ಮ ಪರಿಶ್ರಮದ ದುಡ್ಡು ಆಸ್ಪತ್ರೆಯ ಪಾಲಾಗಬಾರದು ಎಂದರೆ ಒಂದು ಆರೋಗ್ಯ ವಿಮೆ ಕೊಂಡುಕೊಳ್ಳುವುದು ಬಹಳ ಮುಖ್ಯ. ವೈದ್ಯಕೀಯ ವೆಚ್ಚಗಳು ಪ್ರತಿವರ್ಷ ಶೇ 14ರಷ್ಟು ಹೆಚ್ಚಳವಾಗುತ್ತಿವೆ. ಇದನ್ನು ನಿಭಾಯಿಸಲು ಆರೋಗ್ಯ ವಿಮೆ ಅನಿವಾರ್ಯವಾಗುತ್ತದೆ. ಒಂದೊಮ್ಮೆ ಈಗಾಗಲೇ ಆರೋಗ್ಯ ವಿಮೆ ಇದ್ದರೆ ಅದರ ಕವರೇಜ್ ಮೊತ್ತ ಹೆಚ್ಚಿಸಿಕೊಳ್ಳುವ ಅಗತ್ಯವಿದೆಯೇ ಎನ್ನುವುದನ್ನು ಪರಾಮರ್ಶಿಸಿಕೊಳ್ಳಿ.

ಮೂರನೆಯ ಮುಖ್ಯ ವಿಚಾರ ಅಂದರೆ ಜೀವ ವಿಮೆ. ನಿಮ್ಮ ವಾರ್ಷಿಕ ಆದಾಯದ 10 ಪಟ್ಟು ಕವರೇಜ್ ಇರುವ ಟರ್ಮ್ ಲೈಫ್ ಇನ್ಶೂರೆನ್ಸ್ ಅನ್ನು ತೆಗೆದುಕೊಳ್ಳುವುದು ಬಹಳ ಮುಖ್ಯ. ಟರ್ಮ್ ಇನ್ಶೂರೆನ್ಸ್ ಅತ್ಯಂತ ಅಗ್ಗದ, ಹೆಚ್ಚು ಕವರೇಜ್ ಕೊಡುವ ಲೈಫ್ ಇನ್ಶೂರೆನ್ಸ್ ಆಗಿದೆ. ಕುಟುಂಬದ ದುಡಿಯುವ ವ್ಯಕ್ತಿಯ ಜೀವಕ್ಕೆ ತೊಂದರೆಯಾದರೆ ಟರ್ಮ್ ಇನ್ಶೂರೆನ್ಸ್ ಕರವೇಜ್‌ಗೆ ತಕ್ಕಂತೆ ನೊಂದ ಕುಟುಂಬಕ್ಕೆ ಹಣಕಾಸಿನ ಪರಿಹಾರ ದೊರೆಯುತ್ತದೆ. ₹25 ಲಕ್ಷ, ₹50 ಲಕ್ಷ, ₹75 ಲಕ್ಷ, ₹1 ಕೋಟಿ, ₹2 ಕೋಟಿ ಹೀಗೆ ನಿಮ್ಮ ಗಳಿಕೆ ಆಧರಿಸಿ ಟರ್ಮ್ ಇನ್ಶೂರೆನ್ಸ್ ಕವರೇಜ್ ಪಡೆಯಬಹುದು.

ಹಣಕಾಸಿನ ಗುರಿಗಳು ಸ್ಪಷ್ಟವಾಗಿರಲಿ; ಹಣದುಬ್ಬರದ ಲೆಕ್ಕಾಚಾರವಿರಲಿ: ಮಕ್ಕಳ ಉನ್ನತ ಶಿಕ್ಷಣ, ಮಕ್ಕಳ ಮದುವೆ, ವಿದೇಶ ಪ್ರವಾಸ, ಕಾರು ಖರೀದಿ, ಮನೆ ಖರೀದಿ ಹೀಗೆ ಪ್ರತಿಯೊಬ್ಬರಿಗೂ ಒಂದೊಂದು ಹಣಕಾಸಿನ ಗುರಿಗಳು ಇರುತ್ತವೆ. ಈ ಗುರಿಗಳನ್ನು ಕೇಂದ್ರೀಕರಿಸಿಕೊಂಡು ಹೂಡಿಕೆ ಮಾಡಿದಾಗ ಮಾತ್ರ ಗುರಿಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಉದಾಹರಣೆಗೆ ಏಳು ವರ್ಷಗಳ ಬಳಿಕ ನೀವು ವಿದೇಶ ಪ್ರವಾಸಕ್ಕೆ ಹೋಗಬೇಕು. ಅದಕ್ಕಾಗಿ ಉಳಿತಾಯ ಮಾಡಬೇಕು ಎಂದು ಭಾವಿಸುತ್ತೀರಿ ಎಂದುಕೊಳ್ಳಿ. ಇವತ್ತಿನ ಲೆಕ್ಕಾಚಾರದಲ್ಲಿ ವಿದೇಶ ಪ್ರವಾಸಕ್ಕೆ ₹10 ಲಕ್ಷ ಬೇಕಾಗುತ್ತದೆ ಎಂದುಕೊಳ್ಳಿ. ಶೇ 6ರ ಹಣದುಬ್ಬರ ಗಣನೆಗೆ ತೆಗೆದುಕೊಂಡಾಗ 7 ವರ್ಷಗಳ ಬಳಿಕ ವಿದೇಶ ಪ್ರವಾಸಕ್ಕೆ ₹10 ಲಕ್ಷದ ಜಾಗದಲ್ಲಿ ₹15 ಲಕ್ಷ ಬೇಕಾಗುತ್ತದೆ. ಹೀಗೆ ಉಳಿತಾಯ ಮಾಡುವಾಗ ಹಣದುಬ್ಬರದ ಅಂದಾಜು ಇಟ್ಟುಕೊಳ್ಳುವುದು ಬಹಳ ಮುಖ್ಯವಾಗುತ್ತದೆ.

ಪ್ರತಿ ತಿಂಗಳು ಉಳಿತಾಯ, ಹೂಡಿಕೆ ಮಾಡಿ: ಹಣಕಾಸಿನ ಗುರಿಗಳನ್ನು ಕಂಡುಕೊಳ್ಳುವುದು ಎಷ್ಟು ಮುಖ್ಯವೋ ಅವನ್ನು ಕೇಂದ್ರೀಕರಿಸಿಕೊಂಡು ಪ್ರತಿ ತಿಂಗಳೂ ನಿರ್ದಿಷ್ಟ ಮೊತ್ತ ಉಳಿತಾಯ ಮಾಡುವುದು ಅಷ್ಟೇ ಮುಖ್ಯ. ಉಳಿತಾಯ ಇದ್ದರೆ ಮಾತ್ರ ಹೂಡಿಕೆ ಸಾಧ್ಯವಾಗುತ್ತದೆ. ಹಾಗಾಗಿ, ಬಂದ ಆದಾಯದಲ್ಲಿ ಮೊದಲು ಉಳಿತಾಯ ಮಾಡಿ ನಂತರ ಖರ್ಚು ಮಾಡಿ.

ಅಂದರೆ 'ಆದಾಯ-ಉಳಿತಾಯ = ಖರ್ಚು' ಎನ್ನುವುದು ನಿಮ್ಮ ಮಂತ್ರವಾಗಬೇಕು. ನಿಮ್ಮ ಆದಾಯದ ಶೇ 50ರಷ್ಟು ಹಣವನ್ನು ಅಗತ್ಯ ವಸ್ತುಗಳ ಖರೀದಿಗೆ ಖರ್ಚು ಮಾಡಿದರೆ, ಶೇ 30ರಷ್ಟು ಹಣವನ್ನು ಬಯಕೆಗಳ ಈಡೇರಿಕೆಗೆ/ ಐಷಾರಾಮಿ ಖರೀದಿಗೆ ಮೀಸಲಿಡಿ. ಕನಿಷ್ಠ ಶೇ 20ರಷ್ಟು ಹಣವನ್ನಾದರೂ ಉಳಿತಾಯ ಮಾಡುವುದನ್ನು ಮರೆಯಬೇಡಿ. ಶೇ 20ರಷ್ಟು ಮಾತ್ರ ಉಳಿಸಿದರೆ ಸಾಕು ಎನ್ನುವ ಮನೋಭಾವ ಬೇಡ. ಎಷ್ಟು ಹೆಚ್ಚು ಉಳಿತಾಯ ಸಾಧ್ಯವೋ ಅಷ್ಟನ್ನು ಮಾಡಿದರೆ ಒಳಿತು.

ಹಣದುಬ್ಬರ ಮೀರಿ ಲಾಭ ಕೊಡುವ ಹೂಡಿಕೆಗಳನ್ನು ಪರಿಗಣಿಸಿ: ಉಳಿತಾಯದ ಹಣ ಹೂಡಿಕೆ ಮಾಡುವಾಗ ಹಣದುಬ್ಬರ ಅಥವಾ ಬೆಲೆ ಏರಿಕೆ ಮೀರಿ ಲಾಭ ಕೊಡುವ ಉತ್ಪನ್ನಗಳಲ್ಲಿ ಹೂಡಿಕೆ ಮಾಡಿದ್ದೀರಾ ಎನ್ನುವುದು ಬಹಳ ಮುಖ್ಯವಾಗುತ್ತದೆ. ಸದ್ಯ ಹಣದುಬ್ಬರ ಹೆಚ್ಚಿದೆ. ಬಹುಪಾಲು ಸಾಂಪ್ರದಾಯಿಕ ಹೂಡಿಕೆಗಳಾದ ಬ್ಯಾಂಕ್ ನಿಶ್ಚಿತ ಠೇವಣಿ (ಎಫ್.ಡಿ), ಅಂಚೆ ಕಚೇರಿ ಹೂಡಿಕೆ, ಸಾಂಪ್ರದಾಯಿಕ ಇನ್ಶೂರೆನ್ಸ್ ಪಾಲಿಸಿಗಳಲ್ಲಿ ಬಡ್ಡಿದರ ಶೇ 5ರಿಂದ 7ರ ಆಸುಪಾಸಿನಲ್ಲಿದೆ. ಇಂತಹ ಹೂಡಿಕೆಗಳಲ್ಲಿ ನಮ್ಮ ಉಳಿತಾಯದ ಹಣ ಹಾಕಿದರೆ ಹಣದುಬ್ಬರ ಮೀರಿ ಲಾಭ ಗಳಿಸಲು ಸಾಧ್ಯವಿಲ್ಲ. ಹಣದುಬ್ಬರ ಮೀರಿ ಲಾಭ ಗಳಿಸಬೇಕಾದರೆ ಮ್ಯೂಚುಯಲ್ ಫಂಡ್, ಸ್ಟಾಕ್ ಮಾರ್ಕೆಟ್ ಹೂಡಿಕೆಗಳ ಬಗ್ಗೆ ತಿಳಿದುಕೊಂಡು ಹೂಡಿಕೆ ಮಾಡಬೇಕು. ಹೀಗೆ ಮಾಡಿದಾಗ ಸಂಪತ್ತು ಸೃಷ್ಟಿಸಲು ಸಾಧ್ಯವಾಗುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಮತ್ತೆ ಗಳಿಕೆಯ ಲಯಕ್ಕೆ ಮರಳಿದ ಷೇರುಪೇಟೆ

ಕಳೆದ ವಾರ ಕುಸಿತ ಕಂಡಿದ್ದ ಷೇರುಪೇಟೆ ಸೂಚ್ಯಂಕಗಳು ಮಾರ್ಚ್ 22ಕ್ಕೆ ಕೊನೆಗೊಂಡ ವಾರದಲ್ಲಿ ಮತ್ತೆ ಜಿಗಿತ ಕಂಡಿವೆ.

ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಪುಟಿದೆದ್ದಿವೆ. 72,831 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಶೇ 0.26ರಷ್ಟು ಹೆಚ್ಚಳ ಕಂಡಿದ್ದರೆ, 22,096 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.33ರಷ್ಟು ಜಿಗಿದಿದೆ.

ಅಮೆರಿಕ ಫೆಡರಲ್ ಬ್ಯಾಂಕ್ ಭವಿಷ್ಯದಲ್ಲಿ ಬಡ್ಡಿದರ ಇಳಿಕೆ ಮಾಡುವ ಮುನ್ಸೂಚನೆ ನೀಡಿರುವುದು, ತೈಲ ಬೆಲೆಯಲ್ಲಿ ಇಳಿಕೆ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಐಟಿ ವಲಯ ಶೇ 6.2, ಎಫ್‌ಎಂಸಿಜಿ ಶೇ 0.7ರಷ್ಟು ಕುಸಿದಿವೆ. ರಿಯಲ್ ಎಸ್ಟೇಟ್ ಶೇ 5.3, ಆಟೊ ಶೇ 4.2, ಲೋಹ ಶೇ 4.2, ಎನರ್ಜಿ ಶೇ 2.2, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.9, ಮೀಡಿಯಾ ಶೇ 1.5, ಅನಿಲ ಮತ್ತು ತೈಲ ವಲಯ ಶೇ 1.5, ಫೈನಾನ್ಶಿಯಲ್ ಸರ್ವಿಸಸ್ ಶೇ 0.7, ಬ್ಯಾಂಕ್ 0.6 ಮತ್ತು ನಿಫ್ಟಿ ಫಾರ್ಮಾ ಶೇ 0.5ರಷ್ಟು ಹೆಚ್ಚಳವಾಗಿವೆ.



ನಿಫ್ಟಿಯಲ್ಲಿ ಮಾರುತಿ ಸುಜುಕಿ ಶೇ 7.48, ಟಾಟಾ ಸ್ಟೀಲ್ ಶೇ 7.35, ಬಜಾಜ್ ಆಟೊ ಶೇ 7.06, ಅಪೋಲೊ ಹಾಸ್ಪಿಟಲ್ಸ್ ಶೇ 6.46, ಐಷರ್ ಮೋಟರ್ಸ್ ಶೇ 6.32, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 4.96 ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 4.31ರಷ್ಟು ಜಿಗಿದಿವೆ. ಇನ್ಫೊಸಿಸ್ ಶೇ 7.71, ಟಾಟಾ ಕನ್ಸ್ಯೂಮರ್ ಶೇ 7.38, ಟಿಸಿಎಸ್ ಶೇ 7.22, ವಿಪ್ರೊ ಶೇ 5.76, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 5.44, ಎಲ್‌ಟಿಐ ಮೈಂಡ್ ಟ್ರೀ ಶೇ 3.59 ಮತ್ತು ಎಚ್‌ಯುಎಲ್ ಶೇ 3.08ರಷ್ಟು ಕುಸಿದಿವೆ.


ಮುನ್ನೋಟ: ಇನ್ನೇನು ಕಂಪನಿಗಳ ತ್ರೈಮಾಸಿಕ ಫಲಿತಾಂಶದ ಅವಧಿ ಸಮೀಪಿಸುತ್ತಿದೆ. ಜನವರಿ- ಮಾರ್ಚ್ ತ್ರೈಮಾಸಿಕ ಸಾಧನೆ ವರದಿ ಮೇಲೆ ಹೂಡಿಕೆದಾರರು ಕಣ್ಣಿಡಲಿದ್ದಾರೆ. ಉಳಿದಂತೆ ಲೋಕಸಭಾ ಚುನಾವಣೆ, ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

₹15 ಸಾವಿರ ಕೋಟಿ ಲಾಭಾಂಶ ಪಾವತಿ ನಿರೀಕ್ಷೆ

ಸರ್ಕಾರಿ ಬ್ಯಾಂಕ್‌ಗಳಿಗೆ ₹98 ಸಾವಿರ ಕೋಟಿ ಲಾಭ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ 12 ಬ್ಯಾಂಕ್‌ಗಳ ಲಾಭದಲ್ಲಿ ಏರಿಕೆಯಾಗಿದೆ. ಹಾಗಾಗಿ, ಮಾರ್ಚ್ ಅಂತ್ಯದಲ್ಲಿ ಈ ಬ್ಯಾಂಕ್‌ಗಳ ಲಾಭಾಂಶ ಪಾವತಿಯು ₹15 ಸಾವಿರ ಕೋಟಿ ಮೀರುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

2023-24ನೇ ಆರ್ಥಿಕ ವರ್ಷದ ಮೊದಲ ಮೂರು ತ್ರೈಮಾಸಿಕಗಳಲ್ಲಿ ಬ್ಯಾಂಕ್‌ಗಳು ₹98 ಸಾವಿರ ಕೋಟಿ ಲಾಭ ಗಳಿಸಿವೆ. 2022-23ನೇ ಹಣಕಾಸು ವರ್ಷದಲ್ಲಿ ಗಳಿಸಿದ ಒಟ್ಟು ₹1.05 ಲಕ್ಷ ಕೋಟಿ ಲಾಭಕ್ಕೆ ಹೋಲಿಸಿದರೆ ₹7,000 ಕೋಟಿಯಷ್ಟೇ ಕಡಿಮೆ ಇದೆ. 2021-22ರಲ್ಲಿ ₹66,539 ಕೋಟಿ ಲಾಭ ಗಳಿಸಿದ್ದವು.



ಕಳೆದ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರವು ಬ್ಯಾಂಕ್‌ಗಳಿಂದ ₹8,718 ಕೋಟಿ ಲಾಭಾಂಶ ಗಳಿಸಿತ್ತು. ಮೂರು ತ್ರೈಮಾಸಿಕಗಳಲ್ಲಿ ಬ್ಯಾಂಕ್‌ಗಳು ಗಳಿಸಿರುವ ಲಾಭದಲ್ಲಿ ಸರ್ಕಾರಕ್ಕೆ ₹13,804 ಕೋಟಿ ಲಾಭಾಂಶ ಲಭಿಸಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಒಟ್ಟಾರೆ ಶೇ 58ರಷ್ಟು ಏರಿಕೆಯಾಗಲಿದೆ.

'2023-24ನೇ ಆರ್ಥಿಕ ವರ್ಷದ ಅಂತ್ಯದೊಳಗೆ ಬ್ಯಾಂಕ್‌ಗಳ ಲಾಭವು ಹಿಂದಿನ ಹಣಕಾಸು ವರ್ಷಕ್ಕಿಂತಲೂ ಹೆಚ್ಚಳವಾಗಲಿದೆ. ಹಾಗಾಗಿ, ಸರ್ಕಾರಕ್ಕೆ ಪಾವತಿಸುವ ಲಾಭಾಂಶದಲ್ಲೂ ಏರಿಕೆಯಾಗಲಿದೆ' ಎಂದು ಮೂಲಗಳು ತಿಳಿಸಿವೆ.

ವಸೂಲಾಗದ ಸಾಲದ ಪ್ರಮಾಣವು (ಎನ್‌ಪಿಎ) ಶೇ 6ಕ್ಕಿಂತ ಕಡಿಮೆ ಇರುವ ಬ್ಯಾಂಕ್‌ಗಳಷ್ಟೇ ಲಾಭಾಂಶವನ್ನು ಘೋಷಿಸಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಜನವರಿಯಲ್ಲಿ ಪ್ರಕಟಿಸಿದ್ದ ಕರಡು ಮಾರ್ಗಸೂಚಿಯಲ್ಲಿ ಹೇಳಿದೆ. 2024-25ನೇ ಹಣಕಾಸು ವರ್ಷದಲ್ಲಿ ಈ ಹೊಸ ಮಾರ್ಗಸೂಚಿಗಳು ಜಾರಿಗೆ ಬರಲಿವೆ.

ಹಣಕಾಸು ಸಂಸ್ಥೆಗಳ ಲೆಕ್ಕ ಪರಿಶೋಧನೆಗೆ ನಿರ್ಧಾರ

ನವದೆಹಲಿ (ಪಿಟಿಐ): ಸಾಲ ಮಂಜೂರಾತಿ ಸಂಬಂಧ ನಿಯಮಾವಳಿ ಉಲ್ಲಂಘಿಸಿದ ಆರೋಪ ಎದುರಿಸುತ್ತಿರುವ ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ಹಾಗೂ ಜೆಎಂ ಫೈನಾನ್ಶಿಯಲ್ ಪ್ರಾಡೆಕ್ಟ್ಸ್ ಲಿಮಿಟೆಡ್‌ನ ವಹಿವಾಟಿನ ಬಗ್ಗೆ ಲೆಕ್ಕ ಪರಿಶೋಧನೆ ನಡೆಸಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ.

ಬ್ಯಾಂಕ್‌ಯೇತರ ಹಣಕಾಸು ಕಂಪನಿಗಳ ವಿರುದ್ಧದ ತನಿಖೆಯ ಭಾಗವಾಗಿ ಈ ಕ್ರಮಕ್ಕೆ ಮುಂದಾಗಿದೆ. ವಿಶೇಷ ಲೆಕ್ಕ ಪರಿಶೋಧನೆಗಾಗಿ ಪ್ರತ್ಯೇಕವಾಗಿ ಇಬ್ಬರು ಲೆಕ್ಕ ಪರಿಶೋಧಕರ ನಿಯೋಜನೆಗೆ ಟೆಂಡರ್ ಕರೆದಿದೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಪಟ್ಟಿಯಲ್ಲಿರುವ ಲೆಕ್ಕ ಪರಿಶೋಧಕ ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಬಿಡ್ ಸಲ್ಲಿಕೆಗೆ ಏಪ್ರಿಲ್ 8 ಅಂತಿಮ ದಿನವಾಗಿದೆ. ಆಯ್ಕೆಯಾದ ಸಂಸ್ಥೆಗಳು ಏಪ್ರಿಲ್ 12ರಿಂದ ಈ ಎರಡೂ ಕಂಪನಿಗಳ ಲೆಕ್ಕ ಪರಿಶೋಧನೆಯನ್ನು ನಡೆಸಲಿವೆ.

ಐಐಎಫ್‌ಎಲ್ ಫೈನಾನ್ಸ್‌ಗೆ ಚಿನ್ನದ ಸಾಲ ನೀಡದಂತೆ ಆರ್‌ಬಿಐ ಸೂಚಿಸಿದೆ.

ಐಪಿಒಗಳಿಗೆ ಹಣಕಾಸು ಹಾಗೂ ಮಾರ್ಪಡಿಸಲಾಗದ ಡಿಬೆಂಚರ್‌ಗಳ ಚಂದಾದಾರಿಕೆಗೆ ಜೆಎಂ ಫೈನಾನ್ಶಿಯಲ್ ಮಂಜೂರು ಮಾಡಿರುವ ಸಾಲದಲ್ಲಿ ನ್ಯೂನತೆಗಳಿದ್ದು, ಗ್ರಾಹಕರ ಹಿತಾಸಕ್ತಿಗೆ ವಿರುದ್ಧವಾಗಿವೆ. ನಿಯಮಾವಳಿಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆ. ಹಾಗಾಗಿ, ಹೊಸದಾಗಿ ಸಾಲ ಮಂಜೂರು ಮಾಡಬಾರದು ಎಂದು ಸೂಚಿಸಿದೆ.

ಸಂಕ್ಷಿಪ್ತ ಸುದ್ದಿ

5 ಕಂಪನಿಗಳ ಎಂ-ಕ್ಯಾಪ್: ₹1.97 ಲಕ್ಷ ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ ಐದು ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯವು (ಎಂ-ಕ್ಯಾಪ್) ಕಳೆದ ವಾರ ₹1.97 ಲಕ್ಷ ಕೋಟಿ ಇಳಿಕೆಯಾಗಿದೆ.

ಟಿಸಿಎಸ್ ಮತ್ತು ಇನ್ಫೊಸಿಸ್ ಹೆಚ್ಚು ಇಳಿಕೆ ಕಂಡ ಕಂಪನಿಗಳಾಗಿವೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ₹1.10 ಲಕ್ಷ ಕೋಟಿ, ಇನ್ಫೊಸಿಸ್ ₹52,291 ಕೋಟಿ, ಹಿಂದೂಸ್ತಾನ್ ಯೂನಿಲಿವರ್ ₹16,834 ಕೋಟಿ, ಎಲ್‌ಐಸಿ ₹11,701 ಕೋಟಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ₹6,996 ಕೋಟಿ ಮಾರುಕಟ್ಟೆ ಮೌಲ್ಯ ಇಳಿಕೆಯಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ₹49,152 ಕೋಟಿ, ಎಸ್‌ಬಿಐ ₹12,851 ಕೋಟಿ, ಐಟಿಸಿ ₹11,108 ಕೋಟಿ, ಭಾರ್ತಿ ಏರ್‌ಟೆಲ್ ₹9,430 ಕೋಟಿ ಮತ್ತು ಐಸಿಐಸಿಐ ಬ್ಯಾಂಕ್‌ನ ಎಂ-ಕ್ಯಾಪ್‌ಗೆ ₹8,191 ಕೋಟಿ ಸೇರ್ಪಡೆಯಾಗಿದೆ.

ನೈಜೀರಿಯಾ: ಅಪಹರಿಸಲಾಗಿದ್ದ 300 ಶಾಲಾ ಮಕ್ಕಳ ಬಿಡುಗಡೆ

ಅಬುಜಾ (ನೈಜೀರಿಯಾ) (ಎಪಿ): ನೈಜೀರಿಯಾದ ವಾಯವ್ಯ ರಾಜ್ಯವಾದ ಕಡುನಾದಲ್ಲಿ ಅಪಹರಿಸಲಾಗಿದ್ದ 300 ಶಾಲಾ ಮಕ್ಕಳನ್ನು ಎರಡು ವಾರಗಳ ನಂತರ ಬಿಡುಗಡೆ ಮಾಡಲಾಗಿದೆ.

2014ರಿಂದ ಈವರೆಗೆ ನೈಜೀರಿಯಾದ ಶಾಲೆಗಳಿಂದ ಕನಿಷ್ಠ 1,400 ಮಕ್ಕಳನ್ನು ಅಪಹರಿಸಲಾಗಿದೆ. ಬೋಕೋ ಹರಾಮ್ ಉಗ್ರಗಾಮಿಗಳು ಬೊರ್ನೊದ ಚಿಕ್‌ಬೊಕ್ ಗ್ರಾಮದ ನೂರಾರು ಶಾಲಾ ಬಾಲಕಿಯರನ್ನು ಅಪಹರಿಸಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ದೇಶದ ವಾಯವ್ಯ ಮತ್ತು ಮಧ್ಯ ಭಾಗಗಳಲ್ಲಿ ಹೆಚ್ಚಿನ ಅಪಹರಣಗಳು ನಡೆಯುತ್ತಿವೆ. ಈ ಪ್ರದೇಶಗಳಲ್ಲಿ ಹತ್ತಾರು ಸಶಸ್ತ್ರ ಗುಂಪುಗಳು ಗ್ರಾಮಸ್ಥರು ಹಾಗೂ ಪ್ರಯಾಣಿಕರ ಬಳಿ ಸುಲಿಗೆ ಮಾಡುತ್ತವೆ.



ಬಾಂಬ್ ದಾಳಿ ದಕ್ಷಿಣ ಗಾಜಾ ಪಟ್ಟಿಯ ರಫಾದಲ್ಲಿರುವ ಅಲ್-ನಜ್ಜರ್ ಆಸ್ಪತ್ರೆಯ ಮೇಲೆ ಇಸ್ರೇಲ್ ನಡೆಸಿದ ಬಾಂಬ್ ದಾಳಿಯಲ್ಲಿ ಮಕ್ಕಳು ಗಾಯಗೊಂಡರು –ಎಎಫ್‌ಪಿ ಚಿತ್ರ

ಭಾರತ, ರಷ್ಯಾದಿಂದ ಪರಸ್ಪರ ಹಿತಾಸಕ್ತಿಗೆ ಒತ್ತು: ಜೈಶಂಕರ್


ಭಾರತೀಯ ಸಮುದಾಯದೊಂದಿಗೆ ಸಂವಾದ

ಸಿಂಗಪುರ(ಪಿಟಿಐ): 'ರಷ್ಯಾ ಜೊತೆ ಭಾರತ ಯಾವಾಗಲೂ ಉತ್ತಮ ಬಾಂಧವ್ಯ ಹೊಂದಿದೆ. ಎರಡೂ ದೇಶಗಳು ಪರಸ್ಪರರ ಹಿತಾಸಕ್ತಿಗಳ ಕುರಿತು ಹೆಚ್ಚು ಮುತುವರ್ಜಿ ವಹಿಸಿವೆ' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾನುವಾರ ಹೇಳಿದ್ದಾರೆ.

ಸಿಂಗಪುರ ಪ್ರವಾಸದಲ್ಲಿರುವ ಅವರು, ಇಲ್ಲಿನ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಿದರು.

'ಭಾರತವು ರಷ್ಯಾ ಅಥವಾ ಇತರ ಯಾವುದೇ ದೇಶದೊಂದಿಗೆ ತನ್ನದೇ ದೃಷ್ಟಿಕೋನದಿಂದ ವ್ಯವಹರಿಸುತ್ತದೆ' ಎಂದ ಅವರು, 'ರಷ್ಯಾ ಇತ್ತೀಚೆಗೆ ಚೀನಾಕ್ಕೆ ಹತ್ತಿರವಾಗುತ್ತಿದೆ' ಎಂಬ ಮಾತುಗಳನ್ನು ಅಲ್ಲಗಳೆದರು.

'ರಷ್ಯಾ ನಮಗೆ ಸಹಾಯ ಮಾಡಿದೆಯೇ ಅಥವಾ ಹಾನಿ ಮಾಡಿದೆಯೇ ತಿಳಿಸಿ. ನಿರ್ಣಾಯಕ ಸಂದರ್ಭಗಳಲ್ಲಿ ರಷ್ಯಾ ನಮಗೆ ನೆರವಿನ ಹಸ್ತ ಚಾಚಿದೆಯೇ ಅಥವಾ ಅಡಚಣೆ ಉಂಟು ಮಾಡಿದೆಯೇ? ರಷ್ಯಾದೊಂದಿಗೆ ಸಂಬಂಧ ಮುಂದುವರಿಸುವುದರಿಂದ ನಮಗೆ ಪ್ರಯೋಜನವಾಗಲಿದೆಯೇ ಅಥವಾ ಕೇವಲ ತೊಂದರೆ ಅನುಭವಿಸಬೇಕಾಗುತ್ತದೆಯೇ ಹೇಳಿ' ಎಂದು ಸಭಿಕರಿಂದ ತೂರಿ ಬಂದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.



ಎಸ್.ಜೈಶಂಕರ್

ನವೆಂಬರ್‌ನಲ್ಲಿ ನಡೆಯಲಿರುವ ಅಮೆರಿಕ ಅಧ್ಯಕ್ಷೀಯ ಚುನಾವಣೆ ಕುರಿತ ಮತ್ತೊಂದು ಪ್ರಶ್ನೆಗೆ, 'ಈ ವಿಚಾರವಾಗಿ ನಾನು ಕಾದು ನೋಡುತ್ತೇನೆ. ಆದರೆ, ಅಮೆರಿಕ ಅಧ್ಯಕ್ಷರಾಗಿ ಯಾರೇ ಚುನಾಯಿತರಾದರೂ ಅವರೊಂದಿಗೆ ಭಾರತ ಉತ್ತಮ ಬಾಂಧವ್ಯ ಹೊಂದಿರಲಿದೆ' ಎಂದು ಪ್ರತಿಕ್ರಿಯಿಸಿದರು.

ಮಾಸ್ಕೊ ಹೊರವಲಯದಲ್ಲಿ ಗುಂಡಿನ ದಾಳಿ • ದಾಳಿಕೋರರ ಬಂಧನ ಕುರಿತು ಪುಟಿನ್ ಮಾಹಿತಿ

‘ಉಕ್ರೇನ್‌ಗೆ ಪಲಾಯನ ವೇಳೆ ಸೆರೆ’

ಮಾಸ್ಕೊ(ಎಪಿ): ಮಾಸ್ಕೊ ಹೊರವಲಯದ ಕ್ರಾಕಸ್ ಸಿಟಿ ಹಾಲ್‌ನಲ್ಲಿ ಗುಂಡಿನ ದಾಳಿ ನಡೆಸಿದ ನಾಲ್ವರು ಬಂದೂಕುಧಾರಿಗಳು ಉಕ್ರೇನ್‌ಗೆ ಪಲಾಯನ ಮಾಡಲು ಯತ್ನಿಸುತ್ತಿದ್ದಾಗ ಅವರನ್ನು ಸೆರೆ ಹಿಡಿಯಲಾಯಿತು ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹೇಳಿದ್ದಾರೆ.


ಪುಟಿನ್ ಅವರ ಈ ಹೇಳಿಕೆಯನ್ನು ತಳ್ಳಿ ಹಾಕಿರುವ ಉಕ್ರೇನ್, ‘ಕ್ರಾಕಸ್ ಸಿಟಿ ಹಾಲ್‌ನಲ್ಲಿ ನಡೆದ ದಾಳಿಯಲ್ಲಿ ತನ್ನ ಪಾತ್ರ ಇಲ್ಲ’ ಎಂದು ಹೇಳಿದೆ. ಈ ದಾಳಿಯೊಂದಿಗೆ ತಪ್ಪಾಗಿ ತಳುಕು ಹಾಕಲಾಗುತ್ತಿದೆ ಎಂದು ಪುಟಿನ್ ಸೇರಿದಂತೆ ರಷ್ಯಾದ ರಾಜಕೀಯ ನಾಯಕರ ವಿರುದ್ಧವೂ ಉಕ್ರೇನ್ ಆರೋಪ ಮಾಡಿದೆ.

‘ಈ ದಾಳಿಯನ್ನು ತಾನೇ ನಡೆಸಿದ್ದಾಗಿ ಐಎಸ್ ಹೊಣೆ ಹೊತ್ತಿಕೊಂಡಿದೆ. ಈ ದಾಳಿಯಲ್ಲಿ ಉಕ್ರೇನ್‌ನ ಯಾವುದೇ ಪಾತ್ರವಿಲ್ಲ’ ಎಂದು ಉಕ್ರೇನ್‌ನ ರಾಷ್ಟ್ರೀಯ ಭದ್ರತಾ ಮಂಡಳಿಯ ವಕ್ತಾರೆ ಆ್ಯಡ್ರಿಯೆನ್ ವಾಟ್ಸನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮಾಸ್ಕೊದಲ್ಲಿ ಯೋಜಿತ ಭಯೋತ್ಪಾದಕ ದಾಳಿ ನಡೆಯುವ ಕುರಿತು ಮಾರ್ಚ್ ಆರಂಭದಲ್ಲಿಯೇ ರಷ್ಯಾಕ್ಕೆ ಮಾಹಿತಿ ನೀಡಿದ್ದ ಅಮೆರಿಕ, ರಷ್ಯಾದಲ್ಲಿರುವ ತನ್ನ ಪ್ರಜೆಗಳಿಗೂ ಈ ಬಗ್ಗೆ ಎಚ್ಚರಿಕೆ ನೀಡಿತ್ತು’ ಎಂದು ವಾಟ್ಸನ್ ಹೇಳಿದ್ದಾರೆ.

ಮುಖ್ಯಾಂಶಗಳು

- ಪುಟಿನ್ ಹೇಳಿಕೆ ತಳ್ಳಿ ಹಾಕಿದ ಉಕ್ರೇನ್
- ದಾಳಿ ಹೊಣೆ ಹೊತ್ತುಕೊಂಡ ಇಸ್ಲಾಮಿಕ್ ಸ್ಟೇಟ್‌ನ ಅಫ್ಗಾನಿಸ್ತಾನ ಘಟಕ
- ಶಂಕಿತರ ವಿಚಾರಣೆ ನಡೆಸುತ್ತಿದ್ದ ವಿಡಿಯೊ ಬಿಡುಗಡೆ ಮಾಡಿದ ರಷ್ಯಾ



ಇದು ಉಗ್ರರ ಕೃತ್ಯ. ನಾಲ್ವರು ಶಂಕಿತರು ಉಕ್ರೇನ್ ಗಡಿಗೆ ಹೊಂದಿಕೊಂಡಂತೆ ನಿರ್ಮಿಸಲಾಗಿದ್ದ ಕಿರುಮಾರ್ಗದ ಮೂಲಕ ಪರಾರಿಯಾಗಲು ಯತ್ನಿಸುತ್ತಿದ್ದಾಗ ಬಂಧಿಸಲಾಗಿದೆ

ವ್ಲಾದಿಮಿರ್ ಪುಟಿನ್, ರಷ್ಯಾ ಅಧ್ಯಕ್ಷ

ಶೋಕ ದಿನ ಘೋಷಣೆ

ದಾಳಿಯಲ್ಲಿ ಮೃತಪಟ್ಟವರ ಗೌರವಾರ್ಥ ಭಾನುವಾರ ಶೋಕ ದಿನವನ್ನಾಗಿ ಘೋಷಿಸಿದ್ದ ಪುಟಿನ್, ದೇಶದಾದ್ಯಂತ ಭದ್ರತೆಯನ್ನು ಸಹ ಹೆಚ್ಚಿಸಿದ್ದರು.

ಇಸ್ಲಾಮಿಕ್ ಸ್ಟೇಟ್‌ನ (ಐಎಸ್) ಅಫ್ಗಾನಿಸ್ತಾನ ಘಟಕವು ಈ ದಾಳಿಯನ್ನು ತಾನೇ ನಡೆಸಿದ್ದಾಗಿ ಹೇಳಿಕೊಂಡಿದೆ. ಆದರೆ, ಕ್ರಾಕಸ್ ಸಿಟಿ ಹಾಲ್ ಮೇಲೆ ದಾಳಿ ನಡೆದ ನಂತರ ದೇಶವನ್ನು ಉದ್ದೇಶಿಸಿ ಮಾತನಾಡಿರುವ ಪುಟಿನ್ ಅವರು, ತಮ್ಮ ಭಾಷಣದಲ್ಲಿ ಎಲ್ಲಿಯೂ ಐಎಸ್‌ನ ಪ್ರಸ್ತಾಪ ಮಾಡಿಲ್ಲ.

ಶಂಕಿತರನ್ನು ಬಂಧಿಸಿ, ಅವರನ್ನು ವಿಚಾರಣೆಗೆ ಒಳಪಡಿಸುತ್ತಿದ್ದ ದೃಶ್ಯಗಳಿರುವ ವಿಡಿಯೊಗಳನ್ನು ರಷ್ಯಾ ಮಾಧ್ಯಮಗಳು ಪ್ರಸಾರ ಮಾಡಿವೆ.

‘ಇಸ್ಲಾಮಿಕ್ ಬೋಧಕನ ಸಹಾಯಕನೊಬ್ಬ ತನ್ನನ್ನು ಸಂಪರ್ಕಿಸಿದ್ದ. ಈ ದಾಳಿಯಲ್ಲಿ ಪಾಲ್ಗೊಂಡಲ್ಲಿ ಹಣ ನೀಡುವುದಾಗಿ ತಿಳಿಸಿದ್ದ’ ಎಂಬುದಾಗಿ ಬಂಧಿತರ ಪೈಕಿ ಒಬ್ಬಾತ ಹೇಳಿಕೆ ನೀಡುತ್ತಿರುವುದು ವಿಡಿಯೊದಲ್ಲಿದೆ.

ದಾಳಿಕೋರರ ಪೈಕಿ ಒಬ್ಬಾತ ತಜಕಿಸ್ತಾನ ಪ್ರಜೆ ಎಂದು ರಷ್ಯಾ ಮಾಧ್ಯಮಗಳು ಗುರುತಿಸಿವೆ.

ಅಫ್ಗಾನಿಸ್ತಾನ ಗಡಿಗೆ ಹೊಂದಿಕೊಂಡಿರುವ ತಜಕಿಸ್ತಾನ ಮುಸ್ಲಿಂ ಬಾಹುಳ್ಯದ ದೇಶ. 15 ಲಕ್ಷದಷ್ಟು ತಜಕಿಸ್ತಾನ ಪ್ರಜೆಗಳು ರಷ್ಯಾದಲ್ಲಿ ಉದ್ಯೋಗದಲ್ಲಿದ್ದು, ಬಹುತೇಕರು ರಷ್ಯಾ ಪೌರತ್ವ ಹೊಂದಿದ್ದಾರೆ.

ಸೈನಿಕರೊಂದಿಗೆ ಹೋಳಿ ಆಚರಿಸಿದ ಸಿಂಗ್



ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಭಾರತೀಯ ಸೈನಿಕರೊಂದಿಗೆ ಲೇಹ್‌ನಲ್ಲಿ ಹೋಳಿ ಹಬ್ಬವನ್ನು ಆಚರಿಸಿದರು —ಪಿಟಿಐ ಚಿತ್ರ

ಲೇಹ್ (ಪಿಟಿಐ): ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಭಾರತೀಯ ಸೈನಿಕರೊಂದಿಗೆ ಹೋಳಿ ಹಬ್ಬವನ್ನು ಇಲ್ಲಿ ಆಚರಿಸಿದರು. ಪ್ರತಿಕೂಲ ಹವಾಮಾನದಲ್ಲೂ ಶತ್ರುರಾಷ್ಟ್ರಗಳ ದಾಳಿಯಿಂದ ದೇಶವನ್ನು ರಕ್ಷಿಸುತ್ತಿರುವ ಸೈನಿಕರನ್ನು ಶ್ಲಾಘಿಸಿದರು.

ಜಗತ್ತಿನ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್‌ನಲ್ಲಿ ಹೋಳಿ ಆಚರಿಸಲು ಸಿಂಗ್ ಮೊದಲು ತೀರ್ಮಾನಿಸಿದ್ದರು. ಆದರೆ ಪ್ರತಿಕೂಲ ಹವಾಮಾನದ ಕಾರಣದಿಂದ ಅಲ್ಲಿಗೆ ಭೇಟಿ ನೀಡುವ ಕಾರ್ಯಕ್ರಮ ರದ್ದಾಯಿತು.

ಸಿಂಗ್, ಸೈನಿಕರ ಹಣೆಗೆ ತಿಲಕವನ್ನು ಇಟ್ಟರು. ಬಳಿಕ ಮಾತನಾಡಿ, ‘ರಾಷ್ಟ್ರ ರಾಜಧಾನಿಯಾಗಿ ದೆಹಲಿ, ಆರ್ಥಿಕ ರಾಜಧಾನಿಯಾಗಿ ಮುಂಬೈ ಮತ್ತು ತಾಂತ್ರಿಕ ರಾಜಧಾನಿಯಾಗಿ ಬೆಂಗಳೂರನ್ನು ಹೊಂದಿರುವಂತೆ ಲಡಾಕ್, ಧೈರ್ಯ ಮತ್ತು ಶೌರ್ಯದ ರಾಜಧಾನಿ’ ಎಂದು ಹೇಳಿದರು.

‘ತೀವ್ರ ಚಳಿಯ ವಾತಾವರಣದಿಂದ ಎಲ್ಲರೂ ಮನೆಯೊಳಗೆ ಬೆಚ್ಚಗೆ ಇರಲು ಬಯಸಿದರೆ, ನೀವು ದೇಶಕ್ಕಾಗಿ ಎದೆಯೊಡ್ಡಿ ಹೋರಾಡುತ್ತಿದ್ದೀರಿ. ನಿಮ್ಮ ದೇಶಭಕ್ತಿ ಮತ್ತು ಸೇವೆಗೆ ನಾವು ಎಂದಿಗೂ ಚಿರಋಣಿ’ ಎಂದು ಹೇಳಿದರು.

ಇದೇ ಸಂದರ್ಭದಲ್ಲಿನ ಇಲ್ಲಿನ ಯುದ್ಧ ಸ್ಮಾರಕಕ್ಕೆ ತೆರಳಿ ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಿದರು.



ಮೆರವಣಿಗೆ ಈಸ್ಟರ್ ಮೊದಲಿನ ಭಾನುವಾರ ಅಂಗವಾಗಿ ಚೆನ್ನೈನಲ್ಲಿ ನಡೆದ ಮೆರವಣಿಗೆಯಲ್ಲಿ ಕ್ರೈಸ್ತರು ಪಾಲ್ಗೊಂಡಿದ್ದರು -ಎಎಫ್‌ಪಿ ಚಿತ್ರ

ಐಸಿಎಂಆರ್ ನಡೆಸಿದ ಅಧ್ಯಯನ ವರದಿ • ನಗರವಾಸಿಗಳಲ್ಲಿ ಹೆಚ್ಚಿನ ಅಪಾಯ ಮಟ್ಟ

ಕರ್ನಾಟಕದಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣ ಹೆಚ್ಚು

ನವದೆಹಲಿ (ಪಿಟಿಐ): ಕರ್ನಾಟಕ, ತೆಲಂಗಾಣ, ತಮಿಳುನಾಡು ಮತ್ತು ದೆಹಲಿಯಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣವು ಈಶಾನ್ಯ ಹಾಗೂ ಪೂರ್ವ ಭಾಗದ ರಾಜ್ಯಗಳಲ್ಲಿನ ಪ್ರಮಾಣಕ್ಕಿಂತ ಹೆಚ್ಚಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ನಡೆಸಿರುವ ಅಧ್ಯಯನವೊಂದು ಹೇಳಿದೆ.

ಈ ಕಾಯಿಲೆಯ ಪ್ರಮಾಣವು ದೇಶದಲ್ಲಿ 2025ರ ಸುಮಾರಿಗೆ ಗಣನೀಯ ಪ್ರಮಾಣದಲ್ಲಿ ಹೆಚ್ಚಳ ಕಾಣಲಿದೆ ಎಂದು ಅಧ್ಯಯನವು ಅಂದಾಜು ಮಾಡಿದೆ.

ಅಧ್ಯಯನ ವರದಿಯನ್ನು ಈಚೆಗೆ ಪ್ರಕಟಿಸಲಾಗಿದೆ. 2012ರಿಂದ 2016ರ ನಡುವಿನ ಅವಧಿಯಲ್ಲಿ ರಾಜ್ಯಗಳ ಮಟ್ಟದಲ್ಲಿ ವರದಿಯಾದ ಸ್ತನ ಕ್ಯಾನ್ಸರ್ ಪ್ರಕರಣಗಳನ್ನು ಈ ಅಧ್ಯಯನವು ಪರಿಗಣಿಸಿದೆ. ಕಾಯಿಲೆಯ ಕಾರಣದಿಂದಾಗಿ ವ್ಯಕ್ತಿಯು ಕಳೆದುಕೊಂಡ ಜೀವಿತಾವಧಿ (ವೈಎಲ್‌ಎಲ್), ವೈಕಲ್ಯಕ್ಕೆ ತುತ್ತಾಗಿ ಕಳೆದ ಜೀವಿತಾವಧಿ (ವೈಎಲ್‌ಡಿ) ಮತ್ತು ಅಂಗವೈಕಲ್ಯ ಹಾಗೂ ಸಾವಿನಿಂದಾಗಿ ಕಳೆದುಕೊಂಡ ಆಯಸ್ಸನ್ನು (ಡಿಎಎಲ್‌ವೈ) ಆಧರಿಸಿ ಈ ಅಧ್ಯಯನವು 2025ರ ವೇಳೆಗೆ ಎದುರಾಗುವ ಕಾಯಿಲೆಯ ಹೊರೆಯನ್ನು ಅಂದಾಜು ಮಾಡಿದೆ.

2016ರಲ್ಲಿ ಭಾರತೀಯ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್‌ನ ಹೊರೆಯು ಪ್ರತಿ ಒಂದು ಲಕ್ಷ ಮಂದಿಗೆ 515.6 ಡಿಎಎಲ್‌ವೈ ಎಂದು ಅಧ್ಯಯನವು ಅಂದಾಜಿಸಿದೆ. ಮಹಿಳೆಯರನ್ನು ವಿವಿಧ ವಯಸ್ಸುಗಳ ಗುಂಪುಗಳಲ್ಲಿ ವಿಭಜಿಸಿ ಈ ಅಂದಾಜು ಮಾಡಲಾಗಿದೆ.

‘ತಮಿಳುನಾಡು, ತೆಲಂಗಾಣ, ಕರ್ನಾಟಕ ಮತ್ತು ದೆಹಲಿಯಲ್ಲಿ ಕ್ಯಾನ್ಸರ್ ಹೊರೆಯು ಈಶಾನ್ಯ ಭಾಗದ ಮತ್ತು ಪೂರ್ವ ಭಾಗದ ರಾಜ್ಯಗಳಿಗಿಂತ ಹೆಚ್ಚಾಗಿದೆ. 2025ರ ವೇಳೆಗೆ ಕ್ಯಾನ್ಸರ್ ಹೊರೆಯು 56 ಲಕ್ಷ ಡಿಎಎಲ್‌ವೈಗೆ ಏರಿಕೆ ಆಗಲಿದೆ’ ಎಂದು ಐಸಿಎಂಆರ್ ಅಧ್ಯಯನ ಹೇಳಿದೆ.

ಜನಸಂಖ್ಯೆ ಆಧಾರಿತ 28 ಕ್ಯಾನ್ಸರ್ ಮಾಹಿತಿ ಕೇಂದ್ರಗಳಿಂದ ಪಡೆದ ದತ್ತಾಂಶವನ್ನು ಈ ವರದಿಯು ಅಧ್ಯಯನಕ್ಕೆ ಬಳಸಿಕೊಂಡಿದೆ.

ಅಧ್ಯಯನದ ಮುಖ್ಯಾಂಶಗಳು

- ಗ್ರಾಮೀಣ ಭಾಗದ ಮಹಿಳೆಯರು ನಗರ ಪ್ರದೇಶಗಳ ಮಹಿಳೆಯರಿಗೆ ಹೋಲಿಸಿದರೆ ಸ್ತನ ಕ್ಯಾನ್ಸರ್‌ಗೆ ತುತ್ತಾಗುವ ಸಾಧ್ಯತೆ ಕಡಿಮೆ
- ದೈಹಿಕ ಶ್ರಮ ಇಲ್ಲದ ಜೀವನಶೈಲಿಯು ನಗರಗಳಲ್ಲಿ ವ್ಯಾಪಕವಾಗಿರುವುದು, ಬೊಜ್ಜು ಜಾಸ್ತಿ ಆಗಿರುವುದು, ಮದುವೆಯಾಗುವ ವಯಸ್ಸನ್ನು ಮುಂದೂಡುವುದು ಹಾಗೂ ಎದೆಹಾಲು ಕುಡಿಸುವುದನ್ನು ಕಡಿಮೆ ಮಾಡಿರುವುದು ಕೂಡ ನಗರವಾಸಿಗಳಲ್ಲಿ ಸ್ತನ ಕ್ಯಾನ್ಸರ್ ಪ್ರಮಾಣ ಹೆಚ್ಚಾಗುವುದಕ್ಕೆ ಕಾರಣ ಎನ್ನಲಾಗಿದೆ.
- ಸಾಮಾಜಿಕ–ಆರ್ಥಿಕ ಅಂಶಗಳು ಕೂಡ ಸ್ತನ ಕ್ಯಾನ್ಸರ್ ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗುತ್ತವೆ. ಆರೋಗ್ಯಸೇವೆಗಳ ಲಭ್ಯತೆ, ಕ್ಯಾನ್ಸರ್ ತಡೆಯಲು ಕೈಗೊಂಡ ಕ್ರಮಗಳು ಹಾಗೂ ಚಿಕಿತ್ಸೆಯ ಫಲಿತಾಂಶಗಳು ಕ್ಯಾನ್ಸರ್ ಪ್ರಮಾಣದ ಮೇಲೆ ಪರಿಣಾಮ ಬೀರುತ್ತವೆ.
- ಕಡಿಮೆ ಆದಾಯ ಇರುವ ವರ್ಗಗಳಿಗೆ ಸೇರಿದವರಿಗೆ ಗುಣಮಟ್ಟದ ಆರೋಗ್ಯಸೇವೆಗಳನ್ನು ಸಕಾಲದಲ್ಲಿ ಪಡೆಯುವುದು ಕಷ್ಟವಾಗುತ್ತದೆ. ಇದರಿಂದಾಗಿ ಕ್ಯಾನ್ಸರ್ ಪತ್ತೆಯೇ ವಿಳಂಬವಾಗುತ್ತದೆ.
- ಭಾರತದಲ್ಲಿ ಕ್ಯಾನ್ಸರ್ ಪತ್ತೆಯಾಗುವಿಕೆ ಮತ್ತು ಸಾಮಾಜಿಕ–ಆರ್ಥಿಕ ಅಸಮಾನತೆಗಳ ನಡುವೆ ಸಂಬಂಧವು ಸ್ಪಷ್ಟವಾಗಿದೆ. ಸಂಪನ್ಮೂಲಗಳ ಹಂಚುವಿಕೆಯನ್ನು ಪುನರ್‌ಪರಿಶೀಲಿಸಬೇಕು, ಆರೋಗ್ಯಸೇವೆಗಳ ಲಭ್ಯತೆಯನ್ನು ಹೆಚ್ಚಿಸಬೇಕು ಎಂಬುದರ ಮಹತ್ವವನ್ನು ಇದು ಒತ್ತಿ ಹೇಳುತ್ತಿದೆ.

ಕೆಲವು ವಿವರಣೆಗಳು

ವೈಎಲ್‌ಡಿ ಅಂದರೆ: ಕ್ಯಾನ್ಸರ್‌ನಿಂದಾಗಿ ಉಂಟಾದ ವೈಕಲ್ಯದ ಜೊತೆಯಲ್ಲೇ ವ್ಯಕ್ತಿಯು ಸವೆಸಿದ ಜೀವಿತಾವಧಿ

ವೈಎಲ್‌ಎಲ್ ಅಂದರೆ: ಕ್ಯಾನ್ಸರ್‌ನ ಕಾರಣದಿಂದಾಗಿ ವ್ಯಕ್ತಿಯ ಆಯಸ್ಸಿನಲ್ಲಿ ಇಳಿಕೆ, ಅಂದರೆ ವ್ಯಕ್ತಿಯ ಜೀವಿತಾವಧಿಯು ಸರಾಸರಿ ಜೀವಿತಾವಧಿಗೂ ಮೊದಲೇ ಕೊನೆಗೊಳ್ಳುವುದು.

ಡಿಎಎಲ್‌ವೈ: ಒಟ್ಟಾರೆಯಾಗಿ ಕ್ಯಾನ್ಸರ್ ಸೃಷ್ಟಿಸುವ ಹೊರೆ. ಅಂದರೆ, ಅನಾರೋಗ್ಯದಿಂದಾಗಿ ವ್ಯಕ್ತಿಯು ಕಳೆದುಕೊಳ್ಳುವ ವರ್ಷಗಳು, ವೈಕಲ್ಯದಿಂದಾಗಿ ಕಳೆದುಕೊಂಡ ವರ್ಷಗಳು ಹಾಗೂ ಅಕಾಲ ಮೃತ್ಯುವಿನಿಂದಾಗಿ ಒಟ್ಟು ಆಯಸ್ಸಿನಲ್ಲಿ ಉಂಟಾಗುವ ನಷ್ಟ.

ಐಎಸ್ ನಂಟು: ವಿದ್ಯಾರ್ಥಿ ಬಂಧನ

ಮತ್ತೊಬ್ಬನಿಗೆ ಎಸ್‌ಟಿಎಫ್‌ನಿಂದ ಶೋಧ ಕಾರ್ಯಾಚರಣೆ



ಗುವಾಹಟಿ (ಪಿಟಿಐ): ಭಯೋತ್ಪಾದಕ ಸಂಘಟನೆಯಾದ ಇಸ್ಲಾಮಿಕ್ ಸ್ಟೇಟ್‌ಗೆ (ಐಎಸ್) ನಿಷ್ಠೆ ಹೊಂದಿದ್ದ ಗುವಾಹಟಿ ಐಐಟಿಯ ವಿದ್ಯಾರ್ಥಿಯೊಬ್ಬನನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಭಾನುವಾರ ಬಂಧಿಸಲಾಗಿದೆ. ಮತ್ತೊಬ್ಬ ವಿದ್ಯಾರ್ಥಿಗಾಗಿ ಶೋಧ ನಡೆದಿದೆ.

ಜೈವಿಕ ವಿಜ್ಞಾನ ವಿಭಾಗದ ನಾಲ್ಕನೇ ವರ್ಷದ ವಿದ್ಯಾರ್ಥಿ, ದೆಹಲಿ ಮೂಲದ ತೌಸಿಫ್ ಅಲಿ ಫಾರೂಕಿ ಬಂಧಿತ. ಈತ ಐಎಸ್‌ಗೆ ಸೇರ್ಪಡೆಗೊಳ್ಳಲು ತೆರಳುತ್ತಿದ್ದಾಗ, ಕಾಮರೂಪ ಜಿಲ್ಲೆಯ ಹಜೋ ಬಳಿ ಶನಿವಾರ ಸಂಜೆ ವಶಕ್ಕೆ ಪಡೆಯಲಾಗಿತ್ತು.

‘ಫಾರೂಕಿಯನ್ನು ವಿಚಾರಣೆಗೊಳಪಡಿಸಿದಾಗ ಐಎಸ್‌ನೊಂದಿಗೆ ನಂಟು ಹೊಂದಿರುವುದು ಖಚಿತಪಟ್ಟಿತು. ಪೂರಕ ಸಾಕ್ಷ್ಯಗಳು ದೊರೆತ ನಂತರ ಬಂಧಿಸಲಾಗಿದೆ’ ಎಂದು ಅಸ್ಸಾಂನ ವಿಶೇಷ ಕಾರ್ಯಪಡೆಯ (ಎಸ್‌ಟಿಎಫ್) ಹಿರಿಯ ಅಧಿಕಾರಿ ಪಾರ್ಥಸಾರಥಿ ಮಹಾಂತ ಸುದ್ದಿಸಂಸ್ಥೆಗೆ ತಿಳಿಸಿದರು.

‘ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 10 ದಿನ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ಐಐಟಿ ಕ್ಯಾಂಪಸ್ ನಲ್ಲಿರುವ ಹಾಸ್ಟೆಲ್‌ನಲ್ಲಿ ಆತ ಇದ್ದ ಕೊಠಡಿಯಲ್ಲೂ ಶೋಧ ನಡೆಸಿದ್ದೇವೆ’ ಎಂದು ಅವರು ಹೇಳಿದರು.

ಗೃಹ ಖಾತೆಯನ್ನೂ ಹೊಂದಿರುವ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು, ‘ಗುವಾಹಟಿ ಐಐಟಿಯ ಇಬ್ಬರು ವಿದ್ಯಾರ್ಥಿಗಳು ಐಎಸ್ ಜತೆಗೆ ಸಂಪರ್ಕ ಹೊಂದಿದ್ದು, ಆ ಗುಂಪನ್ನು ಸೇರಲು ಯತ್ನಿಸಿದ್ದಾರೆ. ಈ ಪೈಕಿ ಒಬ್ಬನನ್ನು ಬಂಧಿಸಲಾಗಿದ್ದು, ಮತ್ತೊಬ್ಬನಿಗಾಗಿ ಶೋಧ ನಡೆದಿದೆ. ಈ ವಿದ್ಯಾರ್ಥಿಗಳ ಚಟುವಟಿಕೆ ಕುರಿತು ಅವರ ಪೋಷಕರಿಗೆ ಮಾಹಿತಿ ನೀಡಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಐಎಸ್ ಇಂಡಿಯಾ ಮುಖ್ಯಸ್ಥ ಹ್ಯಾರಿಸ್ ಫಾರೂಕಿ ಅಲಿಯಾಸ್ ಹರೀಶ್ ಅಜ್ಮಲ್ ಫಾರೂಕಿ, ಆತನ ಸಹಚರ ಅನುರಾಗ್ ಸಿಂಗ್ ಅಲಿಯಾಸ್ ರೇಹಾನ್‌ನನ್ನು ಅಸ್ಸಾಂನ ಧುಬ್ರಿ ಜಿಲ್ಲೆಯಲ್ಲಿ ಬುಧವಾರವಷ್ಟೇ ಬಂಧಿಸಲಾಗಿತ್ತು. ಈ ಇಬ್ಬರು ಉಗ್ರರು ಬಾಂಗ್ಲಾದೇಶ ಗಡಿ ದಾಟಿ, ಬಂದಿದ್ದರು. ಇದಾದ ಮೂರು ದಿನಗಳಲ್ಲಿಯೇ ಮತ್ತೊಬ್ಬನನ್ನು ಬಂಧಿಸಿದಂತಾಗಿದೆ.

ಕೇರಳ: ಸಿ.ಎಂ ವಿರುದ್ಧ ಬಿಜೆಪಿ ವಾಗ್ದಾಳಿ

ತಿರುವನಂತಪುರ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆಯ (ಸಿಎಎ) ಅನುಷ್ಠಾನದ ವಿರುದ್ಧ ಕೇರಳದಲ್ಲಿನ ಆಡಳಿತಾರೂಢ ಎಡಪಕ್ಷಗಳು ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಿರುವುದಕ್ಕೆ ಬಿಜೆಪಿಯು ಭಾನುವಾರ ವಾಗ್ದಾಳಿ ನಡೆಸಿದೆ. ಕೋಮು ವಿಭಜನೆಯ ಉದ್ದೇಶದಿಂದಲೇ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿಕೆ ನೀಡುತ್ತಿದ್ದಾರೆ ಎಂದು ದೂರಿದೆ.

‘ಈ ಹಿಂದೆ ನಿರ್ದಿಷ್ಟ ಸಮುದಾಯವೊಂದು ಸಿಎಎ ವಿರೋಧಿಸಿ ಸಾರ್ವಜನಿಕ ಆಸ್ತಿಗೆ ನಷ್ಟವನ್ನುಂಟು ಮಾಡುವ ಜೊತೆಗೆ ಹಿಂಸಾಚಾರಕ್ಕೂ ಕಾರಣವಾಗಿತ್ತು. ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಗೊಳ್ಳುತ್ತಿದ್ದಂತೆ ಇದಕ್ಕೆ ಸಂಬಂಧಿಸಿದ ಎಲ್ಲ ಪ್ರಕರಣಗಳನ್ನು ವಾಪಸ್ ಪಡೆಯುವುದಾಗಿ ಎಡಪಕ್ಷ ನೇತೃತ್ವದ ಸರ್ಕಾರ ಹೇಳಿದೆ. ಇದು ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆ. ಇದರ ವಿರುದ್ಧ ಆಯೋಗವು ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಆಗ್ರಹಿಸಿದ್ದಾರೆ.

‘ಸಿಎಎ ಹೆಸರಿನಡಿ ಸುಳ್ಳನ್ನು ವ್ಯವಸ್ಥಿತವಾಗಿ ಹಬ್ಬಿಸುವ ಮೂಲಕ ಕೋಮು ಧ್ರುವೀಕರಣಕ್ಕೆ ಮುಖ್ಯಮಂತ್ರಿ ಯತ್ನಿಸುತ್ತಿದ್ದಾರೆ. ಮುಸ್ಲಿಮರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಈ ಆರೋಪಕ್ಕೆ ಆಧಾರವೇನು? ಸಿಎಎ ಯಾವುದೇ ಒಂದು ನಿರ್ದಿಷ್ಟ ಸಮುದಾಯಕ್ಕೆ ಪೌರತ್ವವನ್ನು ನಿರಾಕರಿಸುವುದಿಲ್ಲ’ ಎಂದು ಹೇಳಿದ್ದಾರೆ.

ಕಾಸರಗೋಡಿನಲ್ಲಿ ಶನಿವಾರ ಸಿಪಿಎಂ ಆಯೋಜಿಸಿದ್ದ ಸಿಎಎ ವಿರೋಧಿ ರ‍್ಯಾಲಿಯಲ್ಲಿ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದ ಪಿಣರಾಯಿ, ‘ಸಂವಿಧಾನದಲ್ಲಿ ಪ್ರತಿಪಾದಿಸಿರುವ ಸಮಾನತೆಯ ಪರಿಕಲ್ಪನೆಯನ್ನು ಕಾನೂನಿನ ಮೂಲಕ ಚೂರುಚೂರು ಮಾಡಲಾಗುತ್ತಿದೆ. ಇದು ಮುಸ್ಲಿಮರನ್ನು ಗುರಿಯಾಗಿಸಿಕೊಂಡಿರುವ ಕಾನೂನು’ ಎಂದು ಗುಡುಗಿದ್ದರು.

ಕೇರಳದ ಐದು ಕಡೆ ಸಿಎಎ ವಿರೋಧಿ ರ‍್ಯಾಲಿಗಳನ್ನು ಆಡಳಿತಾರೂಢ ಎಡಪಕ್ಷಗಳು ಆಯೋಜಿಸಿವೆ.

ರಾಷ್ಟ್ರಪತಿ ವಿರುದ್ಧ ’ಸುಪ್ರೀಂ’ಗೆ ಮೊರೆ: ಬಿಜೆಪಿ ಟೀಕೆ

ತಿರುವನಂತಪುರ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ವಿರುದ್ಧ ಸುಪ್ರೀಂಕೋರ್ಟ್ ಮೊರೆ ಹೋಗಿರುವ ಕೇರಳ ಸರ್ಕಾರದ ಮೇಲೆ ಕಿಡಿಕಾರಿರುವ ಬಿಜೆಪಿ, ‘ಮಹಿಳೆಯರು ಹಾಗೂ ಬುಡಕಟ್ಟು ಸಮುದಾಯಗಳ ಬಗ್ಗೆ ಸಿಪಿಎಂಗೆ ಇರುವ ತಾರತಮ್ಯವನ್ನು ಇದು ತೋರಿಸುತ್ತಿದೆ’ ಎಂದಿದೆ.

ಸಿಪಿಎಂ ಯಾವಾಗಲೂ ಮಹಿಳಾ ವಿರೋಧಿ ನಿಲುವು ಅಳವಡಿಸಿಕೊಂಡಿದೆ. ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆ ಮಾಡಿದಾಗಲೂ ಅವರು ಅದನ್ನು ವಿರೋಧಿಸಿದ್ದರು ಎಂದು ಬಿಜೆಪಿ ಹಿರಿಯ ನಾಯಕ ಹಾಗೂ ಕೇಂದ್ರ ಸಚಿವ ವಿ. ಮುರಳೀಧರನ್ ಆರೋಪಿಸಿದ್ದಾರೆ.

ರಾಜ್ಯ ವಿಧಾನಸಭೆ ಅಂಗೀಕರಿಸಿದ ನಾಲ್ಕು ಮಸೂದೆಗಳಿಗೆ ಒಪ್ಪಿಗೆ ನೀಡದ ಕಾರಣ ಮುರ್ಮು ವಿರುದ್ಧ ಕೇರಳದ ಎಲ್‌ಡಿಎಫ್ ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋಗಿದ್ದು, ತನ್ನ ನಡೆಯನ್ನು ಸಮರ್ಥಿಸಿಕೊಂಡಿದೆ. ಆದರೆ, ರಾಷ್ಟ್ರಪತಿಯವರ ಈ ಕ್ರಮವು ಸಂವಿಧಾನಕ್ಕೆ ಅನುಗುಣವಾಗಿಯೇ ಇದೆ ಎಂದು ಹೇಳಿದ್ದಾರೆ.

ಕೇಜ್ರಿವಾಲ್ ಪರ ‘ಇಂಡಿಯಾ’ ರ‍್ಯಾಲಿ

ಒಂದನೇ ಪುಟದಿಂದ...

‘ರಾಷ್ಟ್ರ ರಾಜಧಾನಿ ದೆಹಲಿ ಈಗ ಸೇನೆಯ ದಂಡು ಪ್ರದೇಶದಂತಾಗಿದೆ. ಇದು ಕೇಜ್ರಿವಾಲ್ ಅವರಿಗೆ ಮಾತ್ರ ಸಂಬಂಧಿಸಿದ ವಿಚಾರವಲ್ಲ. ಕೇಂದ್ರೀಯ ಸಂಸ್ಥೆಗಳ ದುರ್ಬಳಕೆ, ಬೆದರಿಕೆ ಹಾಗೂ ಭಯ ಹುಟ್ಟಿಸುವ ಮೂಲಕ ವಿರೋಧ ಪಕ್ಷಗಳ ಪಾಳಯವನ್ನು ನಾಶ ಮಾಡುವುದೇ ಕೇಂದ್ರ ಸರ್ಕಾರದ ಗುರಿಯಾಗಿದೆ’ ಎಂದರು.

‘ಪ್ರಜಾಪ್ರಭುತ್ವದ ಉಳಿವಿಗಾಗಿ ನಡೆಸಲಾಗುತ್ತಿರುವ ಈ ಹೋರಾಟದಿಂದ ಪಕ್ಷ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ’ ಎಂದು ಕಾಂಗ್ರೆಸ್‌ನ ದೆಹಲಿ ಘಟಕದ ಅಧ್ಯಕ್ಷ ಅರವಿಂದ ಸಿಂಗ್ ಲವ್ಲಿ ಹೇಳಿದರು.

‘ರ‍್ಯಾಲಿ ಸಂಘಟಿಸಲು ಅನುಮತಿ ಸಿಗುವ ವಿಶ್ವಾಸ ಇದೆಯೇ’ ಎಂಬ ಪತ್ರಕರ್ತರ ಪ್ರಶ್ನೆಗೆ, ‘ಈ ಸಂಬಂಧ ಮನವಿ ಸಲ್ಲಿಸಲಾಗುವುದು. ಒಂದು ವೇಳೆ ಅನುಮತಿ ನಿರಾಕರಿಸಿದರೆ, ಮುಂದಿನ ಹೋರಾಟದ ರೂಪುರೇಷೆ ಕುರಿತು ನಿರ್ಧರಿಸುತ್ತೇವೆ’ ಎಂದು ರಾಯ್ ಪ್ರತಿಕ್ರಿಯಿಸಿದರು.

‘ಅನುಮತಿ ಸಿಗುವ ಬಗ್ಗೆ ಪ್ರಶ್ನೆ ಉದ್ಭವಿಸಿರುವುದು ದುರದೃಷ್ಟಕರ. ಇದು ಈ ದೇಶದಲ್ಲಿ ಈಗಿರುವ ಪರಿಸ್ಥಿತಿ. ರ‍್ಯಾಲಿ ನಡೆಸುವುದಕ್ಕಾಗಿ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಅನುಮತಿ ಸಿಗುವ ಬಗ್ಗೆ ಸಂದೇಹವಿದೆ. ಇದು ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ಥಿತಿ’ ಎಂದು ಕಾಂಗ್ರೆಸ್‌ನ ಲವ್ಲಿ ಪ್ರತಿಕ್ರಿಯಿಸಿದರು.

ಜೈಲಿನಿಂದ ಕೇಜ್ರಿವಾಲ್ ಆದೇಶ: ಪರಿಶೀಲನೆ ನಡೆಸಲಿರುವ ಇ.ಡಿ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ನೀರು ಮತ್ತು ಒಳಚರಂಡಿಗೆ ಸಂಬಂಧಿಸಿದ ಕೆಲವು ಕಾರ್ಯಗಳಿಗೆ ಜೈಲಿನಿಂದಲೇ ಸೂಚನೆಗಳನ್ನು ರವಾನಿಸಿದ್ದಾರೆ ಎಂದು ಸಚಿವೆ ಆತಿಶಿ ಅವರು ನೀಡಿರುವ ಹೇಳಿಕೆಯನ್ನು ಇ.ಡಿ ಅಧಿಕಾರಿಗಳು ಗಮನಕ್ಕೆ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಂಧನದಲ್ಲಿ ಇರುವ ಮುಖ್ಯಮಂತ್ರಿ ನೀಡಿರುವ ಸೂಚನೆಗಳು ಹಣದ ಅಕ್ರಮ ವರ್ಗಾವಣೆ ತಡೆ ಕುರಿತ ವಿಶೇಷ ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ಇವೆಯೇ ಎಂಬುದನ್ನು ಇ.ಡಿ. ಪರಿಶೀಲಿಸಲಿದೆ ಎಂದು ಗೊತ್ತಾಗಿದೆ.

ಮುಂದುವರಿದ ಭೋಜಶಾಲಾ ಸಮೀಕ್ಷೆ

ಧರ್ (ಪಿಟಿಐ): ವಿವಾದಿತ ಭೋಜಶಾಲಾ/ಕಮಲ ಮೌಲಾ ಮಸೀದಿ ಸಂಕೀರ್ಣದಲ್ಲಿ 2003ರ ನಂತರದಲ್ಲಿ ಇರಿಸಿರುವ ವಸ್ತುಗಳನ್ನು ಸಮೀಕ್ಷೆಯ ವ್ಯಾಪ್ತಿಯಿಂದ ಹೊರಗಿರಿಸಬೇಕು ಎಂದು ಕೋರಿ ಮುಸ್ಲಿಂ ಪ್ರತಿನಿಧಿಗಳು ಅಲ್ಲಿ ಸಮೀಕ್ಷೆ ನಡೆಸುತ್ತಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಮನವಿ ಮಾಡಿದ್ದಾರೆ.

ಮಧ್ಯಪ್ರದೇಶ ಹೈಕೋರ್ಟ್‌ನ ಸೂಚನೆಯ ಅನುಸಾರ ಎಎಸ್‌ಐ ಅಧಿಕಾರಿಗಳ ತಂಡವು ಹಿರಿಯ ಅಧಿಕಾರಿಗಳು ಹಾಗೂ ಪೊಲೀಸರ ಉಪಸ್ಥಿತಿಯಲ್ಲಿ ಸಮೀಕ್ಷೆಯನ್ನು ಭಾನುವಾರ ಮುಂದುವರಿಸಿತು.

ಹಿಂದೂ ಅರ್ಜಿದಾರರಾದ ಆಶಿಶ್ ಗೋಯಲ್ ಮತ್ತು ಗೋಪಾಲ್ ಶರ್ಮ ಅವರು ಕೂಡ ಭೋಜಶಾಲಾ ಸಂಕೀರ್ಣದಲ್ಲಿ ಇದ್ದರು. ಈ ಸಂಕೀರ್ಣಕ್ಕೆ ಸಂಬಂಧಿಸಿದ ಕಾನೂನು ಸಮರದಲ್ಲಿ ಭಾಗಿಯಾಗಿರುವ ಕಮಲ ಮೌಲಾ ಮಸೀದಿ ಅಭಿವೃದ್ಧಿ ಸಂಘದ ಅಧ್ಯಕ್ಷ ಅಬ್ದುಲ್ ಸಮದ್ ಅವರು ತಮ್ಮ ಆಕ್ಷೇಪಗಳನ್ನು ಎಎಸ್‌ಐ ಅಧಿಕಾರಿಗಳಿಗೆ ಶನಿವಾರವೇ ಇ–ಮೇಲ್ ಮೂಲಕ ತಿಳಿಸಿದ್ದಾರೆ.

‘ಭೋಜಶಾಲಾದಲ್ಲಿ 2003ರ ನಂತರದಲ್ಲಿ ಇರಿಸಿದ ವಸ್ತುಗಳನ್ನು ಸಮೀಕ್ಷೆಯ ವ್ಯಾಪ್ತಿಗೆ ಸೇರಿಸಬಾರದು ಎಂಬುದು ನಮ್ಮ ಆಗ್ರಹ’ ಎಂದು ಸಮದ್ ಅವರು ತಿಳಿಸಿದರು.

ಎಎಸ್‌ಐ ಸಮೀಕ್ಷಾ ತಂಡವನ್ನು ಎರಡಾಗಿ ವಿಭಜಿಸಿರುವುದರ ವಿಚಾರವಾಗಿಯೂ ಸಮದ್ ಅವರು ಕಳವಳ ವ್ಯಕ್ತಪಡಿಸಿದರು. ‘ಮಸೀದಿ ಅಭಿವೃದ್ಧಿ ಸಮಿತಿಯ ಪರ ಪ್ರತಿನಿಧಿ ನಾನು ಮಾತ್ರ. ಸಮೀಕ್ಷೆ ನಡೆಸುತ್ತಿರುವ ಎಎಸ್‌ಐ ತಂಡವು ಒಂದು ಕಡೆ ಮಾತ್ರ ಗಮನ ನೀಡಿ ಕೆಲಸ ಮಾಡಬೇಕು, ತಂಡಗಳಲ್ಲಿ ಆ ಕೆಲಸ ಮಾಡಬಾರದು’ ಎಂದು ಸಮದ್ ಆಗ್ರಹಿಸಿದರು.

ಭೋಜಶಾಲಾ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆಯನ್ನು ಆರು ವಾರಗಳಲ್ಲಿ ನಡೆಸಬೇಕು ಎಂದು ಮಧ್ಯಪ್ರದೇಶ ಹೈಕೋರ್ಟ್ ಮಾರ್ಚ್ 11ರಂದು ಆದೇಶಿಸಿದೆ. ಭೋಜಶಾಲಾ ಸಂಕೀರ್ಣವು ಮಧ್ಯಯುಗದ ಒಂದು ಸ್ಮಾರಕ. ಇಲ್ಲಿರುವುದು ವಾಗ್ದೇವಿ (ಸರಸ್ವತಿ) ದೇವಸ್ಥಾನ ಎಂದು ಹಿಂದೂಗಳು ಭಾವಿಸಿದ್ದಾರೆ. ಮುಸ್ಲಿಂ ಸಮುದಾಯವು ಇದು ಕಮಲ ಮೌಲಾ ಮಸೀದಿ ಎಂದು ನಂಬಿದೆ.

2003ರ ಏಪ್ರಿಲ್ 7ರಂದು ಎಎಸ್‌ಐ ಹೊರಡಿಸಿದ ಆದೇಶದ ಅನ್ವಯ ಭೋಜಶಾಲಾ ಸಂಕೀರ್ಣದಲ್ಲಿ ಪ್ರತಿ ಮಂಗಳವಾರ ಪೂಜೆ ಸಲ್ಲಿಸಲು ಹಿಂದೂಗಳಿಗೆ ಅವಕಾಶ ಇದೆ. ಮುಸ್ಲಿಮರಿಗೆ ಪ್ರತಿ ಶುಕ್ರವಾರ ನಮಾಜ್ ಮಾಡಲು ಅವಕಾಶ ಇದೆ.

ಮುಸ್ಲಿಮರಿಗೆ ಬಲವಂತವಾಗಿ ಬಣ್ಣ ಎರಚಿದ ನಾಲ್ವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಲಖನೌ: ಹೋಳಿ ಆಚರಣೆ ವೇಳೆ ಮುಸ್ಲಿಂ ಸಮುದಾಯದ ಮೂವರಿಗೆ ಕಿರುಕುಳ ನೀಡಿದ ಆರೋಪದ ಮೇಲೆ ಉತ್ತರ ಪ್ರದೇಶದ ಬಿಜ್ನೋರ್ ಜಿಲ್ಲೆಯ ಧಾಂಪುರದಲ್ಲಿ ಅಪ್ರಾಪ್ತ ವಯಸ್ಸಿನ ಮೂವರು ಸೇರಿದಂತೆ ನಾಲ್ವರನ್ನು ವಶಕ್ಕೆ ಪಡೆಯಲಾಗಿದೆ.

ಒಬ್ಬ ಪುರುಷ ಹಾಗೂ ಇಬ್ಬರು ಮಹಿಳೆಯರು ಬೈಕ್‌ವೊಂದರಲ್ಲಿ ಹೋಗುತ್ತಿದ್ದರು. ಆಗ ಹೋಳಿ ಆಚರಿಸುತ್ತಿದ್ದವರು ಬಲವಂತವಾಗಿ ಮೂವರಿಗೂ ಬಣ್ಣ ಎರಚಿರುವುದು, ಅವರ ಮೇಲೆ ಬಣ್ಣದ ನೀರು ಸುರಿದಿರುವ ವಿಡಿಯೊ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಮಹಿಳೆಯು ವಿರೋಧ ವ್ಯಕ್ತಪಡಿಸಿ ಬಣ್ಣ, ನೀರು ಹಾಕದಂತೆ ಹೇಳಿದರೂ ಯುವಕರು ಕೇಳುವುದಿಲ್ಲ. ಒಬ್ಬ ಯುವಕ ದಾರಿಹೋಕರಿಗೂ ಬಣ್ಣ ಎರಚುವುದು ಸಂಪ್ರದಾಯ ಎಂದಿದ್ದಾನೆ. ಕೆಲವರು ಧಾರ್ಮಿಕ ಘೋಷಣೆಗಳನ್ನೂ ಕೂಗಿದ್ದಾರೆ. ಈ ವಿಡಿಯೊ ಜಾಲತಾಣಗಳಲ್ಲಿ ಹಾರಿದಾಡಿದ ಬಳಿಕ ಪೊಲೀಸರು ಕಿರುಕುಳ ನೀಡಿದವರನ್ನು ವಶಕ್ಕೆ ಪಡೆದಿದ್ದಾರೆ.

ಈ ಘಟನೆಗೆ ಸಂಬಂಧಿಸಿದಂತೆ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು ತನಿಖೆ ನಡೆಸಲಾಗುತ್ತಿದೆ. ಹೋಳಿ ಆಚರಣೆ ನೆಪದಲ್ಲಿ ಇತರರಿಗೆ ಕಿರುಕುಳ ನೀಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ಎಚ್ಚರಿಸಿದ್ದಾರೆ.

‘ಬಾಲ್ಯ ವಿವಾಹ, ಬಹುಪತ್ನಿತ್ವ ಕೈಬಿಡಿ’

ಗುವಾಹಟಿ (ಪಿಟಿಐ): ಬಂಗಾಳಿ ಭಾಷೆಯನ್ನು ಮಾತನಾಡುವ ಮುಸ್ಲಿಮರು ಅಸ್ಸಾಂ ರಾಜ್ಯದ ಮೂಲ ನಿವಾಸಿಗಳು ಎಂದು ಕರೆಸಿಕೊಳ್ಳಬೇಕಿದ್ದರೆ ಬಾಲ್ಯ ವಿವಾಹ ಹಾಗೂ ಬಹುಪತ್ನಿತ್ವವನ್ನು ತ್ಯಜಿಸಬೇಕು ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹೇಳಿದ್ದಾರೆ.

ರಾಜ್ಯದಲ್ಲಿ ಇರುವ ಬಂಗಾಳಿ ಭಾಷಿಕ ಮುಸ್ಲಿಂ ಸಮುದಾಯವು ಈ ಸಾಮಾಜಿಕ ಪಿಡುಗುಗಳಿಗೆ ಕಾರಣ ಎಂದು ಶರ್ಮ ಅವರು ಈ ಹಿಂದೆಯೂ ಹೇಳಿದ್ದರು. ಬಂಗಾಳಿ ಭಾಷಿಕ ಮುಸ್ಲಿಂ ಸಮುದಾಯದವರಲ್ಲಿ ಹೆಚ್ಚಿನವರು ಬಾಂಗ್ಲಾದೇಶ ಮೂಲದವರು.

‘ಮಿಯಾಗಳು (ಬಂಗಾಳಿ ಭಾಷಿಕ ಮುಸ್ಲಿಮರು) ಮೂಲನಿವಾಸಿಗಳೇ ಅಲ್ಲವೇ ಎಂಬುದು ಬೇರೆಯದೇ ವಿಚಾರ. ಅವರು ಮೂಲನಿವಾಸಿಗಳಾಗಲು ಯತ್ನಿಸಿದರೆ ನಮಗೆ ಯಾವ ಸಮಸ್ಯೆಯೂ ಇಲ್ಲ. ಆದರೆ ಆ ರೀತಿ ಆಗಬೇಕು ಎಂದಾದರೆ ಅವರು ಬಾಲ್ಯ ವಿವಾಹ ಹಾಗೂ ಬಹುಪತ್ನಿತ್ವವನ್ನು ಬಿಡಬೇಕು. ಮಹಿಳೆಯರಿಗೆ ಶಿಕ್ಷಣ ಕೊಡಿಸುವುದಕ್ಕೆ ಉತ್ತೇಜನ ನೀಡಬೇಕು’ ಎಂದು ಶರ್ಮ ಹೇಳಿದ್ದಾರೆ.

‘ಮಿಯಾ’ ಎಂಬುದು ವಾಸ್ತವದಲ್ಲಿ ಅಸ್ಸಾಂನಲ್ಲಿ ಇರುವ ಬಂಗಾಳಿ ಭಾಷಿಕ ಮುಸ್ಲಿಮರನ್ನು ನಿಂದಿಸಲು ಬಳಸುವ ಪದ. ಬಂಗಾಳಿ ಭಾಷಿಕರಲ್ಲದವರು ಇವರನ್ನು ಬಾಂಗ್ಲಾದೇಶದಿಂದ ವಲಸೆ ಬಂದವರು ಎಂದು ಗುರುತಿಸುತ್ತಾರೆ. ಈಚಿನ ವರ್ಷಗಳಲ್ಲಿ ಬಂಗಾಳಿ ಭಾಷಿಕ ಸಮುದಾಯದ ಸಾಮಾಜಿಕ ಕಾರ್ಯಕರ್ತರು ಈ ಪದವನ್ನು ಪ್ರತಿರೋಧ ತೋರಲು ಕೂಡ ಬಳಸುತ್ತಿದ್ದಾರೆ.

ಅಸ್ಸಾಂನ ಜನರ ಸಂಸ್ಕೃತಿಯು ಹೆಣ್ಣುಮಕ್ಕಳನ್ನು ‘ಶಕ್ತಿ’ಗೆ (ದೇವತೆ) ಹೋಲಿಸುತ್ತದೆ. ಎರಡು–ಮೂರು ಬಾರಿ ಮದುವೆ ಆಗುವುದು ಅಸ್ಸಾಂನ ಸಂಸ್ಕೃತಿ ಅಲ್ಲ ಎಂದು ಶರ್ಮ ಹೇಳಿದ್ದಾರೆ. ‘ಸತ್ರವನ್ನು (ವೈಷ್ಣವ ಮಠ) ಆಕ್ರಮಿಸಿಕೊಂಡು ಮೂಲನಿವಾಸಿಗಳಾಗಲು ಬಯಸುವುದು ಹೇಗೆ ಸಾಧ್ಯ’ ಎಂದು ಅವರು ಪ್ರಶ್ನಿಸಿದ್ದಾರೆ.

ಬಂಗಾಳಿ ಭಾಷಿಕ ಮುಸ್ಲಿಮರು ಅಸ್ಸಾಂನ ಸಂಸ್ಕೃತಿಯನ್ನು ಅನುಸರಿಸಲು ಸಾಧ್ಯವಾದರೆ ಅವರನ್ನು ಕೂಡ ಮೂಲನಿವಾಸಿಗಳು ಎಂದು ಪರಿಗಣಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಬದೌನ್: 19ರಂದು ನಡೆದಿದ್ದ ಇಬ್ಬರು ಮಕ್ಕಳ ಹತ್ಯೆ ಪ್ರಕರಣ

ಹತ್ಯೆಯಾದ ಮಕ್ಕಳ ತಂದೆಯಿಂದ ಆತ್ಮಹತ್ಯೆ ಯತ್ನ

ಬದೌನ್ (ಉತ್ತರ ಪ್ರದೇಶ) (ಪಿಟಿಐ): ತನ್ನ ಇಬ್ಬರು ಮಕ್ಕಳ ಹತ್ಯೆಯಿಂದ ವಿಚಲಿತನಾಗಿರುವ ತಂದೆ, ಇಷ್ಟು ದಿನವಾದರೂ ಹತ್ಯೆಯ ಹಿಂದಿನ ಉದ್ದೇಶ ಖಚಿತಪಡಿಸಿಕೊಳ್ಳಲು ಪೊಲೀಸರಿಗೆ ಸಾಧ್ಯವಾಗದ ಕುರಿತು ಮನನೊಂದು, ತನ್ನ ಬೈಕ್‌ಗೆ ಬೆಂಕಿ ಹಚ್ಚಿ, ಆತ್ಮಹತ್ಯೆಗೆ ಯತ್ನಿಸಿದ ಘಟನೆ ಭಾನುವಾರ ಇಲ್ಲಿ ನಡೆದಿದೆ.

ಕ್ಷೌರಿಕ ವೃತ್ತಿಯ ಇಬ್ಬರು ವ್ಯಕ್ತಿಗಳು ಇಲ್ಲಿನ ಬಾಬಾ ಕಾಲೊನಿಯಲ್ಲಿ ಮಾರ್ಚ್ 19ರಂದು ಇಬ್ಬರು ಮಕ್ಕಳನ್ನು ಹತ್ಯೆ ಮಾಡಿದ್ದರು. ಈ ಮಕ್ಕಳ ತಂದೆ ವಿನೋದ್ ಕುಮಾರ್ ಅವರು ಬೈಕ್‌ಗೆ ಬೆಂಕಿ ಹಚ್ಚಿ, ತನಗೂ ಬೆಂಕಿ ಹಚ್ಚಿಕೊಳ್ಳಲು ಪ್ರಯತ್ನಿಸಿದರು. ಈ ವೇಳೆ ಪೊಲೀಸರು ಅವರನ್ನು ತಡೆದಿದ್ದಾರೆ.

‘ಮೊಮ್ಮಕ್ಕಳನ್ನು ಕಳೆದುಕೊಂಡು ಆರು ದಿನಗಳೇ ಆಗಿವೆ. ಆದರೆ ಕ್ರೌರ್ಯದ ಹಿಂದಿನ ಉದ್ದೇಶ ಏನು ಎಂಬುದನ್ನು ಪೊಲೀಸರು ಇನ್ನೂ ಕಂಡುಕೊಂಡಿಲ್ಲ’ ಎಂದು ವಿನೋದ್ ಅವರ ತಾಯಿ ಮುನ್ನಿ ದೇವಿ ಪ್ರತಿಕ್ರಿಯಿಸಿದ್ದಾರೆ. ‘ಪೊಲೀಸರು ಏನನ್ನಾದರೂ ಮುಚ್ಚಿಡುತ್ತಿದ್ದಾರೋ ಎಂಬುದೂ ಗೊತ್ತಿಲ್ಲ’ ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ಬೆಂಕಿ ಹಂಚಿಕೊಂಡು ಆತ್ಮಹತ್ಯೆಗೆ ಯತ್ನ
- ಹೋಳಿ ಹಬ್ಬದ ದಿನ ತಂದೆಗೆ ಕಾಡಿದ ಮಕ್ಕಳ ನೆನಪು
- ಕಾರಣ ಪತ್ತೆಗೆ ಮುಂದುವರಿದ ಪೊಲೀಸರ ತನಿಖೆ



‘ಹೋಳಿ ಹಬ್ಬದ ಸಂದರ್ಭದಲ್ಲಿ ವಿನೋದ್ ಕುಮಾರ್ ಅವರಿಗೆ ತನ್ನ ಮಕ್ಕಳ ನೆನಪು ಅತಿಯಾಗಿ ಕಾಡಿದೆ. ಮಕ್ಕಳ ಪಾದರಕ್ಷೆ, ಬಟ್ಟೆ ಮತ್ತಿತರ ಹಬ್ಬದ ಸಾಮಗ್ರಿಗಳನ್ನು ನೋಡಿ, ನೋವು ತಡೆಯಲಾರದೆ ಬೈಕಿಗೆ ಬೆಂಕಿ ಹಚ್ಚಿದ್ದಾರೆ’ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಅಲೋಕ್ ಪ್ರಿಯದರ್ಶಿ ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಕ್ಷೌರಿಕ ವೃತ್ತಿಯ ಸಾಜಿದ್ ಮತ್ತು ಜಾವೇದ್ ಎಂಬುವವರನ್ನು ಆರೋಪಿಗಳು ಎಂದು ಗುರುತಿಸಲಾಗಿದ್ದು, ಘಟನೆ ನಡೆದ ದಿನವೇ ಸಾಜಿದ್ ಪೊಲೀಸ್ ಎನ್‌ಕೌಂಟರ್‌ನಲ್ಲಿ ಅಸುನೀಗಿದ್ದಾನೆ. ಮಾರ್ಚ್ 22ರಂದು ಜಾವೇದ್ ಪೊಲೀಸರಿಗೆ ಶರಣಾಗಿದ್ದಾನೆ ಎಂದು ಅವರು ವಿವರಿಸಿದರು.

ಪೊಲೀಸರ ಪ್ರಕಾರ, ಸಾಜಿದ್ ತನಗೆ ಪರಿಚಯವಿರುವ ಕುಟುಂಬದವರ ಮನೆಗೆ ನುಗ್ಗಿ ಆಯುಷ್ (12), ಅಹಾನ್ (8) ಮತ್ತು ಯುವರಾಜ್ (10) ಎಂಬುವರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿದ್ದ. ಆಯುಷ್ ಮತ್ತು ಅಹಾನ್ ಸ್ಥಳದಲ್ಲಿಯೇ ಮೃತಪಟ್ಟರೆ, ಗಂಬೀರ ಗಾಯಗೊಂಡ ಯುವರಾಜ್ ಅನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಾಜಿದ್ ಎನ್‌ಕೌಂಟರ್ ಕುರಿತು ಜಿಲ್ಲಾಡಳಿತವು ಮ್ಯಾಜಿಸ್ಟ್ರಿಯಲ್ ತನಿಖೆಗೆ ಆದೇಶಿಸಿದೆ

ದೆಹಲಿ: ಬಾಲಕಿ ಮೇಲೆ ಅತ್ಯಾಚಾರ

ನವದೆಹಲಿ (ಪಿಟಿಐ):ಮನೆಪಾಠದ ಶಿಕ್ಷಕರೊಬ್ಬರ ಸಹೋದರ ನಾಲ್ಕು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಮಾಡಿದ ಘಟನೆ ದೆಹಲಿಯ ಪಾಂಡವ ನಗರದಲ್ಲಿ ಶನಿವಾರ ರಾತ್ರಿ ನಡೆದಿದೆ.

‘ಈ ಘಟನೆ ಬಗ್ಗೆ ಮಂಡಾವಲಿ ಪೊಲೀಸ್ ಠಾಣೆಗೆ ಮಾಹಿತಿ ಬಂದಿದೆ. ಎಫ್‌ಐಆರ್ ದಾಖಲಿಸಿದ್ದು, ಆರೋಪಿಯನ್ನು ಬಂಧಿಸಲಾಗಿದೆ. ಆತನ ಕುಟುಂಬದ ಕೆಲವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಡಿಸಿಪಿ ಅಪೂರ್ವ ಗುಪ್ತ ತಿಳಿಸಿದ್ದಾರೆ.

‘ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಇದುವರೆಗೆ ಯಾರನ್ನೂ ಬಂಧಿಸಿಲ್ಲ ಎಂಬ ಸಂದೇಶಗಳು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿದ್ದು, ಅತ್ಯಾಚಾರವನ್ನು ಖಂಡಿಸಿ ಈ ಪ್ರದೇಶದ ಜನರು ಪ್ರತಿಭಟನೆ ನಡೆಸಿದರು’ ಎಂದು ಮಾಹಿತಿ ನೀಡಿದ್ದಾರೆ.

‘ಲಾಲ್ ಬಹದ್ದೂರ್ ಶಾಸ್ತ್ರಿ ಆಸ್ಪತ್ರೆಗೆ ಹೋಲಿಸಿದರೆ, ದೆಹಲಿ ಏಮ್ಸ್‌ನ ಒನ್‌ಸ್ಟಾಪ್ ಸೆಂಟರ್‌ನಲ್ಲಿ ಸೌಲಭ್ಯಗಳು ಉತ್ತಮವಾಗಿವೆ. ಆದ್ದರಿಂದ ಬಾಲಕಿಯನ್ನು ಏಮ್ಸ್‌ಗೆ ಕಳುಹಿಸಲಾಗಿದೆ. ಆಕೆಯು ಆರೋಗ್ಯವಾಗಿದ್ದಾಳೆ’ ಎಂದೂ ಅವರು ಹೇಳಿದ್ದಾರೆ.

‘ಶಿಕ್ಷಕರು ಬೇರೆಡೆ ಇದ್ದಾಗ ಅವರ ಸಹೋದರ ಬಾಲಕಿ ಮೇಲೆ ಅತ್ಯಾಚಾರ ಮಾಡಿದ್ದಾನೆ. ಈ ವಿಷಯವನ್ನು ಯಾರ ಬಳಿಯಾದರೂ ಹೇಳಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಆರೋಪಿ ಸಂತ್ರಸ್ತೆಯನ್ನು ಹೆದರಿಸಿದ್ದಾನೆ. ಬಾಲಕಿ ಮನೆಗೆ ತೆರಳಿದ ಬಳಿಕ ಪೋಷಕರ ಮುಂದೆ ನಡೆದ ಸಂಗತಿಯನ್ನು ಹೇಳಿದ್ದಾಳೆ’ ಎಂದು ಮೂಲಗಳು ತಿಳಿಸಿವೆ.

ಪ್ರತಿಭಟನೆ

ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬ ವದಂತಿಗಳು ಹರಿದಾಡಿದ ಬೆನ್ನಲ್ಲೇ ಶಿಕ್ಷಕರ ಮನೆ ಮುಂದೆ ಸೇರಿದ ಜನರು ಪ್ರತಿಭಟಿಸಿ, ಕೆಲವು ವಾಹನಗಳನ್ನು ಧ್ವಂಸಗೊಳಿಸಿದರು.

ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಘಟನೆ ನಡೆದ ಪ್ರದೇಶದಲ್ಲಿ ಹೆಚ್ಚಿನ ಪೊಲೀಸ್ ಸಿಬ್ಬಂದಿ ಹಾಗೂ ಅರೆ ಸೇನಾಪಡೆಯನ್ನು ನಿಯೋಜಿಸಲಾಗಿದೆ.



ರಾಯಲ್ ಚಾಲೆಂಜರ್ಸ್ ಬೆಂಗಳೂರು –ಪಂಜಾಬ್ ಕಿಂಗ್ಸ್ ಮುಖಾಮುಖಿ ಇಂದು

ತವರಿನಂಗಳದಲ್ಲಿ ಜಯದ ಕನಸು

• ಗಿರೀಶ ದೊಡ್ಡಮನಿ

ಬೆಂಗಳೂರು: ಕ್ರಿಕೆಟ್ ಅಭಿಮಾನಿಗಳ 'ಕಣ್ಮಣಿ' ವಿರಾಟ್ ಕೊಹ್ಲಿ ಮತ್ತು ನಾಯಕ ಫಫ್ ಡುಪ್ಲೆಸಿ ಭಾನುವಾರ ಸಂಜೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಹಳ ಹೊತ್ತು ಸಮಾಲೋಚನೆಯಲ್ಲಿ ತೊಡಗಿದ್ದರು. ವ್ಯಾಯಾಮಗಳನ್ನು ಮಾಡುವಾಗಲೂ ಪರಸ್ಪರ ಮಾತನಾಡುತ್ತಿದ್ದರು. ಅವರ ಮುಖದಲ್ಲಿ ಗಂಭೀರ ಭಾವ ಮನೆ ಮಾಡಿತ್ತು.

ನೆಟ್ಸ್ ಅಭ್ಯಾಸದಲ್ಲಿ ವಿರಾಟ್ ಹೆಚ್ಚಾಗಿ ಸಹಆಟಗಾರರೊಂದಿಗೆ ಕೀಟಲೆ ಮಾಡುತ್ತ, ನಗುತ್ತ, ನಗಿಸುತ್ತ ಇರುವುದು ರೂಢಿ. ಆದರೆ ಇಲ್ಲಿ ಸ್ವಲ್ಪ ಭಿನ್ನವಾಗಿದ್ದರು. ಈ ಬಾರಿಯ ಐಪಿಎಲ್ ಟೂರ್ನಿಯ ಮೊದಲ ಪಂದ್ಯದಲ್ಲಿಯೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚೆನ್ನೈ ಸೂಪರ್ ಕಿಂಗ್ಸ್ ಎದುರು ಸೋತಿದ್ದು ಹಾಗೂ ಬೌಲಿಂಗ್ ವಿಭಾಗದ ದೌರ್ಬಲ್ಯಗಳು ಅವರ ಗಂಭೀರ ಚರ್ಚೆಗೆ ಗ್ರಾಸವಾದಂತೆ ಭಾಸವಾಯಿತು.

ಸೋಮವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಬೆಂಗಳೂರು ತಂಡವು ಶಿಖರ್ ಧವನ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಶಿಖರ್ ಬಳಗವು ಶನಿವಾರ ರಾತ್ರಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಗೆದ್ದು ಶುಭಾರಂಭ ಮಾಡಿತ್ತು. ಅದರಿಂದಾಗಿ ಅಪಾರ ಆತ್ಮವಿಶ್ವಾಸದೊಂದಿಗೆ ಇಲ್ಲಿಗೆ ಬಂದಿಳಿದಿದೆ. ಇಂಗ್ಲೆಂಡ್ ಆಲ್‌ರೌಂಡರ್ ಸ್ಯಾಮ್ ಕರನ್ ಅವರ ಭರ್ಜರಿ ಅರ್ಧಶತಕ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ ಅವರ ಫಿನಿಷಿಂಗ್ ಕೌಶಲವು ತಂಡದ ಜಯದಲ್ಲಿ ಪ್ರಮುಖ ಪಾತ್ರವಹಿಸಿತ್ತು.

ಕೆಲ ವರ್ಷಗಳ ಹಿಂದೆ ಆರ್‌ಸಿಬಿಯ ಪ್ರಮುಖ ಬೌಲರ್ ಆಗಿದ್ದ ಹರ್ಷಲ್ ಪಟೇಲ್ ಪಂಜಾಬ್ ತಂಡದಲ್ಲಿದ್ದಾರೆ. ಅವರು ಮತ್ತು ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರು ಡೆಲ್ಲಿ ತಂಡದ ಎದುರು ಮಿಂಚಿದ್ದರು. ಬೆಂಗಳೂರು ಪಿಚ್ ಮರ್ಮವನ್ನು ಚೆನ್ನಾಗಿ ಅರಿತಿರುವ ಹರ್ಷಲ್ ಅವರು ಆತಿಥೇಯರಿಗೆ ಕಠಿಣ 'ಚಾಲೆಂಜ್' ಒಡ್ಡಬಹುದು. ಕಗಿಸೊ ರಬಾಡ ಡೆತ್ ಓವರ್‌ಗಳಲ್ಲಿ ಪರಿಣಾಮಕಾರಿಯಾಗಬಲ್ಲರು.

ಈ ಬೌಲರ್‌ಗಳ ಮುಂದೆ ಆರ್‌ಸಿಬಿಯ ರನ್ ಯಂತ್ರ ವಿರಾಟ್, ಸ್ಫೋಟಕ ಶೈಲಿಯ ಬ್ಯಾಟರ್‌ಗಳಾದ ಡುಪ್ಲೆಸಿ, ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಮಿಂಚಿದರೆ ಪಂದ್ಯ ರೋಚಕವಾಗಬಹುದು. ಚೆನ್ನೈ ಪಂದ್ಯದಲ್ಲಿಯಂತಹ ಆಟ ಇಲ್ಲಿಯೂ ಮರುಕಳಿಸಿದರೆ ಮತ್ತೆ ಅನುಭವಿ ದಿನೇಶ್ ಕಾರ್ತಿಕ್ ಹಾಗೂ ಯುವ ಆಟಗಾರರಾದ ಅನುಜ್ ರಾವತ್, ಕ್ಯಾಮರಾನ್ ಗ್ರೀನ್ ಅವರ ಮೇಲೆ ಇನಿಂಗ್ಸ್‌ಗೆ ಬಲ ತುಂಬುವ ಹೊಣೆ ಬೀಳುವುದು ಖಚಿತ. ಆ ಪಂದ್ಯದಲ್ಲಿ ಅನುಜ್ 48 ರನ್ ಗಳಿಸಿದ್ದರು.

ಆತಿಥೇಯ ತಂಡದ ಬ್ಯಾಟಿಂಗ್ ಮೇಲ್ನೋಟಕ್ಕೆ ಬಲಿಷ್ಠವಾಗಿಯೇ ಇದೆ. ಆದರೆ ಬೌಲಿಂಗ್ ವಿಭಾಗದ ಬಗ್ಗೆ ಇಂತಹ ವಿಶ್ವಾಸ ಮೂಡುವುದು ಕಷ್ಟ. ಏಕೆಂದರೆ, ಮೊಹಮ್ಮದ್ ಸಿರಾಜ್ ಅವರ ಅನುಭವ ಹಾಗೂ ಗ್ರೀನ್ ಅವರ ಪ್ರತಿಭೆಯ ಮೇಲೆ ಹೆಚ್ಚು ಭರವಸೆ ಇಡಬೇಕಿದೆ. ಆದರೆ ಚೆನ್ನೈನಲ್ಲಿ ಸಿರಾಜ್ (4–0–38–0) ಪ್ರಭಾವಿಯಾಗಿರಲಿಲ್ಲ. ಹೊಸಬ ಅಲ್ಜರಿ ಜೋಸೆಫ್ ಕೂಡ ದುಬಾರಿಯಾಗಿದ್ದರು. ಗ್ರೀನ್, ಯಶ್ ದಯಾಳ್ ಹಾಗೂ ಕರ್ಣ ಶರ್ಮಾ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾಗಿದ್ದರು.

ಒಂದೊಮ್ಮೆ ಬೆಂಗಳೂರು ಬ್ಯಾಟರ್‌ಗಳು ಸಾಧಾರಣ ಮೊತ್ತದ ಗುರಿಯನ್ನು ಎದುರಾಳಿ ತಂಡಕ್ಕೆ ಒಡ್ಡಿದರೆ, ಬೌಲರ್‌ಗಳು ಗೆಲುವಿನ ಕಾಣಿಕೆ ನೀಡುವ ಕಠಿಣ ಸವಾಲು ಎದುರಿಸಬೇಕಾಗಬಹುದು. ಅಲ್ಲದೇ ಪಂಜಾಬ್ ತಂಡವು ಮೊದಲು ಬ್ಯಾಟಿಂಗ್ ಮಾಡಿದರೆ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕುವಲ್ಲಿಯೂ ಈ ಬೌಲರ್‌ಗಳು ತಮ್ಮ ಸಾಮರ್ಥ್ಯ ಮೆರೆಯುವುದುಅನಿವಾರ್ಯವಾಗಲಿದೆ.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ಅಭ್ಯಾಸ ನಡೆಸುವ ಸಂದರ್ಭದಲ್ಲಿ ಆರ್‌ಸಿಬಿ ನಾಯಕ ಫಫ್ ಡುಪ್ಲೆಸಿ ಹಾಗೂ ವಿರಾಟ್ ಕೊಹ್ಲಿ –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್



ಪಂಜಾಬ್ ಕಿಂಗ್ಸ್ ತಂಡದ ನಾಯಕ ಶಿಖರ್ ಧವನ್‌ ಪಿಟಿಐ ಚಿತ್ರ

ಬಲಾಬಲ

ಪಂದ್ಯ	31
ಆರ್‌ಸಿಬಿ ಜಯ	14
ಪಂಜಾಬ್ ಜಯ	17

ಕೆಳಕ್ರಮಾಂಕದಲ್ಲಿ ಬ್ಯಾಟಿಂಗ್ ಯಾವ ರೀತಿ ಮಾಡಬೇಕು ಎಂಬುದರ ಬಗ್ಗೆ ತಂಡದ ಮ್ಯಾನೇಜ್‌ಮೆಂಟ್ ಸ್ಪಷ್ಟ ಸೂಚನೆಯನ್ನು ನನಗೆ ನೀಡಿದೆ.

ಅನುಜ್ ರಾವತ್ ಆರ್‌ಸಿಬಿ ಆಟಗಾರ

ಮುಖ್ಯಾಂಶಗಳು

- ಸ್ಥಳೀಯ ವೈಶಾಖ ವಿಜಯಕುಮಾರ್ ಕಣಕ್ಕಿಳಿಯುವ ಸಾಧ್ಯತೆ
- ವಿರಾಟ್ ಕೊಹ್ಲಿಗೆ ಲಯಕ್ಕೆ ಮರಳುವ ಛಲ
- ಮೊಹಮ್ಮದ್ ಸಿರಾಜ್, ಕ್ಯಾಮರಾನ್ ಗ್ರೀನ್ ಮೇಲೆ ನಿರೀಕ್ಷೆಯ ಭಾರ

ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು: ಫಫ್ ಡುಪ್ಲೆಸಿ (ನಾಯಕ), ವಿರಾಟ್ ಕೊಹ್ಲಿ, ರಜತ್ ಪಾಟೀದಾರ್, ದಿನೇಶ್ ಕಾರ್ತಿಕ್, ಕ್ಯಾಮರಾನ್ ಗ್ರೀನ್, ಗ್ಲೆನ್ ಮ್ಯಾಕ್ಸ್‌ವೆಲ್, ಅನುಜ್ ರಾವತ್, ಸುಯಶ್ ಪ್ರಭುದೇಸಾಯಿ, ಮಯಂಕ್ ದಾಗರ್, ಮಹಿಪಾಲ್ ಲೊಮ್ರೊರ್, ಟಾಮ್ ಕರನ್, ವೈಶಾಖ ವಿಜಯಕುಮಾರ್, ಅಲ್ಜರಿ ಜೋಸೆಫ್, ರೀಸ್ ಟಾಪ್ಲಿ,ಮೊಹಮ್ಮದ್ ಸಿರಾಜ್, ಯಶ್ ದಯಾಳ್, ಕರ್ಣ ಶರ್ಮಾ, ಸ್ವಪ್ನಿಲ್ ಸಿಂಗ್, ವಿಲ್ ಜ್ಯಾಕ್ಸ್.

ಪಂಜಾಬ್ ಕಿಂಗ್ಸ್: ಶಿಖರ್ ಧವನ್ (ನಾಯಕ), ಲಿಯಾಮ್ ಲಿವಿಂಗ್‌ಸ್ಟೋನ್, ರೀಲಿ ರೊಸೊ, ಹರಪ್ರೀತ್ ಭಾಟಿಯಾ, ಜಿತೇಶ್ ಶರ್ಮಾ, ಜಾನಿ ಬೆಸ್ಟೊ, ಸಿಮ್ರನ್ ಸಿಂಗ್ (ವಿಕೆಟ್‌ಕೀಪರ್), ಸ್ಯಾಮ್ ಕರನ್, ಅಥರ್ವ್ ತೈಡೆ, ಶಶಾಂಕ್ ಸಿಂಗ್, ತನಯ್ ತ್ಯಾಗರಾಜನ್, ಹರಪ್ರೀತ್ ಬ್ರಾರ್,ರಿಷಿ ಧವನ್, ಕಗಿಸೊ ರಬಾಡ, ಹರ್ಷಲ್ ಪಟೇಲ್, ಅರ್ಷದೀಪ್ ಸಿಂಗ್, ಕ್ರಿಸ್ ವೋಕ್ಸ್, ರಾಹುಲ್ ಚಾಹರ್, ನೇಥನ್ ಎಲಿಸ್, ವಿದ್ವತ್ ಕಾವೇರಪ್ಪ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್.

ಪಿಚ್ ಹೇಗಿದೆ?: ಕಳೆದ ವರ್ಷದಂತೆ ಈ ಬಾರಿಯೂ ಸ್ಪರ್ಧಾತ್ಮಕ ಪಿಚ್ ಸಿದ್ಧಪಡಿಸಲಾಗಿದೆ. ಹೆಚ್ಚು ರನ್‌ಗಳು ಹರಿಯುವ ನಿರೀಕ್ಷೆ ಇದೆ. ಹೋದ ವರ್ಷ ಇಲ್ಲಿ ಬ್ಯಾಟರ್‌ಗಳು ಮಿಂಚಿದ್ದರು.

ಸಂಜು ಮಿಂಚು: ರಾಯಲ್ಸ್‌ಗೆ ಗೆಲುವು

ಐಪಿಎಲ್: ಅರ್ಧ ಶತಕ ಗಳಿಸಿದ ರಾಹುಲ್, ಪೂರನ್

ಜೈಪುರ (ಪಿಟಿಐ): ನಾಯಕ ಸಂಜು ಸ್ಯಾಮ್ಸನ್ ಹೊಣೆಗಾರಿಕೆಯ ಬ್ಯಾಟಿಂಗ್ (ಔಟಾಗದೇ 82) ನೆರವಿನಿಂದ ರಾಜಸ್ತಾನ ರಾಯಲ್ಸ್ ತಂಡ ಐಪಿಎಲ್ ಪಂದ್ಯದಲ್ಲಿ ಭಾನುವಾರ ಲಖನೌ ಸೂಪರ್ ಜೈಂಟ್ಸ್ ತಂಡದ ಮೇಲೆ 20 ರನ್‌ಗಳ ಜಯ ಪಡೆಯಿತು. ಆ ಮೂಲಕ ಗೆಲುವಿನೊಡನೆ ಅಭಿಯಾನ ಆರಂಭಿಸಿತು.

52 ಎಸೆತಗಳ ಸೊಗಸಾದ ಇನಿಂಗ್ಸ್‌ನಲ್ಲಿ ಅವರು ಅರ್ಧ ಡಜನ್ ಸಿಕ್ಸರ್‌ಗಳ ಜೊತೆ ಮೂರು ಬೌಂಡರಿ ಬಾರಿಸಿದರು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ರಾಯಲ್ಸ್ ಪವರ್‌ಪ್ಲೇ ಅವಧಿಯೊಳಗೆ ಜೋಸ್ ಬಟ್ಲರ್ ಮತ್ತು ಯಶಸ್ವಿ ಜೈಸ್ವಾಲ್ ಅವರ ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಸಂಜು ಅವರು ರಿಯಾನ್ ಪರಾಗ್ (43) ಜೊತೆ ಅತ್ಯುಪಯುಕ್ತ 93 ರನ್‌ಗಳ ಜೊತೆಯಾಟದಲ್ಲಿ ಭಾಗಿಯಾದರು. ತಂಡ ಅಂತಿಮವಾಗಿ 4 ವಿಕೆಟ್‌ಗೆ 193 ರನ್‌ಗಳ ಉತ್ತಮ ಮೊತ್ತ ಕಲೆಹಾಕಿತು.

ಟ್ರೆಂಟ್ ಬೌಲ್ಟ್ ದಾಳಿಗೆ ಸಿಲುಕಿ 11 ರನ್‌ಗಳಾಗುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡಿದ್ದ ಲಖನೌ ಸೂಪರ್ ಜೈಂಟ್ಸ್ ಅಂತಿಮವಾಗಿ 6 ವಿಕೆಟ್‌ಗೆ 173 ರನ್ ಗಳಿಸಲಷ್ಟೇ ಶಕ್ಯವಾಯಿತು.

ಈ ಲೀಗ್ ಮೂಲಕ ಕ್ರಿಕೆಟ್‌ಗೆ ಮರಳಿದ ನಾಯಕ ಕೆ.ಎಲ್.ರಾಹುಲ್ ಆಕರ್ಷಕ ಅರ್ಧ ಶತಕ ಗಳಿಸಿದರು. ಅವರ 58 ರನ್‌ಗಳು (44 ಎ) ನಾಲ್ಕು ಬೌಂಡರಿ, ಎರಡು ಸಿಕ್ಸರ್‌ಗಳನ್ನು ಒಳಗೊಂಡಿತ್ತು. ಜೊತೆಗೆ ಕೀಪಿಂಗ್ ಸಹ ಮಾಡಿ ಫಿಟ್ನೆಸ್ ಬಗ್ಗೆಯಿದ್ದ ಸಂದೇಹಗಳನ್ನು ದೂರ ಮಾಡಿದರು.

17ನೇ ಓವರ್‌ನಲ್ಲಿ ರಾಹುಲ್ ನಿರ್ಗಮನ ಬಳಿಕ ವೆಸ್ಟ್ ಇಂಡೀಸ್ ಆಟಗಾರ ಪೂರನ್ ಹೋರಾಟ ಮುಂದುವರಿಸಿದರೂ ಗೆಲುವು ದೂರವಿತ್ತು. ಅವರೂ 41 ಎಸೆತಗಳಲ್ಲಿ 64 ರನ್ ಬಾರಿಸಿ (4x4, 6x4) ಅಜೇಯರಾಗಿ ಉಳಿದರು.

ಲಖನೌ ಆರಂಭದಲ್ಲೇ ಕುಸಿತ ಅನುಭವಿಸಿತು. ಬೌಲ್ಟ್ (35ಕ್ಕೆ2) ಮತ್ತು ಮೊದಲ ಪಂದ್ಯವಾಡಿದ ನಾಂಡ್ರೆ ಬರ್ಗರ್ (30ಕ್ಕೆ1) ಪೆಟ್ಟುನೀಡಿದರು. ಬರ್ಗರ್ ಇಂಪ್ಯಾಕ್ಟ್ ಸಬ್ ಆಗಿ ಆಡಲಿಳಿದರು. ಕ್ವಿಂಟನ್, ಲೆಗ್‌ಸ್ಟಂಪ್‌ನತ್ತ ಬಂದ ಚೆಂಡನ್ನು ಹೊಡೆಯಲು ಹೋಗಿ ಫೈನ್‌ಲೆಗ್‌ನಲ್ಲಿ ಕ್ಯಾಚಿತ್ತರು. ದೇವದತ್ತ ಪಡಿಕ್ಕಲ್ ಅವರು ಶಾರ್ಟ್‌ಬಾಲ್ ಎದುರಿಸಲು ಹೋದಾಗ ಚೆಂಡು ಹೆಲ್ಮೆಟ್‌ಗೆ ತಗುಲಿ ಮಿಡ್ಲ್ ಸ್ಟಂಪ್ ಮೇಲೆ ಬಿತ್ತು. ಆಯುಷ್ ಬಡೋನಿ ಕೂಡ (1) ಹೆಚ್ಚು ಹೊತ್ತು ನಿಲ್ಲಲಿಲ್ಲ. ದೀಪಕ್ ಹೂಡ (26, 13ಎ) ಚೇತರಿಕೆಗೆ ನೆರವಾದರು. ಆದರೆ ಗಳಿಸಬೇಕಾದ ರನ್ ದರ ಹೆಚ್ಚುತ್ತ ಹೋಯಿತು. ರಾಹುಲ್ ಜೊತೆ ನಾಲ್ಕನೇ ವಿಕೆಟ್‌ಗೆ 49 ರನ್ ಸೇರಿಸಿದ ನಂತರ ಚಾಹಲ್ ಬೌಲಿಂಗ್‌ನಲ್ಲಿ ನಿರ್ಗಮಿಸಿದರು.

ರಾಹುಲ್ ಆಗಲಿ, ಪೂರನ್ ಆಗಲಿ ಸಾಹಸದ ಹೊಡೆತಗಳಿಗೆ ಹೋಗಲಿಲ್ಲ. ಸಂದೀಪ್ ಶರ್ಮಾ 17ನೇ ಓವರ್‌ನಲ್ಲಿ ರಾಹುಲ್ ವಿಕೆಟ್ ಪಡೆದರು. ಅಪಾಯಕಾರಿ ಆಟಗಾರ ಸ್ಟೊಯಿನಿಸ್ ಬೇಗ ನಿರ್ಗಮಿಸಿದ ಮೇಲೆ ರಾಯಲ್ಸ್ ಕೈಮೇಲಾಯಿತು.



ಆಮೋಘ ಬ್ಯಾಟಿಂಗ್ ಪ್ರದರ್ಶಿಸಿದ ನಾಯಕ ಸಂಜು ಸ್ಯಾಮ್ಸನ್‌ ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ತಾನ ರಾಯಲ್ಸ್: 4 ವಿಕೆಟ್‌ಗೆ 193 (20 ಓವರುಗಳಲ್ಲಿ)

ಜೈಸ್ವಾಲ್ ಸಿ ಪಾಂಡ್ಯ ಬಿ ಮೊಹ್ಸಿನ್ 24 (12ಎ, 4x3, 6x1)
ಬಟ್ಲರ್ ಸಿ ರಾಹುಲ್ ಬಿ ನವೀನ್ 11 (9ಎ, 4x2)
ಸ್ಯಾಮ್ಸನ್ ಔಟಾಗದೇ 82 (52ಎ, 4x3, 6x6)
ಪರಾಗ್ ಸಿ ಸಬ್ (ಹೂಡ) ಬಿ ನವೀನ್ 43 (29ಎ, 4x1, 6x3)
ಹೆಟ್ಮೆಯರ್ ಸಿ ರಾಹುಲ್ ಬಿ ಬಿಷ್ಣೋಯಿ 5 (7ಎ)
ಧ್ರುವ್ ಜುರೆಲ್ ಔಟಾಗದೇ 20 (12ಎ, 4x1, 6x1)
ಇತರೆ: 8 (ಬೈ 1, ನೋಬಾಲ್ 1, ವೈಡ್ 6)
ವಿಕೆಟ್ ಪತನ: 1–13 (ಜೋಸ್ ಬಟ್ಲರ್, 1.6), 2–49 (ಯಶಸ್ವಿ ಜೈಸ್ವಾಲ್, 4.6), 3–142 (ರಿಯಾನ್ ಪರಾಗ್, 14.5), 4–150 (ಶಿಮ್ರಾನ್ ಹೆಟ್ಮೆಯರ್, 16.3)
ಬೌಲಿಂಗ್: ಮೊಹ್ಸಿನ್ ಖಾನ್ 4-0-45-1; ನವೀನ್–ಉಲ್–ಹಕ್ 4-0-41-2; ಕೃಣಾಲ್ ಪಾಂಡ್ಯ 4-0-19-0; ರವಿ ಬಿಷ್ಣೋಯಿ 4-0-38-1; ಯಶ್ ಠಾಕೂರ್ 3-0-43-0; ಆಯುಷ್ ಬಡೋನಿ 1-0-6-0

ಲಖನೌ ಸೂಪರ್ ಜೈಂಟ್ಸ್: 6 ವಿಕೆಟ್‌ಗೆ 173 (20 ಓವರುಗಳಲ್ಲಿ)

ಡಿಕಾಕ್ ಸಿ ಬರ್ಗರ್ ಬಿ ಬೋಲ್ಟ್ 4 (5ಎ, 4x1)
ರಾಹುಲ್ ಸಿ ಜುರೇಲ್ ಬಿ ಸಂದೀಪ್ 58 (44ಎ, 4x4, 6x2)
ಪಡಿಕ್ಕಲ್ ಬಿ ಬೌಲ್ಟ್ 0 (3ಎ)
ಬಡೋನಿ ಸಿ ಬಟ್ಲರ್ ಬಿ ಬರ್ಗರ್ 1 (5ಎ)
ಹೂಡ ಸಿ ಜುರೇಲ್ ಬಿ ಚಾಹಲ್ 26 (13ಎ, 4x2, 6x2)
ಪೂರನ್ ಔಟಾಗದೇ 64 (41ಎ, 4x4, 6x4)
ಸ್ಟೊಯಿನಿಸ್ ಸಿ ಜುರೇಲ್ ಬಿ ಅಶ್ವಿನ್ 3 (4ಎ)
ಕೃನಾಲ್ ಪಾಂಡ್ಯ ಔಟಾಗದೇ 3 (5ಎ)
ಇತರೆ: (ಲೆಗ್‌ಬೈ 5, ವೈಡ್ 9) 14
ವಿಕೆಟ್ ಪತನ: 1–4 (ಕ್ವಿಂಟನ್ ಡಿಕಾಕ್, 0.5), 2–10 (ದೇವದತ್ತ ಪಡಿಕ್ಕಲ್, 2.2), 3–11 (ಬಡೋನಿ, 3.1), 4–60 (ದೀಪಕ್ ಹೂಡ 7.3), 5–145 (ಕೆ.ಎಲ್. ರಾಹುಲ್, 16.1), 6–154 (ಮಾರ್ಕಸ್ ಸ್ಟೊಯಿನಿಸ್, 17.3)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-35-2; ನ್ಯಾಂಡ್ರೆ ಬರ್ಗರ್ 3-0-30-1; ರವಿಚಂದ್ರನ್ ಅಶ್ವಿನ್ 4-0-35-1; ಆವೇಶ್ ಖಾನ್ 3-0-21-0; ಯುಜುವೇಂದ್ರ ಚಾಹಲ್ 3-0-25-1; ಸಂದೀಪ್ ವಾರಿಯರ್ 3-0-22-1.
ಪಂದ್ಯದ ಆಟಗಾರ: ಸಂಜು ಸ್ಯಾಮ್ಸನ್

ಸಂಕ್ಷಿಪ್ತ ಸುದ್ದಿ



ಕಾರ್ಲೋಸ್ ಸೇಂಜ್ –ಎಎಫ್‌ಪಿ ಚಿತ್ರ

ಕಾರ್ಲೋಸ್‌ಗೆ ಎಫ್ ಒನ್ ಪ್ರಶಸ್ತಿ

ಮೆಲ್ಬರ್ನ್ (ಎಪಿ): ಫೆರಾರಿ ತಂಡದ ಕಾರ್ಲೋಸ್ ಸೆಂಜ್ ಭಾನುವಾರ ರೆಡ್‌ಬುಲ್ಸ್ ಫಾರ್ಮುಲಾ ಒನ್ ರೇಸ್ ಜಯಿಸಿದರು.

ಎರಡು ವಾರಗಳಿಂದ ನಡೆದ ಆಸ್ಟ್ರೇಲಿಯಾ ಗ್ರ್ಯಾನ್ ಪ್ರೀ ರೇಸ್‌ನಲ್ಲಿ ಮ್ಯಾಕ್ಸ್ ವರ್ಸ್ಟ್ಯಾಪನ್ ಅವರು ನಿವೃತ್ತಿಯಾಗಿ ಹಿಂದೆ ಸರಿದಿದ್ದರು. ಇದರ ಲಾಭ ಪಡೆದ ಸ್ಪೇನ್ ಡ್ರೈವರ್ ಕಾರ್ಲೋಸ್ ಜಯದ ಸಂಭ್ರಮ ಆಚರಿಸಿದರು. ಕಾರ್ಲೋಸ್ ತಮ್ಮದೇ ತಂಡದ ಚಾರ್ಲ್ಸ್ ಲೆಕ್ಲೆರ್ಕ್ ಅವರನ್ನು ಹಿಂದಿಕ್ಕಿದರು.

ಎಫ್1 ಋತು ವಿನ ಮೊದಲ ಎರಡು ರೇಸ್‌ಗಳಲ್ಲಿ ಮ್ಯಾಕ್ಸ್ ಗೆದ್ದಿದ್ದರು.

ನಿವೃತ್ತಿ ತೊರೆದ ಬೌಲರ್ ಆಮೀರ್

ಲಾಹೋರ್ (ಎಎಫ್‌ಪಿ): ಸ್ಪಾಟ್ ಫಿಕ್ಸಿಂಗ್ ಹಗರಣದಲ್ಲಿ ಶಿಕ್ಷೆ ಅನುಭವಿಸಿದ್ದ ವೇಗದ ಬೌಲರ್ ಮೊಹಮ್ಮದ್ ಆಮೀರ್ ಅವರು ತಾವು ನಿವೃತ್ತಿಯಿಂದ ಹೊರಬಂದಿದ್ದು, ಪಾಕಿಸ್ತಾನದ ಟಿ20 ವಿಶ್ವಕಪ್ ಕ್ರಿಕೆಟ್ ತಂಡದ ಆಯ್ಕೆಗೆ ಲಭ್ಯರಿರುವುದಾಗಿ ಭಾನುವಾರ ಪ್ರಕಟಿಸಿದ್ದಾರೆ.

2010ರಲ್ಲಿ ಅವರು ಸಲ್ಮಾನ್ ಭಟ್ ಮತ್ತು ಇನ್ನೊಬ್ಬ ವೇಗಿ ಮೊಹಮ್ಮದ್ ಆಸಿಫ್ ಜೊತೆ ಫಿಕ್ಸಿಂಗ್ ಹಗರಣದಲ್ಲಿ ಐದು ವರ್ಷ ನಿಷೇಧ ಶಿಕ್ಷೆ ಅನುಭವಿಸಿದ್ದರು. ಯುಕೆ ನ್ಯಾಯಾಲಯ ಅವರಿಗೆ ಜೈಲು ಶಿಕ್ಷೆ ಸಹ ವಿಧಿಸಿತ್ತು. 2016 ರಲ್ಲಿ ಕ್ರಿಕೆಟ್ ಮರಳಿದರೂ, ನಾಲ್ಕು ವರ್ಷ ನಂತರ ಹಠಾತ್ ನಿವೃತ್ತಿ ಘೋಷಿಸಿದ್ದರು.

ಪಾಕ್ ಆಯ್ಕೆ ಸಮಿತಿಗಿಲ್ಲ ಅಧ್ಯಕ್ಷ

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ತನ್ನ ಆಯ್ಕೆ ಸಮಿತಿಯನ್ನು ಪುನರ್ರಚಿಸಿದೆ. ಆದರೆ ಸಮಿತಿಗೆ ಅಧ್ಯಕ್ಷರನ್ನು ನೇಮಕ ಮಾಡಿಲ್ಲ. ಬದಲು ಆಯ್ಕೆಗಾರರಿಗೆ ರಾಷ್ಟ್ರೀಯ ತಂಡದ ನಾಯಕ ಮತ್ತು ಮುಖ್ಯ ಕೋಚ್ ಅವರನ್ನು ಆಯ್ಕೆ ಮಾಡುವ ಅಧಿಕಾರ ನೀಡಿದೆ.

ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಅವರು ಭಾನುವಾರ ಇಲ್ಲಿ ನಾಲ್ವರು ಆಯ್ಕೆಗಾರರ– ಮೊಹಮ್ಮದ್ ಯೂಸುಫ್, ಅಬ್ದುಲ್ ರಝಾಕ್, ಅಸದ್ ಶಫೀಕ್ ಮತ್ತು ವಹಾಬ್ ರಿಯಾಜ್– ಸಮ್ಮುಖದಲ್ಲಿ ಈ ಘೋಷಣೆ ಮಾಡಿದರು.

ಹೊಸ ಆಯ್ಕೆ ಸಮಿತಿಯು ತಂಡದ ನಾಯಕ, ಹೆಡ್ ಕೋಚ್ ಮತ್ತು ಡೇಟಾ ಅನಾಲಿಸ್ಟ್ ಸೇರಿ ಏಳು ಮಂದಿಯನ್ನು ಹೊಂದಿರಲಿದೆ ಎಂದು ನಕ್ವಿ ಹೇಳಿದರು.

ಮುಂಬೈ ಇಂಡಿಯನ್ಸ್‌ಗೆ ನಿರಾಶೆ: ಕೊನೆಯ ಓವರ್‌ನಲ್ಲಿ ಮಿಂಚಿದ ಉಮೇಶ್

ಶುಭಮನ್ ಬಳಗದ ಶುಭಾರಂಭ

ಅಹಮದಾಬಾದ್ (ಪಿಟಿಐ): ಅನುಭವಿ ವೇಗಿ ಉಮೇಶ್ ಯಾದವ್ ಅವರು ಭಾನುವಾರ ರಾತ್ರಿ ಕೊನೆಯ ಓವರ್‌ನಲ್ಲಿ ಗಳಿಸಿದ ಎರಡು ವಿಕೆಟ್‌ಗಳಿಂದಾಗಿ ಗುಜರಾತ್ ಟೈಟನ್ಸ್ ತಂಡವು ಮುಂಬೈ ಇಂಡಿಯನ್ಸ್ ಎದುರು ರೋಚಕ ಜಯ ಸಾಧಿಸಿತು.

ಇದರಿಂದಾಗಿ ಹೊಸ ನಾಯಕ ಶುಭಮನ್ ಗಿಲ್ ಅವರು ಶುಭಾರಂಭ ಮಾಡಿದರು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 169 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಮುಂಬೈ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 162 ರನ್ ಗಳಿಸಿತು. ಗಿಲ್ ಬಳಗವು 6 ರನ್‌ಗಳಿಂದ ಜಯಿಸಿತು.

ಮುಂಬೈ ತಂಡಕ್ಕೆ ಕೊನೆಯ ಓವರ್‌ನಲ್ಲಿ 19 ರನ್‌ಗಳ ಅಗತ್ಯವಿತ್ತು. ತಂಡದ ನವನಾಯಕ ಹಾರ್ದಿಕ್ ಪಾಂಡ್ಯ ಅವರು, ಉಮೇಶ್ ಹಾಕಿದ ಓವರ್‌ನ ಮೊದಲ ಎಸೆತವನ್ನು ಸಿಕ್ಸರ್‌ಗೆತ್ತಿದರು. ಎರಡನೇ ಎಸೆತವನ್ನು ಬೌಂಡರಿಗೆರೆ ದಾಟಿಸಿದರು. ಇನ್ನೇನು ನಾಲ್ಕು ಎಸೆತಗಳಲ್ಲಿ ಉಳಿದಿರುವ ಒಂಬತ್ತು ರನ್ ಹೊಡೆದುಬಿಡುವ ಹುಮ್ಮಸ್ಸಿನಲ್ಲಿದ್ದ ಹಾರ್ದಿಕ್ ಶಾರ್ಟ್ ಎಸೆತದಲ್ಲಿ ದೊಡ್ಡ ಹೊಡೆತ ಪ್ರಯೋಗಿಸಿ, ರಾಹುಲ್ ತೆವಾಟಿಯಾಗೆ ಕ್ಯಾಚ್ ಕೊಟ್ಟರು. ನಂತರದ ಎಸೆತದಲ್ಲಿ ಪಿಯೂಷ್ ಚಾವ್ಲಾ ಅವರೂ ಔಟಾದರು. ಕೊನೆ ಎರಡು ಎಸೆತಗಳಲ್ಲಿ ಮೂರು ರನ್ ಕೊಟ್ಟ ಉಮೇಶ್ ಸಂತೃಪ್ತಿಯಿಂದ ನಕ್ಕರು. ಈ ಪಂದ್ಯದಲ್ಲಿ ಅವರು 4 ಓವರ್‌ಗಳಲ್ಲಿ 31 ರನ್ ಬಿಟ್ಟುಕೊಟ್ಟು ದುಬಾರಿಯೂ ಆದರು! ರೋಹಿತ್ ಶರ್ಮಾ (43 ರನ್) ಮತ್ತು ಡಿವಾಲ್ಡ್ ಬ್ರೆವಿಸ್ (46 ರನ್) ಅವರ ಉತ್ತಮ ಬ್ಯಾಟಿಂಗ್‌ನಿಂದ ತಂಡವು ಸುಲಭವಾಗಿ ಗೆಲ್ಲುವ ಭರವಸೆ ಮೂಡಿತ್ತು. ಕೊನೆಯ ಐದು ಓವರ್‌ಗಳಲ್ಲಿ ತಂಡಕ್ಕೆ 43 ರನ್‌ಗಳ ಅಗತ್ಯವಿತ್ತು. ಏಳು ವಿಕೆಟ್‌ಗಳೂ ಬಾಕಿ ಇದ್ದವು. ಆದರೆ ಗುಜರಾತ್ ಬೌಲರ್ ಮೋಹಿತ್ ಶರ್ಮಾ (32ಕ್ಕೆ2), ಸ್ಪೆನ್ಸರ್ ಜಾನ್ಸನ್ (25ಕ್ಕೆ2) ಅವರ ದಾಳಿಯ ಮುಂದೆ ಮುಂಬೈ ಮಂಕಾಯಿತು.

ಟಾಸ್ ಗೆದ್ದ ಮುಂಬೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜಸ್‌ಪ್ರೀತ್ ಬೂಮ್ರಾ (14ಕ್ಕೆ3) ಶಿಸ್ತಿನ ದಾಳಿ ನಡೆಸಿದರು. ತಮ್ಮ 'ಟ್ರೇಡ್‌ಮಾರ್ಕ್' ಯಾರ್ಕರ್ ಎಸೆತದಲ್ಲಿ ವೃದ್ಧಿಮಾನ್ ಸಹಾ ವಿಕೆಟ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಸ್ಫೋಟಕ ಶೈಲಿಯ ಬ್ಯಾಟರ್ ಡೇವಿಡ್ ಮಿಲ್ಲರ್ ಅವರು ಬೂಮ್ರಾ ಹಾಕಿದ ನಿಧಾನಗತಿಯ ಎಸೆತವನ್ನು ಮಿಡ್ ಆನ್ ದಾಟಿಸುವ ಯತ್ನದಲ್ಲಿ ವಿಫಲರಾದರು. ಅಲ್ಲಿ ಫೀಲ್ಡಿಂಗ್‌ನಲ್ಲಿದ್ದ ನಾಯಕ ಹಾರ್ದಿಕ್ ಕ್ಯಾಚ್ ಪಡೆದು ಸಂಭ್ರಮಿಸಿದರು. ಅದೇ ಓವರ್‌ನಲ್ಲಿ ಸಾಯಿ ಸುದರ್ಶನ್ (45 ರನ್) ವಿಕೆಟ್ ಗಳಿಸಿದ ಬೂಮ್ರಾ ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರು: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 168 (ಶುಭಮನ್ ಗಿಲ್ 31, ಸಾಯಿ ಸುದರ್ಶನ್ 45, ಅಜ್ಮತ್‌ವುಲ್ಲಾ ಒಮರ್‌ಝೈ 17, ರಾಹುಲ್ ತೆವಾಟಿಯಾ 22, ಜಸ್‌ಪ್ರೀತ್ ಬೂಮ್ರಾ 14ಕ್ಕೆ3, ಗೆರಾಲ್ಡ್ ಕೊಯಿಜಿ 27ಕ್ಕೆ2) ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 162 (ರೋಹಿತ್ ಶರ್ಮಾ 43, ನಮನ್ ಧೀರ್ 20, ಡೆವಾಲ್ಡ್ ಬ್ರೆವಿಸ್ 46, ತಿಲಕ್ ವರ್ಮಾ 25, ಅಜ್ಮತ್‌ವುಲ್ಲಾ ಒಮರ್‌ಝೈ 27ಕ್ಕೆ2, ಉಮೇಶ್ ಯಾದವ್ 31ಕ್ಕೆ2, ಸ್ಪೆನ್ಸರ್ ಜಾನ್ಸನ್ 25ಕ್ಕೆ2, ಮೋಹಿತ್ ಶರ್ಮಾ 32ಕ್ಕೆ2) ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 6 ರನ್‌ಗಳ ಜಯ. ಪಂದ್ಯಶ್ರೇಷ್ಠ: ಸಾಯಿ ಸುದರ್ಶನ್.



ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್ ಬ್ಯಾಟಿಂಗ್ ಶೈಲಿ. ಎಎಫ್‌ಪಿ ಚಿತ್ರ

ಸೆಮಿಫೈನಲ್‌ನಲ್ಲಿ ಶ್ರೀಕಾಂತ್‌ಗೆ ಸೋಲು

ಬಾಸೆಲ್ (ಸ್ವಿಜರ್ಲೆಂಡ್), (ಪಿಟಿಐ): ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಕಿದಂಬಿ ಶ್ರೀಕಾಂತ್ ಅವರ ಯಶಸ್ಸಿನ ಓಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು. ಚೀನಾ ತೈಪಿಯ ಲಿನ್ ಚುನ್–ಯಿ ಅವರು ಶನಿವಾರ ರಾತ್ರಿ ಶ್ರೀಕಾಂತ್ ಅವರನ್ನು ಸೋಲಿಸುವ ಮೂಲಕ ಟೂರ್ನಿಯಲ್ಲಿ ಭಾರತದ ಸವಾಲು ಕೊನೆಗೊಂಡಿತು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ ಸೆಮಿಫೈನಲ್‌ನಲ್ಲಿ ಒಂದು ಗಂಟೆ ಐದು ನಿಮಿಷಗಳ ಹೋರಾಟದ ನಂತರ 21–15, 9–21, 18–21 ರಿಂದ ಲಿನ್ ಚುನ್ ಅವರಿಗೆ ಮಣಿದರು. ಕಳೆದ 16 ತಿಂಗಳಲ್ಲಿ ಇದೇ ಮೊದಲ ಬಾರಿ ಸೆಮಿಫೈನಲ್ ತಲುಪಿದ್ದರು.



ಕಿದಂಬಿ ಶ್ರೀಕಾಂತ್

ಫ್ಲೈಯಿಂಗ್ ಕಿಸ್: ಹರ್ಷಿತ್ ರಾಣಾಗೆ ದಂಡ

ಕೋಲ್ಕತ್ತ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಭಾನುವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದಲ್ಲಿ ಐಪಿಎಲ್ ನೀತಿ ಸಂಹಿತೆಯನ್ನು ಉಲ್ಲಂಘಿಸಿದ ಕಾರಣಕ್ಕೆ ಕೋಲ್ಕತ್ತ ನೈಟ್ ರೈಡರ್ಸ್ ವೇಗದ ಬೌಲರ್ ಹರ್ಷಿತ್ ರಾಣಾ ಅವರಿಗೆ ಪಂದ್ಯ ಶುಲ್ಕದ ಶೇ 60ರಷ್ಟು ಮೊತ್ತವನ್ನು ದಂಡವಾಗಿ ವಿಧಿಸಲಾಗಿದೆ.

ಐಪಿಎಲ್ ನೀತಿಸಂಹಿತೆಯ 2.5ನೇ ವಿಧಿಯನ್ನು ರಾಣಾ ಉಲ್ಲಂಘಿಸಿದ್ದಾರೆ ಎಂದು ಐಪಿಎಲ್ ಹೇಳಿಕೆ ಶನಿವಾರ ತಿಳಿಸಿದೆ.

ಎರಡು ಪ್ರತ್ಯೇಕ ತಪ್ಪುಗಳಿಗೆ ಶೇ 10 ಮತ್ತು ಶೇ 50 ದಂಡ ವಿಧಿಸಲಾಗಿದೆ.

ಹೈದರಾಬಾದ್ ಬ್ಯಾಟಿಂಗ್‌ನ ಆರನೇ ಓವರ್‌ನಲ್ಲಿ ಮಯಂಕ್ ಅಗರವಾಲ್ ಅವರ ವಿಕೆಟ್ ಪಡೆದ ಸಂದರ್ಭದಲ್ಲಿ 22 ವರ್ಷದ ರಾಣಾ ಮುಂದೆ ಬಂದು ಅವರತ್ತ ಫ್ಲೈಯಿಂಗ್ ಕಿಸ್ ಹರಿಬಿಟ್ಟಿದ್ದರು. ಅಂತಿಮ ಓವರ್‌ನಲ್ಲಿ ಎದುರಾಳಿ ಗೆಲುವಿಗೆ 13 ರನ್ ಬೇಕಾಗಿದ್ದಾಗ ಹರ್ಷಿತ್ ಸಂಯಮ ದಿಂದ ಬೌಲ್ ಮಾಡಿ ಬರೇ ಎಂಟು ರನ್ ಕೊಟ್ಟಿದ್ದರು.



ಮಯಂಕ್ ವಿಕೆಟ್ ಪಡೆದ ಸಂದರ್ಭದಲ್ಲಿ ಹರ್ಷಿತ್ ರಾಣಾ ಪ್ರತಿಕ್ರಿಯೆ ಪಿಟಿಐ ಚಿತ್ರ

ಮೊದಲ ಟೆಸ್ಟ್: ಸೋಲಿನ ಸುಳಿಯಲ್ಲಿ ಬಾಂಗ್ಲಾದೇಶ

ಕಮಿಂದು, ಧನಂಜಯ ಮತ್ತೆ ಶತಕ

ಸಿಲ್ಹೆಟ್ (ಎಎಫ್‌ಪಿ): ಧನಂಜಯ ಡಿಸಿಲ್ವ ಮತ್ತು ಕಮಿಂದು ಮೆಂಡಿಸ್ ಅವರು ಟೆಸ್ಟ್ ಪಂದ್ಯವೊಂದರ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ ಮೂರನೇ ಜೋಡಿ ಎನಿಸಿದರು. ಇವರಿಬ್ಬರ ಶತಕಗಳ ನೆರವಿನಿಂದ ಶ್ರೀಲಂಕಾ ಮೊದಲ ಟೆಸ್ಟ್ ಪಂದ್ಯದಲ್ಲಿ ಈಗ ಗೆಲುವಿನ ಹಾದಿಯಲ್ಲಿದೆ.

ಗೆಲ್ಲಲು 511 ರನ್‌ಗಳ ಭಾರಿ ಗುರಿಯನ್ನು ಎದುರಿಸಿರುವ ಆತಿಥೇಯರು ಭಾನುವಾರ ಮೂರನೇ ದಿನದಾಟ ಮುಗಿದಾಗ ಎರಡನೇ ಇನಿಂಗ್ಸ್‌ನಲ್ಲಿ 47 ರನ್ ಗಳಿಸುವಷ್ಟರಲ್ಲಿ 5 ವಿಕೆಟ್‌ಗಳನ್ನು ಕಳೆದುಕೊಂಡು ಸೋಲಿನ ಸುಳಿಗೆ ಸಿಲುಕಿದ್ದಾರೆ. ವೇಗದ ಬೌಲರ್ ವಿಶ್ವ ಫೆರ್ನಾಂಡೊ 13ಕ್ಕೆ 3 ವಿಕೆಟ್ ಪಡೆದು ಕುಸಿತಕ್ಕೆ ಕಾರಣರಾದರು.

ಮೊದಲ ಇನಿಂಗ್ಸ್‌ನಲ್ಲಿ 102 ರನ್ ಹೊಡೆದಿದ್ದ ಮೆಂಡಿಸ್ 164 ರನ್ (4x16, 6x6) ಗಳಿಸಿದರು. ಧನಂಜಯ ಮೊದಲ ಸರದಿಯಲ್ಲಿ 102 ರನ್ ಗಳಿಸಿದ್ದು, ಎರಡನೇ ಇನಿಂಗ್ಸ್‌ನಲ್ಲಿ 108 ರನ್ (4x9, 6x2) ಬಾರಿಸಿ ರನ್ ಸುಗ್ಗಿಯಲ್ಲಿ ಭಾಗಿಯಾದರು.

ಆಸ್ಟ್ರೇಲಿಯಾದ ಚಾಪೆಲ್ ಸೋದರರಾದ ಗ್ರೆಗ್ ಮತ್ತು ಇಯಾನ್ ಅವರು 1974 ರ ಮಾರ್ಚ್‌ನಲ್ಲಿ ವೆಲಿಂಗ್ಟನ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ತಲಾ ಎರಡು ಶತಕಗಳನ್ನು ಬಾರಿಸಿದರೆ, ಪಾಕಿಸ್ತಾನದ ಮಿಸ್ಬಾ–ಉಲ್–ಹಕ್ ಮತ್ತು ಅಜರ್ ಅಲಿ ಅವರು 2014ರಲ್ಲಿ ಅಬುಧಾಬಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಇಂಥದ್ದೇ ಸಾಧನೆ ದಾಖಲಿಸಿದ್ದರು.

ಶ್ರೀಲಂಕಾ ತಂಡ (ಶನಿವಾರ: 5 ವಿಕೆಟ್‌ಗೆ 119) ಒಂದು ಹಂತದಲ್ಲಿ 6 ವಿಕೆಟ್‌ಗೆ 126 ರನ್ ಗಳಿಸಿ ಕುಂಟುತ್ತಿದ್ದ ಸಂದರ್ಭದಲ್ಲಿ ಸಿಲ್ವ ಮತ್ತು ಮೆಂಡಿಸ್ ಏಳನೇ ವಿಕೆಟ್‌ಗೆ 173 ರನ್ ಸೇರಿಸಿದ್ದರಿಂದ 418 ರನ್‌ಗಳ ಭಾರಿ ಮೊತ್ತ ದಾಖಲಿಸಲು ಸಾಧ್ಯವಾಯಿತು. ಶ್ರೀಲಂಕಾದ 280 ರನ್‌ಗಳ ಮೊದಲ ಇನಿಂಗ್ಸ್‌ನಲ್ಲಿ ಇವರಿಬ್ಬರು ಏಳನೇ ವಿಕೆಟ್‌ಗೆ 202 ರನ್ ಸೇರಿಸಿದ್ದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 280; ಬಾಂಗ್ಲಾದೇಶ: 188; ಎರಡನೇ ಇನಿಂಗ್ಸ್: ಶ್ರೀಲಂಕಾ: 110.4 ಓವರುಗಳಲ್ಲಿ 418 (ಧನಂಜಯ ಡಿಸಿಲ್ವ 108, ಕಮಿಂದು ಮೆಂಡಿಸ್ 164, ಪ್ರಭಾತ್ ಜಯಸೂರ್ಯ 25; ತೈಜುಲ್ ಇಸ್ಲಾಂ 75ಕ್ಕೆ2, ಮೆಹಿದಿ ಹಸನ್ ಮಿರಾಝ್ 75ಕ್ಕೆ4); ಬಾಂಗ್ಲಾದೇಶ: 13 ಓವರುಗಳಲ್ಲಿ 5 ವಿಕೆಟ್‌ಗೆ 47 (ವಿಶ್ವ ಫೆರ್ನಾಂಡೊ 13ಕ್ಕೆ3).



ಕಮಿಂದುಮೆಂಡಿಸ್ ಎಎಫ್‌ಪಿ ಚಿತ್ರ



ಧನಂಜಯ ಡಿಸಿಲ್ವ

ಚಾಂಪಿಯನ್ಸ್ ಟ್ರೋಫಿ: ಪಾಕ್‌ಗೆ ಐಸಿಸಿ ತಂಡ

ಲಾಹೋರ್ (ಪಿಟಿಐ): ಪ್ರತಿಷ್ಠಿತ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ನಡೆಯುತ್ತಿರುವ ಸಿದ್ಧತೆಗಳನ್ನು ಪರಿಶೀಲಿಸಲು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ನಿಯೋಗ ಸೋಮವಾರ ಇಲ್ಲಿಗೆ ಬರಲಿದೆ. ಈ ಮಧ್ಯೆ ಮುಂದಿನ ವರ್ಷ ಈ ಟೂರ್ನಿಯ ಆತಿಥ್ಯ ವಹಿಸಲು ತನಗೆ ಸಾಧ್ಯವಾಗಲಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಆಶಾವಾದ ವ್ಯಕ್ತಪಡಿಸಿದೆ.

ಭದ್ರತಾ ತಜ್ಞರನ್ನು ಒಳಗೊಂಡ ನಿಯೋಗವು ಕರಾಚಿ, ಲಾಹೋರ್ ಮತ್ತು ರಾವಲ್ಪಿಂಡಿಗೆ ಭೇಟಿ ನೀಡಲಿದೆ. 1996ರ ವಿಶ್ವಕಪ್ ಟೂರ್ನಿಯನ್ನು ಭಾರತ, ಶ್ರೀಲಂಕಾ ಜೊತೆ ಜಂಟಿಯಾಗಿ ಆಯೋಜಿಸಿದ ಬಳಿಕ ಮೊದಲ ಬಾರಿಗೆ ಪಾಕಿಸ್ತಾನವು ಐಸಿಸಿ ಟೂರ್ನಿಯೊಂದರ ಆತಿಥ್ಯ ವಹಿಸುತ್ತಿದೆ.

'ಸಿದ್ಧತೆಗಳ ಬಗ್ಗೆ ನಿಯೋಗಕ್ಕೆ ಸಂಕ್ಷಿಪ್ತ ಮಾಹಿತಿ ನೀಡಲಾಗುವುದು. ತಂಡದ ಸದಸ್ಯರು ಕರಾಚಿ, ಲಾಹೋರ್ ಮತ್ತು ರಾವಲ್ಪಿಂಡಿಗೆ ಭೇಟಿ ನೀಡಲಿದ್ದಾರೆ' ಎಂದು ಪಿಸಿಬಿ ಅಧ್ಯಕ್ಷ ನಕ್ವಿ ಹೇಳಿದ್ದಾರೆ.